UNIVERSAL
LIBRARY
OU_200675
UNIVERSAL
LIBRARY

OUP—552—7-7-66—10,000

OSMANIA UNIVERSITY LIBRARY

Call No. K83 N72K Accession No. K4742

Author

Title కల్యాణస్వామి

This book should be returned on or before the date last marked below.

# ಲ್ಯಾಣಸ್ವಾಮಿ

ನಿ ರಂ ಜ ನ

ಹನ ಪ್ರಕಾಶನ

ೂರ್ತಿಪುರಂ : : ಮೈಸೂರು

ಮೊದಲನೆಯ ಮುದ್ರಣ : ಸೆಪ್ಟೆಂಬರ್ ೧೯

ಮೋಹನ ಕಾದಂಬರಿ ೧೪

ಎಲ್ಲ ಹಕ್ಕುಗಳೂ ಲೇಖಕರವು

ಮುಖಚಿತ್ರ :

ಜಿ. ಕೆ. ಮೂರ್ತಿ, ಧಾರವಾಡ

Checked 1969

ಮುಖಚಿತ್ರದ ಮುದ್ರಣ .

ಇಂಡಿಯಾ ಪ್ರೆಸ್ [illegible]

ಬೆಲೆ : ೧–೮–೦

ಉತ್ತಮ ಪ್ರತಿ ೨–೮. ೧

ಮುದ್ರಕರು :

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್

ಕೃಷ್ಣಮೂರ್ತಿಪುರಂ, ಮೈಸೂರು

# ಇತಿಹಾಸ ಮತ್ತು ಸೃಷ್ಟಿಸಾಹಿತ್ಯ

'ಕಲ್ಯಾಣಸ್ವಾಮಿ' ಕಾದಂಬರಿಯನ್ನು ಓದುಗರ ಮುಂದಿಡುತ್ತ, ಪೀಠಿಕೆಯಾಗಿ ಒಂದೆರಡು ಮಾತು ಹೇಳುವುದು ಅಗತ್ಯವೆನಿಸಿದೆ. ಔಪಚಾರಿಕವಾದ ಮುನ್ನುಡಿಯ ಬದಲು, 'ಇತಿಹಾಸ ಮತ್ತು ಸೃಷ್ಟಿಸಾಹಿತ್ಯ' ಎಂಬ ತಲೆಕಟ್ಟಿನ ಕೆಳಗೆ ಆ ಮಾತುಗಳನ್ನು ಬರೆಯ ಹೊರಟಿದ್ದೇನೆ. ಇದಕ್ಕೆ ಕಾರಣ, ನನ್ನ ಈ ಕೃತಿಯ ಕಥಾವಸ್ತುವಿನ ಸ್ವರೂಪ.

ಬಳಕೆಯಲ್ಲಿರುವ ವಿಶೇಷಣವನ್ನೆ ಇಲ್ಲಿಯೂ ಪ್ರಯೋಗಿಸುವುದಾದರೆ, 'ಕಲ್ಯಾಣಸ್ವಾಮಿ' ಯೊಂದು ಐತಿಹಾಸಿಕ ಕಾದಂಬರಿ.

ಇತಿಹಾಸವೆನ್ನುವುದು ರಾಜರಾಣಿಯರ ಕಥೆ, ಎಂಬ ಸಾಮಾನ್ಯ ಕಲ್ಪನೆಯೊಂದುಂಟು. ಒಬ್ಬ ರಾಜ ಇನ್ನೊಬ್ಬ ರಾಜನ ಮೇಲೆ ಸಾರಿದ ಯುದ್ಧ, ಒಬ್ಬನನ್ನು ಪದಚ್ಯುತನಾಗಿ ಮಾಡಲು ಮತ್ತೊಬ್ಬ ನಡಸಿದ ಯತ್ನ, ಕುಟಿಲ ಕಾರಸ್ಥಾನಗಳು, 'ವಿಶಿಷ್ಟ' ರೆನಿಸಿದ ಆ ವ್ಯಕ್ತಿಗಳ ಸುಖ ದುಃಖ – ಬರಿಯ ಈ ವಿವರ ಇತಿಹಾಸವೆನಿಸದು. ಕಾಲ ಕಾಲಕ್ಕೊ ಬದಲಾಗುತ್ತ ಬಂದ ಬದುಕು, ಆಗಿನ ಕಾಲಧರ್ಮ, ಅದರಿಂದ ಪ್ರಭಾವಿತರಾದ ಜನರ ರೀತಿನೀತಿಗಳು, ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳು.– ಇವು ಇತಿಹಾಸವನ್ನು ರೂಪಿಸುವ ಮುಖ್ಯ ಅಂಶಗಳು. ಸಾಮ್ರಾಜ್ಯಗಳು ಎದ್ದುವು, ಬಿದ್ದುವು. ಆ ಉತ್ಕರ್ಷ ಅಧಃಪತನಗಳಿಗೆ ಯಾವನೋ ಒಬ್ಬ ರಾಜ, ಯಾವಳೋ ಒಬ್ಬಳು ರಾಣಿ, ಕಾರಣರೆನ್ನುವುದು ಸರಿಯಾಗದು. ಆ ಸೃಷ್ಟಿಯ-ಲಯದ ಹಿಂದೆ, ಆಯಾ ಜನಾಂಗಗಳ ಕಥೆ ಇದೆ. ಆ ಘಟನೆಗಳ ಹಿಂದೆ, ಜನ ಜೀವನದ–ಸಂಸ್ಕೃತಿಯ–ಸಾಹಿತ್ಯದ ಪ್ರೇರಕ ಶಕ್ತಿಗಳಿವೆ.

ಮಾನವ ಸಮಾಜದ ಬೆಳವಣಿಗೆಯ ಅಧ್ಯಯನವೇ, ಚರಿತ್ರೆಯ ಮಹಾಸಂಭವಗಳನ್ನು ಅರ್ಥಮಾಡಿಕೊಳ್ಳಲು ಬುನಾದಿ. ಒಂದು ಸಾಮಾಜಿಕ ವ್ಯವಸ್ಥೆ ಇನ್ನೊಂದು ಸಾಮಾಜಿಕ ವ್ಯವಸ್ಥೆಗೆ ಹಾದಿ ಮಾಡಿಕೊಟ್ಟ ಸೂತ್ರವೇ, ಲೋಕದ ವಿವಿಧ ರಾಷ್ಟ್ರಗಳ ಇತಿಹಾಸಗಳನ್ನು ಕ್ರಮಬದ್ಧವಾಗಿ ಕೋದಿರುವ ದಾರ.

ಭಾರತದ ಗತಕಾಲವನ್ನೇ ತೆಗೆದುಕೊಳ್ಳೋಣ. ವೇದಕಾಲದಿಂದ

ಈವರೆಗಿನ ಎಲ್ಲ ಐತಿಹಾಸಿಕ ಘಟನೆಗಳಿಗೂ ಒಂದು ಅರ್ಥವಿದೆ. ಇದರಲ್ಲಿ ಯಾವುದೂ ಆಕಸ್ಮಿಕವಲ್ಲ. ಆ ಬದಲಾವಣೆಗಳನ್ನೆಲ್ಲ ಸೂಕ್ಷ್ಮವಾಗಿ ಅಭ್ಯಸಿಸಿದಾಗಲೇ ಇತಿಹಾಸದ ವಿವಿಧ ಘಟ್ಟಗಳು ಗೋಚರವಾಗುವುವು. ಆವರೆಗೂ ಅಸ್ಪಷ್ಟವೆಂದು ತೋರಿದ ಎಷ್ಟೋ ಅಂಶಗಳು ಸ್ಪಷ್ಟವಾಗುವುವು.

ನಮ್ಮ ಕಣ್ಣೆದುರಲ್ಲೇ ನಡೆಯುತ್ತಿರುವ ಹಲವಾರು ಘಟನೆಗಳ ಐತಿಹಾಸಿಕ ಸ್ವರೂಪ ಎಂತಹದೆಂದು ನಾವು ಹೇಳಬಲ್ಲೆವಾದರೆ, ಇಂದಿನ ಪರಿಸ್ಥಿತಿ ನಾಳೆ ಯಾವ ರೀತಿ ರೂಪುಗೊಳ್ಳುವುದೆಂದು ಸರಿಯಾಗಿ ತಿಳಿಯಬಲ್ಲೆವಾದರೆ, ಆದಿಯವರೆಗೆ ಚಾಚಿಕೊಂಡಿರುವ ಆ ನಿನ್ನೆಯನ್ನು ಅರ್ಥಮಾಡಿಕೊಳ್ಳುವುದು—ಶಾಸ್ತ್ರೀಯವಾಗಿ ಪೃಥಕ್ಕರಿಸುವುದು—ಕಷ್ಟವಾಗದು. ಅಂತಹ ಚಾರಿತ್ರಿಕ ನೋಟವಿರುವ ಮನುಷ್ಯ, ಬರಿಯ ಬುರುಗಿನಲ್ಲಿ ಓಡಾಡುವುದಿಲ್ಲ. ಪಾದಗಳ ಕೆಳಗಿರುವುದು ಉಸುಬಾಗಿ ಆತನಿಗೆ ತೋರುವುದಿಲ್ಲ. ಶತ ಶತಮಾನಗಳಿಂದ ಭದ್ರವಾಗಿರುವ, ಮುಂದೆಯೂ ಶತ ಶತಮಾನಗಳವರೆಗೆ ಭದ್ರವಾಗಿಯೆ ಉಳಿಯುವ, ನೆಲದ ಮೇಲೆ ದೃಢ ಹೆಜ್ಜೆಗಳನ್ನು ಆತ ಇಡುತ್ತಾನೆ.

ನಿನ್ನೆಯ ಅಂಶ ತಾನು, ನಾಳೆಯ ಬೀಜ ತನ್ನಲ್ಲಿದೆ, ಎಂಬ ತಿಳಿವಳಿಕೆಯಿಂದ ಮನುಷ್ಯನ ಬದುಕು ಅರ್ಥಪೂರ್ಣವಾಗುತ್ತದೆ.

ಬರೆಹಗಾರನಿಗೆ ಆ ಚಾರಿತ್ರಿಕ ದೃಷ್ಟಿ ಇತ್ತೆಂದರೆ, ಆತನ ಸಾಹಿತ್ಯ ಸೃಷ್ಟಿ ಬೆಲೆ ಬಾಳುತ್ತದೆ.

ಆ ದೃಷ್ಟಿ ಇರಬೇಕಾದುದು ಗತಕಾಲವನ್ನು ಚಿತ್ರಿಸುವಾಗ ಮಾತ್ರ ಅಲ್ಲ. ವರ್ತಮಾನಕಾಲದ ಸಾಮಾಜಿಕ ಚಿತ್ರಣಕ್ಕೂ ಇತಿಹಾಸಕ್ಕೆ ಸಂಬಂಧಿಸಿ, ನಿರ್ದಿಷ್ಟ ಸ್ಥಾನವಿದ್ದೇ ಇದೆ. ಇಂದಿನ ವಾಸ್ತವತೆಯಲ್ಲಿ ನಾಳೆಯ ಸಾಧ್ಯತೆಯನ್ನು ಗುರುತಿಸುವ ಕಥೆಯಲ್ಲೂ ಚರಿತ್ರೆಯ ದೃಷ್ಟಿ ಇದ್ದೇ ಇದೆ.

ಕಥೆ ಕಾದಂಬರಿ ನಾಟಕಗಳಿರುವುದು ಬರಿಯ ಮನೋರಂಜನೆಗೋಸ್ಕರ; ಸೃಷ್ಟಿ ಸಾಹಿತ್ಯಕ್ಕೂ ಬದುಕಿಗೂ ಸಂಬಂಧವಿಲ್ಲ— ಎಂದು ಭಾವಿಸುವ ಬರೆಹಗಾರ, ಮೇಲಿನ ನನ್ನ ಪ್ರತಿಪಾದನೆಯನ್ನು ಖಂಡಿತ ಒಪ್ಪಲಾರ. ಅಂತಹ ವ್ಯಕ್ತಿ ಚಿತ್ರಿಸುವುದು ಗಿಡ ಬಿಡುವ ಹೂಗಳನ್ನಲ್ಲ, ಬಣ್ಣದ ಕಾಗದದ ಕೃತ್ರಿಮ ಕುಚ್ಚುಗಳನ್ನು.

ಐತಿಹಾಸಿಕ ಕಾದಂಬರಿಯ [ನಾಟಕದ ಇಲ್ಲವೆ ಕಥೆಯ] ಸೃಷ್ಟಿ, ಸಾಮಾಜಿಕ ವಸ್ತುವಿನ ಚಿತ್ರಣಕ್ಕಿಂತ ಹೆಚ್ಚು ಕಷ್ಟದ್ದು. ಯಾಕೆಂದರೆ, ಇಂದಿನ ಕಲ್ಪನೆಯ ಚಿತ್ರಕ್ಕೆ ಸ್ಫೂರ್ತಿ ನೀಡಲು ಅಸಂಖ್ಯ ಮಾದರಿಗಳಿರುತ್ತವೆ ಕಣ್ಣಮುಂದೆ. ನಿನ್ನೆಯ ಚಿತ್ರಣಕ್ಕೆ ಅಂತಹ ಮಾದರಿಗಳಿಲ್ಲ.

ಈ ತೊಂದರೆಯನ್ನು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳುವವರೂ ಉಂಟು. ಅಂತಹ ಲೇಖಕರು ಇತಿಹಾಸದ ಹಣೆಪಟ್ಟಿಕಟ್ಟಿ ಜನರಿಗೆ ನೀಡುವುದು, ವೈಯಕ್ತಿಕ ಕಲ್ಪನೆಯ ಸುರಸಸೃಷ್ಟಿಯನ್ನು. ಆ ಕೃತಿಗಳನ್ನೋದಿ, ಅವೇ ತಮ್ಮ ಗತಜೀವನವೆಂದು, ನಿಜವಾದ ಇತಿಹಾಸವೆಂದು, ನಂಬಬೇಕು ಓದುಗರು! ಸಾಮಾಜಿಕ ಚಿತ್ರಣವನ್ನಾದರೋ ಎದುರಿಗಿರುವ ಮೂಲದೊಡನೆ ಹೋಲಿಸಿನೋಡಬಹುದು. ಆದರೆ, ಐತಿಹಾಸಿಕ ಚಿತ್ರಣದ ತುಲನೆಗೆ ಎಲ್ಲಿದೆ ತಕ್ಕಡಿ?

ಲೇಖಕ ಯಾವಾಗಲೂ ಸತ್ಯನಿಷ್ಠನೂ ಪ್ರಾಮಾಣಿಕನೂ ಆಗಬೇಕೆನ್ನುವುದು ಈ ಕಾರಣಕ್ಕಾಗಿಯೇ. ಅಂತಹ ಮೌಲ್ಯಗಳು ಬರೆಹಗಾರನ ಬದುಕಿನಲ್ಲಿದ್ದರೆ ಆತನಿಂದ ಅನ್ಯಾಯವಾಗುವ ಸಂದರ್ಭಗಳು ಕಡಮೆ.

ತಮ್ಮ ಹಿಂದಿನವರ ಬದುಕನ್ನು ತಿಳಿಯಲು ಜನರು ಕುತೂಹಲ ತೋರುವುದು ಸ್ವಾಭಾವಿಕ. ಆ ನೀರಡಿಕೆಯ ಶಮನಕ್ಕೆ ಬೇಕಾದುದು ಕೋಕಾಕೋಲಾ ಅಲ್ಲ, ಶುದ್ಧೋದಕ.

ಗತಕಾಲದ ಯಾವುದೋ ಒಂದು ಸಂಭವವನ್ನು ವಸ್ತುವಾಗಿ ಆರಿಸಿ ಕೃತಿ ರಚಿಸಲು ಹೊರಡುವ ಬರೆಹಗಾರನಿಗೆ ಸಂಶೋಧನೆಯ ದೃಷ್ಟಿ ಇರಬೇಕು. ಆ ಕಾಲ ಯಾವುದು? ಹೇಗಿತ್ತು ಆಗಿನ ಜನ ಜೀವನ? ಬೆಳಕು ಬೀರಬಲ್ಲ ಅವಶೇಷಗಳಿವೆಯೆ? ಆ ಸಮಯದ ಜಾನಪದ ಸಾಹಿತ್ಯವಿದೆಯೆ? ತಾಳೆಯ ಗರಿಗಳಲ್ಲಿ ಏನಾದರೂ ಅಡಗಿದೆಯೆ? ಆ ಕತೆ ಹೇಳುವ ಕಲ್ಲುಗಳಿವೆಯೆ?....ಹಾಗೆ ಆತ ಶ್ರಮವಹಿಸಿ ತಿಳಿಯಬೇಕಾದ ಸಂಗತಿಗಳು ಒಂದಲ್ಲ, ಎರಡಲ್ಲ.

ಅಷ್ಟೊಂದು ಸಂಗ್ರಹದ ಬಳಿಕ ದೊರೆತ ವಿಷಯಗಳಲ್ಲಿ ವಿರೋಧಾಭಾಸ ಕಂಡು ಬರಬಹುದು. ಆಗ, ಈ ದಿನದ ಬದುಕನ್ನೂ ನಾಳೆಯನ್ನೂ ಗಮನದಲ್ಲಿಟ್ಟು, ನಿನ್ನೆಯನ್ನು ತಿಳಿಯಲು ಆತ ಯತ್ನಿಸಬೇಕು. ಅಪೂರ್ಣವಾಗಿದ್ದ ಕಡೆ ತರ್ಕಬದ್ಧ ರೀತಿಯಲ್ಲಿ ಚಿತ್ರವನ್ನು ಪೂರ್ಣಗೊಳಿಸಬೇಕು....

ಹಾಗೆ, ಭದ್ರ ಆಧಾರದ ಮೇಲೆ ಸಿದ್ಧವಾಗುತ್ತದೆ ಆತನ ಕಲಾಕೃತಿ.

ಇತಿಹಾಸಕಾರನಾದ ಸಂಶೋಧಕನಿಗೂ ಕಲಾವಿದನಾದ ಸಂಶೋಧಕನಿಗೂ ಇರುವ ವ್ಯತ್ಯಾಸವೇನು? ಮೊದಲನೆಯವನು, ದೊರೆತುದನ್ನೆಷ್ಟು ಶಾಸ್ತ್ರೀಯವಾಗಿ ಜೋಡಿಸಿ ದಾಖಲೆ ಮಾಡುತ್ತಾನೆ. ಎರಡನೆಯವನು, ತನ್ನ ಕಲಾಪ್ರತಿಭೆಯಿಂದ ಆಗಿನ ಕಾಲದ ಬದುಕಿನ ಪುನರ್ ಸೃಷ್ಟಿಯನ್ನು ಸಾಹಿತ್ಯದಲ್ಲಿ ಸಾಧಿಸುತ್ತಾನೆ.

ಗತಜೀವನದ ಪುನರ್ ಸೃಷ್ಟಿಯೇ ಐತಿಹಾಸಿಕ ಸಾಹಿತ್ಯಕೃತಿಗಳಲ್ಲಿರಬೇಕಾದ ಪ್ರಧಾನ ಅಂಶ. ಆ ಸಂಬಂಧದಲ್ಲೂ ವಾಸ್ತವವಾದದಿಂದಲೇ ಬರೆಹಗಾರ ಪ್ರಭಾವಿತನಾಗಬೇಕಾದುದು ಸಹಜ. ಪ್ರತಿಯೊಬ್ಬ ಲೇಖಕನಲ್ಲೂ ಮೂಲತಃ ಇರಬೇಕಾದ ಸಮಾಜಪ್ರಜ್ಞೆ, ಅಂತಹ ಸಾಹಿತ್ಯಸೃಷ್ಟಿಯಲ್ಲೂ ಗಣನೀಯ ಪಾತ್ರ ವಹಿಸುತ್ತದೆ. ಮನೋವಿಶ್ಲೇಷಣೆಯಂತಹ ಪ್ರಾಚೀನವಲ್ಲದ ಪೃಥಕ್ಕರಣ ಸಾಧನ, ಗತಕಾಲದ ಪಾತ್ರಗಳಲ್ಲಿ ಹೆಚ್ಚು ಜೀವ ತುಂಬಲು ಸಹಾಯಕವಾಗುತ್ತದೆ.

ಈ ರೀತಿಯಾಗಿ ರಚಿತವಾಗುವ ಐತಿಹಾಸಿಕ ಹಿನ್ನೆಲೆಯುಳ್ಳ ಸಾಹಿತ್ಯ ಕೃತಿಗಳು ಹೆಚ್ಚು ಬೆಳೆಬಾಳುತ್ತವೆಂಬುದು ನನ್ನ ಅಭಿಮತ.

* * * * *

ಮೇಲಿನ ನೆಲೆಯಲ್ಲಿ ನಿಂತು ನಾನು ರಚಿಸಿರುವ ಕಾದಂಬರಿ 'ಕಲ್ಯಾಣಸ್ವಾಮಿ.' ಈ ಕೃತಿಯಲ್ಲಿ ನನ್ನ ಹಾರೈಕೆಗಳೆಲ್ಲ ಫಲಿಸಿವೆ ಎಂದು ನಾನು ಹೇಳಲಾರೆ. ಆದರೂ ಇಷ್ಟು ನಿಜ: ಈ ಕೃತಿ ನನಗೆ ಪೂರ್ಣತೃಪ್ತಿಯನ್ನು ಕೊಡದೇ ಹೋದರೂ ತೀವ್ರವಾದ ಅತೃಪ್ತಿಗೇನೂ ಕಾರಣವಾಗಿಲ್ಲ.

ಇದು, ನೂರಿಪ್ಪತ್ತು ವರ್ಷಗಳಿಗೆ ಹಿಂದಿನ ಕಥೆ. ಕನ್ನಡ ಭೂಭಾಗವಾದ ಕೊಡಗು–ಕನ್ನಡ ಜಿಲ್ಲೆಗಳಿಗೆ ಸಂಬಂಧಿಸಿದುದು. ಭಾರತದ ಮೇಲೆ ಅಂಧಕಾರ ಕವಿಯತೊಡಗಿದ್ದ ಮುಚ್ಚಂಜೆಯ ಹೊತ್ತಿನಲ್ಲಿ ನಡೆದ ಘಟನೆ. ಪ್ರಾದೇಶಿಕ ಕಥೆಯಾದರೂ ರಾಷ್ಟ್ರೀಯ ವ್ಯಾಪ್ತಿಯುಳ್ಳದು.

ಅದನ್ನು ಬರೆಯಲು ಹೊರಟಾಗ, ನಾನು ಇದಿರಿಸಬೇಕಾಗಿದ್ದ ಎಡರು ತೊಡರುಗಳ ಪೂರ್ಣಕಲ್ಪನೆ ನನಗೆ ಇರಲೇ ಇಲ್ಲ. ನನಗಿದ್ದ ತಿಳಿವಳಿಕೆಯ ಆಧಾರದ ಮೇಲೆಯೇ ವಿಷಯ ಸಂಗ್ರಹಕ್ಕೆಂದು ಕೈಹಾಕಿದಾಗ, ಇದು ಪುಷ್ಪೋದ್ಯಾನದ ವಿಹಾರವಲ್ಲ, ಎಂಬುದು ಮನವರಿಕೆಯಾಯಿತು.

ನನ್ನ ದುಡಿಮೆಗೆ ಬುನಾದಿ ಹಾಗೂ ಸ್ಫೂರ್ತಿ—ಬಾಲ್ಯದಲ್ಲಿ ನಾನು ಕೇಳಿದ್ದ ಕಥೆ. ಅನಂತರದ ಸಿದ್ಧತೆ— ಕೊಡಗು ಕನ್ನಡ ಜಿಲ್ಲೆಗಳ ಇತಿಹಾಸದ ವಾಚನ. ಒಳಿಕ ದೊರೆತ ನೆರವಿನ ಮೂಲ, ಕೊಡಗಿನ ಶಿಕ್ಷಣ ತಜ್ಞರಾದ ಶ್ರೀಯುತ ಡಿ. ಎನ್. ಕೃಷ್ಣಯ್ಯನವರು, ನನ್ನ ಕಥಾನಾಯಕನನ್ನು ಕುರಿತು ಬರೆದಿರುವ ಅಭ್ಯಾಸಪೂರ್ಣ ಲೇಖನ. ಜತೆಯಲ್ಲೆ ನಾನು ಓದಿ ಸಂತೋಷಪಟ್ಟುದು, ಕನ್ನಡ ಜಿಲ್ಲೆಯ ಆಲೆಟ್ಟಿಯ ಶ್ರೀಯುತ ರಾಮಣ್ಣ ಶಗ್ರಿತ್ತಾಯರ, [ಸಮರ್ಥ ಯಕ್ಷಗಾನಕವಿ 'ಆಲೆಟ್ಟಿ ರಾಮು'ರು] 'ಕಲ್ಯಾಣಪ್ಪನ ಕಾಟಕಾಯಿ' ಯಕ್ಷಗಾನ ಪ್ರಸಂಗದ ಹಸ್ತಪ್ರತಿ. ಕೊನೆಯದಾದರೂ ಬಲು ಮುಖ್ಯವಾದುದು, ನನ್ನ ಕಲ್ಪನೆಯ ಚಿತ್ರವನ್ನು ಪೂರ್ತಿಗೊಳಿಸಲು ರಾಷ್ಟ್ರಕವಿ ಗೋವಿಂದ ಪೈಯವರು ನೀಡಿದ ಅಮೂಲ್ಯ ನೆರವು.

ನನ್ನ ತೊಂದರೆಗಳಲ್ಲಿ ಪ್ರಧಾನವಾಗಿದ್ದುದು ಕಥಾನಾಯಕನ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಪ್ರಶ್ನೆಯೇ. ನಮ್ಮ ದೇಶವನ್ನು ಹಿಂಡಿ ಹಿಪ್ಪೆಮಾಡಿದ ವಿದೇಶೀಯ ಸುಲಿಗೆಗಾರರ ಪ್ರಕಾರ, ಕಲ್ಯಾಣಸ್ವಾಮಿಯೊಬ್ಬ ದರೋಡೆಗಾರ, ಸ್ವಾರ್ಥಸಾಧಕ, ಕಪಟಿ. ಅವರು ಬರೆದ ಇತಿಹಾಸದಿಂದ ಪ್ರಭಾವಿತರಾದ ಇನ್ನು ಕೆಲವರ ಅಭಿಪ್ರಾಯದಂತೆ, ಆತನೊಬ್ಬ ಹುಲು ಮಾನವ, ನಾಲ್ಕಾರು ಜನ ಸರದಾರರ ಕೈಗೊಂಬೆ....

೧೮೫೭ರಲ್ಲಿ ರಾಷ್ಟ್ರದಾದ್ಯಂತ ನಡೆದ ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು 'ಸಿಪಾಯರ ದಂಗೆ' ಎಂದು ಕರೆದು ಇತಿಹಾಸ ಬರೆದವರು ಇಂಗ್ಲಿಷರು. ನಮ್ಮ ಹಿರಿಯರು ಓದಿರುವುದು ಆ ಚರಿತ್ರೆಯನ್ನೇ, ನಾವು ಓದಿರುವುದೂ ಅದನ್ನೇ. ಆದರೆ ಈಗ, ೧೮೫೭ರ ಹೋರಾಟಕ್ಕಿದ್ದ ಚಾರಿತ್ರಿಕ ಮಹತ್ವವನ್ನು ಅರ್ಥಮಾಡಿಕೊಳ್ಳಲು ನಾವು ಸಮರ್ಥರಾಗಿದ್ದೇವೆ. ಅಂತೆಯೇ, ಆ ಸಂಭವಕ್ಕೆ ಇಪ್ಪತ್ತೇ ವರ್ಷಗಳ ಹಿಂದಿನ ಕಲ್ಯಾಣಸ್ವಾಮಿಯ ಕಥೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ನಮಗೆ ಕಷ್ಟವಾಗಬಾರದು.

ಕಲ್ಯಾಣಪ್ಪ ಪುಂಡನೆಂಬುದಕ್ಕೆ ಯಾವ ಆಧಾರಗಳೂ ಇಲ್ಲ. ಆತ ಜನರನ್ನು ದೋಚಿದನೆಂದು ಯಾರೂ ಹೇಳುವುದಿಲ್ಲ. ಆತ ಯುದ್ಧ ಸಾರಿದುದು ಇಂಗ್ಲಿಷರ ವಿರುದ್ಧ. ಆತನ ಕಣ್ಣಿದ್ದುದು ಅವರ ಸೈನ್ಯದ ಮೇಲೆ, ಖಜಾನೆಯ ಮೇಲೆ. ತಮಗೆ ಕಂಟಕರಾಗಿದ್ದವರನ್ನು ನರಪಿಶಾಚಿಗಳೆಂದು ಸಾಮ್ರಾಜ್ಯವಾದಿಗಳು ಚಿತ್ರಿಸಿರುವುದು ಹೊಸ ವಿಷಯವಲ್ಲವಷ್ಟೆ?

ಅಂತಹ ' ನರಪಿಶಾಚಿ ' ಕೊಡಗಿನ ಕಲ್ಯಾಣಪ್ಪ!

ರಾಜರಿಗೆ ಸಂಬಂಧಿಸಿದುದು ಮಾತ್ರ ಇತಿಹಾಸವೆಂದು ಭಾವಿಸಿದವರು ಬರೆದುದರಲ್ಲಿ, ಕಲ್ಯಾಣಪ್ಪನ ವಿಷಯವಾಗಿ ದೊರೆಯುವುದು ಎರಡು ಮೂರು ಸಾಲು ಮಾತ್ರ. ಯಾಕೆಂದರೆ, ಕಲ್ಯಾಣಸ್ವಾಮಿ ರಾಜವಂಶಸ್ಥನಲ್ಲ.

ಇಂಗ್ಲಿಷರು ಕೊಡಗಿನ ಮೇಲೆ ನಡಸಿದುದು ಅನ್ಯಾಯದ ಯುದ್ಧ. ಅರಸು ವೀರರಾಜೇಂದ್ರನಿಗೆ ಅವರು ಬಗೆದುದು ವಿಶ್ವಾಸದ್ರೋಹ. ಆತನನ್ನು ದೇಶಬಿಟ್ಟು ಓಡಿಸಿದ ವೈಖರಿ, ನಾಗರಿಕರಾದವರೆಲ್ಲ ನಾಚಿಕೆಯಿಂದ ತಲೆ ತಗ್ಗಿಸುವಂಥಾದ್ದು. ಅಂತಹ ಘಟನೆಯಿಂದ ಜನ ಕೋಪೋದ್ರಿಕ್ತರಾದ ರೆಂದು ಭಾವಿಸುವುದರಲ್ಲಿ ಏನೂ ತಪ್ಪಿಲ್ಲ.

ಗಣಪತಿ ಐಗಳ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ದಲ್ಲಿ [೧೯೨೩]೨೬೦ನೆ ಪುಟದಲ್ಲಿ, 'ಕೊಡಗು ಸೇನಾಧಿಪತಿಯಾಗಿದ್ದ ಕಲ್ಯಾಣ ಪ್ಪನ....' ನಾಯಕತ್ವದಲ್ಲಿ ನಡೆದ 'ದಂಗೆ'ಯ ವಿವರವಿದೆ. ['ದಂಗೆ' ಎನ್ನುವ ಪದ ಅರ್ಥವ್ಯಾಪ್ತಿಯುಳ್ಳುದೆಂಬುದನ್ನಂತೂ ನಾವೆಲ್ಲಾ ಬಲ್ಲೆವು!] ಕಲ್ಯಾಣ ಸ್ವಾಮಿಯು ಕೊಡಗು ಸೈನ್ಯದಲ್ಲಿ ದಳಪತಿಯಾಗಿದ್ದನೆಂಬುದೇ, ವೀರರಾಜನ ಆಪ್ತಕೋಟಿಯಲ್ಲೊಬ್ಬನಾಗಿದ್ದನೆಂಬುದೇ, ನನ್ನ ಅಭಿಪ್ರಾಯ ಕೂಡಾ. ಆತ ನನ್ನು ಸೇರಿದವರೂ ಪ್ರಮುಖರು. ಅರಸು ವೀರರಾಜನಿಗೆ ಬೇಟೆಯಲ್ಲಿ ಶಿಕ್ಷಕ ನಾಗಿದ್ದ, ಹಾರುವ ಹಕ್ಕಿಯ ಕಣ್ಣಿಗೇ ಗುರಿ ಹೊಡೆಯಲು ಸಮರ್ಥನಾಗಿದ್ದ, ಚೆಟ್ಟಿಕುಡಿಯನೂ ಆತನ ತಮ್ಮನೂ ಕಲ್ಯಾಣಸ್ವಾಮಿಯ ಜತೆಗಿದ್ದರು. ಕೊಡಗಿನ ಶರಣಾಗತಿಗೆ ಕಾರಣನಾಗಿದ್ದ ಬೋಪುದಿವಾನನ ಸಂಬಂಧಿಕರೇ ಕಲ್ಯಾಣಸ್ವಾಮಿಯನ್ನು ಕೂಡಿಕೊಂಡರು. ಪ್ರಖ್ಯಾತ ಸರದಾರನಾದ ಹುಲಿ ಕುಂದ ನಂಜಯ್ಯ, ವಿವಿಧನಾಡುಗಳ ಸುಭೇದಾರರು, ಮಾಜಿ ಉದ್ಯೋಗಸ್ಥ ರೆಷ್ಟೋ ಜನ ಆತನನ್ನು ಹಿಂಬಾಲಿಸಿದರು. ಕಲ್ಯಾಣಸ್ವಾಮಿಯದು ಕಳ್ಳ ಕಾಕರ ತಂಡವಾಗಿರಲಿಲ್ಲ ಎನ್ನುವುದಕ್ಕೆ ಇಷ್ಟು ಸಾಕು.

ಆ ಸೇನೆಯನ್ನು ಸೇರಿಕೊಂಡವರಂತೂ ನಾನಾ ಜಾತಿಗಳವರು. ವಿದೇಶೀಯರಿಗಿದಿರಾಗಿ, ಲಿಂಗಾಯತರು–ಒಕ್ಕಲಿಗರು, ಹಿಂದೂಗಳು–ಮುಸ ಲ್ಮಾನರು, ಒಂದಾಗಿ ಹೋರಾಡಿದ ಆ ಪ್ರಕರಣ ಕನ್ನಡನಾಡು ಹೆಮ್ಮೆ ಪಡು ವಂಥಾದ್ದು. [ಅದರಿಂದ ಇಂದೂ ಕೂಡಾ ನಾವು ಕಲಿಯಬಹುದಾದ, ಕಲಿಯಬೇಕಾದ, ಪಾಠ ಖಂಡಿತವಾಗಿಯೂ ಅಲ್ಪ ಪ್ರಮಾಣದ್ದಲ್ಲ!]

"೧೮೪೧ನೆಯ ಇಸವಿಯಲ್ಲಿ ಹುಟ್ಟಿದ ಮಂಗಳೂರಿನ ಬಾಸೆಲ್ ಮಿಶ್ಶನ್ ಛಾಪಖಾನೆಯಲ್ಲಿ 'ಕಲ್ಯಾಣಪ್ಪನ ಪ್ರಸಂಗ' ಎಂದು ಒಂದು ಯಕ್ಷಗಾನ ಪ್ರಸಂಗವು ಅಚ್ಚಾಗಿತ್ತು. ಅದನ್ನು ಕೂಡಲೆ ಇಂಗ್ಲಿಷ್ ಸರಕಾರವು ಕಂಡುಹಿಡಿದು ಅದರ ಪ್ರತಿಗಳನ್ನೆಲ್ಲ ಸುಟ್ಟುಹಾಕಿಸಿತಂತೆ."

[ಗೋವಿಂದ ಪೈಯವರು ನನಗೆ ಬರೆದಿರುವ ಒಂದು ಪತ್ರದಿಂದ]

ಬಾಸೆಲ್ ಮಿಶ್ಶನಿನವರು ಇಂಗ್ಲಿಷರಲ್ಲ – ಜರ್ಮನರು, ಎಂಬುದನ್ನು ಗಮನದಲ್ಲಿಟ್ಟರೆ, ಮೇಲಿನ ಮಾಹಿತಿ ಅರ್ಥಪೂರ್ಣವಾಗಿ ಯಾರಿಗಾದರೂ ತೋರಲೇಬೇಕು. ಬರಿಯ ಕಳ್ಳನ ಕಥೆ ಎಂದಾದರೆ ಪ್ರತಿಗಳನ್ನು ಸುಟ್ಟು ಹಾಕುವ ಅಗತ್ಯ ಇಂಗ್ಲಿಷ್ ಸರಕಾರಕ್ಕೆ ಖಂಡಿತವಾಗಿಯೂ ಇರುತ್ತಿರಲಿಲ್ಲ.

ಕಲ್ಯಾಣಸ್ವಾಮಿಯ ಕಥೆ ಮುಗಿದ ಬಳಿಕ, ಇಂಗ್ಲಿಷರು ತೋರಿಸಿದ ಧೋರಣೆ ಯಾವುದು?

"....ಬೋಪುದಿವಾನನಿಗೂ ಆತನ ಜನರಿಗೂ ಕಂಪೆನಿ ಸರಕಾರದವರು....ಜಹಗೀರು ಭೂಮಿಗಳನ್ನೂ ಯುದ್ಧದಲ್ಲಿ ಸತ್ತು ಹೋದವರ ಕುಟುಂಬದವರಿಗೆ ಮೂರು ತಲೆಗಳ ವರೆಗೆ ಪೆನ್ಶನ್ನನ್ನೂ ಕಾಟಿಕಾಯಿಯಲ್ಲಿ ['ದಂಗೆ' ಅಡಗಿಸಲು] ಭಾಗವಹಿಸಿದವರ ಯೋಗ್ಯತೆಗನುಸಾರವಾಗಿ ಚಿನ್ನ, ಬೆಳ್ಳಿ ಪದಕಗಳನ್ನೂ ಕೊಟ್ಟರು. ಚಿನ್ನದ ಪದಕವು ಸರಪಣಿ ಸಮೇತ ಹನ್ನೊಂದೂವರೆ ತೊಲೆ ತೂಕವುಳ್ಳದ್ದಾಗಿದ್ದಿತು. ಆ ಪದಕದ ಒಂದು ಬದಿಯಲ್ಲಿ ಒಬ್ಬ ಕೊಡಗು ವೀರನು ಯುದ್ಧ ಮಾಡುವ ಹಾಗೆ ಅಚ್ಚೊತ್ತಿದೆ. ಇನ್ನೊಂದು ಬದಿಯಲ್ಲಿ ಪೀಚೆಕತ್ತಿ ಮತ್ತು ಒಡಿಕತ್ತಿಗಳನ್ನು ಒಂದು ಹಾರದಲ್ಲಿ ಕಟ್ಟಿ ಸಿಕ್ಕಿಸಿದ ಹಾಗೆ ಬಿಡಿಸಿದೆ. ಇದಲ್ಲದೆ ಆ ಪದಕದ ಒಂದು ಬದಿಯಲ್ಲಿ ಇಂಗ್ಲಿಷಿನಲ್ಲಿ "For distinguished conduct and loyalty to the British Government, Coorg, April 1837" ಎಂದು ಬರೆದಿದೆ. ಅದರ ತರ್ಜುಮೆಯು ಕನ್ನಡದಲ್ಲಿ ಇನ್ನೊಂದು ಬದಿಯಲ್ಲಿದೆ."

[ಡಿ. ಎನ್. ಕೃಷ್ಣಯ್ಯನವರ ಲೇಖನದಿಂದ]

'ಕಳ್ಳ'ನನ್ನು ಹಿಡಿದರೆಂಬ ಕಾರಣದಿಂದ 'ವೀರರಿಗೆ' ಇಷ್ಟೊಂದು ಸತ್ಕಾರ ಮಾಡಿದರೆಂದು ನಂಬುವುದು ಕಷ್ಟ!

ಈ ಎಲ್ಲ ಅಂಶಗಳನ್ನು ಪರಿಗಣಿಸಿ, ನಿನ್ನೆ – ಇಂದು – ನಾಳೆಗಳನ್ನು ಬಂಧಿಸಿರುವ ಸೂತ್ರವನ್ನು ಗಮನಿಸಿ, ಕಥಾನಾಯಕ ಕಲ್ಯಾಣಸ್ವಾಮಿಯ ಪಾತ್ರವನ್ನೂ ಇತಿಹಾಸದಲ್ಲಿ ಉಲ್ಲೇಖವಿರುವ ಹಾಗೂ ಇಲ್ಲದ ಇತರ ಪಾತ್ರಗಳನ್ನೂ ನಾನು ಸೃಷ್ಟಿಸಿದ್ದೇನೆ. ಇತಿಹಾಸದ ನಿರ್ಮಾತೃಗಳು ಜನರೇ ಎಂಬ ಸಾರ್ವಕಾಲಿಕ ಸತ್ಯವನ್ನು ಮರೆಯದೆ, ಈ ಕಾದಂಬರಿಯನ್ನು ರಚಿಸಿದ್ದೇನೆ.

*　　　*　　　*　　　*

'ಕಲ್ಯಾಣಪ್ಪ' ನನ್ನ ಪ್ರಿಯ ಸ್ನೇಹಿತ. ಅದ್ಭುತವಾದ ತಮ್ಮ ವರ್ಣನಾವೈಖರಿಯಿಂದ, ಮಾತಿನ ಮೋಡಿಯಿಂದ, ಸಾಹಿತ್ಯ ಪ್ರತಿಭೆಯಿಂದ, ಆ ಕಥೆಯನ್ನು ಇಪ್ಪತ್ತು ವರ್ಷಗಳಿಗೆ ಹಿಂದೆಯೇ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದವರು, ಬಾಲ್ಯದ ನನ್ನ ಅಧ್ಯಾಪಕರಾದ ಶ್ರೀಯುತ ಬಿ. ಶಂಕರನಾರಾಯಣರಾಯರು. ಅವರು ಆಗ ಹೇಳಿದ ಕಥೆಯ ನಿರ್ದಿಷ್ಟ ಸ್ವರೂಪವಾಗಲೀ ವಿವರವಾಗಲೀ ಈಗ ನನಗೆ ನೆನಪಿಲ್ಲ. ಆದರೆ ಆ ಪದಬ್ರಹ್ಮ ಸೃಷ್ಟಿಸಿದ ಕಲ್ಯಾಣಪ್ಪನ ಪಾತ್ರ ಮಾತ್ರ, ಅನಂತರ ಮನಃಪಟಲದ ಮೇಲೆ ಹಲವು ಸಹಸ್ರ ಪಾತ್ರಗಳು ಸುಳಿದರೂ, ಅಚ್ಚಳಿಯದೆ ನಿಂತಿದೆ. ನನ್ನ ಈ ಬರೆವಣಿಗೆಗೆ ಆ ಕಥೆಯೇ ಮೂಲ ಸ್ಫೂರ್ತಿ.

ಎಂದಾದರೂ ಆ ವಸ್ತುವನ್ನು ಬಳಸಿಕೊಂಡು ಬರೆಯಬೇಕೆಂದು ನಿರ್ಧರಿಸಿದ್ದರೂ, ನಾನು 'ಕಾದಂಬರಿಕಾರ' ಎನ್ನಿಸಿಕೊಂಡ ಬಳಿಕ [!] ಆ ವಿಷಯದ ಕಡೆಗೆ ನನ್ನ ಲಕ್ಷ್ಯವನ್ನೆಳೆದವರು ಬಾಲ್ಯ ಸ್ನೇಹಿತರಾದ ಶ್ರೀ ಶ್ರೀನಿವಾಸ ಪ್ರಭು.

ಆದರೆ ಆಗಲೆ, ಸಾಹಿತಿ ಸನ್ಮಿತ್ರ ಶ್ರೀ ರಾ. ವೆಂ. ಶ್ರೀ. 'ಕಲ್ಯಾಣಸ್ವಾಮಿ' ಎಂಬ ಕಾದಂಬರಿ ಬರೆಯುವರೆಂದು ಪ್ರಕಟವಾಗಿತ್ತು. ಅವರ ಕಲ್ಯಾಣಸ್ವಾಮಿ ನನ್ನ ಕಲ್ಯಾಣಪ್ಪನೇ ಎಂದು ತಿಳಿಯಲು ಹೆಚ್ಚು ಕಾಲ ಹಿಡಿಯಲಿಲ್ಲ. ರಾ. ವೆಂ. ಶ್ರೀ., ಸಾಮಾನ್ಯವಾಗಿ ಬರೆಹಗಾರರ ಜಾತಿಯಲ್ಲಿ ಕಾಣಸಿಗದ ಸೌಹಾರ್ದ ಭಾವದಿಂದ, "ನೀವು ಬರೆಯಿರಿ, ನಾನು ಪ್ರಕಟಿಸುವ ಏರ್ಪಾಟು ಮಾಡುತ್ತೇನೆ," ಎಂದರು.

ವಸ್ತುವಿನ ಪ್ರಸ್ತಾಪಮಾಡಿದಾಗ ಕವಿ ಅಮ್ಮೆಂಬಳರು, ಶ್ರೀ ಬಿ. ಶಂಕರ

ಭಟ್ಟರು, ಶ್ರೀ ಪಿ. ಕೆ. ನಾರಾಯಣರು ನನಗೋಸ್ಕರ ತಮ್ಮ ನೆನಪುಗಳ ಭಂಡಾರಗಳನ್ನು ತಾವಾಗಿಯೇ ತೆರೆದರು.

ಬಾಲ್ಯಸ್ನೇಹಿತ ಶ್ರೀ ಮನಮೋಹನ ಪ್ರಭು, ಕೇಳಿದೊಡನೆಯೇ ಒಂದೆರಡು ಪುಸ್ತಕಗಳನ್ನು ಕಳುಹಿಕೊಟ್ಟರು.

ವಿಷಯ ಸಂಗ್ರಹಕ್ಕೆಂದು ಮಡಿಕೇರಿಗೆ ಹೋದಾಗ, ನಿತ್ಯೋತ್ಸಾಹಿ ಯಾದ ಶ್ರೀ ಅನಂತಪದ್ಮನಾಭರಾಯರು, ಬರೆಹಗಾರ ಸೋದರ ಶ್ರೀ ಬಿ.ಡಿ. ಗಣಪತಿಯವರು, ಅವಿರಾಮ ಜೀವಿ ಶ್ರೀ ಕುಟ್ಟಪ್ಪನವರು,ಸಂತೋಷ ದಿಂದ ನನಗೆ ಸಲಹೆ ಸಹಾಯಗಳನ್ನು ನೀಡಿದರು.

ಶ್ರೀ ಡಿ.ಎನ್. ಕೃಷ್ಣಯ್ಯನವರು, ನನ್ನ ವಿಚಾರಗಳು ಸ್ಫುಟಗೊಳ್ಳಲು ನೆರವಾದರು. ಶ್ರೀ ಎ. ಆರ್. ಶಗ್ರಿತ್ತಾಯರು ತಮ್ಮ ಯಕ್ಷಗಾನ ಕೃತಿ ಯನ್ನು ಕಳುಹಿಕೊಟ್ಟರು. ಶ್ರೀ ಗೋವಿಂದಪೈಯವರಂತೂ ತಾವು ನೀಡಿದ ಅಮೂಲ್ಯ ಸಹಾಯದಿಂದ ನನ್ನನ್ನು ಮೂಕನಾಗಿ ಮಾಡಿದರು.

ಇವರೆಲ್ಲರಿಗೆ, ಸಂವತ್ಸರಗಳನ್ನು ಗುರುತುಹಚ್ಚಲು ನೆರವಾದ ಪಂಚಾಂಗ ಮಂದಿರದ ಶ್ರೀ ಶ್ರೀನಿವಾಸರಿಗೆ, ಶ್ರೀ ಗುರುರಾಜರಿಗೆ, ಬರೆವಣಿಗೆ ಸಾಗಿದ್ದಂತೆಯೆ 'ಬರೆದಾಯಿತೆ? ಅಚ್ಚಾಯಿತೆ?' ಎಂದು ಕೇಳುತ್ತ ಸ್ವಾಗತಾ ರ್ಹವಾದ 'ಕಿರುಕುಳ'ವನ್ನಿತ್ತ ಅನೇಕ ವಾಚಕ ಮಿತ್ರರಿಗೆ, ಬರೆದಂತೆಲ್ಲ ಓದಿದುದಕ್ಕೆ ಕಿವಿಗೊಟ್ಟು ಮೊದಲ ಪ್ರತಿಕ್ರಿಯೆ ವ್ಯಕ್ತಪಡಿಸಿದ ಒಡತಿ ಅನುಪಮಾಗೆ, ನಾನು ಕೃತಜ್ಞ....

ಮುಂದಿನ ವರ್ಷ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋ ತ್ಸವವನ್ನು ಸ್ವತಂತ್ರ ಭಾರತ ಆಚರಿಸಲಿದೆ. ಆ ರಾಷ್ಟ್ರೀಯ ಉತ್ಸವಕ್ಕಿದು ಕನ್ನಡ ಬರೆಹಗಾರನಾದ ನನ್ನ ಕಾಣಿಕೆ....

'ಕಲ್ಯಾಣಸ್ವಾಮಿ'ಗೆ ಸಮಕಾಲೀನವಾಗಿದ್ದ ಇನ್ನೊಬ್ಬ ವ್ಯಕ್ತಿಯ ನೇತೃತ್ವದಲ್ಲಿ ನಡೆದ ಹೋರಾಟದ ರೋಮಾಂಚಕಾರಿ ಕಥೆಯೊಂದಿದೆ. ಸದ್ಯದಲ್ಲೇ ನಾನು ಬರೆಯಬೇಕೆಂದಿರುವ ಆ ಕಾದಂಬರಿಯ ಹೆಸರು 'ವೀರ ಅಪರಂಪ.' ಅದು 'ಕಲ್ಯಾಣಸ್ವಾಮಿ'ಗೆ ಸೋದರ ಕೃತಿ. ಅದನ್ನೂ ನನ್ನ ಓದುಗರು ಸ್ವಾಗತಿಸುವರೆಂದು ನಾನು ನಂಬಿದ್ದೇನೆ.

ಇದು ನನ್ನ ಮೊದಲನೆಯ ಐತಿಹಾಸಿಕ ಕಾದಂಬರಿ. ಮೊದಲನೆ ಯದು, ಕೊನೆಯದಲ್ಲ. ಕನ್ನಡನಾಡಿನ ಗತಕಾಲವನ್ನೆಲ್ಲ ಕಾದಂಬರಿಗಳ

ರೂಪದಲ್ಲಿ ನಾನೊಬ್ಬನೇ ಪುನಃ ಸೃಷ್ಟಿಸಬೇಕೆಂಬ ಹಟ ನನಗಿಲ್ಲ. ಆದರೆ, 'ಕಲ್ಯಾಣಸ್ವಾಮಿ'ಯ ಜತೆಗೆ, ಇವತ್ತಿಗಾಗಿಯೂ ನಾಳೆಗಾಗಿಯೂ ಇನ್ನೂ ಕೆಲವನ್ನು ಬರೆದು, ಗತಕಾಲಕ್ಕೂ ನಮಗೂ ನಡುವೆ ಭದ್ರವಾದ ಕೊಂಡಿಗಳನ್ನು ಬೆಸೆಯಲು ನೆರವಾಗಬೇಕೆಂಬ ಅಪೇಕ್ಷೆ ಮಾತ್ರ ಬಲವಾಗಿದೆ.

ಇತರ ಕೃತಿಗಳ ವಿಷಯದಲ್ಲಿ ಹೇಗೆಯೋ ಹಾಗೆಯೇ ಈ ಕೃತಿಗೆ ಸಂಬಂಧಿಸಿಯೂ ಓದುಗರ ಪ್ರತಿಕ್ರಿಯೆಯನ್ನು ತಿಳಿಯಲು ನಾನು ಕುತೂಹಲಿಯಾಗಿದ್ದೇನೆ.

ಗಣೇಶ ಚತುರ್ಥಿ, ಸೆಪ್ಟೆಂಬರ್, ೧೯೫೬

ವಾಣಿವಿಲಾಸ ಮೊಹಲ್ಲಾ

ಮೈಸೂರು

**ನಿರಂಜನ**

# ಕತ್ತಲು ಕವಿದ ಕೊಡಗು

# ೧

ದಟ್ಟೈಸಿದ್ದ ವನಸಿರಿಗೆ ಬೆಳುದಿಂಗಳ ಕ್ಷೀರಾಭಿಷೇಕವಾಗುತ್ತಿತ್ತು. ಕೊನೆಯಿಲ್ಲದೆ ಉಲಿಯುತ್ತಿದ್ದ ಎಲೆಗಳ ಮರೆಯಲ್ಲಿ ನಿಂತು ಚಂದಿರ ಆಡುತ್ತಿದ್ದುದು ಕಣ್ಣುಮುಚ್ಚಾಲೆಯಾಟ. ಕಾಡು ಕಡಿದು ಬಯಲು ಮಾಡಿದ್ದ ಕಡೆ ಮಾತ್ರ ಹಾಲು ಹೆಪ್ಪುಗಟ್ಟಿ ನಿಂತಿತ್ತು. ಎತ್ತರದಲ್ಲಿ ಬಿಳಿಯ ಮೋಡಗಳು, ನಿಮಿಷವೂ ಬಿಡುವಿಲ್ಲವೆಂಬಂತೆ ಉತ್ತರಾಭಿಮುಖವಾಗಿ ಧಾವಿಸುತ್ತಿದ್ದುವು. ವೃಕ್ಷರಾಶಿಗೆ ಕಚಗುಳಿ ಇಡುತ್ತ ಒಂದೇ ಸಮನೆ ಬೀಸುತ್ತಿತ್ತು ಕುಳಿರುಗಾಳಿ.

ನಡುಮನೆಯಲ್ಲಿ ಅಗ್ಗಿಷ್ಟಿಕೆ ಉರಿಯುತ್ತಿತ್ತು. ಕೆಂಡಗಳು ಮಿನುಗುತ್ತಿದ್ದುವು. ಅಲ್ಲಿಯೆ ಗೋಡೆಗೊರಗಿ ಕುಳಿತಿದ್ದಳು ಗಿರಿಜವ್ವ, ಮೌನವಾಗಿ.

ಮುದುಕಿ ಮಾತ್ರ ಗೊಣಗುತ್ತಲೇ ಇದ್ದಳು. ಆಕೆ ಗಂಗವ್ವ. ಎರಡು ವರ್ಷಗಳಿಂದ ಮಗನ ಆಗಮನವನ್ನು ಇದಿರು ನೋಡುತ್ತಲೇ ಇದ್ದ ವೃದ್ಧ ಮಾತೆ.

ಕಂಬಳಿಯನ್ನು ಬಲವಾಗಿ ಹೊದೆಯುತ್ತ, ಗೋಡೆ ಹಿಡಿದು ನಿಂತು, ತಡಪರಿಸುತ್ತ ಆಕೆ ಹೊರಬಂದಳು. ಹೊಸ್ತಿಲು ದಾಟಿದ ಬಳಿಕ ಜಗಲಿ ಬಂತೆ? ಇದು ಜಗಲಿಯೆ? ಅಥವಾ ಅಂಗಳಕ್ಕಿಳಿಯುವ ಮೆಟ್ಟಲೆ? – ಎಂದು ಪಾದಗಳು ಶಂಕಿಸಿದುವು. ಪರೆ ಆವರಿಸಿದ್ದ ಕಣ್ಣುಗಳು, ಕತ್ತಲೆಯನ್ನು ಇರಿದು ನೋಡುವಂತೆ ಕಿರಿದುಗೊಳ್ಳುತ್ತ ದೂರಕ್ಕೆ ದಿಟ್ಟಿಸಿದುವು.

ಹಾಗೆ ನೋಡಿ ಆಯಾಸವಾಗಲು, ನಿಟ್ಟುಸಿರು ಬಿಟ್ಟು, ಜಗಲಿಯ ಅಡ್ಡಗೋಡೆಯನ್ನು ಆಧರಿಸಿ ಆಕೆ ಅಲ್ಲಿಯೆ ನೆಲದ ಮೇಲೆ ಕುಳಿತಳು.

ಹೃದಯದ ಕಳವಳ ನಿತ್ಯದ ಪಲ್ಲವಿಯನ್ನು ಹೊರಗೆಡವಿತು :

“ ಪುಟ್ಟಬಸ್ಯ ಬರಲಿಲ್ಲಲ್ಲೇ....ಬರಲಿಲ್ಲಲ್ಲೇ ಪುಟ್ಟಬಸ್ಯಾ....”

ಕುಳಿತಲ್ಲಿಂದಲೆ ಗಿರಿಜವ್ವ ಹೇಳಿದಳು :

“ ಬಂದು ಮಲಕ್ಕೊಳ್ಳಿ ಅತ್ತೆಮ್ಮ. ರಾತ್ರಿ ಭಾಳ ಆಯ್ತು.”

ಸೊಸೆ ಹಾಗೆ ಕರೆದಳೆಂದು ಎದ್ದು ಬರುವವಳೆ ಗಂಗವ್ವ? ಆಕೆ ಅಳ

ತೊಡಗಿದಳು ಎಂದಿನಂತೆ. ಕ್ಷೀಣಧ್ವನಿಯ ರೋದನ. ಒಳಗಿನ ಸಂಕಟ ಕರಗಿ ಕುದಿದು ಸ್ವಲ್ಪ ಸ್ವಲ್ಪವೆ ಹೊರಕ್ಕ ಒಸರಿತು.

ಗಿರಿಜವ್ವನಿಗೂ ಗಂಟಲು ಒತ್ತರಿಸಿ ಬಿಕ್ಕುವಂತಾಯಿತು. ಆಕೆ ಎದ್ದು ಅತ್ತೆಯ ಬಳಿಗೆ ನಡೆದಳು. ಅಲ್ಲಿ ಆ ಹಣ್ಣು ಜೀವಕ್ಕೊತ್ತಿಕೊಂಡು ಕುಳಿತಳು.

ಗಂಗವ್ವನ ಸುಕ್ಕುಗಟ್ಟಿದ ಕೈ ಸೊಸೆಯ ತೋಳನ್ನು ಮುಟ್ಟಿತು; ಮೈಯನ್ನು ತಡವಿತು; ಮುಖದತ್ತ ಸರಿಯಿತು. ಆ ಕಣ್ಣುಗಳಲ್ಲಿ ಹನಿಯಾಡಿತೆಂದು, ಆಕೆ ಅಂದಳು:

"ನೀನ್ಯಾತಕ್ಕೆ ಅಳ್ತೀಯಾ? ಅಳಬೇಡ."

"ಇಲ್ಲ ಅತ್ತೆಮ್ಮ."

ಆ ಉತ್ತರವನ್ನು ಮಾತ್ರ ಅಳು ನಿರ್ಲಜ್ಜೆಯಿಂದ ಹಿಂಬಾಲಿಸಿತು.

ಅತ್ತೆ ತನ್ನ ಬಡ ಬಾಹುವಿನಿಂದ ಸೊಸೆಯನ್ನು ಬಳಸಿ ತನ್ನೆಡೆಗೆ ಬರ ಸೆಳೆದಳು. ಎಳೆಯ ಮಗುವಾಗಿ ಮುದುಡಿಕೊಂಡು ಗಂಗವ್ವನ ಎದೆಯೊಳಗೆ ಮುಖವಿಟ್ಟಳು ಗಿರಿಜೆ.

ಒಂದೇ ರೀತಿಯ ದುಃಖ ಎರಡು ಜೀವಗಳನ್ನೂ ಒಂದಾಗಿ ಬೆಸೆಯಿತು.

ಹೊರಗೆ ಸುಯ್ ಸುಯ್ಯೆಂದು ಸದ್ದುಮಾಡುತ್ತ ಬೀಸುತ್ತಲೇ ಇತ್ತು ಗಾಳಿ.

ಅತ್ತೆ ಕೇಳಿದಳು:

"ಇವತ್ತು ಹುಣ್ಣಿಮೆ ಅಲ್ಲವಾ?"

"ಹೂಂ. ಅತ್ತೆಮ್ಮ."

"ಯಾಕೆ, ತಿಂಗಳ ಬೆಳಕೇ ಇಲ್ವಲ್ಲಾ. ಮೋಡ ಮುಚ್ಕೊಂಡೈತಾ? ಮಳೆ ಬರೋ ಹಂಗೈತಾ?"

ಬೆಳಕು ಶುಭ್ರವಾಗಿತ್ತು. ಮೋಡ ಮುಚ್ಚಿರಲಿಲ್ಲ. ಬೇಸಗೆ ಅದೇ ಆಗ ಆರಂಭವಾಗಿದ್ದ ಆ ದಿನಗಳಲ್ಲಿ ಎಲ್ಲಿಯ ಮಳೆ? ಆದರೆ ಎದೆಕುದಿತದಿಂದ ವಿಚಾರ ಮಂಕಾಗಿದ್ದ, ವಯಸ್ಸಿನಿಂದ ದೃಷ್ಟಿ ಮಂದವಾಗಿದ್ದ, ಗಂಗವ್ವನ ಪಾಲಿಗೆ ಪ್ರತಿಯೊಂದೂ ತಿರುವುಮುರುವಾಗಿತ್ತು. ಅದನ್ನು ತಿಳಿ

ದಿದ್ದ ಗಿರಿಜವ್ವ, ಅತ್ತೆಯ ಮನ ನೋಯಿಸಲಾರದೆ ಅಂದಳು :

"ಹೂಂ."

ಮಳೆ ಬಂದು ಮಗನನ್ನು ತೋಯಿಸಬಹುದೆಂದು ಮುದುಕಿಯ ಹೃದಯ ಕ್ಷಣಕಾಲ ಚಡಪಡಿಸಿತು. ಬಳಿಕ ಏನನ್ನೊ ನೆನಪುಮಾಡಿಕೊಳ್ಳುತ್ತ ಮನಸಿನಲ್ಲೆ ಆಕೆ ಗುಣಿಸಿ ನೋಡಿದಳು.

"ಅಲ್ಲಾ, ಸುಗ್ಗಿ ಆದ್ಮೇಲಲ್ವಾ ಮಳೆ ಬರೋದು? ಮಾವಿನ ಕಾಯಿ ಬಲಿತೇ ಇಲ್ಲ ಇನ್ನೂ?"

ವಾಸ್ತವ ಪ್ರಪಂಚಕ್ಕೆ ಅತ್ತೆ ಇಳಿದಳೆಂದು ಸೊಸೆಗೆ ತುಸು ಸಮಾಧಾನವೆನಿಸಿತು.

"ಹೂಂ, ಬರೇ ಮೋಡ. ಮಳೆ ಬರೋ ಹಂಗಿಲ್ಲ."

"ಬರದೇ ಇದ್ದರೆ ವಾಸಿ. ಪುಟ್ಟಬಸ್ಯಾ ಈಗೆಲ್ಲಿದಾನೊ? ಎಷ್ಟು ಕಷ್ಟವಾಗ್ತೇತೊ ಮಗನಿಗೆ?"

ಎಂದಿನ ಜಾಡನ್ನೆ ಮತ್ತೆ ಹಿಡಿದ ವಿಚಾರಸರಣಿ.

ಸೊಸೆ ಮೌನವಾಗಿದ್ದಳೆಂದು ಅತ್ತೆಯೇ ಅಂದಳು :

"ಅಲ್ಲಾ, ಒಬ್ಬರಾದರೂ ಬರಬೇಡವಾ ಈ ದಾರಿಯಾಗಿ? ಏನಾಯ್ತೂಂತ ಒಂದು ಸುದ್ದೀನಾದರೂ ಸಿಗಬೇಡವಾ? ಹಿಂಗೂ ಮಾಡ್ತಾನಾ ಶಿವ?"

ಆ ಮಾತನ್ನು ಗಿರಿಜೆಯೂ ಎಷ್ಟೋ ಸಾರೆ ಅಂದುಕೊಂಡಿದ್ದಳು. ಗಂಡ ಎಲ್ಲಿರುವನೆಂಬ ವಾರ್ತೆಯಾದರೂ ಬಂದಿದ್ದರೆ? ಅಷ್ಟರಿಂದಲೆ ಮನಸ್ಸಿಗೆ ಎಷ್ಟೋ ನೆಮ್ಮದಿ ದೊರೆಯುತಿತ್ತು.

ಭಾರವಾಗಿ ಬಾಗಿದ ತಲೆ ಅತ್ತೆಯ ತೊಡೆಯ ಮೇಲೆ ಒರಗಿತು.

ಕಂಬಳಿಯನ್ನು ಆಕೆಯ ಮೈಗೂ ಹೊದಿಸುತ್ತ ಗಂಗವ್ವ ಕೇಳಿದಳು :

"ನಿದ್ದೆ ಬಂತೇನೆ?"

"ಇಲ್ಲ."

ಹಗಲು ರಾತ್ರಿಗಳನ್ನು ಎಣಿಸುತ್ತ ಕಾಲ ಕಳೆಯುವವರಿಗೆ ಸರಿಯಾದ ನಿದ್ದೆಯಾದರೂ ಹೇಗೆ ಬರಬೇಕು? ಆ ವಿಶ್ರಾಂತಿ ಸುಖ, ಅವರ ಪಾಲಿಗೆ ಬಹಳ ಕಾಲದಿಂದಲೇ ಇಲ್ಲದೆ ಹೋದ ಸಿರಿವಂತಿಕೆ.

ತನ್ನ ಮಟ್ಟಿಗೆ ಮಸಕಾಗಿದ್ದ ಬೆಳುದಿಂಗಳನ್ನು ದಿಟ್ಟಿಸುತ್ತ, ಕಾಡಿನ ಕಲರವಕ್ಕೆ ಕಿವಿಗೊಡುತ್ತ, ಗಂಗವ್ವ, ಹಳೆಯ ನೆನಪುಗಳ ಸಿಕ್ಕುಸಿಕ್ಕಾಗಿದ್ದ ಎಳೆಗಳನ್ನು ಒಂದೊಂದಾಗಿಯೇ ಬಿಡಿಸತೊಡಗಿದಳು....

—ಮೂವತ್ತು ವರುಷಗಳ ಹಿಂದೆ.

ಹಾಗೆಯೇ ಕಾದುಕುಳಿತಿದ್ದ ಅಂತಹದೇ ರಾತ್ರಿಗಳು. ಹತ್ತು ವರ್ಷ ವಯಸ್ಸಿನ ಮಗಳು ವೀರಮ್ಮ; ಪುಟ್ಟಬಸವನನ್ನು ಬಸಿರಲ್ಲಿ ಹೊತ್ತಿದ್ದ ತಾನು; ಹಾಗೂ ತನ್ನತ್ತೆ. ಗಟ್ಟಿ ಮುಟ್ಟಾಗಿದ್ದ ಜೀವ ಆ ವೃದ್ಧೆ. ಆಕೆ ತನ್ನ ಮಗನ ಹಾದಿ ನೋಡುತ್ತಿದ್ದಳು. ಆಳುತಿದ್ದ ದೊಡ್ಡ ವೀರರಾಜನ ಆಪ್ತ ಕೋಟೆಯಲ್ಲೊಬ್ಬ ಸರದಾರನಾಗಿದ್ದ ವೀರಮ್ಮನ ತಂದೆ. ಆತ ನಾಲ್ಕಾರು ತಿಂಗಳಿಂದ ಮನೆಗೆ ಬಂದಿರಲಿಲ್ಲ.

'ಮನೇಲಿ ಹೆಂಡತಿ ಬಸುರಿ ಅನ್ನೋ ಗ್ಯಾನವಾದರೂ ಬೇಡವಾ ಇವನಿಗೆ?' ಎನ್ನುತ್ತ ರೇಗಾಡುತ್ತಿದ್ದಳು ಅತ್ತೆ. 'ನೀನ್ಯಾಕೆ ಎದ್ದು ಕೂತಿದೀಯಾ? ಹೋಗಿ ಮಲಗಿಕೋ' ಎಂದು ಸೊಸೆಗೆ ಹೇಳುತ್ತಿದ್ದಳು.

ಹಾಗೆ ಎಷ್ಟೋ ಹಗಲು ಎಷ್ಟೋ ಇರುಳು ಕಳೆದ ಬಳಿಕ....

ಒಂದು ದಿನ ಆಸ್ಥಾನದಿಂದ ಓಲೆಕಾರ ಬಂದ. ಆತ ತಂದುದು ವೀರಮ್ಮನ ತಂದೆ ತೀರಿಹೋದನೆಂಬ ವಾರ್ತೆಯನ್ನು.

'ಬಸವರಾಜಪ್ಪನವರು ಎರಡು ವಾರಗಳಿಗೆ ಹಿಂದೆ ಅಪಮೃತ್ಯುವಿಗೆ ಗುರಿಯಾದರು ಅವ್ವಾವರೆ.'

ಅಪಮೃತ್ಯು? ವೀರ ಸರದಾರನಿಗೆ ಅಪಮೃತ್ಯು? ಏನಾಯಿತು? ಅರಸನಿಗೆ ಪ್ರಿಯನಾಗಿದ್ದ ಆ ಧೀರನಿಗೆ ಏನಾಯಿತು? ಯಾವ ದುಷ್ಟನ ಖಡ್ಗ ಆತನ ಮೇಲೆರಗಿತು? ಯಾವ ನೀಚನ ಗುಂಡು ಆತನಿಗೆ ತಾಕಿತು?

'ಹೇಳೋಕೆ ನಾಲಗೆ ಹೊರಳೋದಿಲ್ರವ್ವಾ. ಮಹಾರಾಜರು ಒಕ್ಕಣೆ ಬರಸವ್ರೆ.'

ಅರಸರು ಒಕ್ಕಣೆ ಬರೆಸಿದ್ದರು:

'ನಮ್ಮ ನೆಚ್ಚಿನ ಮಿತ್ರರಾದ ಸರದಾರ ಬಸವರಾಜಪ್ಪನವರ ತಾಯಿ ಮತ್ತು ಹೆಂಡತಿ – ಇವರಿಗೆ.'

ರಾಜಕಾರ್ಯನಿಮಿತ್ತ ಬಸವರಾಜಪ್ಪ ನಾಲ್ಕುನಾಡಿಗೆ ಹೋಗಿದ್ದ.

ಅಲ್ಲಿ ರಾತ್ರಿ, ಗೆಳೆಯರ ಬಳಗದಲ್ಲಿ ಆ ಮಾತು ಈ ಮಾತು ಹೊರಟಾಗ, ಒಂದು ಪ್ರಮಾದ ಸಂಭವಿಸಿತು. ಕುಡಿದು ಅಮಲೇರಿದವನೊಬ್ಬ ಅರಸನ ವಿಷಯ ವಾಗಿ ಲಘುವಾಗಿ ಮಾತನಾಡಿದ. ಅಲ್ಲಿಯೇ ಆತನ ಕೆನ್ನೆಗೆ ಏಟು ಬಿಗಿದ ಬಸವರಾಜಪ್ಪ. ಆದರೆ ಬೆಳಗಾಗುವುದರೊಳಗೆ ಬಸವರಾಜಪ್ಪನ ಕೊಲೆ ಯಾಗಿತ್ತು. ನಿದ್ದೆ ಹೋಗಿದ್ದವನ ಕತ್ತನ್ನೆ ಕಡಿದುಬಿಟ್ಟಿದ್ದರು. ಹಿಂದಿನ ರಾತ್ರಿ ಆತನಿಂದ ಅವಮಾನಿತನಾದವನ ಹಾಗೂ ಆತನ ಇಬ್ಬರು ಸಂಗಡಿ ಗರ ಪತ್ತೆಯೇ ಇರಲಿಲ್ಲ. ಅವರು ಆ ದೇಶವನ್ನೇ ಬಿಟ್ಟು ಮೈಸೂರಿನ ಕಡೆಗೆ ಓಡಿರಬೇಕೆಂಬುದು ಸ್ಪಷ್ಟವಾಗಿತ್ತು....

ಕರುಳು ಕಿತ್ತು ಬರುವಂತೆ ರೋದಿಸುತ್ತಿದ್ದ ಆ ಇಬ್ಬರು ಹೆಂಗಸ ರನ್ನೂ 'ಅವ್ವಾ, ಅಜ್ಜೀ' ಎನ್ನುತ್ತ ಅಳುತಿದ್ದ ಎಳೆಯ ಹುಡುಗಿಯನ್ನೂ ಸಂತೈಸಲೆತ್ನಿಸುತ್ತ ಓಲೆಕಾರ, ರಾಜರ ಇಸ್ತಿಹಾರನ್ನು ಓದಿ ಹೇಳಿದ್ದ.

ಅರಸರ ವಿಶೇಷ ಕರುಣೆಗೆ ಆ ಸಂಸಾರ ಪಾತ್ರವಾಗಿತ್ತು. ಆ ಪ್ರದೇಶ ವನ್ನೆಲ್ಲ ಬಸವರಾಜಪ್ಪನ ಕುಟುಂಬಕ್ಕೆ ಉಂಬಳಿಯಾಗಿ ರಾಜರು ಬಿಟ್ಟು ಕೊಟ್ಟಿದ್ದರು. ಒಂದು ಸಾವಿರ ವರಹದ ಹಣವಿತ್ತು ಜತೆಯಲ್ಲಿ....

ಅದು ಏನಿದ್ದರೇನು ? ಎಷ್ಟಿದ್ದರೇನು ? ಹೆತ್ತತಾಯಿಗೆ ಮಗ ದೊರೆ ತನೆ? ಕಾಲನ ದೂತರು ಕಸಿದುಕೊಂಡಿದ್ದ ತನ್ನ ಕರಿಮಣಿಭಾಗ್ಯ ಮತ್ತೆ ಬಂತೆ ? ವೀರಮ್ಮನಿಗೆ ತಂದೆ ಬಂದನೆ ? ತನ್ನ ಬಸಿರಲ್ಲಿದ್ದ ಶಿಶುವಿಗೆ—

ಹಾಗೆ ಗಂಗವ್ವನಿಗೆ ಪುಟ್ಟಬಸವ ಹುಟ್ಟಿದ. ವೀರನೆಂದು ಹೆಸ ರಾಗಿದ್ದ ತಂದೆಯ ಮುಖವನ್ನೆ ಕಂಡರಿಯದ ಮಗು. ತನ್ನ ಮಗನೆ ಸೊಸೆಯ ಬಸಿರಲ್ಲಿ ಮತ್ತೆ ಜನ್ಮವೆತ್ತಿದನೆಂದು ಮುದುಕಿ ಭಾವಿಸಿ ಪುಟ್ಟ ಬಸವನ ಲಾಲನೆಪಾಲನೆ ಮಾಡಿದಳು. ಆ ಹುಡುಗ ಅಜ್ಜಿಯ ಬಾಯಿ ಯಿಂದ ಕೇಳಿದುದೆಲ್ಲ, ತಂದೆಯ ಸಾಹಸದ ವೀರ ಕಥೆಗಳನ್ನೇ.

ತೊದಲುಪದ ಮಾತಾಗಿ ಮಾರ್ಪಟ್ಟ ಮೊದಲಿನಿಂದಲೆ ಪುಟ್ಟಬಸವ ಹೇಳುತಿದ್ದ :

'ದೊಡ್ಡೋನಾದಾಗ ನಾನು ರಾಜರ ಕಡೆಗೆ ಓಗ್ತೀನಿ. ಕುದುರೆ ಮೇಲೆ ಕುಂತ್ಕೋತೀನಿ. ನನ್ನ ಅಪ್ಪನ್ನ ಕೊಂದೋರ ಜತೆ ಯುದ್ಧ ಮಾಡ್ತೀನಿ.'

ಮಗನ ಮಾತು ಕೇಳಿ ಆಗ ತನಗೆ ಹೆಮ್ಮೆ ಎನಿಸಿತ್ತು ; ಭಯವೂ ಆಗಿತ್ತು.

ಅನಂತರ ವೀರಮ್ಮನಿಗೆ ಮದುವೆಯಾಯಿತು. ಶ್ರೀಮಂಗಲನಾಡಿನಲ್ಲಿದ್ದ ಗಂಡನ ಮನೆಗೆ ಆಕೆ ಹೊರಟುಹೋದಳು.

ಅದು ಇಪ್ಪತ್ತೈದು ವರ್ಷಗಳ ಹಿಂದಿನ ಮಾತು.

ಹತ್ತಿರದ ಹಳ್ಳಿಯಿಂದ ಹೊಲೆಯರು ಬಂದು ಸಾಗುವಳಿಯ ಕೆಲಸದಲ್ಲಿ ನೆರವಾದರು. ಪುಟ್ಟಬಸವನಿಗೆ ಅಕ್ಷರಾಭ್ಯಾಸವಾಯಿತು. ವಾರಕ್ಕೊಮ್ಮೆ ನಾಲ್ಕು ಮೈಲಿಗಳ ದೂರದಿಂದ ಐಗಳೊಬ್ಬರು ಬಂದು ಆತನಿಗೆ ಪಾಠ ಹೇಳಿದರು. ಕವಣೆ ಬೀಸುವುದನ್ನು, ಮರವೇರುವುದನ್ನು, ಬೇಟೆಯಾಡುವುದನ್ನು ಗುರುಗಳಿಲ್ಲದೆಯೆ ಆತ ಕಲಿತ.

ಪುಟ್ಟಬಸವ ಹದಿನೈದರ ಹರೆಯದವನಾಗಿದ್ದಾಗ ಅಜ್ಜ ತೀರಿಕೊಂಡಳು.

ಆ ಬಳಿಕ ಮಗನೂ ತಾನೂ ಜತೆಯಾಗಿ ಕಳೆದ ದಿನಗಳು....

ತಂದೆಯಂತೆಯೆ ಹರವಾಗಿದ್ದ ಹಣೆ, ಜಡವಾಗಿಯೆ ಇದ್ದು ಒಮ್ಮಿಂದೊಮ್ಮೆಲೆ ತೀಕ್ಷ್ಣವಾಗುತ್ತಿದ್ದ ಕಣ್ಣುಗಳು, ಮಾಟವಾಗಿದ್ದ ಮೂಗು, ಎದ್ದು ತೋರುತಿದ್ದ ಗಲ್ಲ, ಎಣ್ಣೆಗಪ್ಪು ಮೈ. ಅಂಗಾಂಗಗಳೆಲ್ಲ ಹೃಷ್ಟಪುಷ್ಟವಾಗಿದ್ದುವು. ಆದರೂ ಲವಲವಿಕೆ ಇರಲಿಲ್ಲ ಹುಡುಗನಲ್ಲಿ.

ಅಜ್ಜ ಇದ್ದಷ್ಟು ಕಾಲವೂ ಮೊಮ್ಮಗನಿಗೆ ಹೇಳುತಿದ್ದಳು :

‘ ನೀನು ಮನೆ ಬಿಟ್ಟು ಎಲ್ಲಿಗೂ ಓಗ್ಬಾರ್ದು; ಅಂ ?’

ಗಂಗವ್ವ ಆ ಭಯವನ್ನು ಸೆರಗಿನಲ್ಲಿ ಕಟ್ಟಿಕೊಂಡೇ ಇದ್ದಳು. ಹರೆಯದ ಹೊಲೆಯರೊಡನೆ, ನೆರೆಹಳ್ಳಿಯ ಹೈದರೊಡನೆ, ಆತ ಮಾತನಾಡುತ್ತಿದ್ದಾಗಲೆಲ್ಲ ತಾಯಿ ಮರೆಯಲ್ಲಿ ನಿಂತು ಕಿವಿಗೊಡುತಿದ್ದಳು. ಅರಸರ, ಯುದ್ಧದ, ವೈರಿಗಳ ಮಾತೇನೋ ಇರುತ್ತಿತ್ತು. ಆದರೆ ಅದೆಲ್ಲಾ ಹಿರಿಯರು ಆಡುತಿದ್ದ ಮಾತುಕತೆಯ ಪ್ರತಿಧ್ವನಿ ಮಾತ್ರ....

ಮದುವೆಯಾಯಿತೆಂದರೆ ಮಗ ಎಲ್ಲಿಗೂ ಹೊರಡಲಾರ, ಎಂಬುದು ಗಂಗವ್ವನ ನಂಬಿಕೆಯಾಗಿತ್ತು. ಪುಟ್ಟಬಸವನಿಗಿನ್ನೂ ಇಪ್ಪತ್ತು ತುಂಬುವುದಕ್ಕಿಲ್ಲ - ಆಗಲೆ ಆತ ಮದವಣಿಗನಾದ. ಆತನ ಕೈ ಹಿಡಿದುದು,

ವೀರಮ್ಮನನ್ನು ಒಯ್ದವರ ಊರಿನ, ಶ್ರೀಮಂಗಲನಾಡಿನ, ಹುಡುಗಿಯೇ;
– ಗಿರಿಜವ್ವ.

ಹೆಮ್ಮೆಯ ಅತ್ತೆಯಾಗಿ, ಮಗನೊಂದಿಗೆ ಸೊಸೆಯೊಂದಿಗೆ ಗಂಗವ್ವ, ಕಾಲ್ನಡಿಗೆಯ ದೀರ್ಘ ಪ್ರವಾಸದ ಬಳಿಕ ಊರಿಗೆ ಮರಳಿದಳು.

ಆಗಲೆ ಪುಟ್ಟಬಸವ ಹೇಳಿದುದು—

'ಒಬ್ಬೊಬ್ಬರಿಗೆ ಒಂದೊಂದು ಕುದುರೆ ಬೇಕು ನೋಡವ್ವಾ

[ತನ್ನ ಗಂಡ ಬಸವರಾಜಪ್ಪ ಸವಾರಿ ಮಾಡುತ್ತಿದ್ದ ಕುದುರೆ ಎಷ್ಟು ಸೊಗಸಾಗಿತ್ತು !]

ಡವಡವನೆ ಎದೆ ಹೊಡೆದುಕೊಳ್ಳುತಿದ್ದಂತೆ ಆಕೆ ಉತ್ತರವಿತ್ತಿದ್ದಳು:

'ಹುಂ ! ಕುದುರೆಯಲ್ಲ, ಆನೆ ಬೇಕು.'

'ಆನೆ ಇದ್ದರೆ ಇನ್ನೂ ಪಸಂದಾಗಿರ್ತೇತೆ. ಎಲ್ಲರೂ ಒಟ್ಟಿಗೇ ಕುಂತ್ಕೋಬೌದು.'

ಮಾತಿನಲ್ಲಿ ಬಿಟ್ಟುಕೊಟ್ಟನೆ ಆತ?.... ತನಗೆ ಗೊತ್ತೇ ಇರಲಿಲ್ಲ. ಮದುವೆಯ ನಿಮಿತ್ತದ ಪ್ರವಾಸದಿಂದ ಆತನಿಗೆ ಹೊರ ಜಗತ್ತಿನೊಡನೆ ಸಂಪರ್ಕ ಲಭಿಸಿತ್ತು. ಆತನ ಕಿವಿಗೆ ಬಿದ್ದಿದ್ದುವು ಎಷ್ಟೋ ವಿಷಯಗಳು. ಒಳಗಿನ ಆಸೆಗಳೆಲ್ಲ ಗರಿಗೆದರಿದ್ದುವು.

ಒಂದು ಮಗುವಾದ ಮೇಲೆ ಎಲ್ಲಿಗೂ ಹೋಗಲಾರ– ಎಂದು ಗಂಗವ್ವ ಲೆಕ್ಕಹಾಕಿದಳು, ವೀರಮ್ಮ ಹುಟ್ಟಿದಳೆಂದು ಬಸವರಾಜಪ್ಪನೇನೂ ಅಲೆದಾಟ ಬಿಡಲಿಲ್ಲವೆಂಬುದನ್ನು ಮರೆತು.

ಹುಡುಗಿ ಗಿರಿಜೆ ತಾಯಿಯಾಗುವ ದಿನವಂತೂ ದೂರವಿತ್ತು. ಪುಟ್ಟಬಸವ ಮಡಿಕೇರಿಗೊಮ್ಮೆ ಹೋಗಿಯೂ ಬಂದ. ಆಗ ತಾನು ಎಷ್ಟೊಂದು ಅತ್ತಿದ್ದಳು, ಪರಿಪರಿಯಾಗಿ ಕೇಳಿದ್ದಳು– ಹೇಳಿದ್ದಳು! ಒಂದು ಮಾತಿಗಾದರೂ ಬೆಲೆ ಕೊಟ್ಟನೆ ಆತ?

ಅದು ಕಿರಿಯ ವೀರರಾಜೇಂದ್ರ ಪಟ್ಟಕ್ಕೆ ಬಂದ ಕಾಲ. ಯುವಕನಾದ ರಾಜ, ಯುವಕರಾದ ಗೆಳೆಯರು. ಯಾವುದನ್ನು ಆಗಗೊಡಬಾರದೆಂದು ಆಕೆ ಶಿವನಿಗೆ ಮೊರೆ ಇಟ್ಟಿದ್ದಳೋ ಅದು ಆಗಿಯೇ ಹೋಯಿತು. ಒಮ್ಮೆ ಪ್ರವಾಸ ಹೋದ ಪುಟ್ಟಬಸವ, ವೀರ ಯೋಧನಂತೆ ಪೋಷಾಕು

ಧರಿಸಿ, ಭುಜಕ್ಕೆ ಜೋಡು ನಳಿಗೆಯ ಕೋವಿಯನ್ನು ತೂಗಹಾಕಿ, ಕಂದು ಬಣ್ಣದ ಕುದುರೆಯನ್ನೇರಿ ಮರಳಿ ಬಂದ. ಮುಚ್ಚಂಜೆಯಾಗಿತ್ತು ಆಗ. ಸವಾರ ಯಾರೆಂದು ತಿಳಿಯದೆ ತವಕದಿಂದ ಹೊರಬಂದ ತಾಯಿಯನ್ನು ಕುರಿತು ಪುಟ್ಟಬಸವ ಹೇಳಿದ:

'ಅವ್ವಾ, ಯಾರು ಬಂದಾರೆ ನೋಡು. ಗುರುತು ಸಿಗ್ತೇತೇನು?'

ಆ ರಾತ್ರಿ ಆಕೆ ಬಹಳ ಹೊತ್ತು ಅತ್ತಿದ್ದಳು. ಬಳಿಕ, ಕುದುರೆಗೆ ಮೇವು ಹಾಕಲೆಂದು ಹೊರಹೋಗಿದ್ದಳು,—'ಎಲ್ಲಾ ಶಿವನ ಚಿತ್ತ' ಎಂದು ದೇವರ ಮೇಲೆ ಭಾರ ಹಾಕುತ್ತಾ.

ಅಂದಿನಿಂದಲೂ ಹಾಗೆಯೇ. ಒಮ್ಮೊಂದೊಮ್ಮೆಲೆ ಪ್ರವಾಸ. ಮತ್ತೆ ಎಂದಾದರೊಮ್ಮೆ ಆಗಮನ. ಆಗ ಸ್ವಾಭಿಮಾನದ ಮಾತುಗಳು – ರಾಜರನ್ನು ಕುರಿತು, ರಾಜ್ಯವನ್ನು ಕುರಿತು.

ಒಮ್ಮೆ ಆತನೆಂದ:

'ಅವ್ವಾ, ಅಪ್ಪನ್ನ ಕೊಂದಿದ್ರು ನೋಡು. ಅವರೆಲ್ಲಾ ಈಗ ಇಂಗ್ಲೀಷರ ಕಡೆ ಇರಬೌದು ಅಂತೀನಿ.'

ಹುಟ್ಟುವುದಕ್ಕೆ ಮುಂಚೆಯೇ ಆಗಿದ್ದ ಗಾಯ ಮಗನ ಹೃದಯದಲ್ಲಿನ್ನೂ ಹಸುರಾಗಿಯೇ ಇತ್ತೆಂದು ತಾಯಿಯ ಎದೆ ಉಬ್ಬಿತು. ಆದರೆ ಮರುಕ್ಷಣವೇ, ಇಂತಹ ಯೋಚನೆಯಿಂದ ಮಗನಿಗೇನು ಆಪತ್ತು ಸಂಭವಿಸುವುದೋ ಎಂದು ಆಕೆ ಗಾಬರಿಯಾದಳು.

"ಅವರು ಈಗೆಲ್ಲಿರ್ತಾರೋ ಪುಟ್ಟಬಸ್ಯಾ. ಮುದುಕರಾಗಿ ಸತ್ಹೋಗಿರ್ತಾರೆ!"

ನಿಜಾಂಶವೂ ಇತ್ತು ಆ ಮಾತಿನಲ್ಲಿ.

"ಅದೂ ಹೌದೆನ್ನು" ಎಂದ ಪುಟ್ಟಬಸವ.

ಒಮ್ಮೊಮ್ಮೆ ಸೊಸೆಯ ಮೇಲೆ ಗಂಗವ್ವನಿಗೆ ಸಿಟ್ಟು ಬರುತ್ತಿತ್ತು. ಸರಿಯಾದ ರೀತಿಯಲ್ಲಿ ಮಗನನ್ನು ಆಕೆ 'ನೋಡಿಕೊಳ್ಳುತ್ತಿಲ್ಲ' ವೆಂಬುದೇ ಗಂಗವ್ವನ ಶಂಕೆ. ಆ ಸಂದೇಹಕ್ಕೆ ಆಧಾರವಿಲ್ಲವೆಂಬುದು ಸ್ಪಷ್ಟವಾದಾಗ 'ಬಂಜೆ ಹುಡುಗಿ' ಎಂದು ಒಂದೆರಡು ಸಾರೆ ಸೊಸೆಯನ್ನು ಹಳಿದಿದ್ದಳು. ಆದರೆ ಬೇಗನೆ ಆ ಘಟ್ಟಗಳೆಲ್ಲ ದಾಟಿ, ಅಬಾಧಿತವಾದ ಒಲವೇ ಗಿರಿಜವ್ವ

ನಿಗೋಸ್ಕರ ಆಕೆಯ ಹೃದಯದಲ್ಲಿ ನೆಲೆ ನಿಂತಿತು....

—ತನ್ನ ತೊಡೆಯ ಮೇಲೆ ತಲೆ ಇರಿಸಿ ಮುದುಡಿ ಮಲಗಿದ್ದ ಸೊಸೆ ಗಿರಿಜವ್ವನನ್ನು ಗಂಗವ್ವ ದಿಟ್ಟಿಸಿ ನೋಡಿದಳು. ಏನು ಕಾಣಿಸುತಿತ್ತು ಕಣ್ಣಿಗೆ? ಕಪ್ಪಗೆ ಮುದ್ದೆಯಾಗಿದ್ದುದೇನೋ, ಅಷ್ಟೆ.

....ಮೂವತ್ತು ವರ್ಷಗಳಿಗೆ ಹಿಂದೆ ತಾನೂ ಹೀಗೆಯೇ ನಿದ್ದೆ ಹೋಗಿದ್ದೆ – ತನ್ನ ಅತ್ತೆಯ ತೊಡೆಯ ಮೇಲೆ.

....ಆ ಕೆಟ್ಟ ದಿನಗಳನ್ನು ಯಾಕೆಂದು ನೆನೆಸಿಕೊಳ್ಳಬೇಕೀಗ? ಆ ನೆನಪಿನಿಂದ—

"ಗಿರಿಜಾ, ನಿದ್ದೆ ಬಂತೇನೆ?"

ಉತ್ತರವಿಲ್ಲ. ಪುನಃ—

"ಏ ಗಿರಿಜಾ, ಏಳವ್ವಾ. ನಡಿ, ಒಳಕ್ಕೆ ಹೋಗಿ ಮಲಕ್ಕ್ಕೊಳ್ಳಾನ. ಕೇಳಿಸ್ತೇನೆ? ಏಳು?"

"ಆ....ಊ...."

"ಏಳವ್ವಾ."

ಗಡಬಡಿಸಿ ಗಿರಿಜವ್ವ ಎದ್ದಳು. ಗಾಬರಿಗೊಂಡು ಕಂಪಿಸುವ ಧ್ವನಿ ಯಲ್ಲಿ ಆಕೆ ಕೇಳಿದಳು:

"ಬಂದರಾ? ಏನಾಯ್ತು, ಏನಾಯ್ತು?"

ಬತ್ತಿದ್ದ ಕಣ್ಣ ಬಾವಿಗಳಿಂದ ಮತ್ತೆ ಒರತೆ ಚಿಮ್ಮಿದ ಹಾಗಾಯಿತು ಗಂಗವ್ವನಿಗೆ. ಆಕೆ ತನ್ನಷ್ಟಕ್ಕೆ ತಲೆಯಾಡಿಸಿ, ಸೊಸೆಯ ಮೈಮುಟ್ಟಿ ಹೇಳಿ ದಳು:

"ಹೆದರ್‍ಕೊಂಡಿಯಾ? ಏಳು. ಮಾತಾಡ್ತಾ ಕುಂತಿದ್ವಿ. ಅಷ್ಟರಲ್ಲೆ ನೀನು ನಿದ್ದೆ ಮಾಡ್ಬುಟ್ಟಿ. ನಡಿ, ಒಳಕ್ಕೆ ಹೋಗಾನ. ಅಬ್ಬ! ಎಂಥ ಚಳಿ!"

ಪೂರ್ತಿ ಎಚ್ಚರಗೊಂಡ ಸೊಸೆ ಎದ್ದು ನಿಂತು, ಒಳಕ್ಕೆ ಹೋಗಲು ಅತ್ತೆಗೆ ನೆರವಾದಳು.

ನೆಲದ ಜವುಗು ತಾಗದಿರಲೆಂದು ಒಣ ಹುಲ್ಲಿನ ಮೇಲೆ ಹಾಸಿದ್ದ ಚಾಪೆಗಳು ಅವರ ಹಾದಿ ನೋಡುತ್ತ ಹಾಗೆಯೇ ಇದ್ದುವು. ಬೂದಿ ಮುಚ್ಚಿ ಪ್ರಕಾಶಹೀನವಾಗಿದ್ದುವು ಅಗ್ಗಿಷ್ಟಿಕೆಯ ಕೆಂಡಗಳು.

ಮಲಗಿಕೊಳ್ಳುತ್ತ ಗಂಗವ್ವ ಹೇಳಿದಳು:

"ಹುಣ್ಣಿಮೆ ಇವತ್ತು. ಪ್ರಯಾಣಕ್ಕೆ ಚೆನ್ನಾಗಿರ್ತೇತೆ. ಹಿಂದೆ ಎಷ್ಟೋ ಸರ್ತಿ ಪುಟ್ಟಬಸ್ಯ ಹುಣ್ಣಿಮೆ ರಾತ್ರೇಲೆ ಬಂದಿದ್ದ, ಅಲ್ಲವಾ? ರಾತ್ರಿ ಕಳೆದು ಬೆಳಗಾಗೋದರೊಳಗೆ ಬಂದರೂ ಬರ್ಬ್ಯಾದು, ಅಲ್ವೇನೆ?"

"ಹೂಂ ಅತ್ತೆಮ್ಮ," ಎಂದಳು ಗಿರಿಜವ್ವ, ಕತ್ತಿನ ವರೆಗೂ ತನ್ನ ಕಂಬಳಿಯನ್ನೆಳೆದುಕೊಳ್ಳುತ್ತ.

ಯಾಕಾಗಬಾರದು? ಬೆಳ್ಳಿ ಮೂಡುವ ಹೊತ್ತಿಗೆ ತನ್ನ ಸ್ವಾಮಿ ಬಂದರೂ ಬರಬಹುದು – ಎಂಬ ಆಸೆ ಇತ್ತು ಆಕೆಗೂ.

# ೨

ಆ ಇರುಳು ಕಳೆದು ಬೆಳಗಾದುದು ಎಂದಿನಂತೆಯೇ. ಗಂಗವ್ವನ ಮಗನ ಸುಳಿವಿರಲಿಲ್ಲ. ಮನೆಗೆ ಮರಳಲಿಲ್ಲ ಗಿರಿಜವ್ವನ ಸ್ವಾಮಿ.

ಅಮಾವಾಸ್ಯೆಯ ಬಳಿಕ ಮತ್ತೆ ಹುಣ್ಣಿಮೆ ಬಂತು. ಆ ರಾತ್ರಿ ದಾಟಿ ಬೆಳಕು ಹರಿದುದು ಮಾತ್ರ ಎಂದಿಗಿಂತ ಭಿನ್ನವಾಗಿ.

ಬಾಗಿಲು ತಟ್ಟಿದ ಸದ್ದಿಗೆ ಎಚ್ಚರಗೊಂಡ ಗಿರಿಜವ್ವ ಗಡಬಡಿಸಿ ಎದ್ದಳು. ಅತ್ತೆಗೆ ಆಗ ಗಾಢ ನಿದ್ದೆ. ಕತ್ತಲೆಯನ್ನು ದಿಟ್ಟಿಸಿ ದಿಟ್ಟಿಸಿ ಬಳಲಿದ್ದ ಆ ಕಣ್ಣುಗಳಿಗೆ ಆಗತಾನೆ ಜೊಂಪು ಹಿಡಿದಿತ್ತು.

ಬಾಗಿಲ ಬಳಿಗೆ ಸರಿದು, ಎದೆಯ ಮೇಲಿನ ಸೆರಗು ಸರಿಪಡಿಸಿಕೊಳ್ಳುತ್ತ, ಗಿರಿಜವ್ವ ನಿಂತಳು. 'ಯಾರು?' ಎಂದು ಕೇಳಬೇಕೆನಿಸಿತು. ಆದರೆ ಗಂಟಲಿನಿಂದ ಸ್ವರ ಹೊರಡಲಿಲ್ಲ.

ಪುನಃ ಬಾಗಿಲ ಸದ್ದು. ಜತೆಯಲ್ಲೇ ಕರೆ:

"ಅವ್ವಾ!"

ಕಣ್ಣು ತೆರೆದಿದ್ದ, ಗಿರಿಜೆಯ ದೇವರು! ಇನ್ನು ಕದ ತೆರೆಯಬೇಕು ತಾನು. ಆದರೆ ತನ್ನನ್ನು ಹೆಸರು ಹಿಡಿದು ಅವರು ಕರೆಯಬಾರದೆ? ಒಮ್ಮೆ ಕರೆಯಬಾರದೆ?

"ಗಿರಿಜಾ!"

ಗಿರಿಜವ್ವನ ಹೃದಯ ಕುಣಿಯಿತು. ಎವೆ ಮುಚ್ಚುವುದಕ್ಕೂ ಎಡೆ ಕೊಡದೆ ಆಕೆ ಅಗುಣಿ ತೆಗೆದಳು. ಕದ ಹಿಂದಕ್ಕೆ ಹರಿಯಿತು.

ತಿಂಗಳ ಬೆಳಕಿನಲ್ಲಿ ಕಾಣಿಸಿತು, ಜಗಲಿಯ ಮೇಲೆ ಎತ್ತರವಾಗಿ ನಿಂತಿದ್ದ ಪುಟ್ಟಬಸವನ ಆಕೃತಿ. ಗಂಡನೆಡೆಗೆ ಆಕೆ ಧಾವಿಸಿದಳು. ಕುಸಿದು ಬೀಳುವ ಹಾಗಾಯಿತು. ಆತನ ಮೊಣಕಾಲುಗಳನ್ನು ಕೈಗಳಿಂದ ಸುತ್ತುವರಿದಳು ಗಿರಿಜವ್ವ. ಆಕೆಯ ಮುಂಗುರುಳನ್ನು ಮುಟ್ಟುತ್ತಾ ಒಲುಮೆ ತುಂಬಿದ ಧ್ವನಿಯಲ್ಲಿ ಪುಟ್ಟಬಸವನೆಂದ:

"ಏಳು ಗಿರಿಜಾ. ನನ್ನ ಜತೇಲಿ ಸ್ನೇಹಿತರು ಬಂದವರೆ...."

ಗಾಬರಿಗೊಂಡು ಗಿರಿಜವ್ವ ಎದ್ದಳು. ಆ ಸ್ಥಿತಿಯಲ್ಲಿ ತನ್ನನ್ನು ಹೊರ

ಗಿದ್ದವರು ಆಗಲೆ ನೋಡಿದರೇನೋ ಎಂದು ಆಕೆಗೆ ಲಜ್ಜೆ ಎನಿಸಿತು.

ಪುಟ್ಟಬಸವನೇ ಕೇಳಿದ :

" ಅವ್ವ ಹುಷಾರಾಗಿದಾಳಾ ?"

" ಹೂಂ. ಎಬ್ಬಿಸ್ಲಾ ?" ಎಂದಳು ಗಿರಿಜಾ.

ತಾಯಿ ಎದ್ದಳೆಂದರೆ ಹರ್ಷಾತಿರೇಕದ ರೋದನಕ್ಕೆ ಮೊದಲು. ಅದನ್ನು ತಿಳಿಯದವನಲ್ಲ ಆತ.

" ಈಗ್ಲೇ ಬೇಡ."

ಆ ಎಲ್ಲ ಸುಖಕ್ಕೆ ತಾನೊಬ್ಬಳೇ ಹಕ್ಕುದಾರಳಾಗುವುದು ಗಿರಿಜೆಗೂ ಇಷ್ಟವೆನಿಸಿತು.

ಬಂದೂಕನ್ನು ಪುಟ್ಟಬಸವ ಗೋಡೆಯ ಮೂಲೆಗೆ ಒರಗಿ ನಿಲ್ಲಿಸುತ್ತಿದ್ದಂತೆ ಆಕೆ ಕೇಳಿದಳು :

" ಈಗ ಏನು ಮಾಡ್ಲಿ ? ರೊಟ್ಟಿ ತಟ್ಲಾ ?"

" ತಾಳು, ಅವರನ್ನ ಕೇಳಿ ಹೇಳ್ತೀನಿ."

ಅಂಗಳಕ್ಕಿಳಿದ ಗಂಡನನ್ನು ಜಗಲಿಯ ಅಂಚಿನ ವರೆಗೂ ಹೆಂಡತಿ ಹಿಂಬಾಲಿಸಿ, ತನ್ನವನ ಸ್ನೇಹಿತರು ಯಾರೆಂಬುದನ್ನು ಇಣಿಕಿ ನೋಡಿದಳು. ಮರಗಳ ಕೆಳಗೆ ನಾಲ್ಕು ಕುದುರೆಗಳು ನಿಂತಿದ್ದುವು. ಅಂಗಳವನ್ನು ಆವರಿಸಿದ್ದ ಕಟ್ಟೆಯ ಮೇಲೆ ಕಾಲು ಚಾಚಿ ಮೂವರು ಕುಳಿತಿದ್ದರು.

ಅವರ ಬಳಿ ಹೋಗುತ್ತ ಪುಟ್ಟಬಸವ ಕೇಳಿದ:

" ನಂಜಯ್ಯ, ರೊಟ್ಟಿ ಮಾಡಿಸ್ಲಾ ? ಏನ್ಹೇಳಿ ?"

" ಒಂದು ಬಿಂದಿಗೆ ನೀರು, ಒಂದು ಚಾಪೆ–ಇಷ್ಟೇ ಈಗ ಬೇಕಾದ್ದು. ಉಳಿದದ್ದೆಲ್ಲಾ ನಾಳೆ, ಎಚ್ಚರವಾದ್ಮೇಲೆ."

ಉತ್ತರವಿತ್ತ ಸ್ವರ ಗಿರಿಜವ್ವನಿಗೆ ಪರಿಚಿತವಾಗಿರಲಿಲ್ಲ. ಅನಂತರ ಕೇಳಿಸಿದ ಇನ್ನೊಂದು ಧ್ವನಿಯೂ ಅಷ್ಟೇ.

" ಇದೇ ಈಗ ಬೆಳ್ಳಿ ಮೂಡ್ತೈತೆ. ಸ್ವಲ್ಪ ಹೊತ್ತು ಸುಖವಾಗಿ ಮಲಕೋಬೌದಪ್ಪಾ."

" ನಿಮ್ಮಿಷ್ಟ " ಎಂದ ಪುಟ್ಟಬಸವ.

ಒಳಗಿನಿಂದ ಮಣ್ಣಿನ ಗಡಿಗೆಯಲ್ಲಿ ನೀರೂ ತಾಮ್ರದ ಬಿಂದಿಗೆಯೂ ಬಂದುವು.

" ಹಾಗೇ ಒಂದು ತಪ್ಪಲೆ ತನ್ನಿ. ಕುದುರೆಗಳಿಗೆ ನೀರು ಕುಡಿಸ್ಬೇಕು. ಬಾವಿ ಎಲ್ಲೈತೆ ತೋರ್ಸಿ."

ಅದು ಮೂರನೆಯ ಸ್ವರ. ತಪ್ಪಲೆ ಬಂತು. ಮೆಟ್ಟಲಿಳಿದು ಹೋಗ ಬೇಕಾದ ನೀರಿನ ಹೊಂಡ ಅಲ್ಲಿಯೇ ಇತ್ತು.

" ಬೇಸಗೆ. ಜಾಸ್ತಿ ನೀರಿರೋದಿಲ್ಲ. ಆದರೂ ಕಾಲು ಜಾರೀತು. ಹುಷಾರಿ!" ಎಂದ ಪುಟ್ಟಬಸವ. ಬಳಿಕ ಎಲ್ಲರನ್ನೂ ಉದ್ದೇಶಿಸಿ ಆತನೆಂದ:

" ಬಂದೂಕೆಲ್ಲಾ ಒಳಗಿಟ್ಬಿಡಿ. ಜಗಲಿಯ ಮೇಲೆಯೇ ಮಲಕೊಳ್ಳ ಏರಂತೆ."

ಒಳಗೆ ಎರಡು ಈಚಲು ಚಾಪೆಗಳಿದ್ದುವು. ಎರಡನ್ನೂ ಜೋಡಿಸಿ ಪುಟ್ಟಬಸವ ಹಾಸಿದ.

ಈ ಕೆಲಸವನ್ನಷ್ಟು ಸದ್ದಿಲ್ಲದೆ ಮುಗಿಸಿದ ಬಳಿಕ ತಾಯಿಯನ್ನೆಬ್ಬಿಸ ಬೇಕೆಂದು ಯೋಚಿಸಿದ್ದ ಆತ. ಆದರೆ ಗಂಗವ್ವನಿಗಾಗಲೆ ಎಚ್ಚರವಾಗಿ ಬಿಟ್ಟಿತ್ತು. ಆಕೆ ಎದ್ದು ಕುಳಿತು ಉದ್ವೇಗದಿಂದ ಕೇಳಿದಳು:

" ಗಿರಿಜಾ ! ಯಾರು ಬಂದರು ? ಪುಟ್ಟಬಸ್ಯ ಬಂದ್ನಾ ?"

ಸ್ನೇಹಿತರಿಗೆ ಮಲಗುವ ಜಾಗ ತೋರಿಸುತ್ತಿದ್ದ ಪುಟ್ಟಬಸವನೆಂದ:

" ಹೂನವ್ವಾ, ನಾನು ಕಣವ್ವಾ."

" ಎಲ್ಲಿ, ಎಲ್ಲಿದೀಯೋ ? ಏನೂ ಕಾಣಿಸುವಲ್ಲದಲ್ಲೋ !"

ತಾನು ಮನೆ ಬಿಟ್ಟಾಗಲೇ ತಾಯಿಯ ದೃಷ್ಟಿ ಮಂದವಾಗತೊಡಗಿ ತ್ತೆಂಬುದು ಆತನ ನೆನಪಿಗೆ ಬಂತು. ಈಗ ಆಕೆ ಪೂರ್ಣ ಕುರುಡಿಯಾಗಿ ರುವಳೇನೋ ಎಂದು ಕಳವಳವಾಯಿತು ಆತನಿಗೆ.

" ಬಂದೆ ತಾಳವ್ವಾ " ಎನ್ನುತ್ತ ಪುಟ್ಟಬಸವ ನಡುಮನೆಗೆ ಧಾವಿಸಿದ. ತಾಯಿಯ ಮಡಿಲಲ್ಲಿ ಮುಖವಿಟ್ಟು, ಎಳೆಕರುವಿನಂತೆ ಅರ್ಥವಿಲ್ಲದ ಸ್ವರ ಹೊರಡಿಸಿದ.

" ಯಾಕವ್ವಾ, ಕಾಣಿಸೋದಿಲ್ವಾ ? ನಾನು ಪುಟ್ಟಬಸ್ಯಾ."

ಎರಡೂ ಕೈಗಳಿಂದ ಅವನ ಅಂಗಾಗಗಳನ್ನೆಲ್ಲ ಮುಟ್ಟಿ ನೋಡುತ್ತಾ ಗಂಗವ್ವನೆಂದಳು:

" ನೀನು ಓದಾಗ ದೃಷ್ಟೀನೂ ಓಗ್ತೇತೆ ಮಗಾ. ನೀನು ಬಂದಾಗ ತಿರ್‍ಗಾ ಬರ್ತೇತೆ."

" ನನ್ನವ್ವ !"

" ಕೆಟ್ಟೈಡುಗ ಎಲ್ಲೋಗಿದ್ಯೋ ಇಷ್ಟು ದಿವಸ ?"

" ಎಲ್ಲೋದ್ರೂ ನಿನ್ನ ಹತ್ತಿರಕ್ಕೆ ವಾಪಸು ಬಂದೇ ಬರ್ತೀನಲ್ಲವ್ವಾ ನಾನು ?"

" ಬರ್ತೀಯಾ....ಊಂ.....ಇಂಗೇ ಮಾಡ್ತಿರು. ಒಂದು ಸಾರ್ತಿ ನೀನು ಬರೋದರೊಳಗೆ ಸತ್ತೋಗಿರ್ತೀನಿ. ನೋಡ್ಕೋ !"

" ಹಾಗೆಲ್ಲಾ ಅನ್ಬೇಡವ್ವಾ !"

" ಅನ್ನಬಾರದಂತೆ. ಅಯ್ಯೋ !"

ಬಳಿಕ, ಸಂತೋಷದಿಂದಲೂ ಸಂಕಟದಿಂದಲೂ ಒತ್ತರಿಸಿಬಂದ ಕಂಬನಿ.

ಅಗ್ನಿಕಡ್ಡಿಕೆಯ ಕೆಂಡವನ್ನಾಗಲೆ ಕೆದಕಿ ಗಿರಿಜಾ ಉರಿಮಾಡಿದ್ದಳು.

ಸೊಸೆಯನ್ನು ಕುರಿತು ಅತ್ತೆ ಕೇಳಿದಳು:

" ಮಗನಿಗೆ ಏನ್ಮಾಡ್ಕೊಡ್ತೀಯೆ ಗಿರಿಜಾ ?"

ಪುಟ್ಟಬಸವನೆಂದ:

" ಈಗೇನೂ ಬೇಡವ್ವ. ಮೂರು ಜನ ಸ್ನೇಹಿತರನ್ನು ಕರಕೊಂಡು ಬಂದಿದೀನಿ. ಅವರೆಲ್ಲಾ ನಿದ್ದೆ ಮಾಡ್ತವರೆ. ಬೆಳಗಾದ್ಮೇಲೆ ರೊಟ್ಟಿಯೋ ಗಂಜಿಯೋ ಮಾಡಿದರಾಯ್ತು."

" ನೀನೂ ಮಲಕೋ ಹಂಗಾರೆ."

" ಹೂಂ."

" ಯಾರು ಬಂದಿರೋದು ?"

" ನಿನಗೆ ಅವರ ಗುರುತಿಲ್ಲ ಅವ್ವ. ಹೊಸಬರು."

" ಮಡಿಕೇರಿಯಿಂದಲೇ ಬಂದಿರಾ ?"

" ಹೂನವ್ವಾ."

" ರಾಜರೆಲ್ಲಾ ಚೆಂದಾಕಿದಾರೆ ಅಲ್ವಾ ?"

ಒಮ್ಮೆಲೆ ಉತ್ತರ ಬರಲಿಲ್ಲ. ಪುಟ್ಟಬಸವ ಏನು ಹೇಳಬೇಕೆಂದು ತೋಚದೆ ತಡವರಿಸಿದ. ವಿಷಯ ತಿಳಿದೇ ಇರಲಿಲ್ಲ ತನ್ನ ತಾಯಿಗೆ ಹಾಗಾದರೆ. ಕಿಂವದಂತಿಗಳೂ ಹಬ್ಬಿರಲಿಲ್ಲವೇನೊ ಪುಷ್ಪಗಿರಿಯ ಆ ತಪ್ಪಲಿಗೆ ?

ಪದಗಳನ್ನು ನಿಧಾನವಾಗಿ ಉಚ್ಚರಿಸುತ್ತ ಆತನೆಂದ:

"ಅಲ್ಲಿಯ ಕಥೆ ಹೇಳಬೇಕಾದ್ದು ಎಷ್ಟೋ ಇದೆ ಅವ್ವಾ."

"ಹಾಗಾ ?"

"ಹೂಂ. ಇನ್ನೂ ಕೋಳಿ ಕೂಗಿಲ್ಲ. ಮಲಕೋ."

"ನನ್ನ ನಿದ್ದೆಗಿಷ್ಟು ಬೆಂಕಿ. ನೀನು ಮಲಕೋ ಮಗಾ."

ಪುಟ್ಟಬಸವ ಹೊರಹೋಗಿ ಬಂದ. ನಂಜಯ್ಯ ಅಷ್ಟರಲ್ಲೆ ಗೊರಕೆ ಹೊಡೆಯುತಿದ್ದ. ಉಳಿದಿಬ್ಬರು ನಿದ್ದೆ ಎಚ್ಚರಗಳ ನಡುವೆ ತೂಗಾಡು ತಿದ್ದರು.

ಗಂಗವ್ವನಾಗಲೆ ಸೊಸೆಯೊಡನೆ ಅಡುಗೆ ಮನೆಗೆ ನಡೆದಿದ್ದಳು. ಪುಟ್ಟಬಸವ ಉಡುಪು ಕಳಚಿಟ್ಟು ತಾಯಿಯ ಚಾಪೆಯ ಮೇಲೆಯೆ ನಿದ್ದೆ ಹೋದ....

....ಅವರೆಲ್ಲರಿಗೂ ಎಚ್ಚರವಾದಾಗ ಸೂರ್ಯನ ಬೆಳಕಿನುಂಡೆ, ಮರ ಗಳ ರೆಂಬೆಕೊಂಬೆಗಳೆಡೆಯಿಂದ ಮೇಲು ಮೇಲಕ್ಕೆ ನೆಗೆಯುತ್ತ ಸಾಗಿತ್ತು. ಕುದುರೆಗಳು ಒಂದೆರಡು ಸಾರೆ ಕೆನೆದು, 'ಇಂದು ಪ್ರಯಾಣವಿಲ್ಲವೇ?' ಎಂದು ಕೇಳಿದ ಬಳಿಕ, ಗಿರಿಜವ್ವ ತಂದುಹಾಕಿದ ಹಸಿರು ಹುಲ್ಲನ್ನು ತಿನ್ನುವು ದರಲ್ಲೆ ನಿರತವಾಗಿದ್ದುವು.

ಮುಖ ಮಾರ್ಜನ ಮುಗಿಸಿ ಸಂಗಡಿಗರನ್ನು ಪುಟ್ಟಬಸವ ನಡು ಮನೆಗೆ ಕರೆದೊಯ್ದ. ಅಕ್ಕಿಯ ರೊಟ್ಟಿಗಳನ್ನು ಎತ್ತರಕ್ಕೆ ಹೇರಿದ್ದ ತಟ್ಟೆ ಇತ್ತು ಮಧ್ಯದಲ್ಲಿ. ಪಾತ್ರೆಯಲ್ಲಿ ಪಲ್ಯವಿತ್ತು. ಎರಡು ಮೂರು ತಂಬಿಗೆ ತುಂಬಾ ನೀರು.

"ತಗೊಳೀಪ್ಪಾ. ಊಟಕ್ಕುಂಚೆ ಒಂದಿಷ್ಟು ರೊಟ್ಟಿತಿನ್ನಿ. ಹಳ್ಳೀ ಜನರ ಅಡುಗೆ. ನಿಮಗೆ ರುಚಿಯಾಗ್ತೇತೋ ಇಲ್ಲೋ...." ಎಂದಳು ಗಂಗವ್ವ ಅಡುಗೆ ಮನೆಯ ಬಾಗಿಲ ಬಳಿಯಲ್ಲೆ ಕುಳಿತು.

ನಂಜಯ್ಯ ಒಂದು ರೊಟ್ಟಿಯನ್ನು ಎಡಗೈಯಲ್ಲಿರಿಸಿ, ಅದರ ನಡುವೆ ಹಾಕಿಸಿಕೊಂಡ ಪಲ್ಯಕ್ಕೆ ಒಂದು ತುಣುಕನ್ನು ಮುರಿದು ಅದ್ದಿ ಬಾಯಿಗಿಟ್ಟು, ಚಪ್ಪರಿಸಿದ:

"ಆಹಾ! ಈ ರುಚಿ ನೋಡದೆ ಎರಡು ವರ್ಷಕ್ಕೂ ಮೇಲಾಯ್ತು.

ಏನ್ರಿ ಪುಟ್ಟಬಸಪ್ನೋರೆ – ಅರಮನೇಲಿ ಆವತ್ತು ರೊಟ್ಟಿ ತಿಂದ್ಕೋಲಿ ಅಂಥಾದ್ದು ಇದೇ ಮೊದಲ್ನೇ ಸಲ. ಹೌದೋ, ಅಲ್ಲೋ?”

“ಯಾವುದಕ್ಕೆ ಯಾವುದನ್ನ ಹೋಲಿಸ್ತೀಯಪ್ಪಾ,” ಎಂದಳು ಗಂಗವ್ವ, ತುಸು ಲಜ್ಜೆಗೊಂಡು. ತಟ್ಟಲು ತಾನೂ ನೆರವಾಗಿದ್ದ ಆ ರೊಟ್ಟಿಯನ್ನು ಕುರಿತ ಹೊಗಳಿಕೆ ಆಕೆಗೆ ಇಷ್ಟವಾಯಿತು.

ಆ ಒಳ್ಳೆಯ ಮಾತನ್ನು ಆಡಿದ ವ್ಯಕ್ತಿಯನ್ನು ಪ್ರಯತ್ನಪೂರ್ವಕವಾಗಿ ಗಂಗವ್ವ ದಿಟ್ಟಿಸಿ ನೋಡಿದಳು.

ತಿನ್ನುತ್ತಲಿದ್ದಂತೆ ಪುಟ್ಟಬಸವ, ತನ್ನ ಸ್ನೇಹಿತರ ಪರಿಚಯವನ್ನು ತಾಯಿಗೆ ಮಾಡಿಕೊಟ್ಟ.

“ಇವರು ನೋಡವ್ವ, ಹುಲಿಕುಂದ ನಂಜಯ್ನೋರು ಅಂತ – ಸರದಾರರು. ನಮಗೆಲ್ಲಾ ದೊಡ್ಡಣ್ಣ ಇದ್ದಹಾಗೆ. ಈ ಇಬ್ಬರು, ಒಡಹುಟ್ಟಿದೋರು – ಚೆಟ್ಟಿಕುಡಿಯ, ಕರ್ತ ಕುಡಿಯ ಅಂತ.”

ಮುಖದ ರೂಪುರೇಖೆ ಸ್ಪಷ್ಟವಾಗಿ ಕಾಣಿಸದಿದ್ದರೂ ಅವರನ್ನೂ ಗಂಗವ್ವ ನೆಟ್ಟ ದೃಷ್ಟಿಯಿಂದ ನೋಡಿದಳು.

ಬಾಯಿಯಲ್ಲಿದ್ದುದನ್ನು ನುಂಗಿ, ಒಂದು ಗುಟುಕು ನೀರು ಕುಡಿದು, ಪುನಃ ರೊಟ್ಟಿಯ ತುಣುಕುಗಳನ್ನು ಪಲ್ಯಕ್ಕೆ ಅದ್ದುತ್ತಾ ಪುಟ್ಟಬಸವನೆಂದ :

“ಇವರು ಮಹಾ ಶೂರರು ಅವ್ವಾ. ಮಹಾರಾಜರಿಗೆ ಆಪ್ತರು. ಹಾರುತ್ತಿರೋ ಹಕ್ಕಿಯ ಕಣ್ಣಿಗೆ ಗುರಿ ಇಟ್ಟು ಹೊಡೀತಾನೆ ಚೆಟ್ಟಿಕುಡಿಯ. ಮಹಾರಾಜರಿಗೆ ಗುರಿ ಹೊಡೆಯೋಕೆ ಕಲಿಸಿಕೊಟ್ಟಿರೋದು ಇವನೇ.”

“ಹೌದಾ!” ಎಂದಳು ಗಂಗವ್ವ. ಮುಖ್ಯರಾದ ವ್ಯಕ್ತಿಗಳೇ ಬಂದಿದ್ದರು ಮಗನ ಜತೆ. ಕುಡಿಯರಾದರೇನು? ಅಸಾಮಾನ್ಯರಾದವರು. ಮಹಾರಾಜರ ಆಪ್ತರು. ನಂಜಯ್ಯನಂತೂ ತಮ್ಮ ಜನವೇ ಇರಬೇಕು. ಹೆಸರೇ ಹೇಳುವುದಿಲ್ಲವೆ?

ಮಗನ ಸ್ನೇಹಿತರನ್ನು ಉದ್ದೇಶಿಸಿ ಆಕೆಯೆಂದಳು :

“ನೀವೆಲ್ಲಾ ಈ ಕಡೆ ಬರ್ತಿರೋದು ಇದೇ ಮೊದಲ್ನೇ ಸಾರಿ, ಅಲ್ಲವಾ?”

ನಂಜಯ್ಯ ಉತ್ತರವಿತ್ತ:

“ಹೂಂ. ಮಹಾರಾಜರಿದ್ದಾಗ ಬೇಟೆ ಆಡ್ಕೊಂಡು ಇಲ್ಲಿಗೆ ಹತ್ತು

ಹರದಾರಿ ಸಮೀಪದವರೆಗೂ ಒಮ್ಮೆ ಬಂದಿದ್ವಿ. ಅಷ್ಟೆ."

ಮಹಾರಾಜರಿದ್ದಾಗ – ಎಂದಿದ್ದ ನಂಜಯ್ಯ. ಪುಟ್ಟಬಸವ ದೃಷ್ಟಿ ಎತ್ತಿ ಆತನ ಮುಖವನ್ನು ನೋಡಿದ.

ನಂಜಯ್ಯನ ಮಾತು ಗಂಗವ್ವನನ್ನು ಗೊಂದಲದಲ್ಲಿ ಕೆಡವಿತು. ಪ್ರಾಯಶಃ ಗತಿಸಿದ ಮಹಾರಾಜರ ವಿಷಯ ಆತ ಹೇಳುತ್ತಿರಬೇಕು ಎಂದು ಆಕೆ ಸುಮ್ಮನಾದಳು.

ಆದರೆ ನಂಜಯ್ಯನ ಮಾತಿನ ಕುದುರೆ ಆಗಲೆ ಮುಂದಕ್ಕೆ ಹೆಜ್ಜೆ ಇಟ್ಟಿತ್ತು.

" ಆ ಸಲದ್ದು ಎಂಥಾ ಬೇಟೆ! ನಿನಗೆ ನೆನಪೈತೆ ಅಲ್ವಾ ಚೆಟ್ಟಿ ?"

" ಹೂಂ," ಎಂದ ಚೆಟ್ಟಿಕುಡಿಯ. ಧ್ವನಿಯಲ್ಲಿ ಉತ್ಸಾಹವಿರಲಿಲ್ಲ. ಹತಾಶನಾದ ಮನುಷ್ಯ, ಕಳೆದು ಹೋದ ವಿಷಯವನ್ನು ಕುರಿತು ಉದಾಸೀನಭಾವ ತಳೆದಂತಿತ್ತು ಆತನ ವರ್ತನೆ.

ನಂಜಯ್ಯ ಅದನ್ನು ಗಮನಿಸದೆಯೆ ಮುಂದುವರಿದ:

" ಅದೊಂದು ಪೋಲಿ ಆನೆ ಬಹಳ ತೊಂದರೆ ಕೊಡ್ತಿತ್ತು. ಎಷ್ಟು ಸರ್ತಿ ತಪ್ಪಿಸ್ಕೊಂಡಿತ್ತೂಂತ. ಆ ಸಲ ರಾಜರು ಅದನ್ನು ಗುಂಡು ಹಾಕಿ ಸಾಯಿಸಿದ್ರು. ವೀರಾಗ್ರಣಿ! ನಾಲ್ವತ್ತು ದಿವಸಗಳಲ್ಲಿ ಇನ್ನೂರ ಮೂವತ್ತ ಮೂರು ಆನೆಗಳನ್ನು ಮಹಾರಾಜರು ಸ್ವತಃ ತಾವೇ ಬೇಟೆಯಾಡಿ ಕೊಂದರು ಅಂದರೆ, ನಂಬ್ತೀಯಾ ಅವ್ವ? ಎಂಥ ಧೈರ್ಯಶಾಲಿ! [ಸ್ವರ ತಗ್ಗಿತು; ಕಂಠ ಗದ್ಗದಿತವಾಯಿತು.] ಆದರೆ ನಾವು ಪಾಪಿಗಳು – ನಮಗೆ ಭಾಗ್ಯವಿಲ್ಲ...."

ಗಂಗವ್ವನಿಗೆ ಕಸಿವಿಸಿಯಾಯಿತು. ಆನೆಯ ಬೇಟೆಯಲ್ಲಿ ಮಹಾರಾಜರು ಮಹಾ ಚತುರರೆಂದು ಪುಟ್ಟಬಸವ ಹಿಂದೆಯೇ ಒಂದೆರಡು ಸಾರೆ ಹೇಳಿದ್ದುದು ನೆನಪಿತ್ತು ಆಕೆಗೆ. ಸಂಶಯ ನಿವಾರಣೆಯಾಗಲೆಂದು ಗಂಗವ್ವ ಕೇಳಿದಳು:

" ಯಾವ ಮಹಾರಾಜರ ವಿಷಯ ಹೇಳ್ತಿದೀರಪ್ಪಾ ?"

ಆ ಪ್ರಶ್ನೆ ವಿಚಿತ್ರವಾಗಿ ತೋರಿತು ನಂಜಯ್ಯನಿಗೆ.

" ಯಾವ ಮಹಾರಾಜರು ? ಚಿಕ್ಕವೀರರಾಜರು. ಇನ್ಯಾರು ?"

ಗಂಗವ್ವ ಕಾತರಗೊಂಡಳು. ಅರಸರು ಆರೋಗ್ಯದಿಂದಿರುವರೆಂದೇ

ಬೆಳಗಿನ ಜಾವ ಹೇಳಿದ್ದನಲ್ಲ ಪುಟ್ಟಬಸವ?

"ಯಾಕೆ? ಏನಾಯ್ತು ಮಹಾರಾಜರಿಗೆ?"

ಪುಟ್ಟಬಸವ ನಡುವೆ ಬಾಯಿ ಹಾಕಿ ಹೇಳಿದ:

"ಇಲ್ಲಿಗಿನ್ನೂ ಸುದ್ದಿ ಬಂದೇ ಇಲ್ಲ, ನಂಜಯ್ಯನವರೆ."

"ಹಾಗೇನು?" ಎಂದ ನಂಜಯ್ಯ, ಆಶ್ಚರ್ಯದಿಂದ, ಖೇದದಿಂದ.

ತನ್ನ ಪ್ರಶ್ನೆಗೆ ಉತ್ತರ ಬರಲಿಲ್ಲವೆಂದು ತಾಯಿ ಮತ್ತೂ ಅಂದಳು:

"ಏನಪ್ಪಾ ಅದು? ಹೇಳಬಾರದಾ?"

ಪುಟ್ಟಬಸವನೆಂದ:

"ಕೊಡಗು ರಾಜ್ಯ ಇಂಗ್ಲಿಷರ ವಶವಾಯ್ತು ಅವ್ವಾ. ಆಗಲೆ ಎರಡು ವರ್ಷ ಆಗ್ಹೋಯ್ತು. ಮಹಾರಾಜರು ಪರಿವಾರ ಸಮೇತ ಕಾಶಿಗೆ ತೀರ್ಥ ಯಾತ್ರೆ ಹೊರಟುಹೋದರು."

"ಅಯ್ಯೋ ಶಿವನೇ!"

ದಂಗು ಬಡಿದಹಾಗಾಯಿತು, ಗಂಗವ್ವನಿಗೆ. ಮುಂದೇನನ್ನೂ ಯೋಚಿಸುವುದಾಗಲೇ ಇಲ್ಲ ಅವಳಿಂದ.

ಆವಿಯೇಳುತಿದ್ದ ಬಿಸಿ ರೊಟ್ಟಿಗಳನ್ನು ತಟ್ಟೆಯಲ್ಲಿಟ್ಟು ತಂದ ಗಿರಿಜಾ ಮೂಕಳಾಗಿ ಅಲ್ಲಿಯೆ ನಿಂತಿದ್ದಳು. ಆಕೆಗೆ ಮಾತು ಕೇಳಿಸಿತು.

ಕೈಯಲ್ಲಿದ್ದ ರೊಟ್ಟಿ ಮುಗಿದೊಡನೆ ಕುಡಿಯಸೋದರರೆದ್ದರು. ಅವರ ಮುಖದ ಮೇಲೆ ಗೆಲುವೇ ಇರಲಿಲ್ಲ. ಅವರ ನೆರಿಗೆಗೊಂಡಿದ್ದ ಹಣೆಗಳಲ್ಲಿ, ಹುಬ್ಬುಗಳಲ್ಲಿ, ಬೇಸರ ಕುಣಿಯುತಿತ್ತು.

ಅವರು ಎದ್ದುದನ್ನು ನೋಡಿ, ತಾಯಿ ಆಡಬೇಕಾಗಿದ್ದ ಮಾತನ್ನು ಪುಟ್ಟಬಸವ ನುಡಿದ:

"ಬಿಸಿ ರೊಟ್ಟಿ ಇನ್ನೂ ಒಂದೆರಡು ತಿನ್ನಬಾರದಾ? ಯಾಕೆ ಎದ್ದಿರಿ?"

"ಇಲ್ಲಣ್ಣಾ, ಸಾಕು. ತಿಂದದ್ದು ಜೀರ್ಣವೇ ಆಗೋದಿಲ್ಲ," ಎಂದ ಚೆಟ್ಟಿ.

ನೀರು ಕುಡಿಯಬೇಕೆಂದು ತಂಬಿಗೆಯನ್ನು ಎತ್ತುತ್ತಾ ನಂಜಯ್ಯ ಹೇಳಿದ:

"ನನಗೂ ಸಾಕು. ಮನಸ್ಸಿಗೆ ಸ್ವಾಸ್ಥ್ಯ ಇದ್ದರೆ ಕಲ್ಲು ತಿಂದರೂ

ಕರಗ್ತೇತೆ. ಈಗ ಉಸಿರು ಹಿಡಿದಿರ್ಬೇಕಲ್ಲಾ ಅಂತ ಒಂದಿಷ್ಟಿಷ್ಟು ತಿಂತೀವಿ."

ರೊಟ್ಟಿ ಬಿಸಿಯಾಗಿತ್ತು ನಿಜ. ಆದರೆ ಪುಟ್ಟಬಸವನಿಗೂ ಅದರ ಅಗತ್ಯವಿರಲಿಲ್ಲ.

ಗಿರಿಜವ್ವ, ಎತ್ತಿಕೊಂಡಿದ್ದ ತಟ್ಟೆಯನ್ನು ಹಾಗೆಯೇ ಒಳಕ್ಕೊಯ್ದಳು.

ಗಂಡಸರೆಲ್ಲ ಜಗಲಿಯ ಮೇಲೆ ಕುಳಿತರು. ಒಳಗಿನಿಂದ ವೀಳೆಯ ದೆಲೆ ಅಡಿಕೆ ಬಂದರೂ ಯಾರೂ ಅವುಗಳ ಗೋಜಿಗೆ ಹೋಗಲಿಲ್ಲ. ನಂಜಯ್ಯ ಒಂದೆರಡು ಅಡಿಕೆ ಹೋಳುಗಳನ್ನಷ್ಟೆ ಆಯ್ದು ಬಾಯಿಯೊಳಕ್ಕೆ ತುರುಕಿಕೊಂಡ.

ಗಂಗವ್ವನ ಪಾಲಿಗೆ ಸಾವಿನ ಮನೆಯ ವಾತಾವರಣವೇರ್ಪಟ್ಟಿತ್ತು, ಅಲ್ಲಿ. ಮಗನು ಮನೆಗೆ ಮರಳಿದ ಸಂಭ್ರಮಕ್ಕೆ ಆಸ್ಪದವೇ ಇಲ್ಲದ ಹಾಗೆ ಕೆಟ್ಟ ಸುದ್ದಿಯ ಸೂತಕ ಮುಟ್ಟಿತ್ತು. ರಾಜರಿಗೆ ರಾಜ್ಯಕ್ಕೆ ಮಾತ್ರವಲ್ಲ, ತನ್ನ ಸಂಸಾರಕ್ಕೂ ಒದಗಿತ್ತು ಆಪತ್ತು. ಪುಟ್ಟಬಸವನ ತಂದೆಯ ಕಾಲ ದಿಂದಲೂ ಅರಮನೆಯ ಮರಕ್ಕೆ ಅಡರಿಯೇ ಬೆಳೆದಿತ್ತು, ಅವರ ವಂಶದ ಬಳ್ಳಿ.

ಆ ಬೇಸರವೋ ಅಂಟು ಜಾಡ್ಯ. ಗಿರಿಜೆಯ ಮುಖವೂ ಕಪ್ಪಿಟ್ಟಿತು. ಯುದ್ಧ – ಸೋಲು, ಮತ್ತೆ ಯುದ್ಧ – ಮತ್ತೆ........ಗಂಡ ಬಹಳ ದಿನ ಮನೆಯಲ್ಲಿ ಇರುವುದಿಲ್ಲವೆಂಬ ಶಂಕೆಯೊಂದು ಆಕೆಯ ಮನಸ್ಸಿನಲ್ಲಿ ಮೂಡಿ ಕೆಲ ನಿಮಿಷಗಳಲ್ಲೇ ಬಲಗೊಂಡಿತು....

ಮಧ್ಯಾಹ್ನ ಹಬ್ಬದಡುಗೆಯಾಗಬೇಕು ಎಂದಿದ್ದಳು ಗಂಗವ್ವ–ರೊಟ್ಟಿ ತಟ್ಟುತ್ತ ಒಲೆಯ ಮುಂದೆ ಕುಳಿತಿದ್ದಾಗ. ಜೊತೆಗೆ ಅತ್ತೆ ಮತ್ತು ಸೊಸೆ, ಆಗಬೇಕಾದ ಭಕ್ಷ್ಯಭೋಜ್ಯಗಳ ವಿಷಯ ಮಾತನಾಡಿದ್ದರು. ಈಗ—

ಗಿರಿಜವ್ವ ಅತ್ತೆಯ ಬಳಿ ಸಾರಿದಳು.

"ಅಡುಗೆ ಏನೇನು ಮಾಡಾನ ಅತ್ತೆಮ್ಮ?"

ಸ್ವಲ್ಪ ಹೊತ್ತು ಸುಮ್ಮನಿದ್ದು ಗಂಗವ್ವ ಉತ್ತರವಿತ್ತಳು :

"ನಿನ್ನ ಗಂಡನ್ನ ಕೇಳು."

ಪುಟ್ಟಬಸವ, ಹೆಂಡತಿಯ ಪ್ರಶ್ನೆಗೆ ನೇರವಾಗಿ ಉತ್ತರ ಕೊಡದೆ ನಂಜಯ್ಯನ ಕಡೆಗೆ ತಿರುಗಿದ:

" ಅಡುಗೆ ಏನೇನು ಮಾಡಿಸೋಣ ನಂಜಯ್ಯನವರೆ ?"

ನಂಜಯ್ಯನೆಂದ:

" ನೀವೂ ಸರಿ. ಮನೆಯವರೇ ಆಗಿ ಹೋದಿರಿ. ಅತಿಥಿ ಸತ್ಕಾರದ ಯೋಚನೆಯೆ ? ದಯವಿಟ್ಟು ಅಂಥದೊಂದೂ ಮಾಡ್ಬೇಡಿ."

ಚೆಟ್ಟಿಕುಡಿಯನೂ ಧ್ವನಿ ಕೂಡಿಸಿದ :

" ಬರೇ ಅನ್ನ ಸಾರು ಸಾಕು ಅಣ್ಣ."

—ಮಗನ ಅಭಿಪ್ರಾಯವನ್ನು ತಿಳಿದಾಗ ಗಂಗವ್ವ ಮೆಲ್ಲನೆ ನಿಟ್ಟುಸಿರು ಬಿಟ್ಟಳು.

ಮಧ್ಯಾಹ್ನದ ಊಟವಾದ ಬಳಿಕ ಪುನಃ ನಿದ್ದೆ ಹೋಗಲು ಯಾರೂ ಇಷ್ಟಪಡಲಿಲ್ಲ.

ಪುಟ್ಟಬಸವ ಹೇಳಿದ:

" ಇಲ್ಲೇ ಪಕ್ಕದ ಹಳ್ಳಿಗೆ ಹೋಗಿಬರ್ತೀನಿ. ಕೂಗಳತೆ ದೂರದಲ್ಲಿ ಬೇರೆಯೂ ಒಂದೆರಡು ಮನೆಗಳು ಇದಾವೆ. ಅವರನ್ನೆಲ್ಲಾ ನೋಡ್ಕೊಂಡು ಬರ್ತೀನಿ."

" ನಾನೂ ಬರ್ಲೇನು ?" ಎಂದು ಕೇಳಿದ ನಂಜಯ್ಯ.

" ಬೇಡ. ನೀವೆಲ್ಲಾ ಇಲ್ಲೇ ಇರಿ."

" ಒಂದಷ್ಟು ಜನರನ್ನು ಕರಕೊಂಡು ಬಂದ್ಬಿಡಿ."

" ನಾನು ಕರೆಯೋದೇನು ? ಅವರಾಗೇ ಬರ್ತಾರೆ. ನೋಡ್ತಿರಿ."

ಪುಟ್ಟಬಸವ ಹೋದ ಬಳಿಕ ನಂಜಯ್ಯ ಗಂಗವ್ವನೊಡನೆ ಮಾತನಾಡಿದ. ಕರ್ತುಕುಡಿಯ ಕುದುರೆಗಳಿಗೆ ಮಾಲೀಸು ಮಾಡಿದ. ಚೆಟ್ಟಿಯೊಬ್ಬನೇ ಬಂದೂಕನ್ನು ಹೆಗಲ ಮೇಲಿರಿಸಿ ಸುತ್ತುಮುತ್ತಲ ಕಾಡಿನ ಪರಿಚಯ ಮಾಡಿಕೊಳ್ಳಲೆಂದು ಕಾಲುಹಾಕಿದ.

# ೩

ಅದು ಹುಣ್ಣಿಮೆಯ ಮೂರನೆಯ ಸಂಜೆ. ಚಂದಿರ ಎರಡು ಘಳಿಗೆ ತಡವಾಗಿ ಉದಿಸಿದ. ಪುಟ್ಟಬಸವನಾಗಲೆ ಹಿಂತಿರುಗಿದ್ದ. ಆತನ ಜತೆಯಲ್ಲೂ ಅನಂತರವೂ ಆರೆಂಟು ಜನ ಬಂದರು – ಮಹಾರಾಜರ ಆಪ್ತ ಕೋಟೆಯ ವೀರರನ್ನು ಕಾಣಲೆಂದು, ತಾವು ಗುಲಾಮರಾದ ದುರಂತ ಕಥೆಯನ್ನು ಕೇಳಲೆಂದು.

ಬಲು ನಿಧಾನವಾಗಿ ಬಂದವನು ಚೆಟ್ಟಿಕುಡಿಯ. ಹಕ್ಕಿಗಳ ಚಿಲಿಪಿಲಿಗೆ ಪೊದೆಪೊದರುಗಳ ಸಂವಾದಕ್ಕೆ ಕಿವಿಗೊಡುತ್ತ, ವನದ ಭವ್ಯತೆಯಲ್ಲಿ ತನ್ನ ಇರುವಿಕೆಯನ್ನು ಮರೆಯಲೆತ್ನಿಸುತ್ತ, ಹೊತ್ತು ಕಳೆದಿದ್ದ ಆತನ ಹೃದಯ ಹಗುರವಾಗಿತ್ತು. ಈಗ ಜನ ಸೇರಿದುದನ್ನು ನೋಡುತ್ತ ಆತನ ಮುಖ ಅರಳಿತು.

“ಇವರೇ ಚೆಟ್ಟಿಕುಡಿಯ” ಎಂದ, ಉಳಿದವರ ಪರಿಚಯವನ್ನು ಆಗಲೇ ಮಾಡಿಕೊಟ್ಟಿದ್ದ ಪುಟ್ಟಬಸವ.

ಜನ, ಗೌರವದಿಂದ ಚೆಟ್ಟಿಯನ್ನು ನೋಡಿದರು; ಆತನ ಭುಜದಿಂದ ಅದೇ ಆಗ ಕೆಳಕ್ಕಿಳಿದ ಬಂದೂಕನ್ನು ನೋಡಿದರು.

—ಹಾರುವ ಹಕ್ಕಿಯ ಕಣ್ಣಿಗೇ ಗುರಿ ಇಡುವ ಸಮರ್ಥ; ಅರಸರ ಶಿಕ್ಷಕ, ಆಪ್ತಮಿತ್ರ....

ಆದರೆ, ಮುಗುಳುನಗೆಯ ಸರಸಸಲ್ಲಾಪದ ವಾತಾವರಣ ಅಲ್ಲಿರುವುದು ಸಾಧ್ಯವಿರಲಿಲ್ಲ. ಎಲ್ಲರನ್ನೂ ಒಂದಾಗಿ ಬಿಗಿದು ಕಟ್ಟುತ್ತಿದ್ದ ಭಾವವೇನೊ ಇತ್ತು ನಿಜ. ಹಾಗೆಯೇ ಅಲ್ಲಿಯೇ, ಪ್ರಭುತ್ವ ನಡೆಸಿತ್ತು–ಎಲ್ಲರ ಎದೆಗಳನ್ನು ಹಿಂಡುತ್ತಿದ್ದ ನೋವೂ ಕೂಡಾ.

“ಬನ್ನಿ, ಬನ್ನಿ.”

ಜಗಲಿಯ ಗೋಡೆಗೊರಗಿ ಆ ನಾಲ್ವರೂ ಕೆಳಗೆ ಕುಳಿತರು. ಅವರಿಗೆದುರು, ಎಡದಲ್ಲಿ ಬಲದಲ್ಲಿ, ಅತ್ತ ಇತ್ತ, ಉಳಿದವರು ಜಾಗಹಿಡಿದರು. ದೂರ ದೂರ ಕುಳಿತಿದ್ದರೂ ಅವರೆಲ್ಲರ ದೃಷ್ಟಿಗಳು ಆ ನಾಲ್ವರ ಮೇಲೆಯೇ ನೆಟ್ಟಿದ್ದುವು. ಮೈಯೆಲ್ಲಾ ಕಿವಿಯಾಗಿತ್ತು ಅವರಿಗೆ.

ನೆರೆದವರಲ್ಲಿ ಹಿರಿಯವನಾದ ಸೋಮಯ್ಯ ಹೇಳಿದ:

"ನಮಗೆ ಇಲ್ಲಿಗೆ ಒಂದು ಸುದ್ದಿಯೂ ಬರ್‍ಲಿಲ್ಲ. ಇಂಥ ದೂರ ಪ್ರದೇಶಕ್ಕೆಲ್ಲ ಮೂರು ವರ್ಷಕ್ಕೊಮ್ಮೆ ಕಂದಾಯ ವಸ್ಲಿಗೆ ಬರೋದೂ ಉಂಟು ನೋಡಿ. ಇಲ್ಲದಿದ್ದರೆ ವಸೂಲಿಯವರು ಬಂದಾಗಲಾದರೂ ನಮಗೆ ಗೊತ್ತಾಗ್ತಿತ್ತು."

ಆ ಮಾತಿನ ಬಿಸಿ ಆರುವುದಕ್ಕೆ ಮುಂಚೆಯೆ ನಂಜಯ್ಯನೆಂದ:

"ಇನ್ನು ಕಂದಾಯ ಮಾತ್ರ ಅಲ್ಲ; ನಾವು ಬೆಳೆಸಿದ್ದನ್ನೆಲ್ಲ ಕಸಕೊಂಡು ಹೋಗ್ತಾರೆ!"

"ಅದು ನೋಡ್ಕೊಳ್ಳಾನ," ಎಂದ ಊರವನು ಯಾರೋ.

"ಕೆಂಪು ಮೋರೆಯೋನು ಇನ್ನು ಕುದುರೆ ಮೇಲೆ ಕೂತು ಬರ್‍ತಾನೆ. ಕೈಲಿ ಚಾಟಿ ಹಿಡಿದು, ನಮ್ಮ ಬೆನ್ನಿಗೆ ಬಾರಿಸಿ, 'ಬದ್ಮಾಷ್!' ಅನ್ತಾನೆ. ನಾವು ಇದಿರಾಡಿದರೆ ತುಪಾಕಿಯಿಂದ ಸುಟ್ಟುಹಾಕ್ತಾನೆ!"

"ಅವನು ವಾಪಸು ಹೋಗೋ ಆಸೆ ಇಟ್ಕೊಂಡು ಇಲ್ಲಿಗೆಲ್ಲಾ ಬರ್‍ತಾನಂತೋ?"—ಹೊಂಕರಿಸುತ್ತ ಒಬ್ಬ ಆ ಮಾತನ್ನಾಡಿದ.

ನಂಜಯ್ಯನ ಸ್ವರ ದೃಢಗೊಂಡಿತು:

"ವಾಪಸು ಹೋಗೋ ಆಸೆ ಇಟ್ಕೊಂಡು ಆರುಸಾವಿರ ಮೈಲಿ ದೂರದಿಂದಲೇ ಬಂದವನೆ ಆತ. ಅದನ್ನ ಮರೀಬ್ಯಾಡಿರಿ!"

ಪುಟ್ಟಬಸವನೆಂದ:

"ನಂಜಯ್ಯನವರೆ, ನಡೆದದ್ದು ಏನೂಂತ ನಮ್ಮ ಊರಿನವರಿಗೆಲ್ಲ ತಿಳಿಸಿ; ಮಹಾರಾಜರ ಕೊನೆಯ ಸಂದೇಶವನ್ನೂ ಅವರಿಗೆ ಮುಟ್ಟಿಸಿ."

ಸೋಮಯ್ಯನ ಸ್ವರ ಕೇಳಿಸಿತು:

"ಹೌದು. ಹೌದು. ಅದಕ್ಕಾಗಿಯೇ ನಾವು ಬಂದಿದೇವೆ. ಏನಾಯ್ತೂಂತ ಹೇಳಿ. ನಾವೇನು ಮಾಡಬೇಕೋ ಅಪ್ಪಣೆ ಕೊಡಿಸಿ."

ಒಂದು ನಿಮಿಷ ನಂಜಯ್ಯ ಮೌನವಾಗಿದ್ದ. ಬಳಿಕ ಅಲ್ಲಿದ್ದವರನ್ನೆಲ್ಲ ಆತ ದಿಟ್ಟಿಸಿ ನೋಡಿದ.

ಕಾಡಿನ ಅಂಚಿಗೆ ಅಂಟಿಕೊಂಡಿತ್ತು ಚಂದ್ರಬಿಂಬ. ಅದರ ಶೀತಲ ಕಿರಣಗಳು ಮೂಡಣಕ್ಕೆ ಇದಿರಾಗಿ ಕುಳಿತಿದ್ದ ಆ ನಾಲ್ವರ ಮೇಲೂ ಬಿದ್ದುವು.

ಜಗಲಿಯ ಗೋಡೆಯಾಚೆಗೆ ಮರೆಯಲ್ಲಿ ಗಂಗವ್ವ ಗಿರಿಜೆಯರು ಕುಳಿತರು.

ತಣ್ಣನೆ ಗಾಳಿ ಬೀಸಿತು. ಮರದೆಲೆಗಳಿಂದ ಕಚಕಚನೆ ಸದ್ದು ಹೊರಟಿತು.

ನಂಜಯ್ಯ ನಿಟ್ಟುಸಿರುಬಿಟ್ಟು, ನೆಲವನ್ನೆ ನೋಡುತ್ತಲಿದ್ದು, ಬಳಿಕ ತಲೆ ಎತ್ತಿ ಆರಂಭಿಸಿದ:

" ಕೊಡಗಿನ ಕರ್ಮಕಥೆ ಕೇಳಿ ನಿಮಗೆ ಸಂಕಟವಾದೀತು. ನಾವೀಗ ಗುಲಾಮರು ಗೊತ್ತ್ಯೆತಾ? ಮಾರಿ ಬೀದೀಲಿ ಹೋಗ್ತಿತ್ತು. ಅದನ್ನು ನಾವು ಮನೆಗೆ ಕರೆದ್ವಿ...."

* * * *

ಬೀದಿಯಲ್ಲಿ ಸಾಗುತಿತ್ತು ಮಾರಿ. ಕಲ್ಲೆಸೆದು 'ಶೂ' ಎಂದಿದ್ದರೆ, ಹಾಗೆಯೇ ಅದು ಮುಂದಕ್ಕೆ ಹೋಗುವುದು ಸಾಧ್ಯವಿತ್ತು. ಆದರೆ ಕೊಡಗಿನ ಅರಸರು ಅದನ್ನು ಮನೆಗೆ – ಅರಮನೆಗೆ – ಕರೆದರು.

ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟಿ, ಇಬ್ಬರನ್ನೂ ಶಕ್ತಿಗುಂದಿಸಿ, ಮಧ್ಯೆ ತಮ್ಮ ಬಾವುಟವನ್ನು ಭದ್ರವಾಗಿ ನೆಡುತಿದ್ದ ಸಮರ್ಥರು ಇಂಗ್ಲಿಷರು.

ಕೊಡಗಿನ ಅರಸು ವೀರರಾಜೇಂದ್ರನೊಮ್ಮೆ ತನಗೋಸ್ಕರ ಒಂದು ಕುದುರೆಯನ್ನು ಕೊಳ್ಳಲೆಂದು ದೂತನನ್ನು ತಲಚೇರಿಗೆ ಕಳುಹಿದ. ಮುತ್ತು ಭಟ್ಟ ಕುದುರೆಯನ್ನು ಕೊಳ್ಳುವ ಯತ್ನದಲ್ಲಿದ್ದಾಗ, ಅಲ್ಲಿದ್ದ ಇಂಗ್ಲಿಷರಿಗೆ ಆ ವಿಷಯ ತಿಳಿಯಿತು. ಮುತ್ತುಭಟ್ಟನನ್ನು ತಮ್ಮ ಅಧಿಕಾರಿಯ ಕಡೆಗೆ ನವುರು ಮಾತುಗಳ ನೆರವಿನಿಂದಲೆ, ಅವರು ಕರೆದೊಯ್ದರು.

ಆ ಅಧಿಕಾರಿ ರಾಬರ್ಟ್ ಟೇಯ್ಲರ್. ಆತನೆಂದ:

" ನಿಮ್ಮ ರಾಜರು ಕುಶಲವೊ ?"

" ದೇವರ ಕೃಪೆಯಿಂದ ಕುಶಲ."

" ಕುದುರೆ ತಾನೆ ನಿಮ್ಮ ರಾಜರಿಗೆ ಬೇಕಾದ್ದು ?"

" ಹೌದು."

"ಒಳ್ಳೇ ಅರಬ್ಬೀ ಕುದುರೆ ನಾವು ಉಚಿತವಾಗಿ ಕೊಡುತ್ತೇವೆ."

ಬೇಡ—ಎನ್ನುವುದುಂಟೆ ಮುತ್ತುಭಟ್ಟ? ಉತ್ತರವೀಯಲು ಯೋಗ್ಯ ಪದಗಳಿಗಾಗಿ ಆತ ತಡವರಿಸುತಿದ್ದಂತೆ ಟೇಯ್‌ಲರ್ ಹೇಳಿದ:

“ನೀವು ನಮಗೆ ಉಚಿತವಾಗಿ ನಮ್ಮ ಫಿರಂಗಿ ಎಳೆಯುವುದಕ್ಕೋಸ್ಕರ ಒಂದು ಜತೆ ಒಳ್ಳೆ ಹೋರಿ ಕೊಡಬೇಕು.”

“ನಮ್ಮ ಮಹಾರಾಜರಿಗೆ ತಿಳಿಸ್ತೇನೆ. ಅವರು ಖಂಡಿತವಾಗಿ ಒಪ್ಪಬಹುದು.”

“ಹಾಗೇ ಮಾಡಿರಿ.”

ಬಳಿಕ ತನ್ನ ಸೇವಕರನ್ನು ಕುರಿತು ಆತನ ಆಜ್ಞೆ:

“ಯಾರಲ್ಲಿ? ರಾಜಮರ್ಯಾದೆಯಿಂದ ಇವರನ್ನು ಕಳಿಸಿಕೊಡಿ!”

....ಹಾಗೆ ಕೊಡಗಿಗೆ ಬಂತು ಇಂಗ್ಲಿಷರ ಕುದುರೆ. ಕೊಡಗಿನ ಹೋರಿಗಳು ಬಯಲು ಭೂಮಿಗಿಳಿದು ಅವರ ಫಿರಂಗಿಗಳನ್ನೆಳೆದುವು.

ಮೊದಲು ಒಂದು ಕುದುರೆ. ಬಳಿಕ ಹಲವಾರು.

ಅವರ ಫಿರಂಗಿಯೂ ಅಷ್ಟೆ. ಮೊದಲು ಒಂದು, ಬಳಿಕ ಹಲವಾರು.

ವಿಶ್ವಾವಸು ಸಂವತ್ಸರದಲ್ಲಿ [೧೭೯೦ನೆಯ ಇಸವಿ] ಟೇಯ್‌ಲರ್ ವೀರರಾಜೇಂದ್ರನನ್ನು ತಲಚೇರಿಗೆ ಕರೆದ. ಸ್ನೇಹ ಹಸ್ತ; ಆಧುನಿಕರಾದ ಆಂಗ್ಲರ ಪರಿಚಯ; ಸರಿಸಮಾನರಾಗಿ ನಿಂತು ಸಂಭಾಷಣೆ.

“ನೋಡಿ ಮಹಾರಾಜರೆ, ಆ ಟಿಪ್ಪು ನಿಮಗೂ ವೈರಿ, ನಮಗೂ ವೈರಿ. ಆದ್ದರಿಂದ ನಾವಿಬ್ಬರೂ ಮಿತ್ರರಾಗುವುದು ಸ್ವಾಭಾವಿಕ. ನಾನು ಹೇಳಿದ್ದು ಸರಿಯಷ್ಟೆ? ನೋಡಿ. ನಮ್ಮ ಕಂಪೆನಿ ನಿಮಗೆ ಪೂರ್ಣ ರಕ್ಷಣೆ ಕೊಡುತ್ತದೆ. ನಾವಿಬ್ಬರೂ ಒಂದು ಒಪ್ಪಂದ ಮಾಡಿಕೊಂಡುಬಿಡುವ. ಏನು ಹೇಳುತ್ತೀರಿ?”

ಟಿಪ್ಪುವಿನ ಮೇಲೆ ಏರಿಹೋಗಲು ಹಾದಿಯಿದ್ದುದು ಕೊಡಗಿನ ಮೂಲಕವಾಗಿಯೆ. ಆ ಕಾರಣದಿಂದಲೆ ಕೊಡಗಿನ ರಾಜರ ಸ್ನೇಹ ಬೇಕಾಗಿತ್ತು ಬ್ರಿಟಿಷರಿಗೆ. ಟಿಪ್ಪುವನ್ನು ಸೋಲಿಸಿದ ಬಳಿಕ—

“ಆ ಒಳಮರ್ಮವನ್ನು ತಿಳಿಯಲಿಲ್ಲ ವೀರರಾಜೇಂದ್ರ. ಕಂಪೆನಿಯ ರಕ್ಷಣೆ ಎಂದರೆ ತನ್ನ ಸ್ವಾತಂತ್ರ್ಯ ನಷ್ಟವಾಗುವುದೇನೋ, ಎಂದು ಮಾತ್ರ ಆತ ಅಳುಕಿದ.

" ಈಗ ನಮಗೆ ರಕ್ಷಣೆಯ ಅಗತ್ಯವೇನೂ ಇಲ್ಲವಲ್ಲ."

ನುರಿತ ರಾಜಕಾರಣಿ ಆ ಟೇಯ್‌ಲರ್, – ಬರಿಯ ವ್ಯಾಪಾರಿಯಲ್ಲ, ಸೇನಾನಿ ಮಾತ್ರವಲ್ಲ. ಆತನೆಂದ :

" ಛೆ! ಛೆ! ನೀವು ತಪ್ಪು ತಿಳಿದು ಕೊಂಡಿರಿ. ನಮ್ಮದು ಮಿತ್ರರೊಳಗಿನ ಒಪ್ಪಂದ. ನಮಗೆ ಕಷ್ಟ ಬಂದರೆ ನೀವು ಸಹಾಯ ಮಾಡಿರಿ. ನಿಮಗೆ ಕಷ್ಟ ಬಂದರೆ ನಾವು ಮಾಡುತ್ತೇವೆ."

" ಹಾಗಾದರೆ ಆಗಬಹುದು."

ಆ ಭೇಟಿಯ ಅಂತ್ಯದಲ್ಲಿ ಒಪ್ಪಂದವಾಯಿತು. 'ಶ್ರೀ ದೇವರು ಸೂರ್ಯ ಚಂದ್ರ ಭೂಮಿ ಸಾಕ್ಷಿಯಾಗಿ' ಪರಸ್ಪರ ಮೈತ್ರಿಯನ್ನು ಜಾಹೀರು ಮಾಡಿದ ಕರಾರು ಪತ್ರ ಸಿದ್ಧವಾಯಿತು.

ಅದು ಸ್ನೇಹದ ಆಲಿಂಗನವಲ್ಲ; ಮರಣದ ಅಪ್ಪು ಹಿಡಿತ.

ಪ್ರಾಮಾಣಿಕನಾದ ಸ್ನೇಹಪರನಾದ ವೀರರಾಜೇಂದ್ರ ಅವರನ್ನು ಊರಿಗೆ ಕರೆದ.

" ಬನ್ನಿ ನಮ್ಮೂರಿಗೆ. ನಮ್ಮ ಆತಿಥ್ಯ ಸ್ವೀಕರಿಸಿ – ನಮ್ಮ ಕಾಡುಗಳಲ್ಲಿ ಬೇಟೆ ಸೊಗಸಾಗಿರ್ತ್ತೇತೆ. ಹೆಂಡತಿ ಮಕ್ಕಳನ್ನೂ ಕರಕೊಂಡು ಬನ್ನಿ. ನಾಲ್ಕು ದಿವಸ ಖುಷಿಯಾಗಿರಿ."

ಅವರು ಬಂದರು. ಮಡಿಕೇರಿಯಲ್ಲಿ ಆಂಗ್ಲ ಅತಿಥಿಗಳಿಗಾಗಿ ಅರಸ ಒಂದು ನಿವಾಸವನ್ನೆ ಕಟ್ಟಿಸಿದ. ಬಂದವರು ಬೇಟೆಯಾಡಿದರು. ತಂಪಾದ ಹವಾಮಾನ ವಿಲಾಯತಿಯ ನೆನಪು ಮಾಡಿಕೊಟ್ಟಿತು ಅವರಿಗೆ. ಎಷ್ಟು ಆಯಕಟ್ಟಿನ ಭೂಭಾಗ! ಮಲೆಯಾಳದವರು, ಕನ್ನಡ ಜಿಲ್ಲೆಯವರು, ಪೂರ್ವಕ್ಕೆ ಮೈಸೂರು ಸೀಮೆಯವರು – ಎಲ್ಲರನ್ನೂ ಬಿಗಿಹಿಡಿತದಲ್ಲಿರಿಸಿಕೊಳ್ಳಲು ಅತ್ಯಗತ್ಯವಾದ ಪ್ರದೇಶ....

ಅವರು ವೀರರಾಜೇಂದ್ರನಿಗೆಂದರು :

" ನೀವು ಬೇಟೆಯಾಡುವಾಗ ನಮ್ಮವರ ಹಾಗೆ ಮಿಲಿಟರಿ ಪೋಷಾಕು ಧರಿಸಿದರೆ ಚೆನ್ನಾಗಿರುತ್ತದೆ."

" ಹೌದೇ ?"

ಕೊಡಗಿನ ಅರಸು ಆಂಗ್ಲರಂತೆ ಉಡುಪು ಧರಿಸಿದ ಒಮ್ಮೊಮ್ಮೆ. ಅದೂ ಒಂದು ರೀತಿ.

ಅರಸನ ಮದುವೆಯ ಕಾಲದಲ್ಲಿ ಆಂಗ್ಲರ ಪ್ರತಿನಿಧಿಗೆ ಆಮಂತ್ರಣ ಹೋಯಿತು. ಬಂದವನು ಒಬ್ಬ ಸೈನ್ಯಾಧಿಕಾರಿ. ಆತನ ಜತೆಯಲ್ಲಿ ಪುಟ್ಟದೊಂದು ಸೈನ್ಯವೇ ಬಂದಿತ್ತು, ಮದುವೆ ನೋಡಲೆಂದು! ಅವರು ಮದುವೆಯನ್ನೂ ನೋಡಿದರು, ಅನಂತರದ ಪಟ್ಟಾಭಿಷೇಕ ಕಾಲದಲ್ಲೂ ಪ್ರೇಕ್ಷಕರಾದರು. ಅದು ಸಾಲದೆಂದು, ಕೊಡಗಿನ ಸ್ಥಿತಿಗತಿಗಳ ವೀಕ್ಷಣೆಯನ್ನೂ ಮಾಡಿದರು!

ಐರೋಪ್ಯರಿಗೆಂದೇ ವಿಶೇಷವಾಗಿ ನೇಮಿಸಿದ್ದ ಅಡುಗೆಯ ಭಟರು ರಾಜನ ಆಜ್ಞೆಯಂತೆ ನಿಮಿಷವೂ ಬಿಡುವಿಲ್ಲದೆ ದುಡಿದರು. ಇದು ತಮ್ಮ ಮನೆಯೆ ಎನ್ನುವಂತಾಯಿತು ಬಂದವರಿಗೆ.

ಟಿಪ್ಪುವಿನ ಮೇಲೆ ಇಂಗ್ಲಿಷರು ಯುದ್ಧ ಸಾರಿದಾಗ, ಕೊಡಗಿನ ಮೂಲಕ ಸಾಗಿದ ಆಂಗ್ಲ ಸೇನೆಗೆ ಹೇರಳವಾಗಿ ದವಸ ಧಾನ್ಯ ಒದಗಿಸಿದ, ಕೊಡಗಿನ ಅರಸ. ಅದಕ್ಕೆ ದೊರೆತ ಪ್ರತಿಫಲವೆಂದರೆ ಮೈತ್ರಿ ಒಪ್ಪಂದದ ಪುನರ್ವಿಮರ್ಶೆ. ಅದರ ಪ್ರಕಾರ, ಕಂಪೆನಿಯ ಸ್ನೇಹ ಮತ್ತು ರಕ್ಷಣೆಗಾಗಿ ವರ್ಷಂಪ್ರತಿ ಇಪ್ಪತ್ತನಾಲ್ಕು ಸಾವಿರ ರೂಪಾಯಿಗಳನ್ನು ಇಂಗ್ಲಿಷರಿಗೆ 'ಸ್ವಂತ ಇಚ್ಛೆಯಿಂದ' ಕೊಡಲು ವೀರರಾಜೇಂದ್ರ ಒಪ್ಪಬೇಕಾಯಿತು!

ಟಿಪ್ಪು ಬದುಕಿದ್ದಾಗಲೇ ಹಾಗೆ. ಆತ ಸೋತಮೇಲಂತೂ ಇಂಗ್ಲಿಷರನ್ನು ಹಿಡಿಯುವವರು ಯಾರಿದ್ದರು?

ಅವರ 'ಮೈತ್ರಿಯ ಅಪ್ಪುಗೆ' ಹೆಚ್ಚು ಹೆಚ್ಚು ಗಾಢವಾಯಿತು.

ಟಿಪ್ಪುವಿಗಿದಿರಾದ ಯುದ್ಧದಲ್ಲಿ ಇಂಗ್ಲಿಷರಿಗೆ ವೀರರಾಜೇಂದ್ರ ಸಹಾಯವಾಗಿ ನೀಡಿದ ಸಾಮಾನು ಸರಂಜಾಮುಗಳ ಬೆಲೆ ನಾಲ್ಕು ಲಕ್ಷ ರೂಪಾಯಿ.

ಇಂಗ್ಲಿಷರು ಅರಸನಿಗೆಂದರು:

"ನಾವು ನಿಮಗೆ ಕೃತಜ್ಞರಾಗಿದ್ದೇವೆ."

"ಆ ಹಣವನ್ನು ನೀವು ನಮಗೆ ಕೊಡಬೇಕಾದುದೇ ಇಲ್ಲ," ಎಂದ ವೀರರಾಜೇಂದ್ರ.

"ಹಾಗಾದರೆ ನಾವು ನಿಮಗೆ ತುಂಬಾ ಕೃತಜ್ಞರಾಗಿದ್ದೇವೆ," ಎಂದರು ಆಂಗ್ಲರು.

....ಬ್ಯಾಂಕು – ಹಣವನ್ನು ಸುರಕ್ಷಿತವಾಗಿಡಲು ಎಂತಹ ಏರ್ಪಾಟು ಮಾಡಿದ್ದರು ಆ ಜನ!

ಭೇಟಿಗೆಂದು ಬಂದ ಬ್ರಿಟಿಷ್ ಅಧಿಕಾರಿಯೊಬ್ಬ ಒಮ್ಮೆ ಕೇಳಿದ:

"ಮಹಾರಾಜರೇ, ನಮ್ಮ ಕಂಪೆನಿಯ ಬ್ಯಾಂಕಿನಲ್ಲಿ ನೀವು ಯಾಕೆ ಹಣವಿಡಬಾರದು?"

ವೀರರಾಜೇಂದ್ರ ಉತ್ತರವಿತ್ತ:

"ಆಗಲಿ, ಯೋಚಿಸಿ ನೋಡ್ತೀವಿ."

"ಯೋಚಿಸುವುದೇನಿದೆ? ನಿಮ್ಮ ಹಣ ಸುರಕ್ಷಿತವಾಗಿರುತ್ತದೆ. ಅಲ್ಲದೆ ನಾವು ಬಡ್ಡಿಯನ್ನು ಕೊಡುತ್ತೇವೆ."

"ಆಗಲಿ, ಆಗಲಿ. ಬೇಗನೆ ನಿಮ್ಮ ಬ್ಯಾಂಕಿನಲ್ಲಿ ಹಣವಿಡ್ತೀವಿ."

ಅದಕ್ಕೊಂದು ಸಂದರ್ಭವೂ ಒದಗಿ ಬಂತು ಗಂಡು ಸಂತಾನವಿಲ್ಲದೆ ಸಾಯಬೇಕಾಗಿದ್ದ ಅರಸನನ್ನು ಚಿಂತೆ ಅಡರಿತು.

ಮೈಸೂರಿನ ರೆಸಿಡೆಂಟನಾದ ಕೋಲ್ ಒಮ್ಮೆ ಮಡಿಕೇರಿಗೆ ಆಗಮಿಸಿದಾಗ, ವೀರರಾಜೇಂದ್ರ ಆತನಿಗೆ ವೈಭವದ ಸತ್ಕಾರ ನೀಡಿದ. ಅರಮನೆಗೆ ಅವನನ್ನು ಕರೆದೊಯ್ದು ತನ್ನ ನಾಲ್ವರು ಹೆಣ್ಣುಮಕ್ಕಳ ಪರಿಚಯ ಮಾಡಿಸಿಕೊಟ್ಟ.

"ಈಕೆ ದೇವಮ್ಮಾಜಿ, ನನ್ನ ಹಿರಿಯ ಮಗಳು."

"ಹೌ ಡು ಯು ಡು?"

ತಂದೆ ಮಗಳಿಗೆ ನೆನಪು ಹುಟ್ಟಿಸಿದ:

"ಮರೆತ್ಹೋಯ್ತಾ ಆಗ್ಲೇ ಹೇಳಿದ್ದು? ಬಗ್ಗಿ ನಮಸ್ಕಾರ ಮಾಡು."

ಕೋಮಲ ಬಳ್ಳಿಯೊಂದು ನೇರವಾಗಿ ನಿಂತಿದ್ದ ಮರದೆದುರು ತುಸು ಬಾಗಿತು.

ಕೋಲ್ ಹೇಳಿದ:

"ಸಂತೋಷ, ಸಂತೋಷ."

"ಈಕೆ ಎರಡನೆಯವಳು...."

"ಅಕ್ಕನ ಹಾಗೆ ಇವಳೂ ಸುಂದರಿ. ನಿಮ್ಮ ಮಕ್ಕಳೆಲ್ಲಾ ಸುಂದರಿಯರು...."

ಮಕ್ಕಳ ಸೌಂದರ್ಯಕ್ಕೆ ಸ್ಫುರದ್ರೂಪಿಯಾದ ತಾನೇ ಹೊಣೆ ಎಂಬಂತೆ, ವೀರರಾಜೇಂದ್ರ ನಸುನಕ್ಕ.

ಕೋಲ್ ಮನಸಿನಲ್ಲೇ ಲೆಕ್ಕ ಹಾಕುತ್ತಿದ್ದ: ಈತನ ಬಳಿಕ ಸಿಂಹಾಸನ ವನ್ನೇರಲು ರಾಜಕುಮಾರನಿಲ್ಲ. ಆಗ ಈ ದೇಶದ 'ರಕ್ಷಣೆ'ಯನ್ನು....

ಅರಸು ಅತಿಥಿಯೊಡನೆ ಮುಖ್ಯವಾದೊಂದು ವಿಷಯ ಪ್ರಸ್ತಾಪ ಮಾಡಿದ:

"ನಮ್ಮದೊಂದು ಆಸೆಯಿದೆ. ಕಂಪೆನಿಯವರು ಅದನ್ನು ನಡಸಿ ಕೊಡ್ಬೇಕು."

"ಏನದು, ಹೇಳೋಣಾಗಲಿ."

"ನಮ್ಮ ಅನಂತರ ನಮ್ಮ ಹಿರಿಯ ಮಗಳು ರಾಜ್ಯವಾಳಬೇಕೂಂತ ತೀರ್ಮಾನಿಸಿದೀವಿ. ಅದು ಸಾಧ್ಯವಾಗುವಂತೆ ಕಂಪೆನಿಯವರು ಸಹಾಯ ಮಾಡ್ಬೇಕು."

ಕೋಲ್ ಸಂತೋಷದಿಂದ ನುಡಿದ:

"ಆಗಲಿ ಅದಕ್ಕೇನಂತೆ?"

"ನಮ್ಮ ಮಗಳ ಹೆಸರಿನಲ್ಲಿ ಆರು ಲಕ್ಷ ರೂಪಾಯಿ ನಿಮ್ಮ ಮದ ರಾಸು ಬ್ಯಾಂಕಿನಲ್ಲಿಡ್ತೀವಿ."

"ಓಹೋ! ಆಗಬಹುದು!"

"ಹಾಗೆಯೇ ಬೊಂಬಾಯಿಯಲ್ಲಿ ನಿಮ್ಮ ಹತ್ತಿರ ಹಣ ಇಡ್ತೀವಿ."

"ಸಂತೋಷ!"

....ಮುಂದೆ ಸ್ವಲ್ಪ ಸಮಯದಲ್ಲೇ ಅರಸು, ರಾಜಮುದ್ರೆಯನ್ನು ಮಗಳ ಕೈಗಿತ್ತು, ಕಾಲವಾದ. ಆ ಮನೆತನಕ್ಕೆ ನೆರವಾಗಬೇಕಾದುದು ತಮ್ಮ ಕರ್ತವ್ಯ ಎಂದೇನೂ ಇಂಗ್ಲಿಷರು ಭಾವಿಸಲಿಲ್ಲ.

ದೇವಮ್ಮಾಜಿಯ ಪರವಾಗಿ ಆಡಳಿತ ವಹಿಸಿದ್ದ ಲಿಂಗರಾಜ, ಎರಡು ವರ್ಷಗಳ ಅವಧಿಯೊಳಗೇ, ಕೊಡಗಿಗೆ ತಾನೇ ರಾಜನೆಂದು ಸಾರಿದ.

ಆತನ ಕಾಲದಲ್ಲಿ ರಾಜ್ಯದ ಎಲ್ಲೆಕಟ್ಟುಗಳು ಭದ್ರವಾದುವು.

ರಾಜನೆಂದ:

"ರೈತರು ಸುಖವಾಗಿರ್ಬೇಕು. ಅದಕ್ಕೋಸ್ಕರ ಸಾಗುವಳಿ ಮಾಡುವ

ಭೂಮಿಯನ್ನೆಲ್ಲ ಅಳೆದು, ಮಣ್ಣಿನ ಗುಣಕ್ಕೆ ಸರಿಯಾಗಿ ಕಂದಾಯ ನಿಗದಿ ಮಾಡಿ !"

ಹಾಗೆ ಆ ಅಳತೆಯ ಕೋಲು ಲಿಂಗರಾಜ ಕೋಲಾಯಿತು ; ನಿಗದಿಯಾದ ಕಂದಾಯ ಲಿಂಗರಾಜನ ಶಿಸ್ತು ಎಂದಾಯಿತು.

ರೈತರಿಗೂ ಭೂಮಾಲಿಕರಿಗೂ ಇರುವ ಸಂಬಂಧವನ್ನು ನಿರ್ದಿಷ್ಟಗೊಳಿಸಿ ಐವತ್ತೆರಡು 'ಹುಕುಂ'ಗಳನ್ನು ಆ ರಾಜ ಹೊರಡಿಸಿದ.

ಮಡಿಕೇರಿಯ ಅರಮನೆ ಸಿದ್ಧವಾಯಿತು. ಓಂಕಾರೇಶ್ವರ ದೇವಸ್ಥಾನದ ಸ್ಥಾಪನೆಯಾಯಿತು.

ಉತ್ತಮನಾದ ಗುರಿಗಾರ, ಕುದುರೆ ಸವಾರ, ಆ ಅರಸು. ಒಂದು ವರ್ಷಕ್ಕಿರುವ ದಿನಗಳ ಸಂಖ್ಯೆಗಿಂತಲೂ ಹೆಚ್ಚು ಹುಲಿಗಳನ್ನು ಕೊಂದ ವೀರ.

ಆತನದು, ಕೊಡಗು ದೇಶದ ಪ್ರಗತಿಯನ್ನು ಸಾಧ್ಯಗೊಳಿಸಿದ ದಕ್ಷತೆಯ ರಾಜ್ಯಭಾರ.

ಕಂಪೆನಿ ಸರಕಾರದವರು ಭೇಟಿಯಾಡಲೇನೋ ಕೊಡಗಿಗೆ ಆಗಲೂ ಬಂದರು. ಆದರೆ ಅವರಿಗೆ ಗೊತ್ತಿತ್ತು—ಲಿಂಗರಾಜನ ಕಾಲದಲ್ಲಿ ಕೊಡಗನ್ನು ಆಕ್ರಮಿಸುವುದು ಆಗದ ಮಾತೆಂಬುದು.

....ತಂದೆಯ ಅನಂತರ ಪಟ್ಟಕ್ಕೆ ಬಂದ ವೀರರಾಜ ದಕ್ಷತೆಯಲ್ಲಿ ಲಿಂಗರಾಜನಿಗಿಂತ ಕಡಿಮೆಯವನಾಗಿರಲಿಲ್ಲ. ಬಿಸಿರಕ್ತದ ಯುವಕ. ಆದರೆ ಇಂಗ್ಲಿಷರ ದೃಷ್ಟಿಯಲ್ಲಿ ಆತ ಹಲವು ದುರ್ಗುಣಗಳ ಪ್ರತಿಮೂರ್ತಿಯಾಗಿದ್ದ. ಆ ದುರ್ಗುಣಗಳಲ್ಲಿ ಅತ್ಯಂತ ಪ್ರಧಾನವಾಗಿದ್ದುದು ಆತನ ಸ್ವಾಭಿಮಾನ, ಸ್ವಾತಂತ್ರ್ಯಪ್ರಿಯತೆ.

ತಾತ ವೀರರಾಜೇಂದ್ರನ ದಿನಗಳಿಂದ ತನ್ನವರೆಗೆ ಕಾಲ ಪ್ರವಾಹ ಹರಿದ ಗತಿಯನ್ನು ಆತ ನಿರೀಕ್ಷಿಸಿದ್ದ. ಆಂಗ್ಲರನ್ನು ಆತ್ಮೀಯ ಸ್ನೇಹಿತರೆಂದು ಕರೆದು ಅಪ್ಪಿಕೊಳ್ಳುವ ಅಗತ್ಯ ಚಿಕ್ಕವೀರರಾಜನಿಗೆ ತೋರಲಿಲ್ಲ. ಬರಿಯ ವ್ಯಾಪಾರಿಗಳಾಗಿರಲಿಲ್ಲ ಆ ಬಿಳಿಯ ಜನ. ಭಾರತದ ವಿಸ್ತೃತ ಭಾಗಗಳನ್ನೆ ಕಂಪೆನಿ ಸರಕಾರ ಆಕ್ರಮಿಸಿತ್ತು. ತಕ್ಕಡಿಯ ತಟ್ಟೆಗಳನ್ನು ಕಳಚಿ, ಉಳಿದ ಬಡಿಗೆಯನ್ನೆ ದಂಡಾಯುಧವಾಗಿ ಬೀಸುತ್ತಿದ್ದರು ಬ್ರಿಟಿಷರು.

ಎಂತಹ ಸ್ವಾಮಿನಿಷ್ಠರಾದ ಸಂಗಡಿಗರಿದ್ದರು ವೀರರಾಜನಿಗೆ! ಚಿಕ್ಕದಾಗಿದ್ದರೂ ಎಷ್ಟೊಂದು ಸುಸಜ್ಜಿತವಾಗಿತ್ತು ಆತನ ಸೇನೆ!

ಆದರೇನು? ಗದ್ದುಗೆಯ ಮೇಲೆ ಕಣ್ಣಿದ್ದವರು ಒಬ್ಬರೆ, ಇಬ್ಬರೆ? ದೇವಮ್ಮಾಜಿ ಗಂಡನೊಡನೆ ಶ್ರೀರಂಗಪಟ್ಟಣಕ್ಕೆ ಓಡಿಹೋಗಿ ಆಂಗ್ಲ ರೆಸಿಡೆಂಟನ ಮುಂದೆ ಕುರ್ನೀಸು ಮಾಡಿದಳು:

"ನನ್ನ ಚಿಕ್ಕಪ್ಪನ ಮಗ ತುಂಬಾ ಕೆಟ್ಟೋನು. ಅವನನ್ನು ಸೋಲಿಸಿ ನನ್ನನ್ನೇ ರಾಣಿಯಾಗಿ ನೇಮಿಸಿ ಖಾವಂದರೆ."

ರೆಸಿಡೆಂಟ್ ಸಾಹೇಬ ನಿರಾಕರಣೆಯ ಉತ್ತರವೀಯುವುದು ಸಾಧ್ಯವಿತ್ತೆ ಎಂದಾದರೂ?

"ನೀನು ಹೆದರಬೇಡ. ಧೈರ್ಯವಾಗಿರು. ನಿನ್ನ ಚಿಕ್ಕಪ್ಪನ ಮಗನಿಗೆ ನಾವು ಬುದ್ಧಿ ಕಲಿಸುತ್ತೇವೆ."

ಬುದ್ಧಿ ಕಲಿಸುವ ವಿಧಾನವೆಂದರೆ ಕೊಡಗಿನ ಮೇಲೆ ದಂಡಯಾತ್ರೆ ಕೈಗೊಳ್ಳುವುದು. ಆಂಗ್ಲರ ಸೇನೆಗಳಿಗೆ, ಅವರ ಅಧಿಕಾರಿಗಳಿಗೆ, ಕುದುರೆಗಳಿಗೆ—ಹೋರಿಗಳಿಗೆ, ಈಗೇನೂ ಅಪರಿಚಿತವಾಗಿರಲಿಲ್ಲ, ಕೊಡಗು. ಹಿಂದೆ ಕಾಡುಮೃಗಗಳನ್ನು ಬೇಟೆಯಾಡಿದ್ದವರು ಈಗ ನರಬೇಟೆಗೆ ಬಂದರು.

ಖರ ಸಂವತ್ಸರದಲ್ಲಿ ಆರಂಭವಾಯಿತು, ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಅಧರ್ಮ ಯುದ್ಧ; ಸ್ವಾತಂತ್ರ್ಯ ರಕ್ಷಣೆಗೋಸ್ಕರ ನಡೆದ ಧರ್ಮಯುದ್ಧ.

ಕೊಡಗಿನ ದಳಪತಿಗಳೆಂದರು, ವೀರರೆಂದರು:

"ಪರದೇಶಿಯ ಸೊಕ್ಕು ಮುರಿಯಬೇಕು. ಆತನ ಮೊಮ್ಮಕ್ಕಳು ಮರಿಮಕ್ಕಳೂ ಮರೆಯದಂಥ ಪಾಠ ಕಲಿಸಬೇಕು. ನಮ್ಮ ಭೂಮಿಯ ಜನರನ್ನು ಗುಲಾಮರಾಗಿ ಮಾಡೋದು ಬೊಂಬೆಯಾಟವಾಗಿ ಹೋಯ್ತು ಇವರಿಗೆ!"

ವೀರರಾಜ ಆಜ್ಞಾಪಿಸಿದ:

"ಗಡಿಗಳನ್ನು ಭದ್ರಪಡಿಸಿ! ಸೈನ್ಯವನ್ನು ವಿಂಗಡಿಸಿ ಒಯ್ಯಿರಿ!"

ಉತ್ತರ ದಕ್ಷಿಣ ಪಶ್ಚಿಮ ದಿಕ್ಕುಗಳಿಂದ ಬಂದ ಆಂಗ್ಲ ಸೇನೆಗಳು ಕೊಡಗಿನ ವೀರರ ಹೊಡೆತವನ್ನು ತಾಳಲಾರದೆ ಹಿಮ್ಮೆಟ್ಟಿದುವು. ಪೆರಿಯಾಪಟ್ಟಣದ ಹಾದಿಯಾಗಿ ಬರುತಿದ್ದ ಸೈನ್ಯವೊಂದೇ ಸರಿಯಾದ ಪ್ರತಿಭಟನೆ

ಯಿಲ್ಲದೆ ಮುಂದುವರಿಯಿತು.

ಅರಸನೊಬ್ಬನೆ ಆಗ ನಾಲ್ಕುನಾಡು ಅರಮನೆಯೊಳಗಿದ್ದ. ಯುದ್ಧ ರಂಗಗಳಲ್ಲಿದ್ದರು ವೀರರಾದ ಆಪ್ತರು.

ಆಗ ಆತನಿಗೆ, ಧೀರರಿಗೆ ಸಲ್ಲದಂತಹ ದ್ರೋಹಿಗಳಿಗೆ ಒಪ್ಪುವಂತಹ ಸಲಹೆ ನೀಡಿದವನು, ಅಪ್ಪಾರಂಡ ಬೋಪು ದಿವಾನ.

"ಈಗ ಒಪ್ಪಂದ ಮಾಡಿಕೊಳ್ಳೋದೇ ಮೇಲು ಮಹಾರಾಜರೇ."

"ಇಂಗ್ಲಿಷರನ್ನು ತಡೆದು ನಿಲ್ಲಿಸುವ ವೀರರು ಇಲ್ಲದೆ ಹೋದರೇನು ಈ ಕೊಡಗಿನಲ್ಲಿ?"

"ಹಾಗಲ್ಲ ಮಹಾರಾಜರೇ. ಸದ್ಯಕ್ಕೆ ಅವರ ಸೇನೆ ಬಲಿಷ್ಠವಾಗಿದೆ. ಪರಿಸ್ಥಿತಿಗೆ ತಕ್ಕಂತೆ ತಂತ್ರ ಬದಲಾಯಿಸೋದೇ ಬುದ್ಧಿವಂತನ.

ತನ್ನ ಅಸಹಾಯಕತೆಗಾಗಿ ರೇಗುತ್ತ ವೀರರಾಜ ನುಡಿದ:

"ಆ ಪರದೇಶಿಗಳ ವಿಷಯದಲ್ಲಿ ಯಾವಾಗಲೂ ಪಕ್ಷಪಾತವನ್ನೆ ತೋರಿಸುವವರು ನೀವು. ಇದು ನಮಗೆ ತಿಳಿಯದೆ ದಿವಾನರೆ?"

"ಮಹಾರಾಜರು ಆಜ್ಞೆ ಮಾಡುವುದೇ ಆದರೆ ಯುದ್ಧರಂಗದಲ್ಲಿ ಈಗಿಂದೀಗ ಪ್ರಾಣ ಬಿಡೋದಕ್ಕೂ ನಾನು ತಯಾರು. ಆದರೆ ಕೊಡಗು ದೇಶ ಇಂಗ್ಲಿಷರ ವಶವಾಗ್ತದೆ. ಇದು ಖಂಡಿತ."

"ಎಂಥ ಕಷ್ಟ ಪ್ರಾಪ್ತವಾಯ್ತು!"

"ನನ್ನ ಮಾತು ಕೇಳಿ ಮಹಾರಾಜರೇ. ಈಗ ಒಪ್ಪಂದ ಮಾಡಿಕೊಳ್ಳೋಣ."

"ನಿಮ್ಮಿಷ್ಟದಂತೆಯೇ ಮಾಡಿ ದಿವಾನರೇ. ಆದರೆ ಒಂದು ವಿಷಯ ನೆನಪಿಡಿ. ಈ ಒಪ್ಪಂದದಿಂದ ಕೊಡಗಿನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದದ್ದೇ ಆದರೆ, ಅದಕ್ಕೆ ನೀವೇ ಹೊಣೆಗಾರರಾಗ್ತೀರಿ."

ಅಪ್ಪಾರಂಡ ಬೋಪು ದಿವಾನ ಮರುಮಾತನಾಡಲಿಲ್ಲ. ಮುಂದುವರಿದು ಬರುತಿದ್ದ ಇಂಗ್ಲಿಷ್ ಸೇನೆಯನ್ನು ಇದಿರುಗೊಳ್ಳಲು ನಾಲ್ಕುನೂರು ಜನ ಸೈನಿಕರೊಡನೆ ಆತ ಹೊರಟ. ಶರಣು ಮಂತ್ರ ಬಾಯಲ್ಲಿ. ಕೈಯಲ್ಲಿ ಬಿಳಿಯ ಬಾವುಟ. ಕುಶಾಲುನಗರದಲ್ಲಿ ನಡೆಯಿತು ಯಾವ ಶರತವೂ ಇಲ್ಲದ ಶರಣಾಗತಿ. ವಿಜಯಿಯಾದ ಫ್ರೇಸರ್ ಮಡಿಕೇರಿಗೆ ಮುನ್ನಡೆದ.

ಸ್ನೇಹದ ಒಡಂಬಡಿಕೆ ಎಂದು ಅದನ್ನು ಕರೆದವರು ಯಾರು?

ರಾಜರ ಧ್ವಜ ಇಳಿದು ಬ್ರಿಟಿಷರ ಧ್ವಜ ಕೋಟೆಯ ಮೇಲೇರಿತು.

ನಾಲ್ಕುನಾಡು ಅರಮನೆಯಿಂದ ಹಿಂತಿರುಗಿದ ವೀರರಾಜೇಂದ್ರ ರಾಜಕೈದಿಯಾದ!

ಕೊಡಗುದೇಶವನ್ನು ಇನ್ನೂರು ವರ್ಷಗಳಿಗೂ ಮೇಲ್ಪಟ್ಟು ಆಳಿದ್ದ ರಾಜಮನೆತನವನ್ನು ಆಂಗ್ಲರು ಹೀಗೆ ಮೂಲೆಗೊತ್ತಿದರು. ಗುಲಾಮ ಗಿರಿಯನ್ನೆ ಅರಿಯದ ಜನಾಂಗದ ಬಾಹುಗಳ ಕೈಗೆ ಅವರು ಬೇಡಿ ತೊಡಿಸಿದರು. ಬಾಯಿಗೆ ಅರಿವೆ ತುರುಕಿಸಿ, ಅಂಗಾತ ಮಲಗಿಸಿ ಶರೀರದ, ಮೇಲೆ ಕರಿಯ ಮುಸುಕೆಳೆದರು.

* * * * *

ಕುತ್ತಿಗೆಯ ನರಗಳು ಬಿಗಿದು ಬಂದು ನಂಜಯ್ಯನ ಬಾಯಿಯಿಂದ ಮುಂದೆ ಮಾತು ಹೊರಡಲಿಲ್ಲ. ಆತ ತುಟಿಗಳನ್ನು ಬಿಗಿಹಿಡಿದು ನಿಟ್ಟುಸಿರು ಬಿಟ್ಟ. ಎಲ್ಲರೂ ಮೌನವಾಗಿದ್ದರು. ಗಾಳಿಯೂ ಸ್ತಬ್ಧವಾಗಿತ್ತು. ಚಂದ್ರನ ಶೀತಲ ಕಿರಣಗಳು ಮಾತ್ರ ಕುಳಿತಿದ್ದವರ ಮೈಯನ್ನು ಕೊರೆದುವು.

# ೪

ಕೊನೆಯೇ ಇಲ್ಲವೇನೊ ಎಂದು ಕಂಡ ಎರಡು ನಿಮಿಷಗಳ ಮೌನ ವನ್ನು ಸೋಮಯ್ಯನ ಮಾತುಗಳು ಮುಕ್ತಾಯಗೊಳಿಸಿದುವು.

" ಇನ್ಯಾರಾದರೂ ಹೇಳಿದ್ದರೆ ಈ ಸುದ್ದಿಯನ್ನು ನಾವು ನಂಬುತ್ತಿ ಇರಲಿಲ್ಲ. ಯುದ್ಧದಲ್ಲಿ ಸೋಲದೆಯೇ ಇನ್ನೊಬ್ಬರಿಗೆ ಶರಣಾಗೋದು ಅಂದ ರೇನು? ದೇಶ ಭಾಷೆ ತಿಳೀದ ಹೊರಗಿನೋರು ಬಂದು ನಮ್ಮನ್ನು ಆಳೋದು ಅಂದರೇನು? ನಮ್ಮ ಜನರಲ್ಲಿ ವೀರರ ಹುಟ್ಟೇ ಅಡಗಿ ಹೋಯ್ತೇನು ಹಾಗಾದರೆ? ನಮ್ಮ ಜನಕ್ಕೆಷ್ಟು ಬೆಂಕಿ!"

ಸೋಮಯ್ಯನನ್ನೆ ನೆಟ್ಟದೃಷ್ಟಿಯಿಂದ ನೋಡುತ್ತ ನಂಜಯ್ಯನೆಂದ:

" ವೀರರು ವಿರಾಗಿಗಳಾದರು. ಹೇಡಿಗಳೇ ಈಗ ಮಹಾನುಭಾವರು. ತಾಯಿನಾಡಿಗೆ ದ್ರೋಹ ಬಗೆದ ಧೂರ್ತರೇ ರಾಜಕಾರಣಿಗಳು. ಹುಂ!"

" ಈ ದರ್ಬಾರು ಮೂರು ದಿವಸಕ್ಕಿಂತ ಜಾಸ್ತಿ ಇರೋದಿಲ್ಲ," ಎಂದ ನೊಬ್ಬ.

" ಭೇಷ್ ಕರಿಯಪ್ಪ, ಸರಿಹೇಳ್ದೆ!" ಎಂದು ಕೇಳಿಸಿತು ಇನ್ನೊಂದು ಸ್ವರ.

ಚೆಟ್ಟಿ—ಕರ್ತರ ಕುಡಿಯರು ಬೆನ್ನು ನಿಡಿದು ಕುಳಿತರು. ಅಲ್ಲಿದ್ದ ಜನರ ಮನೋಭಾವ ಕಂಡು ಸಂತೋಷವಾಯಿತು ಅವರಿಗೆ.

ಪ್ರತಿಯೊಂದನ್ನೂ ಗಮನಿಸುತ್ತ ಕುಳಿತಿದ್ದ ಪುಟ್ಟಬಸವನೆಂದ:

" ಪರಕೀಯರ ಧ್ವಜ ಮೇಲೇರಿದ ಮೇಲೆ ಏನಾಯ್ತು ಹೇಳಿ ನಂಜಯ್ಯನವರೆ."

ಸೋಮಯ್ಯನೂ ಧ್ವನಿಕೂಡಿಸಿದ:

" ಹೇಳಿ, ಮುಂದೇನಾಯ್ತೂಂತ ತಿಳಿಸಿ."

ನಂಜಯ್ಯ ಮೊದಲಿನಂತೆಯೆ, ಒಂದು ನಿಮಿಷ ನೆಲವನ್ನೆ ನೋಡುತ್ತ ಲಿದ್ದು ಬಳಿಕ ತಲೆಯೆತ್ತಿ ನುಡಿದ:

" ಬೀದಿಯ ತೂರಿ ಮನೆ ಸೇರಿದ್ಮೇಲೆ—"

*　　*　　*　　*

ಬೀದಿಯ ಮಾರಿ ಮನೆ ಸೇರಿದ ಮೇಲೆ, ನಿಮಿಷವೂ ತಡಮಾಡದೆ ಪ್ರತಿಯೊಂದನ್ನೂ ತನ್ನ ಅಧೀನಕ್ಕೆ ತೆಗೆದುಕೊಂಡಿತು. ಉತ್ತರ ಪಶ್ಚಿಮ ದಕ್ಷಿಣಗಳಲ್ಲಿದ್ದ ಕೊಡಗು ಸೇನೆಗಳನ್ನು ಬೋಪು ದಿವಾನನ ಮೂಲಕವೆ ಇಂಗ್ಲಿಷರು ಮಡಿಕೇರಿಗೆ ಕರೆ ಕಳುಹಿದರು. ಇದು ಕನಸೆ?—ಎಂದು ಭ್ರಮೆಗೊಂಡವರು ಅದೆಷ್ಟು ಜನ! ಅಧಿಕಾರದ ಹಣದ ಆಸೆಗೆ ಹಲವರು ತಮ್ಮನ್ನೆ ಮಾರಿಕೊಂಡರು. ಜನಾಂಗದ ಐಕಮತ್ಯದ ದುರ್ಗ ಬಿರುಕು ಬಿಟ್ಟಿತು. ಆ ಬಿರುಕುಗಳಿಗೆಲ್ಲ ಆಂಗ್ಲರು ಬಲವಾಗಿ ಆಪು ಹೊಡೆದು ಒಡಕನ್ನು ಹೆಚ್ಚಿಸಿದರು.

ಅರಸರ ಅರಮನೆಯಲ್ಲಿ ಪರಕೀಯರ ದರಬಾರು! ಹಿಂದೆ ಬೇಟೆ ಯಾಡಲು ಬ್ರಿಟಿಷರು ಬರುತ್ತಿದ್ದಾಗ ಅವರ ವಾಸಕ್ಕಾಗಿ ಅತಿಥಿ ಗೃಹವನ್ನು ನಿರ್ಮಿಸಿರಲಿಲ್ಲವೆ ದೊಡ್ಡರಾಜೇಂದ್ರ ? ಆ ಗೃಹದಲ್ಲೆ ಚಿಕ್ಕವೀರರಾಜೇಂದ್ರ ನನ್ನೂ ಆತನ ಕುಟುಂಬವನ್ನೂ ಕೈದಿಗಳಾಗಿ ಈಗ ಇರಿಸಿದರು.

ಎಲ್ಲ ಕಡೆಗಳಿಗೂ ಕೊಂಡಿ ಚಾಚಿ ಏಡಿಯ ಹಾಗೆ ಆ ಮಣ್ಣನ್ನು ಭದ್ರವಾಗಿ ಹಿಡಿದಿತ್ತು, ವಿದೇಶಿಯ ಪ್ರಭುತ್ವ. ಪ್ರತಿಭಟನೆಯ ಸ್ವರ ಹೊರ ಡಿಸಿದವರಿಗೆಲ್ಲ ತುರಂಗವಾಸ ಲಭಿಸಿತು.

ಬಂಧನದಲ್ಲಿ ವೀರರಾಜೇಂದ್ರ ಕನಲಿ ಕಿಡಿಯಾಗಿ ಆಕ್ರೋಶ ಮಾಡಿದ. ಹಿಡಿಹಿಡಿಯಾಗಿ ತಲೆಕೂದಲನ್ನೆ ಕಿತ್ತು ಬಿಡಲೆತ್ನಿಸಿದ. ಮುಷ್ಟಿಯಿಂದ ಎದೆಗೆ ಬಡೆದುಕೊಂಡ. ದ್ರೋಹಿಗಳನ್ನು ಶಪಿಸಿದ.

" ಬ್ರಿಟಿಷರ ಸೈನ್ಯಾಧಿಕಾರಿಯನ್ನು ತಕ್ಷಣವೇ ನಾನು ನೋಡಬೇಕು!" ಎಂದು, ಕಾವಲಿನ ಭಟರೊಡನೆ ಹಲವು ಬಾರಿ ಹೇಳಿಕಳುಹಿದ.

ಫ್ರೇಸರನ ಬದಲು ಬಂದವನು ಬೋಪು ದಿವಾನ.

ಕಾವಲಿನ ಸೈನಿಕ ನುಡಿದ :

" ಮಹಾರಾಜರ ಭೇಟಿಗೆ ದಿವಾನ ಸಾಹೇಬರು ಬಂದವರೆ."

ವೀರರಾಜೇಂದ್ರನ ಮೈ ಉರಿಯಿತು.

" ಯಾವ ದಿವಾನ ?"

[ ' ದ್ರೋಹಿ ! ನೀಚ ! ವಂಚಕ !' ]

" ಬೋಪು ದಿವಾನರು."

" ಬೋಕೆ! ಇನ್ನೊಮ್ಮೆ ಆ ನಾಯಿನ ದಿವಾನ ಅಂದೀಯೆ ! ಆತನನ್ನು

ದಿವಾನ ಕೆಲಸದಿಂದ ನಾವು ತೆಗೆದು ಹಾಕಿದೀವಿ !"

ಬೋಪು ಬಂದಿದ್ದ ದಾರಿಗೆ ಸುಂಕವಿರಲಿಲ್ಲ.

ರಾಜವಂಶದ ಸಂಹಾರ ಫ್ರೇಸರನ ಪಾಲಿಗೆ ನಿಮಿಷದ ಕೆಲಸ. ಆದರೆ ದುಡುಕಲು ಸಿದ್ಧನಿರಲಿಲ್ಲ, ಚತುರನಾದ ಆ ರಾಜಕಾರಣಿ. ಆತ ಹೇಳಿದ :

" ಮಿಸ್ಟರ್ ಬೋಪು ದಿವಾನ್, ನಿಮ್ಮ ರಾಜರಿಗೆ ತೊಂದರೆ ಕೊಡಬೇಕು ಅನ್ನುವ ಇರಾದೆ ನಮಗಿಲ್ಲ. ನಿಮ್ಮ ಜನರ ಹಿತದ ದೃಷ್ಟಿಯಿಂದ ನಾವು ಇಲ್ಲಿಯೇ ಇರುವುದು ಒಳ್ಳೆಯದು. ನಿಮಗಂತೂ ಈ ವಿಷಯ ಮನವರಿಕೆಯಾಗಿದೆ. ಅಲ್ಲವೇ ?"

ಶರಣು ಹೋಗುವುದೇ ಮೇಲೆಂದು ರಾಜನಿಗೆ ಸಲಹೆ ಇತ್ತಿದ್ದಾಗಲೇ 'ಆ ವಿಷಯ' ಮನವರಿಕೆಯಾಗಿತ್ತು ಬೋಪುಗೆ.

" ಹೌದು, ಕರ್ನಲ್ ಸಾಹೇಬ್."

" ಇಲ್ಲಿಯ ಪರಿಸ್ಥಿತಿಯನ್ನು ಸರಿಪಡಿಸುವ ಕಾರ್ಯದಲ್ಲಿ ನಿಮ್ಮನ್ನೆ ನಾವು ನಂಬಿದ್ದೇವೆ."

ಬೋಪುವಿನ ಹೃದಯ ಹಿಗ್ಗಿತು. ಕುಂಪಣಿ ಸರಕಾರದ ಪ್ರತಿನಿಧಿ ಎಷ್ಟೊಂದು ದೊಡ್ಡ ಮಾತನ್ನಾಡಿದ್ದ ತನ್ನ ವಿಷಯವಾಗಿ !

" ನನ್ನ ದೇಹದಲ್ಲಿ ಪ್ರಾಣ ಇರೋವರೆಗೂ ತಮಗೆ ವಿಧೇಯನಾಗಿ ದುಡೀತೀನಿ."

ಹಿಂದಿನ ಅರಸರಿಗೆ ಆತ 'ವಿಧೇಯನಾಗಿ' ದುಡಿದಿದ್ದ ವಿಷಯ ಫ್ರೇಸರನಿಗೆ ಗೊತ್ತಿರಲಿಲ್ಲವೆ ? ಆದರೂ ದೇಶದ ನಾನಾ ಕಡೆಗಳಲ್ಲಿ ಅಂಥವರೇ ಬ್ರಿಟಿಷರ ಸರಕಾರಕ್ಕೆ ಆಧಾರವಾಗಿದ್ದರು.

ಫ್ರೇಸರ್ ನಸು ನಕ್ಕು ನುಡಿದ :

" ಆ ವಿಷಯದಲ್ಲಿ ನಮಗೆ ಸಂದೇಹವೇ ಇಲ್ಲ ಬೋಪುದಿವಾನ್."

" ತಾವು ತೋರಿಸುವ ವಿಶ್ವಾಸಕ್ಕಾಗಿ ನಾನು ಕೃತಜ್ಞನಾಗಿದೀನಿ ಕರ್ನಲ್ ಸಾಹೇಬರೇ."

ಫ್ರೇಸರನ ಮನಸಿನಲ್ಲಿದ್ದುದು ಸಾವೋಪಾಯವೊಂದೇ. ರಾಜನ ಕೂದಲು ಕೊಂಕಿದರೂ ತೊಂದರೆ ಖಂಡಿತ. ಜೇನುನೊಣಗಳನ್ನು ಕೆರಳಿಸಿ ಬದುಕುವುದುಂಟೆ ? ಅದೂ ಕೊಡಗಿನ ಕಾಡುಗಳಲ್ಲಿ ಎಷ್ಟೊಂದಿರಬೇಡ ಜೇನುಗೂಡುಗಳು

ತನ್ನ ಕೆಳಗಿನ ಅಧಿಕಾರಿ ಲೀಹಾರ್ಡಿಗೆ ಫ್ರೇಸರ್ ಹೇಳಿದ:

"ರಾಣಿಹುಳುವನ್ನು ಉಪಾಯವಾಗಿ ಬೇರೆ ಕಡೆಗೆ ಸಾಗಿಸಿದರೆ ಜೇನೆ ನೊಣಗಳು ತಣ್ಣಗಾಗ್ತವೆ."

ಮತ್ತೆ ಬೋಪುವಿನೊಡನೆ ಮಂತ್ರಾಲೋಚನೆ.

ಆತನೆಂದ :

"ಉತ್ತರ ಹಿಂದೂಸ್ಥಾನದಲ್ಲಿ ಸಂಚಾರ ಮಾಡ್ಬೇಕು, ಆ ರಾಜರ ಜತೇಲೆಲ್ಲಾ ಸ್ನೇಹ ಬೆಳೆಸಬೇಕು—ಅಂತ ವೀರರಾಜರು ಹಿಂದೆ ಹೇಳಿದ್ದುಂಟು."

"ಹಹ್ಹಾ! ಅವರೆಲ್ಲರ ಜತೇಲೂ ಸ್ನೇಹ ಅಂದಿರಾ? ಕೆಲವರಿಗೆಲ್ಲಾ ಆಗಲೇ ವ್ಯವಸ್ಥೆ ಮಾಡಿದೇವೆ. ಅದರ ಯೋಚನೆ ಬಿಟ್ಟುಬಿಡಲಿ!"

ಬೋಪುದಿವಾನ ಯೋಚಿಸಿ ಹೇಳಿದ :

"ರಾಜರು ಯಾವುದೋ ಊರಿಗೆ ಯಾತ್ರೆ ಹೋದರು ಅಂದರೆ ಜನರಿಗೆ ಬೇಸರವಾಗದು."

ಫ್ರೇಸರನ ಮುಖ ಪ್ರಸನ್ನವಾಯಿತು.

"ಸರಿ! ಕಾಶಿ ಪವಿತ್ರ ಕ್ಷೇತ್ರವಂತಲ್ಲಾ? ನಿಮ್ಮ ರಾಜರು ಅಲ್ಲಿಗೆ ಹೋಗಲಿ. ಅಲ್ಲಿ ಅವರನ್ನು ನಾವು ನೋಡ್ಕೊಳ್ತೀವಿ."

ಹಾಗೆ ನುಡಿದಾಗ ಫ್ರೇಸರನ ಬಲಗಣ್ಣು ಕಿರಿದಾಯಿತು. ಕಿರುನಗೆ ಮೂಡಿತು ತುಟಿಗಳ ಮೇಲೆ. ತನಗೆ ಅರ್ಥವಾಯಿತೆಂದು ಬೋಪು ಮಂದಹಾಸ ಬೀರಿದ.

ಆತ ಮಹಾರಾಜರಿಗೆ ಹೇಳಿ ಕಳುಹಿದ :

"ನನ್ನ ಮೇಲೆ ತಾವು ವಿನಾಕಾರಣ ಮುನಿಸಿದ್ದೀರಿ. ನಾಳೆಯ ದಿವಸ ಎಲ್ಲಾ ಸಂಗತಿ ತಿಳಿದಾಗ ನನ್ನ ಪ್ರಾಮಾಣಿಕತೆ ತಮಗೆ ವೇದ್ಯವಾದೀತು. ಮುಖ್ಯ ವಿಷಯ ತಮ್ಮೊಡನೆ ಚರ್ಚಿಸಬೇಕಾಗಿದೆ. ಅವಕಾಶ ಕೊಟ್ಟರೆ—"

ನಿರುಪಾಯನಾಗಿ ವೀರರಾಜೇಂದ್ರ ದೂತನಿಗೆ ತಿಳಿಸಿದ :

"ಬಂದು ಹೋಗಲಿ!"

ಆ ಭೇಟಿ ನಡೆದುದು ನಡುವಿರುಳಿಗೆ. ಇಂಗ್ಲಿಷರಿಗೆ ಸುಳಿವು ಹತ್ತದಂತೆ ತಾನು ಅಡಗಿ ಬಂದೆನೆಂದು ನಟಿಸಿದ ಬೋಪು.

ಸಿಟ್ಟನ್ನೆಲ್ಲ ನುಂಗಿಕೊಂಡು ವೀರರಾಜೇಂದ್ರ ಕೇಳಿದ :

"ಕೊಡಗಿನ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದರೆ ನೀವು ಹೊಣೆಗಾರರಾಗ್ತೀರೀಂತ ಹಿಂದೆ ನಾವು ಹೇಳಿದ್ದು ನೆನ್ಪಂಯ್ತಾ ?"

"ಹ್ಯಾಗೆ ಮರೆತೇನು ಮಹಾರಾಜರ ?"

"ಹಾಗಾದರೆ ಈಗೇನು ಹೇಳ್ತೀರಿ ?"

"ನನಗೆ ಸ್ವಲ್ಪ ಕಾಲಾವಕಾಶ ಕೊಡಿ. ನಮ್ಮ ಎಷ್ಟೋ ಜನ ಸರದಾರರನ್ನು ಬಂಧಿಸಿ ಇಟ್ಟಿದ್ದಾರೆ. ಕೆಲವರ ಪತ್ತೆಯೇ ಇಲ್ಲ. ಪರಿಸ್ಥಿತಿ ಶಾಂತವಾದ ಮೇಲೆ ಎಲ್ಲರೂ ಒಟ್ಟಾಗಿ—"

"ಅರ್ಥವಿಲ್ಲದ ಮಾತು !"

ಬೋಪು ಸ್ವಲ್ಪ ಹೊತ್ತು ಸುಮ್ಮನಿದ್ದು ನುಡಿದ :

"ನನ್ನ ದುರದೃಷ್ಟ. ನಾನೇನು ಮಾಡಲಿ? ಮಹಾರಾಜರಿಗೆ ನನ್ನ ಮೇಲೆ ನಂಬಿಕೆ ಇಲ್ಲ."

"ಹ್ಯಾಗೆ ನಂಬೋದು ನಿಮ್ಮಂಥವರನ್ನು ?"

ಗದ್ಗದ ಕಂಠದಿಂದ ಉತ್ತರ ಬಂತು :

"ಹಾಗಾದರೆ ಈ ಪಾಪಿಗೆ ಇಲ್ಲಿಯೇ ಶಿಕ್ಷೆ ವಿಧಿಸಿ. ಎರಡು ತುಂಡು ಮಾಡಿ ಈ ದೇಹವನ್ನು !"

ಕ್ಷಣಕಾಲ ವಿವಂಚನೆಗೆ ಒಳಗಾದ ವೀರರಾಜ.

"ಸಾಕುಮಾಡಿ ಅಂಥ ಮಾತು ! ಈಗಿನ ಪರಿಸ್ಥಿತೀನ ನೀವು ಯಾವಾಗ ನಿವಾರಿಸ್ತೀರೋ ಆಗಲೇ ನಿಮಗೆ ಪ್ರಾಯಶ್ಚಿತ್ತವಾದೀತು ; ಆಗಲೇ ನಿಮ್ಮ ಮೇಲಿನ ಅಪವಾದ ದೂರವಾದೀತು."

ಬ್ರಿಟಿಷರ ದುರುಳತನವನ್ನು ಕುರಿತು ಇಬ್ಬರೂ ಬಹಳ ಹೊತ್ತು ಮಾತನಾಡಿದ ಬಳಿಕ ಬಂತು, ಕಾಶೀಯಾತ್ರೆಯ ಸೂಚನೆ.

ಬೋಪು, ಮಹಾರಾಜನಿಗೆ ಮನಗಾಣಿಸಿ ಕೊಟ್ಟ.

"ಬೇರೆ ಉಪಾಯವೇ ಇಲ್ಲ. ಯಾತ್ರೆಯ ನೆಪಮಾಡಿಕೊಂಡು ನೀವು ಹೊರಬಿದ್ದರೆ ಸ್ವತಂತ್ರ ರಾಜರು ಯಾರಿಂದಲಾದರೂ ಸಹಾಯ ಪಡೀಬಹುದು. ಅಷ್ಟರೊಳಗೆ ಇಲ್ಲಿ ನಾವೂ ಸಿದ್ಧರಾಗ್ತೀವಿ."

ಆ ಸೆರೆಯಿಂದ ಬಿಡುಗಡೆ ಅಗತ್ಯ ಎಂಬುದಂತೂ ಆಗಲೆ ವೀರರಾಜನಿಗೆ ಸ್ಪಷ್ಟವಾಗಿತ್ತು. ಹೊರಗಿನಿಂದ ಸಹಾಯ ಪಡೆಯುವ ವಿಷಯವನ್ನೂ ಆತ ಯೋಚಿಸಿದ್ದ.

ಮುಳುಗುವವನ ಪಾಲಿಗೆ ದೊರೆತ ಹುಲ್ಲುಕಡ್ಡಿ.

ಹಾಗೆ ಸೂಚಿಸಿದ ತನ್ನ ಮೇಲೆ ರಾಜನಿಗೆ ಸಂದೇಹ ಮೂಡ ಬಹುದೆಂದು ಬೋಪು ಒಳಗಿಂದೊಳಗೇ ಅಧೀರನಾಗುತ್ತಾ ಹೇಳಿದ:

"ಇಂಗ್ಲಿಷರು ಇದಕ್ಕೆ ಒಪ್ಪೋದು ಕಷ್ಟ. ಆದರೂ ಪ್ರಯತ್ನಿಸಿ ನೋಡ್ಬೇಕು."

ರಾಜನಿಗೆ ರೇಗಿತು.

"ಪ್ರತಿಯೊಂದು ಕೆಲಸವೂ ಅವರ ಒಪ್ಪಿಗೆ ಪಡೆದೇ ಆಗ್ಬೇಕೇನು?"

ಅರ್ಧ ಗೆದ್ದಂತೆಯೆ ಎಂದು ಸಮಾಧಾನಪಡುತ್ತ ಬೋಪುವೆಂದ:

"ಹಾಗಲ್ಲ, ಅವರು ವಿರೋಧಿಸಿದರೂ ಈ ಸೆರೆಯಿಂದ ತಾವು ಹೊರಗೆ ಹೋಗಿಯೇ ತೀರುತ್ತೀರಿ. ಆ ಜವಾಬ್ದಾರಿ ಇಷ್ಟೊಂದು ಕಷ್ಟಕ್ಕೆಲ್ಲ ಕಾರಣನಾಗಿರುವ ನನ್ನ ಮೇಲೆ ಇರಲಿ. ಆದರೆ ಬಹಿರಂಗವಾಗಿ ರಾಜವೈಭವದಿಂದ ಯಾತ್ರೆ ಹೋಗೋದು ಸಾಧ್ಯವಾದರೆ ಪ್ರಯೋಜನ ಜಾಸ್ತಿ. ತಮ್ಮ ಗೌರವಕ್ಕೆ ಚ್ಯುತಿ ಬಂದಿಲ್ಲಾಂತ ಜನರು ತಿಳಿಕೊಳ್ತಾರೆ. ತಾವು ವಾಪಸು ಬರೋದನ್ನೇ ಇದಿರು ನೋಡ್ತಾರೆ."

ಸತ್ಯಾಂಶವಿದ್ದ ಮಾತು. ಆದರೂ ಇದರಲ್ಲೇನೋ ಮೋಸವಿರಬೇಕೆಂಬ ಅಳುಕು. ವೀರರಾಜ, ಬೋಪು ದಿವಾನನ ಉಬ್ಬಿಕೊಂಡಿದ್ದ ಕೆನ್ನೆಗಳನ್ನು ನೋಡಿದ. ದುಂಡಗಿನ ಆ ಮುಖ ಅದೆಷ್ಟು ಸ್ವಚ್ಛವಾಗಿತ್ತು, ತಿಳಿನೀರಿನ ಹಾಗೆ!

ದೃಷ್ಟಿಯನ್ನು ಕಂದೀಲಿನತ್ತ ಸರಿಸಿ ಅದನ್ನೆ ಬಹಳ ಹೊತ್ತು ದಿಟ್ಟಿಸಿದ.

ಯೋಚನೆಗೆ ಈಡಾದ ಆತನ ಹಣೆ ನೆರಿಗೆಗಟ್ಟಿತು. ಒಂದು ವೇಳೆ ಬೋಪು ದಿವಾನನ ಸಲಹೆ ದುರುದ್ದೇಶದಿಂದ ಕೂಡಿದ್ದರೂ ಅದರ ಸದುಪಯೋಗ ಸಾಧ್ಯವಿರಲಿಲ್ಲವೇನು? ಆ ಸೆರೆಯಿಂದ ಹೊರ ಹೋಗುವುದೇ ಮೊದಲ ಹೆಜ್ಜೆ. ಬಳಿಕ—

ತೀರ್ಮಾನಕ್ಕೆ ಬಂದವನಂತೆ ವೀರರಾಜನೆಂದ:

"ಆಗಲಿ ದಿವಾನರೆ; ತಪ್ಪಿಸಿಕೊಂಡ ಕೈದಿಯಾಗಿ ಯಾತಕ್ಕೆ, ರಾಜನಾಗಿಯೇ ಕಾಶಿಗೆ ಹೋಗ್ತೀವಿ. ದೇವರ ದಯದಿಂದ ಬೇಗನೆ ವಾಪಸು ಬರ್ತೀವಿ. ನಮ್ಮ ರಾಜ್ಯದ ಕೀರ್ತಿಗೆ ತಟ್ಟಿದ ಕಳಂಕವನ್ನು ನಿವಾರಿಸ್ತೀವಿ"

"ಆ ದಿನ ದೂರವಿಲ್ಲ ಮಹಾರಾಜರೆ."

" ಒಂದು ವಿಷಯ. ನಾವು ಹೊರಡೋ ಹೊತ್ತಿಗೆ, ನಮ್ಮ ಮನಸ್ಸಿಗೆ ಸಮಾಧಾನವಾಗೋ ಹಾಗೆ, ತುರಂಗದಲ್ಲಿರೋ ಕೈದಿಗಳನ್ನೆಲ್ಲಾ ಇಂಗ್ಲಿಷರು ಬಿಟ್ಬಿಡ್ಬೇಕು."

" ನಾನು ಪ್ರಯತ್ನಿಸಿ ನೋಡ್ತೀನಿ."

" ಅಷ್ಟು ಮಾಡಿ."

'ಗುಪ್ತವಾಗಿಯೆ' ಅಲ್ಲಿಂದ ಹೊರಬಿದ್ದ ಬೋಪುದಿವಾನ, ನೇರವಾಗಿ ಹೋದುದು ಕೋಟೆಗೆ—ಅರಮನೆಗೆ. ಫ್ರೇಸರ್, ನಿದ್ದೆಗೆಟ್ಟು ಕಾದು ಕುಳಿತಿದ್ದ, ಲೀಹಾರ್ಡಿಯೊಡನೆ. ಬಳಿಗೆ ಬಂದ ದಿವಾನನ ಮುಖದ ಮೇಲೆ ಗೆಲವಿನ ಕಳೆ ಇದ್ದುದನ್ನು ಕಂಡು, ಅವರಿಬ್ಬರಿಗೂ ಹರ್ಷವೆನಿಸಿತು.

ಬೋಪುವಿನ ವರದಿಗೆ ಆ ಆಂಗ್ಲರಿಬ್ಬರೂ ಏಕಾಗ್ರಚಿತ್ತರಾಗಿ ಕಿವಿಗೊಟ್ಟರು.

ಬಹಳ ದಿನ ವೀರರಾಜನನ್ನು ಬಂಧನದಲ್ಲಿರಿಸುವುದು ಸಾಧ್ಯವಿಲ್ಲ ಎಂಬುದನ್ನು ಫ್ರೇಸರ್ ಮನಗಂಡಿದ್ದ. ಯಾತ್ರೆ ಹೊರಡಲು ಅರಸ ಒಪ್ಪಿದುದರಿಂದ, ಆತನ ತಲೆಯ ಮೇಲಿನ ದೊಡ್ಡ ಭಾರವನ್ನು ಕೆಳಕ್ಕೆ ಇಳಿಸಿದಂತಾಯಿತು. ಅಂತಹ ವಾತಾವರಣದಲ್ಲಿ ಬಂದಿಗಳಾಗಿದ್ದ ಸರದಾರರ ಬಿಡುಗಡೆಯೂ ಅಪಾಯಕಾರಿಯಲ್ಲವೆಂದು ಆತನಿಗೆ ತೋರಿತು.

ಫ್ರೇಸರ್ ಹೇಳಿದ:

" ಈ ಏರ್ಪಾಟು ನಮಗೆ ಒಪ್ಪಿಗೆ. ರಾಜರು ಹೊರಡೋದಕ್ಕೆ ಒಳ್ಳೆಯ ದಿನ ಗೊತ್ತುಮಾಡಿ. ಅವರು ಪರಿವಾರ ಸಮೇತ ಹೋಗ್ಬಹುದು. ನಮ್ಮ ಆಕ್ಷೇಪವಿಲ್ಲ. ಬೀದಿಗೆ ಇಳಿದ ಮೇಲೆ ತಂಟೆ ತಕರಾರು ಮಾಡಿದ್ರೇ ಆದರೆ, ಫಿರಂಗಿಗಳಿಂದ ಸುಟ್ಟು ಹಾಕೇವು. ಕುಶಾಲು ನಗರದಲ್ಲಿ ಆಗಬೇಕಾಗಿದ್ದ ಯುದ್ಧ ಈಗ ಆಯ್ತೂಂತ ಭಾವಿಸುತ್ತೇವೆ, ಅಷ್ಟೆ."

" ಘನ ಸರಕಾರಕ್ಕೆ ಏನೂ ತೊಂದರೆಯಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು."

" ಯಾತ್ರೆಯ ವಿಷಯ ಜಾಹೀರು ಮಾಡಿಸಿ. ಕೈದಿಗಳಾಗಿರುವ ಸರದಾರರೆಲ್ಲ ಊರಿನ ಹೊರಗೆ ರಾಜರನ್ನು ಭೇಟಿಯಾಗುತ್ತಾರೆ."

....ವೀರರಾಜ ರಾಣೀವಾಸದೊಡನೆ ಓಂಕಾರೇಶ್ವರ ದೇವಸ್ಥಾನಕ್ಕೆ ಹೋಗಿ, ದೇವರಿಗೆ ನಮಿಸಿ, ಪ್ರಸಾದ ಪಡೆದು ಬಂದ, ಒಳ್ಳೆಯ ಘಳಿಗೆ

ಯಲ್ಲೇ ಯಾತ್ರೆ ಹೊರಟಿತು. ಇನ್ನೂರರಷ್ಟು ಜನರಿದ್ದರು ಒಟ್ಟು. ಕುದುರೆಗಳು, ಹೋರಿಗಳು, ಪಲ್ಲಕ್ಕಿಗಳು....ಮೌನವಾಗಿ ಸಾಗಿದ ಜನರು. ಕೊಂಬು ತಮಟೆ ವಾದ್ಯಗಳಿರಲಿಲ್ಲ. ಪ್ರಜೆಗಳು ಬೀದಿಯುದ್ದಕ್ಕೂ ಇಕ್ಕಡೆ ಗಳಲ್ಲೂ ಸಾಲಾಗಿ ನಿಂತರು. ಸದ್ದಿಲ್ಲದೆ ಕಂಬನಿಗರೆದರು ಎಷ್ಟೋ ಜನ.

ಶವದ ಮೆರವಣಿಗೆಯಂತೆ ರುದ್ರವೂ ಸಂಕಟಕರವೂ ಆಗಿತ್ತು ದೃಶ್ಯ.

ಮಾತು ಹೊರಡದಿದ್ದರೂ ಕೈಮುಗಿದರು ಪ್ರಜೆಗಳು. ಭಾರವಾದ ಹೃದಯದಿಂದ ಪಲ್ಲಕ್ಕಿಯೊಳಗೆ ಕುಳಿತಿದ್ದ ವೀರರಾಜ ಬಾರಿ ಬಾರಿಗೂ ತಲೆ ಯಾಡಿಸುತ್ತಾ ಪ್ರತಿವಂದನೆ ನೀಡಿದ. ಕೆದರಿದ್ದ ತಲೆಗೂದಲು, ತೇವ ತುಂಬಿದ್ದ ಕಣ್ಣುಗಳು, ನಿಸ್ತೇಜವಾಗಿದ್ದ ಮುಖ....

ಫ್ರೇಸರ್, ಅರಮನೆಯ ಉಪ್ಪರಿಗೆಯ ಮೇಲಿನಿಂದ ಕೈಯಲ್ಲಿ ದುರ್ಬೀನು ಹಿಡಿದು ಮೆರವಣಿಗೆಯನ್ನು ನೋಡಿದ – ಸಮಾಧಾನದಿಂದ ಸಂತೋಷದಿಂದ ನೋಡಿದ.

ಊರಹೊರಗೆ ಕಾದಿದ್ದರು ನೂರಾರು ಜನ. ವೀರರಾಜನ ಆಪ್ತ ಕೋಟೆಯವರೂ ಹಲವರು ಅಲ್ಲಿದ್ದರು – ನಂಜಯ್ಯ, ಪುಟ್ಟಬಸವ, ಚೆಟ್ಟಿ ಕುಡಿಯ, ಕರ್ತುಕುಡಿಯ....

ಅಲ್ಲಿ ಸಂಕಟ ಅಳುವಾಯಿತು. ಅಳು ರೋದನವಾಯಿತು.

ವೀರರಾಜನೂ ಎಳೆಗರುವೇ ಆದ.

ಯಾರು ಯಾರನ್ನು ಸಂತೈಸಬೇಕು ?

" ಚೆಟ್ಟಿ, ಕರ್ತು, ಹೀಗಾಯ್ತಲ್ಲಾ !"

ತನ್ನೊಳಗಿನ ದುಗಡವನ್ನು ಹತ್ತಿಕ್ಕುತ್ತಾ ಚೆಟ್ಟಿ ಹೇಳಿದ:

" ಮಹಾರಾಜರು ಕಣ್ಣೀರಿಡಬಾರದು."

ಮೂಗಿನ ಹೊಳ್ಳೆಗಳಿಂದ ಬಿರುಸಾದ ಉಸಿರು ಹೊರಬೀಳುತಿ ದ್ದಂತೆಯೆ ನಂಜಯ್ಯನೆಂದ:

" ನಾವಿನ್ನೂ ಸತ್ತಿಲ್ಲ !"

ಕಂಠ ಬಿಗಿದು ಬಂದು ಒಂದು ಮಾತನ್ನೂ ಆಡುವುದಾಗಲಿಲ್ಲ ಪುಟ್ಟ ಬಸವನಿಂದ. ಆತನನ್ನು ನೋಡುತ್ತ ವೀರರಾಜ ಹೇಳಿದ:

" ಸುಮ್ನೆ ನಿಂತುಕೊಂಡೆಯಲ್ಲ ಪುಟ್ಟಬಸವ...."

ಕುದುರೆಯ ಭುಜದ ಮೇಲೆ ಕೈ ಇರಿಸಿ ಕಡುಬೇಸರದಿಂದ ನೆಲವನ್ನೆ

ನೋಡುತ್ತ ನಿಂತ, ರಾಜರ ಆ ಸ್ನೇಹಿತ.

ಸಾಲು ಮುರಿದುಬೀಳುತಿದ್ದುದನ್ನು ಕಂಡು ದಳಪತಿಯೊಬ್ಬ ನುಡಿದ:

"ಎಲ್ಲರೂ ಅಲ್ಲಲ್ಲೇ ನಿಂತ್ಕೊಳ್ಳಿ! ಯಾರೂ ಗುಂಪು ಕೂಡ್ಬೇಡಿ!"

ಅಷ್ಟರಲ್ಲಿ ಕುದುರೆ ಸವಾರನೊಬ್ಬ ಊರ ಕಡೆಯಿಂದ ಧಾವಿಸಿ ಬಂದ.

"ಏನಪ್ಪಾ?" ಎಂದು ಕೇಳಿದ ವೀರರಾಜ.

"ಬೋಪು ದಿವಾನರು ಕಳಿಸವರೆ. ಯಾತ್ರೆಗೆ ಹೊರಟೋರು ಇಲ್ಲೇ ಯಾಕ್ನಿಂತರೂಂತ ಕರ್ನಲ್ ಸಾಹೇಬರು ಕೇಳಿದರಂತೆ."

ನಂಜಯ್ಯನ ಪಕ್ಕದಲ್ಲಿ ಇದ್ದೊಬ್ಬ ಸರದಾರನು ನುಡಿದ:

"ಮುಚ್ಚು ಬಾಯಿ! ಅವನ್ಯಾವನು ಕೇಳೋಕೆ?"

ದೂತ ಭಯದಿಂದ ಕಂಪಿಸಿದ:

"ಕ್ಷಮಿಸಿ ಒಡೆಯಾ. ಕೋಟೆಯ ಮೇಲೆ ಈ ಕಡೆಗೇ ಮುಖ ಮಾಡಿಸಿ ಫಿರಂಗಿ ನಿಲ್ಲಿಸವರೆ. ಏನಾದರೂ ಅಪಾಯವಾದಾತೂಂತ ತಿಳಿಸೋಕೆ ಬಂದೆ."

ಎಲ್ಲರ ಮೈಯೂ ಜುಮ್ಮೆಂದಿತು ಆ ಕ್ಷಣ. ಅದು ಗದರಿಕೆಯ ಮಾತಾಗಿರಲಿಲ್ಲ. ಕಟು ವಾಸ್ತವತೆಯೇ ಅವರನ್ನು ಅಣಕಿಸುತ್ತಿತ್ತು. ಎಷ್ಟೊಂದು ಸತ್ಯ ದೂತ ಹೇಳಿದ ಮಾತು!

ಕ್ರೋಧದ ಉದ್ವೇಗದಿಂದ ಕಂಪಿಸುತ್ತಿದ್ದ ಧ್ವನಿಯಲ್ಲಿ ನಂಜಯ್ಯನೆಂದ:

"ಆ ಪಾಪಿಗಳು ಏನು ಮಾಡೋದಕ್ಕೂ ಹೇಸಲಾರರು ಮಹಾರಾಜರೆ. ನಾವು ಮುಂದಕ್ಕೆ ಸಾಗೋದೇ ವಾಸಿ."

"ನಡೀರಿ," ಎಂದ ವೀರರಾಜ.

ಯಾತ್ರೆಯ ಉಸ್ತುವಾರಿ ನೋಡುತಿದ್ದ ದಳಪತಿ, ಮುಂಭಾಗಕ್ಕೆ ಕುದುರೆಯೋಡಿಸಿ, ಬಾವುಟ ಚಾಮರಗಳನ್ನು ಹಿಡಿದಿದ್ದ ಭಟರಿಗೂ ಇತರರಿಗೂ ಆದೇಶವಿತ್ತ:

"ಮುಂದಕ್ಕೆ ಹೋಗಿ!"

[....ದುರ್ಬೀನಿನ ಮೂಲಕ ನೋಡುತಿದ್ದ ಫ್ರೇಸರನಿಗೂ ಅನಿಸಿತ್ತು—ಆ ಎಲ್ಲರನ್ನೂ ಅಲ್ಲಿಯೇ ಸುಟ್ಟುಹಾಕುವುದು ಎಷ್ಟು ಸುಲಭ! ಆದರೆ ಹಾಗೆ ಮಾಡುವುದು, ಮೂರ್ಖತನದ ಪರಮಾವಧಿಯಾದೀತೆಂಬುದನ್ನೂ ಆತ ತಿಳಿ

ದಿದ್ದ. ಸಂತಪ್ತ ಜನತೆಯ ಕೈಯಲ್ಲಿ ಸಾವು ಯಾವರೀತಿಯಲ್ಲೂ ಆಕರ್ಷಕ ವಾಗಿರಲಿಲ್ಲ....]

ಮುಂದುವರಿಯುತಿದ್ದ ಆ ಜನರನ್ನು ದಟ್ಟಡವಿ ಸ್ವಾಗತಿಸುತ್ತ, ಅವರಿಗೋಸ್ಕರ ತಾನೇ ಇಬ್ಭಾಗವಾಗಿ ಕಿರುದಾರಿಯನ್ನು ಕಡಿದುಕೊಡುತಿದ್ದಂತೆ ಭಾಸವಾಗುತಿತ್ತು, ಅರಣ್ಯದ ನಡುವಿನ ಅವರ ನಡಿಗೆಯಿಂದ. ಅಷ್ಟೊಂದು ಜನರ ಬಿಸಿಯುಸಿರು – ಮಾತುಗಳೇ, ಶೋಕಸಾಗರದ ಅಲೆಗಳಾಗಿ ಹಸುರು ದಂಡೆಗಳಿಗೆ ಅಪ್ಪಳಿಸುತಿದ್ದುವು.

ಬಿಸಿಲಲ್ಲಿ ಮರಗಳ ತಣುಪಿನಲ್ಲಿ ಮಧ್ಯಾಹ್ನದ ವಿಶ್ರಾಂತಿ. ಬಯಲು ದೊರೆತ ಕಡೆ ರಾತ್ರೆ ವಸತಿ. ತಾತ್ಕಾಲಿಕ ಗೂಡಾರ. ಕಾಡುಮೃಗಗಳು ಬಾರದಂತೆ ಬೆಂಕಿಯ ಕಾವಲು. ಅಡುಗೆ – ಊಟ.

ದಾಸ್ಯದ ಆವರಣವನ್ನು ದಾಟಿ ದೂರ ಬಂದಿದ್ದ ವೀರರಾಜ ಮೆಲ್ಲ ಮೆಲ್ಲನೆ ಚೇತರಿಸಿಕೊಂಡ. ಪ್ರತಿಯೊಂದೂ ಸ್ಪಷ್ಟವಾಗಿ ಆತನಿಗೆ ಕಾಣತೊಡಗಿತು. ತನ್ನ ರಾಜ್ಯಕ್ಕೂ ಪ್ರಜೆಗಳಿಗೂ ತನಗೂ ಒದಗಿದ ದುರ್ಗತಿ; ತಾನು ಕೈಕೊಳ್ಳಬೇಕಾದ ಮುಂದಿನ ಕ್ರಮ; ನಾಳೆಯ ಬಸಿರಲ್ಲಿದ್ದ ಸಾಧ್ಯತೆಗಳು....

ಕೊಡಗಿನ ಎಲ್ಲೆಯನ್ನು ದಾಟಿ, ದಕ್ಷಿಣದ ಪೀಠಭೂಮಿಯನ್ನು ಹಾದು, ದೂರದ ಕಾಶಿಗೆ....

ಅರಸನಿಗೆ ಆತ್ಮೀಯನಾದ ನಂಜಯ್ಯ ಹೇಳಿದ:

"ನೀವು ಸೈ ಎಂದಿದ್ದರೆ ಸಾಕಿತ್ತು. ಕೊಡಗಿನ ಜನರೆಲ್ಲಾ ವಲಸೆ ಹೊರಡ್ತಿದ್ರು, ನಿಮ್ಮ ಹಿಂದೆಯೇ."

ಅದು ನಿಜವೆಂದು ವೀರರಾಜನಿಗೆ ಗೊತ್ತಿತ್ತು. ಎಲ್ಲರೂ ಹೊರಡುವುದಲ್ಲ, ನಾಳೆಯನ್ನು ಇದಿರು ನೋಡುತ್ತ ಅವರೆಲ್ಲ ಅಲ್ಲಿ ಉಳಿಯುವುದೇ ಮುಖ್ಯವಾಗಿತ್ತು ಆತನಿಗೆ.

"ಪುಟ್ಟಬಸವ, ನಂಜಯ್ಯ, ನೀವಿನ್ನು ಬಹಳ ದೂರ ನಮ್ಮ ಜತೆ ಬರಬಾರದು."

"ಇನ್ನೇನು ಮಾಡ್ಬೇಕು?" ಎಂದ ಪುಟ್ಟಬಸವ, ನೊಂದುಕೊಂಡು.

"ನೀವೆಲ್ಲಾ ಬಂದರೆ, ಇಲ್ಲಿ ಜನರಿಗೆ ನಾಯಕತ್ವ ಕೊಡೋರು ಯಾರು? ಇಲ್ಲಿ ಆಗಬೇಕಾದ ಕೆಲಸ ಸ್ವಲ್ಪವೆ? ಆ ಸ್ವಾಮಿಯೋರು ಆವತ್ತು ನಾಲ್ಕುನಾಡಿಗೆ ಬಂದಿದ್ರು. ಅವರೆಲ್ಲಿದ್ದಾರೋ ಹುಡಕಿಸಿ. ಅವರು ಊರಿಂದೂ

ರಿಗೆ ಹೋಗಿ ಜನರನ್ನ ತಯಾರು ಮಾಡ್ತಾರೆ. ಹಾಗೆಯೇ ನಮ್ಮ ದೊಡ್ಡಪ್ಪ ನವರ ಮಕ್ಕಳಿಂದಲೂ ಸಹಾಯವಾದೀತು. ಅವರು ಈಗ ಹಾಲೇರಿಯಲ್ಲಿರ ಬಹುದು."

ಹೃದಯದ ತಳಮಳ ಕಡಮೆಯಾಗಿ ಮೆದುಳು ಚುರುಕಾಗಿದ್ದ ನಂಜಯ್ಯನೆಂದ:

"ಆಗಲಿ ಮಹಾರಾಜರೆ. ಆ ಜವಾಬ್ದಾರಿಯನ್ನೆಲ್ಲ ನಮಗೆ ಬಿಟ್ಟು ಬಿಡಿ. ನಿಮ್ಮನ್ನು ಮೈಸೂರು ಸೀಮೆಯ ಗಡಿದಾಟಿಸಿ ನಾವು ಹಿಂತಿರು ಗ್ತೇವೆ."

"ಹಾಗೇ ಮಾಡಿ."

....ಮುಂದೆ ಪ್ರಯಾಣ.

ಅಗಲುವ ದಿನ ಬಂದಾಗ ಮತ್ತೆ ಮಗುವಾದ ವೀರರಾಜ.

"ಇನ್ನು ನಾವಿಬ್ಬರೂ ಜತೆಯಾಗಿ ಬೇಟೆಯಾಡೋದು ಯಾವತ್ತು ಚೆಟ್ಟಿಕುಡಿಯ? ಹಾರುವ ಹಕ್ಕಿಯ ಕಣ್ಣಿಗೆ ನೀನಿನ್ನು ಗುರಿ ಇಡೋದು ಯಾವತ್ತು?"

ಕಲ್ಲಿನಲ್ಲಿ ಕಡಿದ ವಿಗ್ರಹದಂತೆ ಅಚಲನಾಗಿ ನಿಂತ ಚೆಟ್ಟಿಕುಡಿಯ ಹೇಳಿದ:

"ಆ ಬೋಪು ದಿವಾನನ್ನ ಹಿಡಿದುಕಟ್ಟಿ ಮರಕ್ಕೆ ತೂಗ ಹಾಕಿ ದ್ಮೇಲೆಯೆ ಇನ್ನು ಹಕ್ಕಿಯ ಬೇಟೆ ಮಹಾಪ್ರಭು."

ಪುಟ್ಟಬಸವನೆಂದ:

"ಆ ಬಿಳಿಯರನ್ನೆಲ್ಲ ಚಿಳ್ಳೆಪಿಳ್ಳೆ ಸಹಿತ ದೇಶದಿಂದ ಹೊರಹಾಕಿದ ಮೇಲೆಯೇ ನಮಗಿನ್ನು ವಿಶ್ರಾಂತಿ ಮಹಾರಾಜರೆ."

ಆಪ್ತರಾದ ಹಲವರನ್ನು ಬಿಟ್ಟು ಯಾತ್ರೆ ಮುಂದುವರಿಯುವ ಘಳಿಗೆ ಯಲ್ಲಿ ವೀರರಾಜ ಅಳುಕಿದ.

"ನನಗ್ಯಾಕೋ ಅಂಜಿಕೆಯಾಗ್ತಿದೆ ನಂಜಯ್ಯನವರೆ. ನಾನು ವಾಪಸು ಬರ್ತೇನೋ ಇಲ್ಲವೋ."

ಇಬ್ಬರು ಮೂವರು ಒಂದೇ ರೀತಿಯ ಉತ್ತರವಿತ್ತರು:

"ದಯವಿಟ್ಟು ಅಂಥ ಮಾತು ಆಡ್ಬೇಡಿ!"

....ವೀರರಾಜನ ಆಪ್ತಸರದಾರರು ಹಲವರು ಗುಡ್ಡದ ಮೇಲೆ ಹಿಂದೆ

ನಿಂತರು. ರಾಜರ ಪರಿವಾರ ಕಣಿವೆಯ ಹಾದಿಯಾಗಿ ಇಳಿದು, ಇರುವೆಯ ಸಾಲಿನಂತೆ ಮತ್ತೆ ಕಾಡಿನ ಬಿಲ ಸೇರಿತು.

....ಇತ್ತ ಫ್ರೇಸರ್ ಹೆಚ್ಚು ಸರಾಗವಾಗಿ ಉಸಿರಾಡತೊಡಗಿದ. ಬೋಪುದಿವಾನನ್ನೆ ಮುಂದಿರಿಸಿಕೊಂಡು ಕೊಡಗಿನ 'ಪ್ರಮುಖ'ರ ಸಭೆಯೊಂದನ್ನು ಕರೆಸಿದ ಆತ. ಇಂಗ್ಲಿಷರು ಅಲ್ಲಿಯೇ ಇದ್ದು ಆಳಬೇಕೆಂಬುದು ಪ್ರಜೆಗಳ ಅಪೇಕ್ಷೆ – ಎಂದು ಕೆಲವರಿಂದ ಭಾಷಣ ಕೊಡಿಸಿದ!

ಫ್ರೇಸರನೆಂದ:

"ನಿಮ್ಮ ಅಭಿಪ್ರಾಯವನ್ನು ಮೀರುವುದು ನಮಗೆ ಇಷ್ಟವಿಲ್ಲ. ಒಂದು ಇಸ್ತಿಹಾರು ಹೊರಡಿಸಿ, ನಿಮ್ಮ ಹಿತರಕ್ಷಣೆಗಾಗಿ ಲೀಹಾರ್ಡಿಯವರನ್ನು ಇಲ್ಲಿ ಬಿಟ್ಟು ನಾವು ಮೈಸೂರಿಗೆ ಹೋಗುತ್ತೇವೆ."

ಕುಂಪಣಿ ಸರಕಾರದ ಇಸ್ತಿಹಾರು ಸಿದ್ಧವಾಯಿತು.

ಎಂತಹ ಒಕ್ಕಣೆ!

'ಕೊಡಗು ದೇಶದ ನಿವಾಸಿಗಳು, ಬ್ರಿಟಿಷ್ ಸರಕಾರದ ಅಧೀನದಲ್ಲಿರಬೇಕೆಂದು ಏಕಮತಸ್ಥರಿಗಾಗಿ ಇಷ್ಟಪಡುವುದರಿಂದ, ವೀರರಾಜೇಂದ್ರ ಒಡೆಯರಿಂದ ಆಳಲ್ಪಡುತ್ತಿದ್ದ ಈ ದೇಶವನ್ನು ಘನಉಳ್ಳ ಕುಂಪಣಿ ಸರಕಾರದ ತಾಬೆಗೆ ವರ್ಗ ಮಾಡಲು ಇಂಡಿಯಾ ದೇಶದ ಗವರ್ನರ್ ಜನರಲ್ ಸಾಹೇಬರವರು ಸಂತೋಷಪಡುತ್ತಾರೆ.

'ಈ ದೇಶದ ನಿವಾಸಿಗಳನ್ನು ಪುನಹ ಸ್ವದೇಶೀ ರಾಜರ ಆಳ್ವಿಕೆಗೆ ಬಿಟ್ಟುಕೊಡುವುದಿಲ್ಲವಾಗಿಯೂ ಇವರ ಮುಲ್ಕಿ ಮತ್ತು ಮತ ಸಂಬಂಧವಾದ ಎಲ್ಲಾ ಪದ್ಧತಿಗಳನ್ನು ಬಹುಮಾನದಿಂದ ಅಂಗೀಕರಿಸಲ್ಪಡುವುದಾಗಿಯೂ ಮತ್ತು ಇವರ ಭದ್ರತೆ ಸುಖಕ್ಷೇಮಗಳನ್ನು ಹೆಚ್ಚಿಸಲು ಬ್ರಿಟಿಷ್ ಸರಕಾರದವರು ಯಾವಾಗಲೂ ಸಂತೋಷ ಪಡುವರಾಗಿಯೂ ಇದರ ಮೂಲಕ ಖಂಡಿತವಾಗಿ ತಿಳಿಸಲ್ಪಟ್ಟಿದೆ.

ಮಡಿಕೇರಿ ಜೆ. ಎಸ್. ಫ್ರೇಸರ್'

* * * *

ಕಂಠಪಾಠವಾಗಿದ್ದ ಇಸ್ತಿಹಾರಿನ ಒಕ್ಕಣೆಯನ್ನು ನೆರೆದಿದ್ದವರೆದುರು ಹೇಳಿ ಮುಗಿಸಿ ನಂಜಯ್ಯನೆಂದ:

"ಕೇಳಿದಿರೇನಪ್ಪೋ. ನಮ್ಮ ಭದ್ರತೆ ಸುಖಕ್ಷೇಮಗಳನ್ನು ಹೆಚ್ಚಿ

ಸೋಕೆ ಬ್ರಿಟಿಷ್ ಸರಕಾರದವರು ಯಾವಾಗಲೂ ಸಂತೋಷಪಡ್ತಾರೆ!"

ತಲೆಯಾಡಿಸುತ್ತ ಮುಷ್ಟಿಯ ಬಿಗಿಸುತ್ತ ಸೋಮಯ್ಯನೆಂದ:

"ನೀಚರು! ವಂಚಕರು! ಪಾಪಿಗಳು!"

ಗುಂಪಿನಲ್ಲಿದ್ದೊಬ್ಬನೆಂದ:

"ಆಮೇಲೆ ಏನಾಯ್ತು? ಮಹಾರಾಜರು ಈಗೆಲ್ಲಿದಾರೆ? ನಮ್ಮ ಸೈನ್ಯ ಎಲ್ಲಿದೆ? ಏಳುಸಾವಿರ ಸೀಮೆಯವರು, ಮಡಿಕೇರಿನಾಡಿನವರು, ಎಲ್ಲಾ ಏನು ಹೇಳ್ತಾರೆ?"

ಸೋಮಯ್ಯನೂ ಧ್ವನಿ ಕೂಡಿಸಿದ.

"ನೀವು ಮೊದಲೇ ಇಲ್ಲಿಗೆ ದೂತರನ್ನು ಕಳಿಸ್ಬೇಕಾಗಿತ್ತು. ಹೀಗೆಲ್ಲಾ ಆಗಿರೋ ಸಮಾಚಾರ ಸ್ವಲ್ಪವಾದರೂ ನಮಗೆ ತಿಳಿದಿದ್ದರೆ...."

ನಾಭಿಯಿಂದಲೆ ಹೊರಟಂತಿದ್ದ ಆಳವಾದ ಸ್ವರದಲ್ಲಿ ಕರಿಯಪ್ಪನೆಂದ:

"ಈಗಲೂ ತಡವೇನೂ ಆಗಿಲ್ಲ. ಸ್ವಾತಂತ್ರ್ಯ ಸಂಪಾದನೆಯ ಕೆಲಸದಲ್ಲಿ ತಡ ಅನ್ನೋದೇ ಇಲ್ಲ. ಹೇಳಿ, ಏನಾಯ್ತೂಂತ, ಏನೇನು ತಯಾರಿ ಆಗಿದೇಂತ, ಸೂಕ್ಷ್ಮವಾಗಿ ಹೇಳಿ."

ನಂಜಯ್ಯ ಸುಮ್ಮನಿದ್ದುದನ್ನು ಗಮನಿಸಿದ ಪುಟ್ಟಬಸವ ಮಾತನಾಡಿದ. ಕೆಂಡಗಳ ಮೇಲಿದ್ದ ಬೂದಿಯನ್ನು ಬದಿಗೆ ಸರಿಸುತ್ತ ತಂಪಾಗಿ ಬೀಸಿದ ಗಾಳಿಯಂತಿತ್ತು ಆತನ ಧ್ವನಿ. ತೂಗಿ ತೂಗಿ ನಿಧಾನವಾಗಿ ಉಚ್ಚರಿಸುತಿದ್ದ ಪದಗಳು. ಪ್ರತಿಯೊಂದೂ ಪರಿಣಾಮಕಾರಿ. ಕವಣೆ ಬೀಸಿ ಬೀಸಿ ಗುರಿಗೇ ತಗುಲುವಂತೆ ಕಲ್ಲೆಸೆವ ಹಾಗೆ.

"ಕೇಳಿ. ಮುಂದಿನದೆಲ್ಲ ಚುಟುಕು ಕಥೆಯೇ. ವಿವರವಾಗಿ ಹೇಳೋದಕ್ಕೆ ಇದೆಯಾದರೂ ಏನು? ಊರಿಗೇ ಬೆಂಕಿ ಬಿದ್ದು ಮನೆ ಮಠ ಉರಿದ್ಮೇಲೆ ಏನು ಉಳಿಯಿತೂಂತ ಹೇಳೋಕೆ ಹೆಚ್ಚು ಹೊತ್ತು ಬೇಕೆ? ಸರಪಳಿ ಹಾಕಿ ಬಿಗಿದ ಮನುಷ್ಯನನ್ನ ಕೆಳಕ್ಕೆ ಕೆಡವೋದು ಮಹಾ ಕೆಲಸವೆ? ಬಾಯಿಗೆ ಬಟ್ಟೆ ತುರುಕಿ, ಹುತ್ತರಿ ಹಾಡು ಹೇಳು ಅಂದರೆ—"

## ೫೫

ಕೊಡಗಿನ ಜನರ ಬಾಯಿಗಳಿಗೆಲ್ಲ ಬ್ರಿಟಿಷರು ಬಟ್ಟೆ ತುರುಕಿದರು; ಬಳಿಕ ಬಳಿಯಲ್ಲೆ ನಿಂತು, "ನಾವು ನಿಮ್ಮ ಮಿತ್ರರು. ನಿಮಗೆ ಹಾಡುವ ಸ್ವಾತಂತ್ರ್ಯ ನೀಡಿದೇವೆ. ನೀವು ಹಾಡಬಹುದು!" ಎಂದರು.

ಸ್ವರ ಹೊರಟಿತೋ ಇಲ್ಲವೋ; ಹೊರಗಿನವರಿಗೆ ಅದು ಕೇಳಿಸಿತೋ ಇಲ್ಲವೋ.....

ಬಾಳೊ ಬಾಳೊ ಚಂಜಾವಿ
ಪುತ್ತರಿರ ಜೊಲ್ಲಾಲೆ
ನಾಲ್ ಮೂಂದ್ ಪಾಡನ
ಅಲ್ಲತೊಂದು ಅಲ್ಲಲ....

ಯಾವ ಸುಗ್ಗಿಯ ಸಂಭ್ರಮ? ಯಾವ ಹುತ್ತರಿಯ ಹಾಡು?

ಅರಸುಮನೆತನಕ್ಕೆ ಸಂಬಂಧಿಸಿದ ಪ್ರತಿಯೊಬ್ಬರನ್ನೂ ಬಂಧಿಸಿ ಒಯ್ದರು, ಮೈಸೂರಿಗೆ – ಬೆಂಗಳೂರಿಗೆ. ಜನರನ್ನು ಬಂಡಾಯಕ್ಕೆಂದು ಅಣಿಗೊಳಿಸುತಿದ್ದ ಜಂಗಮ ವೀರ ಬ್ರಿಟಿಷರಿಗೆ ಸೆರೆಸಿಕ್ಕಿದ....

ಕೊಡಗು ಸೇನೆಯನ್ನೆ ವಿಸರ್ಜಿಸುವ ಯೋಜನೆ ಲೀಹಾರ್ಡಿಗಿತ್ತು. ಆದರೆ, ಆ ಯೋಧರನ್ನೆಲ್ಲ ಅವರವರ ಊರುಗಳಿಗೆ, ನಾನಾ ಕಡೆಗಳಿಗೆ, ಹೋಗಲು ಬಿಡುವುದು ಸಾಧ್ಯವಿತ್ತೆ? ಅಂತಹ ವರ್ತನೆಯೆಂದರೆ ಅಪಾಯಕ್ಕೆ ಆಹ್ವಾನ....ಹೀಗೆ, ಸಮಸ್ಯೆಯ ಎಲ್ಲ ಮುಖಗಳನ್ನೂ ಪರಿಶೀಲಿಸಿದ ಬಳಿಕ ಲೀಹಾರ್ಡಿ, ಸೈನ್ಯದ ವಿವಿಧ ತುಕ್ಕಡಿಗಳನ್ನು ಮಡಿಕೇರಿಯಲ್ಲಿಯೇ ಇರಿಸಿ ಕೊಂಡ.

ಆದರೂ ಆತನಿಗೆನಿಸುತಿತ್ತು:

"ನಾನು ಕುಳಿತಿರುವುದು ಜ್ವಾಲಾಮುಖಿಯ ಮೇಲೆಯೇ ಹೊಗೆ ಯಾಡುತ್ತಿರುವ ಅಗ್ನಿ ಪರ್ವತ, ಮಡಿಕೇರಿಯ ಈ ಬೆಟ್ಟ."

ಜನರೊಡನೆ ಲೀಹಾರ್ಡಿಗಿದ್ದ ಕೊಂಡಿ, ವಿನೀತ ಕಿಂಕರ ಬೋಪು ದಿವಾನ. ಈ ದಿವಾನನ ಸ್ನೇಹಿತರು – ಸಂಬಂಧಿಕರಲ್ಲಿ ಹಲವರು, ಆಳುವವರ ನಡೆಗೋಲುಗಳು. ಊರೂರುಗಳನ್ನು ಬಿಗಿಯಿತು ಬೇಹುಗಾರರ ಬಲೆ.

ಒಟ್ಟಿನಲ್ಲಿ, ಸಾರಿಗೆ ಸಂಪರ್ಕಗಳಿದ್ದಲ್ಲಿ ಮಾತ್ರ ಆಂಗ್ಲರ ಆಳ್ವಿಕೆ. ದುರ್ಗಮವಾದ ಕುಗ್ರಾಮಗಳು, ದಟ್ಟಡವಿ ಬೆಟ್ಟ ತಪ್ಪಲುಗಳು, ಪರಕೀಯರ ಹೊಲಸು ಸ್ಪರ್ಶದಿಂದ ಅಪವಿತ್ರವಾಗದೆಯೆ ಉಳಿದುವು.

ಆ ಪವಿತ್ರ ಪ್ರದೇಶಗಳೇ ನೂರಾರು ಸ್ವಾತಂತ್ರ್ಯವೀರರಿಗೆ ಆಶ್ರಯ ನೀಡಿದುವು.

ವೀರರಾಜ ಕಾಶಿ ಸೇರಿದ. ನೆರವಿಗೆ ಬರುವ ಧೀರರು ಇರಲಿಲ್ಲ, ಎಂದಲ್ಲ. ಆದರೆ ಅವರೆಲ್ಲ ಕಂಗೆಟ್ಟಿದ್ದರು. ಕಣ್ಣೀರಿನ ಕಥೆ ಕೊಡಗಿನದೊಂದೇ ಏನು? ಎಲ್ಲ ಕಡೆಗಳಲ್ಲೂ ಅದೇ ರಾಗ, ಅದೇ ಪಲ್ಲವಿ.

" ನೀವು ತಾಳ್ಮೆಯಿಂದಿರಿ. ವ್ಯಾಪಾರಕ್ಕೆಂದು ನಾವೇ ಬರಮಾಡಿಕೊಂಡ ಧೂರ್ತ, ಇಲ್ಲಿಯೇ ಬೀಡು ಬಿಟ್ಟು ರಾಜ್ಯ ರಾಜ್ಯಗಳನ್ನೆ ಕೊಳ್ಳುತಿದ್ದಾನೆ. ನಾವೆಲ್ಲ ಒಂದಾಗಬೇಕು ಈಗ. ಸಮಯ ನೋಡಿಕೊಂಡು ಏಟು ಬಿಗಿಯಬೇಕು."

—" ಏಟು ಹತ್ತು ಕಣಗಳಿಂದ, ಹತ್ತು ಬಾಹುಗಳಿಂದ. ದಾರ ಬಿಚ್ಚಿದ ಅವರ ಗೂಡಾರ, ಗಾಳಿಯಲ್ಲಿ ಚಿಂದಿ ಚಿಂದಿಯಾಗಿ ಹ್ಯಾಗೆ ಹಾರಬೇಕು ಅಂತೀರಿ!"

—" ಎಷ್ಟೊಂದು ಜನ ದ್ರೋಹಿಗಳು ನಮ್ಮಲ್ಲೇ! ಥೂ!"

—" ಒಗ್ಗಟ್ಟು! ಅದೊಂದೇ ಭಾರತೀಯರ ಬೀಜ ಮಂತ್ರವಾಗಬೇಕು. ನಮ್ಮೆಲ್ಲ ಶಕ್ತಿಯನ್ನು ಒಂದುಗೂಡಿಸುವುದು ಸಾಧ್ಯವಾದರೆ ಈಗಲೇ ಈ ಕ್ಷಣದಲ್ಲೇ...."

—" ನಮ್ಮ ಯಾದವೀಕಲಹದಿಂದಲೇ ಈ ಗತಿ ಒದಗಿತು ನಮಗೆ!"

....ವೀರರಾಜ ತನ್ನ ಆಪ್ತರಿಗೆ ಸುದ್ದಿ ಕಳುಹಿದ. ಅದನ್ನು ಹೊತ್ತ ದೂತ ತಿಂಗಳುಗಟ್ಟಲೆಯ ಪ್ರವಾಸದ ಬಳಿಕ ಊರು ಸೇರಿದ.

ಅರಸನ ಆ ಬರೆವಣಿಗೆಯಲ್ಲಿದ್ದ ಮುಖ್ಯಾಂಶವಿಷ್ಟೆ:

" ನೀವು ಧೈರ್ಯದಿಂದಿರಬೇಕು. ತಾಳ್ಮೆಯಿಂದಿರಬೇಕು. ಎಲ್ಲ ವಿಷಯಗಳಿಗೂ ಬರೆಯಿರಿ, ಬರೆದು ತಿಳಿಸಿರಿ."

ಏನೆಂದು ಬರೆಯುವುದು? – ಬರೆದು ತಿಳಿಸುವುದು? ಬೇಸಗೆ, ಮಳೆ, ಚಳಿ – ಒಂದಾದ ಮೇಲೊಂದು ಬಂದು ಹೋಗುತ್ತಿವೆಯೆಂದೆ?

ಹೇಮಂತವನ್ನು ಹಿಂಬಾಲಿಸುವ ವಸಂತ....

ಎಲ್ಲಿತ್ತು ಅದು? ಎಲ್ಲಿ?

ಇವರು ಗೂಢಚಾರರ ಕಣ್ಣು ತಪ್ಪಿಸಿ ಊರೂರು ಸಂಚಾರ ಮಾಡುತಿದ್ದರು. ಕತ್ತಲು ಕವಿದ ಕೊಡಗಿನಲ್ಲಿ ಇವರ ಸಾಹಸದಿಂದಲೆ ನಡೆಯಿತು, ಬೆಳಕು ಹುಟ್ಟಿಸಲೆಂದು ಕಲ್ಲುಗಳ ಚಕಮಕಿ.

ಬೋಪು ಬಳಸಿದ ಪ್ರಚಾರ ಸಾಧನವೂ ಪ್ರಬಲವಾಗಿತ್ತು. ಕೆಲವರೊಡನೆ – 'ಯಾಕೆ ಬೇಕು ಯುದ್ಧ? ಎಷ್ಟೊಂತ ಯುದ್ಧ ಮಾಡಬೇಕು ನಾವು? ಸಾವಿರಾರು ಜನರನ್ನು ಸಾಯಿಸಿ ಒಬ್ಬ ರಾಜ ಗದ್ದುಗೆ ಏರಿದರೇನು ಏರದಿದ್ದರೇನು?' ಉಳಿದವರೊಡನೆ – 'ಶಾಂತಿ ನೆಮ್ಮದಿ ಅಲ್ಲವೇನಪ್ಪ ನಮಗೆ ಬೇಕಾದ್ದು? ಮಡಿಕೇರಿಯ ಕೋಟೆಯಲ್ಲಿ ಯಾರಿದ್ದರೆ ನಮಗೇನು? ನಾವು ಯಾವ ತೊಂದರೆಯೂ ಇಲ್ಲದೆ ಉತ್ತು ಬೆಳೆಸಿ ಉಂಡು ಸುಖವಾಗಿದ್ದರಾಯ್ತು.'

ಅಂತಹ ಪ್ರಚಾರವನ್ನೂ ಇದಿರಿಸುತ್ತ, ತಮ್ಮ ಪ್ರಾಣಗಳ ರಕ್ಷಣೆಯನ್ನೂ ಮಾಡಿಕೊಳ್ಳುತ್ತ ಕಾಲ ಕಳೆದರು ವೀರರು ಹಲವರು.

ಅರಸನಿಗೆ ಉತ್ತರವಾಗಿ ಅವರೇನನ್ನು ಬರೆದು ತಿಳಿಸುವುದು ಸಾಧ್ಯವಿತ್ತು? ಆದರೂ, ಸತ್ಯಕ್ಕೇ ಜಯ ಸಿದ್ಧ–ಎಂಬ ದೃಢವಾದ ನಂಬುಗೆ ಅವರಿಂದ ಒಕ್ಕಣೆ ಬರೆಸಿತು:

"ನಮ್ಮ ಕೆಲಸ ನಾವು ಮಾಡುತಿದ್ದೇವೆ. ಇನ್ನು ಸ್ವಲ್ಪವೇ ಸಮಯದೊಳಗೆ ನಮ್ಮ ಪ್ರಯತ್ನ ಒಂದು ಮಟ್ಟಕ್ಕೆ ಬರುತ್ತದೆ. ಆಗ ಹೊರಟು ಬರಲು ತಾವು ಸಿದ್ಧರಾಗಿರಬೇಕು."

ಅವರ ಕೆಲಸ ಅವರು ಮಾಡಿದರು. ಪ್ರಯತ್ನ ಒಂದು ಮಟ್ಟಕ್ಕೂ ಬಂತು. ಕೊಡಗಿನಾಚೆಗೆ ಬಿಳಿಯರನ್ನು ಹೊಡೆದೋಡಿಸುವುದು ಕಷ್ಟಸಾಧ್ಯವಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು.

ಕೊಡಗರ ಧಮನಿಯಲ್ಲಿ ಹರಿಯುವುದು ವೀರರಕ್ತವೇ ಅಲ್ಲವೇನು? ಅವರ ಪೀಚೆಕತ್ತಿ ಬರಿಯ ಅಲಂಕಾರಕ್ಕೆಂದು ಹೇಳಿದವರು ಯಾರು? ಅವರ ಬಿಚ್ಚುಗತ್ತಿಯು ಅಲಗು ಎಂದು ಮೊಂಡಾಯಿತು? ಅವರು ಗುಲಾಮಗಿರಿಯನ್ನೆ ಅಪ್ಪಿಕೊಳ್ಳ ಬಯಸುವ ಕ್ಷುದ್ರ ಜೀವಿಗಳೆ? ಜನಾಂಗದ ಪ್ರಾತಿನಿಧ್ಯವನ್ನು ನಾಲ್ಕು ಜನ ದ್ರೋಹಿಗಳಿಗೇ ಯಾರು ಗುತ್ತಿಗೆ ಕೊಟ್ಟಿದ್ದಾರೆ? ಹೆತ್ತ ತಾಯಿಯನ್ನೆ ಬೀದಿಗಿಳಿಸಿ ಮೂರು ಕಾಸಿಗೆ ಮಾರುವ ಈ ನರಹುಳುಗಳು—....

"ನಿಲ್ಲಿಸಿ ಪುಟ್ಟಬಸಪ್ಪೋರೆ! ನಿಲ್ಲಿಸಿ!"

ತನ್ನ ತೋಳನ್ನು ಗಾಳಿಯಲ್ಲಾಡಿಸುತ್ತ ಸೋಮಯ್ಯ ಹಾಗೆ ಕೂಗಾಡಿದ.

ಪುಟ್ಟಬಸವ ಕಂಪಿಸುತ್ತಿದ್ದ ಧ್ವನಿಯಲ್ಲಿ, ಪ್ರೈಮಾಕಿತು, ಆಡುತ್ತಿದ್ದ ಮಾತುಗಳಿಂದ ಎಲ್ಲರಿಗೂ ರೋಮಾಂಚನವಾಯಿತು. ಅಸಹನೆಯಿಂದ ಪ್ರತಿಯೊಬ್ಬರ ನರನಾಡಿಗಳೂ ಬಿಸಿ ಏರಿದುವು. ಸ್ಫುರಿಸಿದುವು ಬಾಹುಗಳು. ರಕ್ತದ ಒತ್ತಡದಿಂದ ಕಣ್ಣುಗಳು ಕೆಂಪಡರಿದುವು....

ಒಮ್ಮೆಲೆ ಪುಟ್ಟಬಸವ ಮಾತು ನಿಲ್ಲಿಸಿದ. ಉಸಿರಿಗಾಗಿ ಚಡಪಡಿಸಿದಂತೆ ಅಗಲವಾದ ಆತನ ಎದೆ, ಮೇಲಕ್ಕೂ ಕೆಳಕ್ಕೂ ಏರಿ ಇಳಿಯಿತು.

ಮೆಲುಧ್ವನಿಯಲ್ಲಿ ನಿಧಾನವಾಗಿ ಮಾತು ಆರಂಭಿಸಿದ ಆತ, ಹೆಜ್ಜೆ ಹೆಜ್ಜೆಗೂ ಪದಗಳನ್ನು ತೀವ್ರಗೊಳಿಸುತ್ತ, ತೀಕ್ಷ್ಣಗೊಳಿಸುತ್ತ, ಊರ್ಧ್ವಮುಖವಾಗಿ ಸಾಗಿದ್ದ. ಮಾತು ಮಿಂಚಾಗಿತ್ತು, ಕಣ್ಣು ಕೋರೈಸುವಂತೆ. ಝಗ್ಗನೆ ಕಾಡುಗಳನ್ನು ದಹಿಸಿತ್ತು. ಗಿರಿಕಂದರಗಳನ್ನು ಬೆಳಗಿತ್ತು. ಕಿಡಿಯನ್ನು ಪ್ರಜ್ವಲಿಸಿತ್ತು, ಕೇಳುತಿದ್ದ ಪ್ರತಿಯೊಬ್ಬರ ಹೃದಯಗಳಲ್ಲೂ.

ಗಂಟಲಿನಿಂದ ದಪ್ಪನೆಯ ಸ್ವರ ಹೊರಡಿಸುತ್ತ ಕರಿಯಪ್ಪನೆಂದ:

"ಇನ್ನು ಸಾಕು! ಈಗ ಆಗಬೇಕಾದ್ದೇನು? ಹೇಳಿ!"

ಎಲ್ಲರ ಮನಸ್ಸಿನೊಳಗೂ ರೂಪುಗೊಂಡಿದ್ದ ಮಾತು ಅದೇ – ಆ ಪ್ರಶ್ನೆಯೇ.

ಪುಟ್ಟಬಸವನ ಮುಖ ಪ್ರಸನ್ನವಾಯಿತು. ತುಟಿಗಳ ಮೇಲೆ ಸಂತೃಪ್ತಿಯ ಸಮಾಧಾನದ ಮುಗುಳು ನಗೆ ಮೂಡಿತು. ಎದುರಿಗಿದ್ದ ಎಲ್ಲರನ್ನೂ ಆತ್ಮೀಯ ಭಾವದಿಂದ ನೋಡುತ್ತ, ಗೋಡೆಗೊರಗಿ, ಆಗಲೆ ಬಲು ಎತ್ತರಕ್ಕೆ ಏರಿದ್ದ ಚಂದ್ರನತ್ತ ಆತ ಮುಖ ಮಾಡಿದ.

ಅಲ್ಲಿಯೇ ಗೋಡೆಯಾಚೆಗೆ ತಾಯಿಯೂ ತನ್ನಾಕೆಯೂ ಕುಳಿತಿದ್ದುದರ ಅರಿವಿತ್ತು ಪುಟ್ಟಬಸವನಿಗೆ. ನಂಜಯ್ಯನ, ತನ್ನ, ಮಾತುಗಳಿಂದ ಅವರ ಮೇಲೆ ಆಗುತಿದ್ದ ಪರಿಣಾಮವನ್ನು ಆತ ಊಹಿಸಿಕೊಂಡಿದ್ದ.

ಆ ತಾಯಿ ಮತ್ತು ಆಕೆಯ ಸೊಸೆ....

ಕೇಳುತ್ತ ಕೇಳುತ್ತ ಅವರ ಕಣ್ಣುಗಳೂ ತೇವವಾಗಿದ್ದುವು; ಉರಿಕಾರಿದ್ದುವು. ವೇಗವಾಗಿ ರಕ್ತಸಂಚಾರವಾಗಿತ್ತು. ಮನೆಗೆ ಮರಳಿದ

ಮಗನಿನ್ನು ಬಹಳ ದಿನ ಅಲ್ಲಿರುವುದಿಲ್ಲವೆಂದು ತಾಯಿಯಾಗಲೇ ಮನಗಂಡಿದ್ದಳು. ಗಿರಿಜವ್ವನಿಗೆ ಅನಿಸಿತ್ತು–ಆಕೆಯ ಗಂಡ ಬೇಗನೆ ಅಲ್ಲಿಂದ ಹೊರಡಬಹುದೆಂದು. ಆ ಯೋಚನೆಯಿಂದ ಇಬ್ಬರಿಗೂ ಸಂಕಟವೆನಿಸಿತ್ತು. ಎರಡು ಹೃದಯಗಳೂ ತೀವ್ರಗತಿಯಿಂದ ಹೊಡೆದುಕೊಂಡಿದ್ದುವು.

ಕುಡಿಯರಿಬ್ಬರೂ ನಿಶ್ಚಲರಾಗಿ ಕುಳಿತಿದ್ದರು. ಕರ್ತುನ ದೃಷ್ಟಿಯೇನೊ ಅಲ್ಲಿನ ಆವರಣವನ್ನು ಹಾದು, ಮರಗಳ ಕೆಳಗಿನ ನೆಳಲು ಬೆಳಕುಗಳತ್ತ ಹರಿದಿತ್ತು. ಅದು, ಯಾವುದನ್ನೊ ಧ್ಯಾನಿಸುತ್ತ ಆಸಕ್ತವಾಗಿದ್ದ ನೋಟವೇ. ಸಂಜೆಗೆ ಮುಂಚೆ ಕಾಂತಿಹೀನವಾಗಿದ್ದ ಚೆಟ್ಟಿಯ ಕಣ್ಣುಗಳಂತೂ ಈಗ ಲವಲವಿಕೆಯಿಂದ ಮಿನುಗುತಿದ್ದುವು.

ಪುಟ್ಟಬಸವ ಮೌನವಾಗಿದ್ದುದನ್ನು ಗಮನಿಸಿ ನಂಜಯ್ಯ ನುಡಿದ:

"ಆಗಬೇಕಾದ್ದು ಏನು ಎಂತಲೆ? ಹುಂ! ನೀವೇ ಹೇಳಿ, ಏನಿದ್ದೀತು? ....ಯಾಕೆ? ಸುಮ್ಮನಿದೀರಲ್ಲ....ಅದೇನು ಅಂತ ಬಾಯಿಬಿಚ್ಚಿ ಹೇಳದೆಯೇ ನಮಗೆಲ್ಲಾ ಗೊತ್ತಿದೆ, ಅಲ್ಲ? ನನಗೆ ನಿಮಗೆ ಪ್ರತಿಯೊಬ್ಬರಿಗೆ: ಮನೆಗೆ ಮಾರಿ ಹೋದ್ಮೇಲೆ ಏನು ಮಾಡ್ಬೇಕು? ಹೇಳಿ!"

ಕರಿಯಪ್ಪನೆಂದ:

"ಆ ಮಾರಿಯನ್ನು ಹಿಡಿದು ಕಟ್ಟಿ ಊರಿನ ಹೊರಗೆ ಸಿಗಿದು ತೂಗಹಾಕ್ಬೇಕು!"

ಸೋಮಯ್ಯನೂ ಹೇಳಿದ:

"ದ್ರೋಹಿಗಳನ್ನು ಹಿಡಿದು ಕುದಿಯೋ ಎಣ್ಣೇಲಿ ಅದ್ಬೇಕು."

ಆ ಮಾತುಗಳಿಗೆಲ್ಲ ಉತ್ತರವೆಂಬಂತೆ ನಂಜಯ್ಯನೆಂದ:

"ನಾನು ಹೇಳ್ಲಿಲ್ವೆ ಆಗಲೆ? ಆಗಬೇಕಾದ್ದೇನೂಂತ ಪ್ರತಿಯೊಬ್ಬರಿಗೂ ಗೊತ್ತಿದೆ. ಎಳೇ ಮಕ್ಕಳೂ ಈ ಪ್ರಶ್ನೆಗೆ ಉತ್ತರ ಕೊಡೋದು ಖಂಡಿತ!"

ಅನಂತರ, ಮಾತಿನ ಅಗತ್ಯವೇ ಇನ್ನಿಲ್ಲವೆಂದು ನೆಲೆಸಿದ ಮೌನವನ್ನು ಮುಕ್ತಾಯಗೊಳಿಸುತ್ತ ಪುಟ್ಟಬಸವ, ಮೊದಲಿನಂತೆಯೇ ಮತ್ತೆ ಬಲು ನಿಧಾನವಾದ ಸ್ವರದಲ್ಲಿ ನುಡಿದ:

"ನಮ್ಮ ತಯಾರಿ ಪೂರ್ತಿಯಾಗೋಕೆ ಇನ್ನೂ ಸ್ವಲ್ಪ ಸಮಯ ಬೇಕು. ಒಮ್ಮೆ ಊರು ಬಿಟ್ಮೇಲೆ ಜಯಗಳಿಸಿಯೇ ನಮ್ಮ ವೀರರು ಹಿಂತಿರುಗ್ಬೇಕು. ಹೇಳಿ, ಹೊರಬೀಳೋದು ಯಾವಾಗ ಅನುಕೂಲ?"

ಉತ್ತರ ತಡವಾಗಲಿಲ್ಲ.

"ಯಾವಾಗ ಎಂದೇನು? ಇವತ್ತು ಅಂದರೆ ಇವತ್ತೇ!" ಎಂದ ಸೋಮಯ್ಯ.

ಪುಟ್ಟಬಸವ ನಸುನಕ್ಕ.

"ಈ ವಿಷಯ ಪ್ರಸ್ತಾಪ ಮಾಡಿದ ಕಡೇಲೆಲ್ಲಾ ನಮಗೆ ಸಿಕ್ಕಿರೋದು ಇಂಥದೇ ಉತ್ತರ!"

ನಂಜಯ್ಯನೆಂದ:

"ಇಲ್ಲಿ ಕೇಳಿ ಸೋಮಯ್ಯನವರೆ. ಇನ್ನೇನು ಹಾಹಾ ಅನ್ನೋದರೊಳಗೆ ಸುಗ್ಗಿ ಬರ್ತೈತೆ. ಕುಯಿಲು ಮುಗಿಸಿ, ಹೊಸ ಅಕ್ಕೀನ ಕಣಜಕ್ಕೆ ಸೇರಿಸಿ, ಎಲ್ಲರೂ ಹೊರಟರಾಯ್ತು. ಮುಂದಿನ ಸಾಗುವಳಿ ಹೊತ್ತಿಗೆ, ಕೆಲಸ ಮುಗಿಸಿ, ನಮ್ಮ ನಮ್ಮ ಊರಿಗೆ ನಾವು ವಾಪಸಾಗ್ಬೇಕು. ಹೌದೋ, ಅಲ್ಲವೋ?"

"ಅಹ್ದುರಿ."

ಪುಟ್ಟಬಸವನ ಶಾಂತವಾದ ಸ್ವರ ಮತ್ತೆ ಕೇಳಿಸಿತು:

"ನಾವೂ ನಮ್ಮ ಗೆಳೆಯರೂ ಒಂದು ಮಾತು ಎಲ್ಲರಿಗೂ ಹೇಳ್ತಾ ಬಂದಿದೀವಿ. ಯಾರು ಯಾರು ಹೋಗ್ಬೇಕೂಂತ ಊರಿನವರು ಆರಿಸೋದು ವಾಸಿ. ನಮ್ಮ ಹೆಂಗಸರು ಮಕ್ಕಳನ್ನು ಅನಾಥರಾಗಿ ಮಾಡಿ ನಾವು ಊರು ಬಿಡಬಾರದು. ಗಂಡಸರಿಲ್ಲದ ಸಮಯದಲ್ಲಿ ಲೂಟಿ ದರೋಡೆ ಮಾಡೋ ಜನರಿಗೇನೂ ಬರಗಾಲ ಇಲ್ಲ. ಇದನ್ನು ನಾವು ಮರೀಬಾರದು."

ಆ ವಿಚಾರಸರಣಿಯನ್ನು ಕರಿಯಪ್ಪ ಸಮರ್ಥಿಸಿದ:

"ಸರಿ ಹೇಳಿದಿರಿ ಅಣ್ಣ. ಹಂಗೇ ಮಾಡಾನ."

....ಸಭೆ ಮುಗಿಯಿತಿನ್ನು; ಪುನಃ ಯುದ್ಧವೇ–ಎಂದುಕೊಂಡಳು ಗಂಗವ್ವ. ಹೆತ್ತವಳ ಸಂಕಟ ನಿನಗೇನಾದರೂ ಅರ್ಥವಾಗುತ್ತಿದೆಯೇ, ಎಂದು ಪ್ರಶ್ನಿಸುವ ನೋಟದಿಂದ ಗಿರಿಜವ್ವನನ್ನು ಆಕೆ ನೋಡಿದಳು.

ಗಿರಿಜೆಗೆ ಸಂತೋಷವಾಗಿತ್ತು, ತನ್ನ ಕೈಹಿಡಿದ ಗಂಡಸು ವೀರನೆಂದು. ಆ ಸ್ವರವೋ? ಕೊಳಲಧ್ವನಿಗಿಂತಲೂ ಇಂಪು; ಸಿಡಿಲಿನಂತೆ ಕರ್ಣಕಠೋರ. ಆತ ಮಾತನಾಡಿದಾಗ ಮನುಷ್ಯರಷ್ಟೇ ಅಲ್ಲ, ಮರಗಿಡಗಳೂ ಮೃಗಗಳೂ ಮೌನವಾಗಿ ಕಿವಿಗೊಡುತಿದ್ದುವೇನೋ ಎನಿಸಿತು. ಅದು ಹಾಳು

ಹರಟೆಯಲ್ಲ ; ದೇಶದ ಭವಿಷ್ಯತ್ತನ್ನೆ ನಿರ್ಧರಿಸುವ ಸಂಭಾಷಣೆ....

ಗಿರಿಜವ್ವ ದೃಷ್ಟಿ ಎತ್ತಿ ಅತ್ತೆಯತ್ತ ನೋಡಿದಳು. ಇನ್ನು—

"ಇಲ್ಲಿ ಇನ್ನೆಷ್ಟು ದಿವಸ ಇರ್ತೀರಾ ?"

ಸೋಮಯ್ಯನ ಆ ಪ್ರಶ್ನೆಯನ್ನು ಕೇಳಿ, ಗಂಗವ್ವನೂ ಗಿರಿಜೆಯೂ ಕಿವಿ ನಿಗುರಿಸಿ ಉತ್ತರಕ್ಕಾಗಿ ಕಾದರು.

ಪುಟ್ಟಬಸವನೆಂದ :

"ಅಮರಸುಳ್ಯ ಪಾಗಕ್ಕೆ ಅವಕ್ಕೆ ದೂತರನ್ನ ಕಳಿಸಿದ್ವಿ. ಅಲ್ಲಿಂದ ಸುದ್ದಿ ಬಂದ ತಕ್ಷಣ ಬೇಂಗುನಾಡು ತಾವುನಾಡುಗಳ ಕಡೆಗೆ ಹೋಗ್ತೀವಿ. ಅದೇ ಕಡೆಯ ಸಂಚಾರ. ಆಮೇಲೆ....ಅರ್ಥವಾಯ್ತು ತಾನೆ ?"

"ತಿಳಯಿತಣ್ಣಾ," ಎಂದ ಕರಿಯಪ್ಪ.

ಸೋಮಯ್ಯನೆಂದ :

"ನಾವು ಕಾದಿರ್ತೀವಿ."

ಮಾತು ಒಂದು ಘಟ್ಟಕ್ಕೆ ಬಂತೆಂದು ಕುಳಿತವರ ಮೈಗಳು ಅಲು ಗಿದುವು.

"ಹೊತ್ತು ಬಹಳವಾಯ್ತು. ಇನ್ನು ಹೋಗಿ. ಎಲ್ಲರ ಊಟವೂ ತಣ್ಣಗಾಗಿರ್ತೀತೆ ಇಷ್ಟೊತ್ತಿಗೆ," ಎಂದ ನಂಜಯ್ಯ.

"ತಾಳಗರಿ ಬೇಕೇನಪ್ಪ ? ದೀವಟಿಗೆ ಹಚ್ಕೊತೀರಾ ?" ಎಂದು ಕೇಳಿದ ಪುಟ್ಟಬಸವ.

"ಇಷ್ಟೊಂದು ತಿಂಗಳ ಬೆಳಕಿರೋವಾಗ ದೀವಟಿಗೆ ಯಾಕೆ ?" ಎನ್ನುತ್ತ ಸೋಮಯ್ಯನೆದ್ದ.

ಜನ ಏಳುತ್ತಿದ್ದುದನ್ನು ಕಂಡು ಕುದುರೆಗಳು 'ಹಿ ಹಿ ಹಿ' ಎಂದು ಕೆನೆದುವು.

ಕುದುರೆಗಳನ್ನು ಕುರಿತು ನಂಜಯ್ಯನೆಂದ :

"ಇನ್ನೂ ಸ್ವಲ್ಪ ದಿವಸ ಹೊರಡೋದಿಲ್ಲ. ಅಷ್ಟರ ವರಗೆ ಮಜ ವಾಗಿರಿ !"

ಆ ಮಾತು ಕೇಳಿ ಕೆಲವರು ನಕ್ಕರು.

ನಂಜಯ್ಯನ ಸ್ವರವನ್ನು ಗುರುತಿಸಿದ ಆತನ ಕುದುರೆ, ಮತ್ತೊಮ್ಮೆ 'ಹಿ ಹಿ ಹಿ' ಎಂದಿತು.

೭

ನಡುಮನೆಯಲ್ಲಿ ಗಿರಿಜವ್ವ, ಗಂಡನಿಗೂ ಆತನ ಗೆಳೆಯರಿಗೂ ಊಟ ಬಡಿಸಿದಳು. ರಾತ್ರಿಯ ಊಟ ಎಂದಿನಂತೆಯೆ. ಅಕ್ಕಿಯ ರೊಟ್ಟಿ. ಸಂಜೆಯೆ ಮಾಡಿದ್ದುದರಿಂದ ಅದು ತಣ್ಣಗಾಗಿತ್ತು. ಆದರೆ, ಕೆಂಡದ ಮೇಲೆ ಇರಿಸಿದ್ದ ಪಲ್ಯ ಮಾತ್ರ ಬಿಸಿಯಾಗಿಯೇ ಇತ್ತು. ಅದೇನಿದ್ದರೂ ಆಹಾರ ಹೇಗಿತ್ತೆಂದು ಯೋಚಿಸುವ ಸ್ಥಿತಿಯಲ್ಲಿ ಅವರಿದ್ದರೆ ತಾನೆ? ಆ ಕ್ಷಣದಲ್ಲಿ ಅವರೆಲ್ಲ ಉತ್ಸಾಹಭರಿತರಾಗಿದ್ದರು. ಮನೆಯಂಗಳದಲ್ಲಿ ಜರಗಿದ ಸಭೆಯನ್ನು ಕುರಿತೇ ಮಾತು. ಕರಿಯಪ್ಪನ ಪ್ರಶಂಸೆ. ಹಿರಿಯನಾದ ಸೋಮಯ್ಯನನ್ನು ಕುರಿತು ಗೌರವದ ನುಡಿ.

ಪುಟ್ಟಬಸವನೆಂದ: "ನೀವಿವತ್ತು ಚೆನ್ನಾಗಿ ಮಾತನಾಡಿದಿರಿ ನಂಜಯ್ಯನವರೇ."

ನಂಜಯ್ಯ ನಾಚುವಂತಾಯಿತು.

"ಬಿಡ್ರಪ್ಪ, ಮಾತಿಗೇನು? ನಿಮ್ಮದು ಕಡಮೆಯಾಗಿತ್ತೆ? ಹುಟ್ಟಿದಾಗ್ಲೇ ಬಂದಿರೋ ಶಿವಿ ಗಾಂಭೀರ್ಯ ನನ್ನಲ್ಲಿ ಇದ್ದಾತಾ?"

ಚೆಟ್ಟಿಕುಡಿಯ ಮಾತನಾಡಿದ.

"ಜನ ಒಳ್ಳೆಯೋರು! ರಾಜರಿಗೋಸ್ಕರ ರಾಜ್ಯಕ್ಕೋಸ್ಕರ ಇವರು ಏನು ಮಾಡೋದಕ್ಕೂ ಸಿದ್ಧ."

ಮೌನವಾಗಿಯೇ ಇದ್ದ ಕರ್ತುಕುಡಿಯನನ್ನುದ್ದೇಶಿಸಿ ಪುಟ್ಟಬಸವನೆಂದ:

"ಇಂಥ ಸಾವಿರ ಎರಡು ಸಾವಿರ ಜನ ಇದ್ದರೆ ಇಂಗ್ಲಿಷರನ್ನೋಡಿಸೋದು ಕಷ್ಟದ ಕೆಲಸವಾ ಕರ್ತು?"

"ಒಂದೇ ತಿಂಗಳಲ್ಲಿ ಅದು ಸಾಧ್ಯವಾದ್ದೀತು," ಎಂದ ಕರ್ತುಕುಡಿಯ, ತೂಕಮಾಡಿ ನಿರ್ಧರಿಸಿ ಹೇಳಿದಂತೆ.

ಹೊನ್ನೆಣ್ಣೆಯ ದೀಪ ಧಗಧಗಾಗಿ ಉರಿಯಿತು. ಆ ಬಂಗಾರದ ನಾಲಗೆಯ ನೆರಳು ಗೋಡೆಯ ಮೇಲೆ ಕುಣಿದಾಡಿತು. ಸದ್ದಿಲ್ಲದೆ ಒಮ್ಮೊಮ್ಮೆ ಒಳ ಬರಲು ಯತ್ನಿಸುತಿದ್ದ ಗಾಳಿಯೊಡನೆ ಬೆಳಕು ಕುಸ್ತಿಗೆ ನಿಂತಿತು.

ಗಿರಿಜವ್ವ, ಬರಿದಾಗುತಿದ್ದ ತಟ್ಟೆಯನ್ನು ರೊಟ್ಟಿಗಳಿಂದ ತುಂಬಿದಳು. ಮೂಲೆಯಲ್ಲಿ ಕುಳಿತಿದ್ದ ಗಂಗವ್ವ ಆಗಾಗ್ಗೆ ಸೊಸೆಗೆ ಹೇಳಿದಳು:

"ನೀಡವ್ವಾ. ಇನ್ನೂ ಒಂದಷ್ಟು ನೀಡು."

ಗಂಡಸರ ಮಾತುಕತೆ ಆಕೆಗೆ ಅಪ್ರಿಯವಾಗಿರಲಿಲ್ಲ. ಆದರೂ ಆ ಜೀವದ ಭಾವನೆಗಳೆಲ್ಲ ಅಸ್ಪಷ್ಟವಾದೊಂದು ನೋವಿನ ಮುಸುಕಿನೊಳಗೆ ಆಶ್ರಯ ಪಡೆದಿದ್ದುವು....

.... ಪುಟ್ಟಬಸವ ಗೆಳೆಯರೊಡನೆ ಹೊರಗೆ ವಿಶ್ರಾಂತಿ ಪಡೆಯುತಿದ್ದಂತೆ, ಅತ್ತೆ ಮತ್ತು ಸೊಸೆ ಊಟಮಾಡಿ ಎದ್ದರು.

ಗಂಗವ್ವ ಗಿರಿಜೆಗೆ ಅಂದಳು:

"ನಾನು ಅಡುಗೆಮನೇಲಿ ಮಲಕೋತೀನಿ."

ಸೊಸೆ ಬೇಡವೆನ್ನಲಿಲ್ಲ. ಅಂತಹ ಏರ್ಪಾಟು, ಆ ರಾತ್ರಿಯೇ ಆರಂಭವಾದ ಹೊಸ ಪದ್ಧತಿಯೇನೂ ಆಗಿರಲಿಲ್ಲ.

ಸೆಖೆಗೆ ಜಗಲಿಯೇ ಸರಿ, ಎಂದರು ಗೆಳೆಯರು.

"ನೀವ್ಯಾಕೆ ಬರ್ತೀರಾ ನಮ್ಜತೆಗೆ!" ಎಂದು ನಂಜಯ್ಯ ನಕ್ಕ ಪುಟ್ಟಬಸವನನ್ನು ಕುರಿತು.

.... ಕದವಿಕ್ಕಿ ಬಂದು ಗಿರಿಜ ಗಂಡನ ಜತೆ ಮಲಗಿಕೊಂಡಳು.

ಯಾವ ರೀತಿಯ ಮಾತಿನ ಅಗತ್ಯವೂ ಇದ್ದಂತೆ ಆಕೆಗೆ ತೋರಲಿಲ್ಲ.

ನೀಳವಾದ ಬಾಹು ಆಕೆಯ ದೇಹವನ್ನು ಬಳಸಿತು. ಒಂದು ಯುಗವಾಗಿತ್ತೇನೋ ಆ ಅಪ್ಪುಗೆ ದೊರೆಯದೆ?

ಎಲ್ಲ ಬಯಕೆಗಳೂ ಇಂಗಿದ ಹಾಗೆ—

ಆದರೂ ಗಿರಿಜೆಯ ನಿರ್ಮಲವಾದ ಮನಸಿನಿಂದ ಹೊಸತೊಂದು ಆಸೆ ಮೊಳೆಯಿತು:

ಆ ರಾತ್ರಿ ಬೆಳಗಾಗದೇ ಇರುವುದು ಸಾಧ್ಯವಿದ್ದರೆ? ಸೂರ್ಯೋದಯವೂ ಇಲ್ಲ, ಸೂರ್ಯಾಸ್ತವೂ ಇಲ್ಲ. ಆ ನಿಮಿಷದಿಂದ ಅನಂತದ ವರೆಗೆ ಹಾಗೆಯೇ ಇರುವುದು ಸಾಧ್ಯವಿದ್ದರೆ—

# ಅಮರ ಸುಳ್ಯದಲ್ಲಿ ಕ್ಷೋಭೆಯ ಕಿಡಿ

## ೧

ನಾಲ್ಕೇ ದಿನಗಳಲ್ಲಿ ಹಿಂತಿರುಗಿ ಬರುವೆನೆಂದು ಹೇಳಿ ಪುಟ್ಟಬಸವನೂ ಆತನ ಸ್ನೇಹಿತರೂ ಹೊರಟುಹೋದ ಮಾರನೆಯ ದಿನವೇ ಇಬ್ಬರು ಆ ಹಳ್ಳಿಗೆ ಬಂದರು. ತಮ್ಮ ಮನೆಯ ಕಡೆಗೇ ಬರುತ್ತಿದ್ದ ಅವರನ್ನು ಕಂಡು ಗಿರಿಜವ್ವ ದಿಗಿಲುಗೊಂಡಳು. ಆಕೆಯ ಗಂಡ ಎಚ್ಚರಿಸಿ ಹೋಗಿದ್ದ, ಕುಂಪಣಿ ಸರಕಾರದ ಗೂಢಚಾರರು ಬಂದರೂ ಬರಬಹುದೆಂದು.

ಆ ವ್ಯಕ್ತಿಗಳು ತೀರ ಹತ್ತಿರಕ್ಕೆ ಬಂದಾಗ ಒಬ್ಬನನ್ನು ಗಿರಿಜವ್ವ ಗುರುತಿಸಿದಳು. ಮಾಚಯ್ಯ. ಪುಟ್ಟಬಸವನ ಜತೆ ಹಿಂದೊಮ್ಮೆ ಆತ ಆ ಊರಿಗೆ ಬಂದುದಿತ್ತು. ಆ ಇನ್ನೊಬ್ಬ—

ಅದೆಷ್ಟು ದಿನಗಳಿಂದ ನಡೆದು ಬಂದಿದ್ದರೊ? ಇಬ್ಬರ ಪಾದಗಳೂ ಊದಿಕೊಂಡಿದ್ದುವು. ಜಗಲಿಯ ಮೇಲೆ ಕುಳಿತು, ಉತ್ತರೀಯದಿಂದ ಎದೆಗೆ ಗಾಳಿಹಾಕಿಕೊಳ್ಳತೊಡಗಿದ ಅವರೆದುರು, ಗಿರಿಜವ್ವ ನೀರಿನ ತಂಬಿಗೆ ಇಟ್ಟಳು; ತಟ್ಟೆಯಲ್ಲಿ ಬೆಲ್ಲವಿಟ್ಟಳು.

ತನ್ನ ಗಂಡ ಎಲ್ಲಿ–ಎಂದು ಅವರು ಕೇಳಿದರೆ, ತಾನೇನು ಉತ್ತರ ಕೊಡಬೇಕು, ಎಂಬುದೇ ಗಿರಿಜೆಗೆ ಬಗೆಹರಿಯದೆ ಹೋಯಿತು. ಮನಸಿನೊಳಗಿನ ಆತಂಕವನ್ನು ಮುಚ್ಚಿಕೊಳ್ಳಲೆತ್ನಿಸುತ್ತಾ ಆಕೆ ಕೇಳಿದಳು :

" ಯಾವೂರಿಂದ ಬಂದಿರಿ ?"

" ನನ್ನ ಗುರುತು ಸಿಗಲಿಲ್ವೆ ಅಕ್ಕಾ ?" ಎಂದು ಕೇಳಿದ ಮಾಚಯ್ಯ.

ಮುಗುಳುನಗಲೆತ್ನಿಸುತ್ತಾ ಗಿರಿಜವ್ವನೆಂದಳು :

" ಸಿಗ್ತು."

ತಾನು ಕೇಳಬೇಕೆಂದಿದ್ದ ಪ್ರಶ್ನೆಗೆ ಉತ್ತರ ತಾನಾಗಿಯೇ ಸಿಗುವುದೇನೋ ಎಂದು, ಮನೆಯೊಳಗೂ ಸುತ್ತುಮುತ್ತಲೂ ದೃಷ್ಟಿ ಹಾಯಿಸುತ್ತ, ಮಾಚಯ್ಯ ಹೇಳಿದ :

" ಅಣ್ಣಾನವರು ನನ್ನನ್ನು ಸುಳ್ಯಕ್ಕೆ ಕಳಿಸಿದ್ರು."

[ತನ್ನ ಗಂಡ ದೂತರನ್ನು ಆ ಊರಿಗೆ ಕಳುಹಿದ್ದ ವಿಷಯ ಗಿರಿಜವ್ವನಿಗೆ ಗೊತ್ತಿತ್ತು. ಈತ ತಮ್ಮವನೇ ಹಾಗಾದರೆ.]

ಸುಮ್ಮನಿದ್ದ ಗಿರಿಜವ್ವನನ್ನೆ ದಿಟ್ಟಿಸುತ್ತ ಮಾಚಯ್ಯ ಮಾತು ಮುಂದು ವರಿಸಿದ :

" ಇಬ್ಬರು ಹೋಗಿದ್ವಿ. ಒಬ್ಬ ಅಲ್ಲಿಯೇ ಇದಾನೆ. ಇವರು ರಾಮ ಗೌಡರೂಂತ. ಅಡ್ಕಾರಿನ ಮುಖ್ಯಸ್ಥರು. ಅಣ್ಣನವರ ಭೇಟಿಗೆ ಕರಕೊಂಡು ಬಂದೆ."

" ಯಾರು ಬಂದರು?" ಎಂದು ವಿಚಾರಿಸುತ್ತ ಗಂಗವ್ವನೂ ಸೊಸೆಯ ಹಿಂಬದಿಯಲ್ಲಿ ನಿಂತಳು. ಮನುಷ್ಯ ಆಕೃತಿಗಳು ಅಸ್ಪಷ್ಟವಾಗಿ ಕಾಣಿಸಿದುವೇ ಹೊರತು, ಮಾಚಯ್ಯನ ಗುರುತು ಆಕೆಗೆ ಸಿಗಲಿಲ್ಲ. 'ಸ್ವರವನ್ನೆಲ್ಲೋ ಹಿಂದೆ ಕೇಳಿದ್ದೆ' ಎನಿಸಿತು. ಮಾಚಯ್ಯ ಅದರ ನೆನಪು ಮಾಡಿಕೊಟ್ಟಾಗ "ಸರಿ, ಹೌದು" ಎಂದಳು ಆಕೆ.

ಅಂತೂ, ಈ ಇಬ್ಬರು ಬಂದುದರಿಂದ ತನ್ನ ಗಂಡನಿಗೆ ಯಾವ ಅಪಾಯವೂ ಇಲ್ಲವೆಂದು ಗಿರಿಜೆಗೆ ಸಮಾಧಾನವಾಯಿತು.

ಕೊನೆಗೂ ಮಾಚಯ್ಯನಿಂದ ಪ್ರಶ್ನೆ ಬಂತು :

"ಎಲ್ಲಿ ಅಣ್ಣನವರು ? ಹುಣ್ಣಿಮೆಯ ಹೊತ್ತಿಗೆ ಊರು ಸೇರ್ತೀವಿ ಅಂತ ಹೇಳಿದ್ರು...."

ಈಗ ಹಿಂಜರಿಯದೆ ಗಿರಿಜಾ ಉತ್ತರವಿತ್ತಳು :

" ಬಂದಿದ್ದೋರು ಇಲ್ಲೇ ಹತ್ತಿರ ಎಲ್ಲಿಗೋ ಹೋಗವರೆ. ಶನಿವಾರ ಬರಬೌದು."

" ಇನ್ನೂ ಎರಡು ದಿವಸ ಕಾಯಬೇಕಲ್ಲಾ !" ಎಂದಿತು ರಾಮಗೌಡನ ಸ್ವರ.

ಯಾವುದೋ ಅವಸರದ ಕಾರ್ಯಕ್ಕಾಗಿಯೆ ಅವರು ಬಂದಿದ್ದರೆಂಬುದು ಸ್ಪಷ್ಟವಾಗಿತ್ತು.

ನಡೆದ ಬಳಲಿಕೆ ಇದ್ದರೂ ಓಜಸ್ಸಿನಿಂದ ಕೂಡಿದ ಮುಖಮುದ್ರೆ. ಕೂದಲು ತೆಳ್ಳಗಾಗುತ್ತ ಬಂದಿದ್ದ ದುಂಡಗಿನ ತಲೆ. ಮುಖಕ್ಕೆ ಭೂಷಣ ವಾಗಿದ್ದ ಮೀಸೆ. ಅವಿಶ್ರಾಂತವಾಗಿ ಅತ್ತಿತ್ತ ಹೊರಳುತ್ತಲೇ ಇದ್ದ ಕಣ್ಣು ಗಳು. ಕಟ್ಟಾಳು. ಘಟ್ಟದ ಕೆಳಗಿನವರ ಹಾಗೆ ಪದೋಚ್ಚಾರ. ನೋಡಿ ದವರು ಮತ್ತೊಮ್ಮೆ ನೋಡುವಂತಿದ್ದ ಆ ರಾಮಗೌಡ.

ಮಾಚಯ್ಯ ಕೇಳಿದ :

"ಸೋಮಯ್ಯನೋರು ಊರಲ್ಲಿದಾರಾ?"

"ಹೂಂ. ಮೊನ್ನೆ ದಿವಸ ಹಳ್ಳಿಯ ಮುಖ್ಯಸ್ಥರೆಲ್ಲಾ ಇಲ್ಲಿಗೆ ಬಂದಿದ್ರು," ಎಂದು ಗಿರಿಜವ್ವ ಉತ್ತರವಿತ್ತಳು.

ಮಹತ್ವದ ಘಟನೆ ಇಲ್ಲಿ ಆಗಿದೆ ಎನ್ನುವಂತೆ ರಾಮಗೌಡನನ್ನೊಮ್ಮೆ ನೋಡಿ, ಮಾಚಯ್ಯನೆಂದ :

"ಸರಿ ನಾವು ಅವರಲ್ಲಿಗೆ ಹೋಗ್ತೀವಿ."

ಬಂದವರನ್ನು ಊಟಕ್ಕೆ ಇಲ್ಲಿಯೇ ಏಳಲು ಹೇಳಬೇಕು ಎಂದಿತು ಗಿರಿಜೆಯ ಗೃಹಿಣಿ ಮನಸ್ಸು. ಅತ್ತೆಯನ್ನು ಕೇಳಬೇಕೆನ್ನುವಷ್ಟರಲ್ಲಿ ಗಂಗವ್ವ ತಾನಾಗಿಯೇ ನುಡಿದಳು :

"ಯಾಕಪ್ಪಾ, ಇಲ್ಲಿಯೇ ವಸ್ತಿ ಮಾಡುವಿರಂತೆ."

"ಇರಲಿ ತಾಯೀ, ವಸ್ತಿಗೇನು? ಅಣ್ಣ ವಾಪಸಾಗೂತ್ಲೆ ಇಲ್ಲಿಗೇ ಬಂದ್ಬಿಡ್ತೀವಿ. ಆಗದಾ?"

ಅವರಿಬ್ಬರೂ ಕಾರ್ಯಾರ್ಥವಾಗಿಯೆ ಬಂದಿದರೆಂಬುದನ್ನು ಗಮನಿಸಿದ ಗಂಗವ್ವನೆಂದಳು :

"ನಿಮ್ಮಿಷ್ಟ."

ಮಗನನ್ನು ಕುರಿತಾದ ಯೋಚನೆ ಆಕೆಯಿಂದ ಇನ್ನೂ ಒಂದು ಪ್ರಶ್ನೆ ಕೇಳಿಸಿತು :

"ಏನಪ್ಪಾ, ಘಟ್ಟದ ಕೆಳಗಿನ ಸುದ್ದಿ?"

ಮಾಚಯ್ಯ ನಸುನಕ್ಕು ನುಡಿದ:

"ಭಾರೀ ಸುದ್ದೀನೆ ತಾಯಿ. ಎಲ್ರೂ ಅಣ್ಣಾವರು ಬರೋದನ್ನೇ ಕಾದಿದಾರೆ."

ಅದನ್ನು ಕೇಳಿ, ಅಭಿಮಾನದ ಜತೆಯಲ್ಲೇ ಅಳುಕಿನ ಭಾವ—ಆ ಅತ್ತೆ ಸೊಸೆ ಇಬ್ಬರಿಗೂ. ಆ ದಿನ ಮನೆಯ ಎದುರು ನಡೆದ ಸಭೆಯಲ್ಲಿ ತನ್ನ ಕಿವಿಗೆ ಬಿದ್ದುದನ್ನೆಲ್ಲ ಅವರಿಗೆ ತಿಳಿಸಬೇಕೆಂದು ಗಂಗವ್ವನಿಗೆ ಬಯಕೆಯಾಯಿತು. ಅಷ್ಟರಲ್ಲೇ, ಮಾಚಯ್ಯ ಮಗನ ಜತೆಯಲ್ಲೇ ಇದ್ದವನೆಂಬುದೂ ಆಕೆಯ ನೆನಪಿಗೆ ಬಂತು. ಮಗನೂ ಆತನ ಸ್ನೇಹಿತರೂ ಕುದುರೆ ಸವಾರರಾಗಿ ಬಂದಿದ್ದರು. ಈತ? ಈ ಇಬ್ಬರು?

"ಅಷ್ಟು ದೂರದಿಂದ ನೀವು ನಡಕೊಂಡೇ ಬಂದ್ರೇನಪ್ಪಾ?"

" ಹೂಂ ತಾಯಿ. ಇಲ್ಲಿಗೆ ಬರೋ ವಿಷಯ ಡಂಗುರವಾಗ್ಬಾರದೂಂತ ಕುದುರೆಗಳ್ನ ತರ್ಲಿಲ್ಲ."

ಅಪಾಯವೂ ತುಂಬಿದ್ದ ಭಾರೀ ಸುದ್ದಿಯೇ. ಉಕ್ಕುತಿದ್ದ ಭೀತಿಯನ್ನು ಹಿಂದಕ್ಕೆ ಅದುಮುತ್ತ ಗಂಗವ್ವನೆಂದಳು :

" ಮಗನ ಜತೇಲಿ ಮೂವರು ಸ್ನೇಹಿತರೂ ಬಂದವರೆ."

" ಸಂಜಯ್ಯನೋರು, ಚೆಟ್ಟಿ, ಕರ್ತುರ ಇರಬೇಕು. ಅಲ್ಲವಾ ?"

" ಹೂಂ. ಅವರೇನೇ."

" ಮೂರು ವಾರಗಳ ಹಿಂದೆ ನಾವೆಲ್ಲಾ ಕೂಡಿದ್ವಿ ತಾಯಿ".

" ಹಾಗಾ ?"

ರಾಮಗೌಡ, ಮುಖದ ಮೇಲೆ ಮತ್ತೆ ಅಣಿಮುತ್ತುಗಳಾಗಿ ಮೂಡಿದ್ದ ಬೆವರನ್ನು ಅಂಗೈಯಿಂದಲೆ ಒರೆಸಿ, ಹೆಂಗಸರ ಕಡೆಗೊಮ್ಮೆ ನೋಡಿ, ಇಳಿಧ್ವನಿಯಲ್ಲಿ ಪೂಜಯ್ಯನಿಗೆ ಹೇಳಿದ :

" ಸೋಮಯ್ಯನವರ ಮನೆ ಇಲ್ಲಿಂದ ಎಷ್ಟು ದೂರ ?"

" ಒಂದು ಹರದಾರಿ ಆಗಬಹುದು."

" ಅಷ್ಟೆಯೊ ? ಹಾಗಾದರೆ ನಡೆಯಿರಿ. ಈಗಲೆ ಹೋಗಿಬಿಡುವ."

ಹೊರಡಲೆಂದು ಅವರು ಏಳುತಿದ್ದುದನ್ನು ಕಂಡು ಗಂಗವ್ವ ಹೇಳಿದಳು :

" ಪುಟ್ಟಬಸ್ಯ ವಾಪಸಾದ್ಕೂಡ್ಲೆ ನೀವು ಬಂದ ವಿಷಯ ಹೇಳ್ತೀನಿ. ಆಮೇಕೆ ಇಬ್ಬರೂ ಊಟಕ್ಕೆ ಇಲ್ಲಿಗೇ ಬಂದ್ಬಿಡಿ."

" ಊಟಕ್ಕೇನು ತಾಯಿ ? ಖಂಡಿತ ಬರ್ತೀವಿ."

....ಹೊಲಗಳನ್ನು ಅವರು ದಾಟುತಿದ್ದಂತೆ ಪೂಜಯ್ಯ ಹೇಳಿದ :

" ಮನೆಗೆ ಬಂದೋರಿಗೆ ಊಟ ಹಾಕೋದರ ಹೊರತು ಬೇರೆ ಯೋಚನೆಯೇ ಇಲ್ಲ ಹೆಂಗಸರಿಗೆ."

ರಾಮಗೌಡ ಉತ್ತರವಿತ್ತ :

" ಎಲ್ಲಾ ಕಡೆಯಲ್ಲೂ ಅಷ್ಟೇ. ಊರಿನಲ್ಲಿ ನಮ್ಮ ತಾಯಿಯನ್ನೇ ನೀವು ನೋಡಿದಿರಲ್ಲ? ನನ್ನ ಸ್ನೇಹಿತರು ಅಂದರಾಯ್ತು. ಮಕ್ಕಳ ಹಾಗೇ ಕಾಣ್ತಾಳೆ."

ಕಾಡಿನ ಕಾಲುಹಾದಿ ಬಂತು. ನಾಲ್ಕು ಮಾರು ದೂರದಲ್ಲೇ ಅದು

ಕವಲೊಡೆಯಿತು. ಒಂದು ಕ್ಷಣ ಅಲ್ಲಿ ನಿಂತು, ಯಾವ ದಿಕ್ಕಿಗೆ ತಿರುಗಬೇಕೆಂಬುದನ್ನು ಮಾಚಯ್ಯ ನೆನಪಿಗೆ ತಂದುಕೊಂಡ ಬಳಿಕ, ಅವರು ಮುಂದುವರಿದರು.

ನಡೆಯುತ್ತಿದ್ದಂತೆ ಮಾಚಯ್ಯನೆಂದ:

"ಪುಟ್ಟಬಸವರಾಜರ ತಾಯಿ ತುಂಬಾ ಕಷ್ಟ ಅನುಭವಿಸಿದ ಜೀವ. ಅವರು ಬಸಿರಲ್ಲಿದ್ದಾಗಲೇ...."

ಆಸಕ್ತಿಯಿಂದ ರಾಮುಗೌಡ ಆ ಕತೆಗೆ ಕಿವಿಗೊಟ್ಟ. ಆ ತಾಯಿಯ ವಿಷಯದಲ್ಲೂ ಮಗನ ವಿಷಯದಲ್ಲೂ ಆತನ ಗೌರವ ಹೆಚ್ಚಿತು.

ಮಾಚಯ್ಯ ಮಾತು ನಿಲ್ಲಿಸಿ, 'ಹೂಂ'ಗುಟ್ಟುವುದು ಅನಗತ್ಯವಾದಾಗ, ರಾಮುಗೌಡನೆಂದ:

"ಇಲ್ಲಿಗೆ ಬಂದ್ಮೇಲಂತೂ ನಮ್ಮ ಕೆಲಸ ಗಂಡಾಗ್ತದೇಂತ ನನ್ನ ನಂಬಿಕೆ ಹೆಚ್ಚಿದೆ ಮಾಚಯ್ಯನವರೆ."

"ಪುಟ್ಟಬಸವರಾಜರನ್ನು ಮೊದಲು ಭೇಟಿ ಮಾಡಿ. ಆಮೇಲೆ ಹೇಳಿ...."

ಸ್ವಲ್ಪ ದೂರ ಮೌನವಾಗಿ ನಡೆದ ಬಳಿಕ ರಾಮುಗೌಡ ಹೇಳಿದ:

"ನಾನಾಗಲೀ ನಮ್ಮ ಜನರಾಗಲೀ ಈವರೆಗೆ ಯುದ್ಧ ಮಾಡಿದವರೇ ಅಲ್ಲ. ನಮಗೆ ಯುದ್ಧದ ಅಗತ್ಯ ಇದ್ದರಲ್ಲವೊ? ಹೊಲದಲ್ಲಿ ಬೇಸಾಯ ಮಾಡಿ ನಮ್ಮಷ್ಟಕ್ಕೆ ನಾವು ಇರುವವರು. ಆ ಸ್ವಾತಂತ್ರ್ಯಕ್ಕೆ ಸಂಚಕಾರ ಬಂದಾಗ ಹ್ಯಾಗೆ ಸುಮ್ಮನಿರೋಕಾಗ್ತದೆ ಹೇಳಿ? ಗೌಡರೆಲ್ಲಾ ಪುಕ್ಕಲು ಜನರೂಂತ ಆ ಕುಂಪಣಿಯವನು ಭಾವಿಸಿದ್ದಾನೋ ಏನೋ. ಅದು ಈಗ ಇತ್ಯರ್ಥವಾಗೇ ತೀರ್ಬೇಕು. ನಮ್ಮ ಗದ್ದೆಯಲ್ಲಿ ಬೆಳೆಯೋದು ನಮ್ಮ ಸೊತ್ತೇ. ಅದನ್ನು ಇನ್ನೊಬ್ಬರಿಗೆ ನಾವು ಯಾಕೆ ಕೊಟ್ಟೇವು....?"

ರಾಮುಗೌಡನ ಬಾಯಿಂದ ಆ ಮಾತುಗಳನ್ನು ಮಾಚಯ್ಯ ಹಿಂದೆಯೂ ಕೇಳಿದ್ದ. ಮಂತ್ರಶಕ್ತಿಯ ಪ್ರಯೋಗವಾದಂತೆ, ಕೇಳುವ ಜನರ ಮೇಲೆ ಆ ಪದಗಳ ಪ್ರಭಾವ ಏರುತ್ತಿದ್ದುವು. ಒಂದೇ ಸೂತ್ರದಿಂದ ಶ್ರೋತೃಗಳನ್ನೆಲ್ಲ ಬಿಗಿಯುವ ಸಾಮರ್ಥ್ಯವಿತ್ತು ಆತನ ವಾಕ್ ಸರಣಿಗೆ.

ಸುಳ್ಯದಲ್ಲಿ ರಾಮುಗೌಡ ಅಂದಿದ್ದ:

'ನಿಮಗೆ ಎಷ್ಟು ಜನ ಬೇಕು ಮಾಚಯ್ಯನವರೇ? ಸಾವಿರವೆ?

" ಹೊಂ ತಾಯಿ. ಇಲ್ಲಿಗೆ ಬರೋ ವಿಷಯ ಡಂಗುರವಾಗ್ಬಾರದೂಂತ ಕುದುರೆಗಳ್ನ ತರ್ಲಿಲ್ಲ."

ಅಪಾಯವೂ ತುಂಬಿದ್ದ ಭಾರೀ ಸುದ್ದಿಯೇ. ಉಕ್ಕುತಿದ್ದ ಭೀತಿಯನ್ನು ಹಿಂದಕ್ಕೆ ಅದುಮುತ್ತ ಗಂಗವ್ವನೆಂದಳು :

" ಮಗನ ಜತೇಲಿ ಮೂವರು ಸ್ನೇಹಿತರೂ ಬಂದವರೆ."

" ನಂಜಯ್ಯನೋರು, ಚೆಟ್ಟಿ, ಕರ್ತು ಇರಬೇಕು. ಅಲ್ಲವಾ ?"

" ಹೂಂ. ಅವರೇನೇ."

" ಮೂರು ವಾರಗಳ ಹಿಂದೆ ನಾವೆಲ್ಲಾ ಕೂಡಿದ್ವಿ ತಾಯಿ".

" ಹಾಗಾ ?"

ರಾಮಗೌಡ, ಮುಖದ ಮೇಲೆ ಮುತ್ತಿ ಅಣಿಮುತ್ತುಗಳಾಗಿ ಮೂಡಿದ್ದ ಬೆವರನ್ನು ಅಂಗೈಯಿಂದಲೆ ಒರೆಸಿ, ಹೆಂಗಸರ ಕಡೆಗೊಮ್ಮೆ ನೋಡಿ, ಇಳಿಧ್ವನಿಯಲ್ಲಿ ಮಾಚಯ್ಯನಿಗೆ ಹೇಳಿದ :

" ಸೋಮಯ್ಯನವರ ಮನೆ ಇಲ್ಲಿಂದ ಎಷ್ಟು ದೂರ ?"

" ಒಂದು ಹರದಾರಿ ಆಗಬಹುದು."

" ಅಷ್ಟೆಯೊ ? ಹಾಗಾದರೆ ನಡೆಯಿರಿ. ಈಗಲೆ ಹೋಗಿಬಿಡುವ."

ಹೊರಡಲೆಂದು ಅವರು ಏಳುತಿದ್ದುದನ್ನು ಕಂಡು ಗಂಗವ್ವ ಹೇಳಿದಳು :

" ಪುಟ್ಟಬಸ್ವ ವಾಪಸಾದ್ಕೂಡ್ಲೆ ನೀವು ಬಂದ ವಿಷಯ ಹೇಳ್ತೀನಿ. ಆಮೇಕೆ ಇಬ್ಬರೂ ಊಟಕ್ಕೆ ಇಲ್ಲಿಗೇ ಬಂದ್ಬಿಡಿ."

" ಊಟಕ್ಕೇನು ತಾಯಿ ? ಖಂಡಿತ ಬರ್ತೀವಿ."

....ಹೊಲಗಳನ್ನು ಅವರು ದಾಟುತಿದ್ದಂತೆ ಮಾಚಯ್ಯ ಹೇಳಿದ :

" ಮನೆಗೆ ಬಂದೋರಿಗೆ ಊಟ ಹಾಕೋದರ ಹೊರತು ಬೇರೆ ಯೋಚನೆಯೇ ಇಲ್ಲ ಹೆಂಗಸರಿಗೆ."

ರಾಮಗೌಡ ಉತ್ತರವಿತ್ತ :

" ಎಲ್ಲಾ ಕಡೆಯಲ್ಲೂ ಅಷ್ಟೇ. ಊರಿನಲ್ಲಿ ನಮ್ಮ ತಾಯಿಯನ್ನೇ ನೀವು ನೋಡಿದಿರಲ್ಲ? ನನ್ನ ಸ್ನೇಹಿತರು ಅಂದರಾಯ್ತು. ಮಕ್ಕಳ ಹಾಗೇ ಕಾಣ್ತಾಳೆ."

ಕಾಡಿನ ಕಾಲುಹಾದಿ ಬಂತು. ನಾಲ್ಕು ಮಾರು ದೂರದಲ್ಲೇ ಅದು

ಕವಲೊಡೆಯಿತು. ಒಂದು ಕ್ಷಣ ಅಲ್ಲಿ ನಿಂತು, ಯಾವ ದಿಕ್ಕಿಗೆ ತಿರುಗಬೇಕೆಂಬುದನ್ನು ಮಾಚಯ್ಯ ನೆನಪಿಗೆ ತಂದುಕೊಂಡ ಬಳಿಕ, ಅವರು ಮುಂದು ವರಿದರು.

ನಡೆಯುತ್ತಿದ್ದಂತೆ ಮಾಚಯ್ಯನೆಂದ:

"ಪುಟ್ಟಬಸವರಾಜರ ತಾಯಿ ತುಂಬಾ ಕಷ್ಟ ಅನುಭವಿಸಿದ ಜೀವ. ಅವರು ಬಸಿರಲ್ಲಿದ್ದಾಗಲೇ...."

ಆಸಕ್ತಿಯಿಂದ ರಾಮುಗೌಡ ಆ ಕತೆಗೆ ಕಿವಿಗೊಟ್ಟ. ಆ ತಾಯಿಯ ವಿಷಯದಲ್ಲೂ ಮಗನ ವಿಷಯದಲ್ಲೂ ಆತನ ಗೌರವ ಹೆಚ್ಚಿತು.

ಮಾಚಯ್ಯ ಮಾತು ನಿಲ್ಲಿಸಿ, 'ಹೂಂ'ಗುಟ್ಟುವುದು ಅನಗತ್ಯವಾದಾಗ, ರಾಮುಗೌಡನೆಂದ:

"ಇಲ್ಲಿಗೆ ಬಂದ್ಮೇಲಂತೂ ನಮ್ಮ ಕೆಲಸ ಗಂಡಾಗ್ತದೇಂತ ನನ್ನ ನಂಬಿಕೆ ಹೆಚ್ಚಿದೆ ಮಾಚಯ್ಯನವರೆ."

"ಪುಟ್ಟಬಸವರಾಜರನ್ನು ಮೊದಲು ಭೇಟಿ ಮಾಡಿ. ಆಮೇಲೆ ಹೇಳಿ...."

ಸ್ವಲ್ಪ ದೂರ ಮೌನವಾಗಿ ನಡೆದ ಬಳಿಕ ರಾಮುಗೌಡ ಹೇಳಿದ:

"ನಾನಾಗಲೀ ನಮ್ಮ ಜನರಾಗಲೀ ಈವರೆಗೆ ಯುದ್ಧ ಮಾಡಿದವರೇ ಅಲ್ಲ. ನಮಗೆ ಯುದ್ಧದ ಅಗತ್ಯ ಇದ್ದರಲ್ಲವೊ? ಹೊಲದಲ್ಲಿ ಬೇಸಾಯ ಮಾಡಿ ನಮ್ಮಷ್ಟಕ್ಕೆ ನಾವು ಇರುವವರು. ಆ ಸ್ವಾತಂತ್ರ್ಯಕ್ಕೆ ಸಂಚಕಾರ ಬಂದಾಗ ಹ್ಯಾಗೆ ಸುಮ್ಮನಿರೋಕಾಗ್ತದೆ ಹೇಳಿ? ಗೌಡರೆಲ್ಲಾ ಪುಕ್ಕಲು ಜನ ರೂಂತ ಆ ಕುಂಪಣಿಯವನು ಭಾವಿಸಿದ್ದಾನೋ ಏನೋ. ಅದು ಈಗ ಇತ್ಯರ್ಥವಾಗೇ ತೀರ್ಬೇಕು. ನಮ್ಮ ಗದ್ದೆಯಲ್ಲಿ ಬೆಳೆಯೋದು ನಮ್ಮ ಸೊತ್ತೇ. ಅದನ್ನು ಇಸ್ಕೊಬ್ಬರಿಗೆ ನಾವು ಯಾಕೆ ಕೊಟ್ಟೇವು....?"

ರಾಮುಗೌಡನ ಬಾಯಿಂದ ಆ ಮಾತುಗಳನ್ನು ಮಾಚಯ್ಯ ಹಿಂದೆಯೂ ಕೇಳಿದ್ದ. ಮಂತ್ರಶಕ್ತಿಯ ಪ್ರಯೋಗವಾದಂತೆ, ಕೇಳುವ ಜನರ ಮೇಲೆ ಆ ಪದಗಳ ಪ್ರಭಾವ ಬೀರುತ್ತಿದ್ದುವು. ಒಂದೇ ಸೂತ್ರದಿಂದ ಶ್ರೋತೃಗಳ ನ್ನೆಲ್ಲ ಬಿಗಿಯುವ ಸಾಮರ್ಥ್ಯವಿತ್ತು ಆತನ ವಾಕ್ ಸರಣಿಗೆ.

ಸುಳ್ಯದಲ್ಲಿ ರಾಮುಗೌಡ ಅಂದಿದ್ದ:

'ನಿಮಗೆ ಎಷ್ಟು ಜನ ಬೇಕು ಮಾಚಯ್ಯನವರೇ? ಸಾವಿರವೆ?

ಎರಡು ಸಾವಿರವೆ? ಮೂರೆ? ಉಳುವವರ ಕುಲಕ್ಕೆ ಅಳಿವಿಲ್ಲ, ಭೂಮಿ ತಾಯಿ ಬಂಜೆಯಲ್ಲ. ಒಂದು ತಲೆ ಕಡಿದು ಬಿದ್ದರೆ ಅದರ ಬದಲು ನೂರು ತಲೆಗಳು ಚಿಗುರ್ತವೆ!'

ಎಣೆ ಇಲ್ಲದ ಆತ್ಮವಿಶ್ವಾಸವಿದ್ದ, ತನ್ನ ಬಾಹುಗಳಲ್ಲಿ ತನಗೇ ನಂಬಿಕೆ ಇದ್ದ ಧೀರ ಮಾತ್ರ ಹಾಗೆ ಮಾತನಾಡುವುದು ಸಾಧ್ಯವಿತ್ತು.

ತರಗೆಲೆಗಳ ಕೆಳಗಿಂದ ಓತಿ ಹರಿಯಿತು. ಬಾಲ್ಯದಿಂದಲೇ ಒಂದ ನ್ನೊಂದು ಅಪ್ಪಿಹಿಡಿದೇ ಬೆಳೆದು ಮುದಿಯಾಗಿದ್ದ ಎರಡು ಮರಗಳು ಕಿರ್ ಕಿರೆಂದುವು—ಕಾಡಿನೊಳಗಿಂದ ಓಡಿ ಬಂದ ಗಾಳಿಯ ಸೆರಗು ತಮಗೆ ತಗು ಲಿದಾಗ. ಹತ್ತಿರದಲ್ಲೆಲ್ಲೋ ಜುಳುಜುಳುನಿಸ್ತಿತ್ತು ಕಿರುತೊರೆ.

ಆದರೆ ಮಾಚಯ್ಯ ಈ ನಾದಲೋಕದಲ್ಲಿ ಇರಲೇ ಇಲ್ಲ. ಆತನ ಮೆದು ಳಿನಲ್ಲಿ ಗುಂಯ್‌ಗುಡುತ್ತಿದ್ದುದು ರಾಮುಗೌಡ ಬಳಸಿದ ಪದ ಗುಂಫನವೇ.

ಮಾಚಯ್ಯ ಮೆಲ್ಲಮೆಲ್ಲನೆ ನುಡಿದ:

"ನನಗೆ ಬುದ್ಧಿ ಬಂದಾಗಿನಿಂದ ನಾನು ಯುದ್ಧಮಾಡ್ತಾನೇ ಇದೇನೆ ಗೌಡರೆ. ಆ ಯುದ್ಧಗಳಿಗೆಲ್ಲಾ ಅರ್ಥವಿತ್ತೋ ಇಲ್ಲವೊ. ಹೊಡಿಯೋದು ಕಡಿಯೋದೊಂದೇ ನನಗೆ ಗೊತ್ತಿರೋ ಕಸಬು ನೋಡಿ. ಆದರೆ ಈ ಸಲ ಹಾಗಲ್ಲ. ಈವರೆಗೂ ಇರದಿದ್ದ ಅನುಭವ ಈಗ ಆಗ್ತಾ ಇದೆ. ನಾನು ಹುಟ್ಟಿ ಬೆಳೆದದ್ದು ವ್ಯರ್ಥವಲ್ಲ, ಈ ಬದುಕಿಗೆ ಒಂದು ಅರ್ಥವಿದೆ—ಅನಿಸ್ತಿದೆ. ಪವಿತ್ರ ಯುದ್ಧ, ಧರ್ಮಯುದ್ಧ, ಅಂತ ಹೇಳೋದು ಇದಕ್ಕೇ ಅಲ್ಲವಾ? ಇಂಥಾ ಯುದ್ಧದಲ್ಲಿ ಸಾಯಬೇಕಾಗಿ ಬಂದರೂ ಸಂತೋಷದಿಂದ ನಾನು ಪ್ರಾಣ ಬಿಡ್ತೀನಿ."

ರಾಮುಗೌಡನ ದೃಷ್ಟಿ ಬಳಿಯಲ್ಲಿದ್ದ ಸಹಯೋಧನಿಗಾಗಿ ತುಂಬು ಒಲವನ್ನು ಸೂಸಿತು ಮಾತನಾಡಬೇಕೆಂದು ಆತನಿಗೆ ತೋರಲಿಲ್ಲ.

....ಅತ್ತೆ ಸೊಸೆ ನಿಂತಲ್ಲೇ ನಿಂತಿದ್ದರು ಬಹಳ ಹೊತ್ತು, ಹೊಲಗಳ ಏರಿ ಕಾಡಿನ ಅಂಚನ್ನು ತಲಪುವ ಜಾಗದ ವರೆಗೂ ದೃಷ್ಟಿ ಹರಿಸುತ್ತಾ.

ಗಂಗವ್ವನಿಗೇನೂ ಕಾಣಿಸುತ್ತಿರಲಿಲ್ಲ. ಆದರೂ ಅಭ್ಯಾಸ ಬಲದಿಂದ ಕಣ್ಣುಗಳು ಅತ್ತ ಸರಿಯುತ್ತಿದ್ದುವು.

"ಇಬ್ಬರೂ ಒಂಟ್ಹೋದ್ರಾ?" ಎಂದು ಆಕೆ ಸೊಸೆಯನ್ನು ಕೇಳಿದಳು.

"ಹೂಂ ಅತ್ತೆಮ್ಮ," ಎಂದಳು ಗಿರಿಜಾ.

" ಊಟದೊತ್ತಿಗೆ ಸೋಮಯ್ನೋರಲ್ಲಿಗೆ ಓಗಿರ್ತಾರೆ."

" ಹೂಂ."

ಆ ಇಬ್ಬರನ್ನು ಮೊದಲು ದೂರದಿಂದಲೇ ದಿಟ್ಟಿಸಿದಾಗ ತನಗಾಗಿದ್ದ ಅಳುಕನ್ನು ನೆನೆಸಿಕೊಳ್ಳುತ್ತಾ ಗಿರಿಜವ್ವ ಹೇಳಿದಳು :

" ಅವರು ಕುಂಪಣಿ ಕಡೆಯೋರೇನೋಂತ ಎದರ್ಕೆ ಆಗಿತ್ತು."

ಕಹಿಯಾದ ಯೋಚನೆಗಳನ್ನು ಹತ್ತಿರ ಸುಳಿಯಗೊಡದೆ ಗಂಗವ್ವ ನೆಂದಳು :

" ಕುಂಪಣಿ ಕಡೆಯೋರು ಈ ಊರಿಗೆ ಬಂದು ಜೀವ ಸಹಿತ ವಾಪಸು ಓಗೋದು ನಿಜವಾ ?"

## ೨

ತಾನು ಬಂದ ಉದ್ದೇಶವನ್ನು ರಾಮುಗೌಡ ತಿಳಿಸಿದಾಗ, ಪುಟ್ಟಬಸವ ಒಮ್ಮೆಲೆ ಉತ್ತರವೀಯಲಿಲ್ಲ. ಆತನ ಸ್ನೇಹಿತರೂ ಯೋಚಿಸುತ್ತ ಮೌನವಾಗಿ ಕುಳಿತರು.

ಇವರು ಅಳುಕುತ್ತಿರಬಹುದೆಂದು ಭಾವಿಸಿದ ರಾಮುಗೌಡನಿಗೆ ಕಸಿವಿಸಿಯಾಯಿತು.

"ಯಾಕೆ ಸುಮ್ಮನಿದ್ದೀರಲ್ಲ? ಇದು ಅಸಾಧ್ಯ ಎಂತಲೋ?"

ಪುಟ್ಟಬಸವನ ಕಣ್ಣುಗಳು ಮಿನುಗಿದುವು. ತುಟಿಗಳ ಮೇಲೆ ಮೆಲ್ಲನೆ ಮುಗುಳುನಗೆ ಮೂಡಿತು.

"ನಿಮ್ಮದು ತಪ್ಪು ಗ್ರಹಿಕೆ ಗೌಡರೆ. ಈವರೆಗೂ ನಮ್ಮ ಕಣ್ಣ ಮುಂದೆ ಇದ್ದದ್ದು ಕೊಡಗು ಮಾತ್ರ. ಈಗ, ದೊಡ್ಡ ಚೌಕಟ್ಟಿನೊಳಗಿನೋ ಬೇರೆ ಚಿತ್ರವನ್ನ ಕಲ್ಪಿಸಿಕೋತಾ ಇದೀವಿ."

ರಾಮುಗೌಡನ ಮುಖ ಅರಳಿತು. ಆತನೆಂದ:

"ಮಾಚಯ್ಯನವರನ್ನು ಕೇಳಿ. ನಮ್ಮ ಜನರಲ್ಲೆಲ್ಲಾ ಅಶಾಂತಿ ಹೊಗೆಯಾಡ್ತಿದೆ. ಒಂದೇ ಒಂದು ಕಿಡಿ ಸಾಕು. ಭಗ್ ಅಂತ ಬೆಂಕಿ ಹತ್ತಿ ಕೊಳ್ಳೋದು ಖಂಡಿತ. ಒಬ್ಬ ನಾಯಕ ಬಂದು, ಈ ದಾರಿ – ಹೀಗೆ – ಅಂತ ಹೇಳಿದರೆ ಸಾಕು. ಜನರು ಮುಂದಕ್ಕೆ ನುಗ್ತಾರೆ."

....ಅದು ನಿಜವಾದ ವರದಿ ಎನ್ನುವುದಕ್ಕೆ ಸಾಕಷ್ಟು ಆಧಾರಗಳಿದ್ದುವು. ಅಮರ ಸುಳ್ಯವನ್ನೀಗ ಕನ್ನಡ ಜಿಲ್ಲೆಗೆ ಸೇರಿಸಿದ್ದರು. ಮೊದಲಾದರೆ ಅಮರ ಸುಳ್ಯದಲ್ಲಿ ಆಚರಣೆಯಲ್ಲಿದ್ದುದು ಲಿಂಗರಾಜನ ಶಿಸ್ತು, ಲಿಂಗರಾಜನ ಕೋಲು. ರೈತರು ರಾಜರಿಗೆ ಒಪ್ಪಿಸುತಿದ್ದುದು ಧಾನ್ಯ ರೂಪದ ಕಂದಾಯ. ಆದರೆ ಈಗ ಕುಂಪಣಿ ಸರಕಾರ ಕಂದಾಯವನ್ನು ಹಣದ ರೂಪದಲ್ಲಿ ಕೇಳಿತ್ತು. ಹಣವನ್ನು ಒದಗಿಸಲು ಟಂಕಸಾಲೆ ಇತ್ತೆ ಜನರಲ್ಲಿ? ಅವರಿಗಿದ್ದ ಹಾದಿಯೊಂದೇ – ಸಾಹುಕಾರರಿಗೆ ಧಾನ್ಯವನ್ನು ಮಾರುವುದು. ಸುಲಿಯುವ ಅವಕಾಶ ದೊರೆತಾಗ ಸುಮ್ಮನಿರುವರೆ ವರ್ತಕರು? ಹೇರಳ ಧಾನ್ಯಕ್ಕೆ ಅವರು ನೀಡಿದುದು ಅಲ್ಪವೇ ಬೆಲೆ. ಬೆಳೆಸಿದ ಭತ್ತವೆಲ್ಲ, ಅಕ್ಕಿ

ಯೆಲ್ಲ ವರ್ತಕರ ಮಳಿಗೆ ಸೇರಿದರೂ ಕಂದಾಯದ ಹಣ ಹುಟ್ಟುತ್ತಿರಲಿಲ್ಲ. ಮುಂದೆ ಉಣ್ಣುವುದಕ್ಕೆ, ಬಿತ್ತನೆಗೆ, ಆ ವರ್ತಕರಿಂದಲೆ ಧಾನ್ಯವನ್ನು ಮರಳಿ ಕೊಳ್ಳುವ ಪ್ರಮೇಯ ಬೇರೆ.

ಪಾರತಂತ್ರ್ಯದ ನಖಿಗಳು ಹೊಟ್ಟೆಯನ್ನೆ ಬಗೆದು ಕರುಳನ್ನೆ ಕೀಳ ತೊಡಗಿದ್ದುವು.

....ಪುಟ್ಟಬಸವ ನಂಜಯ್ಯನ ಮುಖ ನೋಡಿದ; ಚೆಟ್ಟಿಕುಡಿಯ ಕರ್ತುಕುಡಿಯಾರನ್ನೂ ನೋಡಿದ. ಅವರ ಮನಸ್ಸಿನಲ್ಲಿ ಏನಿತ್ತೆಂಬುದನ್ನು ಗ್ರಹಿಸಲೆತ್ನಿಸುತ್ತಾ ಆತ ಕೇಳಿದ:

" ಏನು, ಏನು ಹೇಳ್ತೀರಾ ?"

ನಂಜಯ್ಯ ಮೀಸೆಯ ಮೇಲೆ ಕೈಯಾಡಿಸಿದ.

" ಹೇಳೋದೇನಿದೆ ? ಕೊಡಗು, ಕನ್ನಡ ಜಿಲ್ಲೆ, ಎರಡೇ ಸಾಕೆ ? ನಾಳೆ ಮೈಸೂರಿನಿಂದಲೂ ಆ ಕೋತಿಗಳನ್ನ ಓಡಿಸೋಣವಂತೆ. ಕಾಶಿಯ ವರೆಗೂ ಹೋಗೋಣವಂತೆ."

" ಮಹಾರಾಜರಿಂದೇನಾದರೂ ಸುದ್ದಿ ಬಂದಿತ್ತೇನು ?" ಎಂದು ಕೇಳಿದ ರಾಮುಗೌಡ.

ಪುಟ್ಟಬಸವನ ಉತ್ತರವಿತ್ತು:

" ಬಂದಿತ್ತು. ಈಗ ಪುನಃ ನಾವೇ ದೂತರನ್ನ ಕಳಿಸ್ಬೇಕು. ನಮ್ಮ ಕಾರ್ಯಕ್ರಮ ಅವರಿಗೆ ತಿಳಿಸ್ಬೇಕು."

" ಹೂಂ. ಮುಖ್ಯವಾದ ಕೆಲಸವೇ. ರಾಜರು ಕಾಶಿಯಿಂದ ವಾಪಸು ಬರ್ತಿದಾರೇಂತ ಹೇಳಿದರೆ ಜನರಲ್ಲಿ ಉತ್ಸಾಹ ಹೆಚ್ತದೆ."

ಪುನಃ ಯೋಚನೆಯಲ್ಲಿ ಮಗ್ನನಾದ ಪುಟ್ಟಬಸವ ಹೇಳಿದ:

" ಹೆಜ್ಜೆ ಮುಂದಿಟ್ಮೇಲೆ ಹಿಮ್ಮೆಟ್ಟೋ ಪ್ರಶ್ನೆಯೇ ಇಲ್ಲ. ಇದು ಹುಡುಗಾಟವಂತೂ ಅಲ್ಲವೇ ಅಲ್ಲ. ಈ ಹೋರಾಟ ಎಷ್ಟು ಗಭೀರವಾದ ದ್ದೂಂತ ನಿಮಗೆಲ್ಲಾ ತಿಳಿದಿದೆಯೊ ?"

" ತಿಳಿದಿದೆ. ನಿಮ್ಮನ್ನೆಲ್ಲಾ ಕರೆಯೋದಕ್ಕೆ ಬಂದ ನನ್ನ ಜವಾಬ್ದಾರಿಯೂ ನನಗೆ ಗೊತ್ತಿದೆ. ಯಾಕೆ ? ನನ್ನ ಮಾತಿನಲ್ಲಿ ನಂಬಿಕೆ ಹುಟ್ಟೋದಿಲ್ವೊ ?"

ಆ ಮಾತಿನಲ್ಲಿ ನೊಂದ ಧ್ವನಿಯನ್ನು ಗುರುತಿಸುತ್ತಾ ಪುಟ್ಟಬಸವ ಉತ್ತರವಿತ್ತು:

"ಹಾಗೆ ಕೇಳಿದೇಂತ ತಪ್ಪು ಭಾವಿಸ್ಬೇಡಿ ಗೌಡರೆ. ಪರಿಸ್ಥಿತಿ ಸ್ಪಷ್ಟ ವಾದಷ್ಟೂ ಕಾರ್ಯಾಚರಣೆ ಸುಲಭವಾಗ್ತದೆ. ಹೌದೋ ಅಲ್ಲವೋ?"

ಆತ್ಮೀಯವಾಗಿದ್ದ ಆ ಸ್ವರ ಕಿವಿಗೆ ಬಿದ್ದಾಗ ಗೌಡ ಪ್ರಸನ್ನನಾದ.

ನಂಜಯ್ಯ ಕೇಳಿದ:

"ಸುಮಾರು ಯಾವತ್ತು ಶುರು ಮಾಡ್ಬೇಕೂಂತ ನಿಮ್ಮ ಅಭಿಪ್ರಾಯ?"

"ಆದಷ್ಟು ಬೇಗನೆ. ತಡಮಾಡಬೇಕಾದ್ದೇ ಇಲ್ಲ. ಎಲ್ಲಾ ತಯಾರಾಗಿದೆ ನೋಡಿ."

ಚೆಟ್ಟಿ ಬಾಯಿತೆರೆದ:

"ನಮ್ಮಲ್ಲಿ ಶಸ್ತ್ರಾಸ್ತ್ರ ಏನೇನಿದೆ, ಲೆಕ್ಕ ಹಾಕಿದೀರಾ?"

ರಾಮಗೌಡನೆಂದ:

"ಈ ಪ್ರಶ್ನೆಯ ಅರ್ಥವೂ ನನಗೆ ಗೊತ್ತಿದೆ ತಮ್ಮಾ. ಅವರಲ್ಲಿ ಫಿರಂಗಿಗಳಿವೆ, ನಮ್ಮಲ್ಲಿಲ್ಲ – ಎಂತ ಅಲ್ಲವೋ ನೀವು ಹೇಳೋದು? ನೋಡಿಕೊಳ್ಳೋಣ! ಸದ್ಯಕ್ಕೆ ನಮ್ಮಲ್ಲಿ ಕುದುರೆಗಳು ಕೂಡಾ ಹೆಚ್ಚಿಲ್ಲ. ಕಾಲಾಳು ಪಡೆಯೇ. ಇದ್ದಷ್ಟು ಜನಕ್ಕೆ ಕೋವಿ – ಖಡ್ಗ, ಉಳಿದವರಿಗೆ ಬಡಿಗೆ – ದೊಣ್ಣೆ...."

ನಂಜಯ್ಯ ಮಾತು ಸೇರಿಸಿದ:

"ಶಸ್ತ್ರಾಸ್ತ್ರಕ್ಕೇನ್ರಿ! ವೈರಿಗಳ ಹತ್ತಿರ ಇದ್ದರೆ ನಮ್ಮಲ್ಲಿದ್ದ ಹಾಗೆಯೇ. ಒಂದೊಂದು ಯುದ್ಧದಲ್ಲೂ ಸಂಪಾದಿಸ್ತಾ ಹೋಗ್ತೇವೆ!"

"ಸರಿ ಹೇಳಿದಿರಿ!" ಎಂದ ರಾಮಗೌಡ, ಕದನವಿಶಾರದ ನಂಜಯ್ಯನ ವಿಷಯದಲ್ಲಿ ಗೌರವ ತಳೆಯುತ್ತಾ.

ಮಾತು ಮತ್ತೆ ಅಮರಸುಳ್ಯದ ಪರಿಸ್ಥಿತಿಯ ಕಡೆಗೆ ತಿರುಗಿತು.

ರಾಮಗೌಡ ಕೇಳಿದ:

"ಅಲ್ಲಾ, ಕೊಡಗಿನಲ್ಲಿ ದಿವಾನರು ಎಷ್ಟು ಜನ?"

ನಂಜಯ್ಯ, ಗೌಡನನ್ನೆ ದಿಟ್ಟಿಸಿ ಹೇಳಿದ:

"ನೀವು ಮಡಿಕೇರಿಗೆ ಯಾವತ್ತೂ ಬಂದಿಲ್ಲ, ಅಲ್ವೆ?"

"ಇಲ್ಲ."

"ಮುಖ್ಯವಾಗಿರೋ ದಿವಾನರು ಯಾವಾಗಲೂ ಒಬ್ಬರೇ. ಆದರೆ,

ದಿವಾನರೊಂತ ಹೆಸರಿರೋರು ಬೇರೆಯೂ ಇಬ್ಬರು ಮೂವರಿರ್ತಾರೆ. ಈಗ ನೋಡಿ. ಬೋಪುವೇ ಮುಖ್ಯ ದಿವಾನ."

" ಅದಕ್ಕೇ ಕೇಳಿದೆ. ಲಕ್ಷ್ಮೀನಾರಾಯಣ ಅಂತ ಒಬ್ಬ ಬ್ರಾಹ್ಮಣನೂ ದಿವಾನನಾಗಿದಾನೆ, ಅಲ್ಲವೋ ?"

" ಹೌದು."

" ಅವನ ತಮ್ಮನೇ ರಾಮಪ್ಪಯ್ಯ...."

....ರಾಮಪ್ಪಯ್ಯ ಅಮರ ಸುಳ್ಯದ ತುಂಡು ಪಾಳೆಯಗಾರ. ಜಾತಿಯಲ್ಲಿ ಬ್ರಾಹ್ಮಣ ; ವೃತ್ತಿಯಲ್ಲಿ ಚಂಡಾಲ. ಕನ್ನಡ ಜಿಲ್ಲೆಯ ಕಲೆಕ್ಟರ ಸಾಹೇಬರಿಗೆ ಸ್ನೇಹಿತ. ಕೊಡಗಿನ ವಿಷಯದಲ್ಲಂತೂ ಸ್ವತಃ ದಿವಾನನ ರಕ್ತ ಸಂಬಂಧಿಯೇ ಆತ. ಮುನ್ನೂರು ಜನ ಮೂಲದ ಹೊಲೆಯರು. ಅವರೇ ಆತನ ಯೋಧರು. ಕಡಿ – ಎಂದರೆ ಕಡಿಯಬೇಕು. ಸುಡು — ಎಂದರೆ ಸುಡಬೇಕು. ತನ್ನನ್ನು ತಾನೇ ಕರೆದುಕೊಂಡಿದ್ದ ಆತ 'ಹತ್ತೂರ ಧೊರೆ'ಯೆಂದು. ಮಧ್ಯವಯಸ್ಸು ದಾಟಿದ್ದರೂ ಗಟ್ಟಿಮುಟ್ಟಾಗಿದ್ದ ಜೀವ. ಹುರಿಮಾಡಿದ ಮೀಸೆ ಅವಿಶ್ರಾಂತವಾಗಿ ಕುಣಿಯುತ್ತಲೇ ಇರುತಿತ್ತು. ಬಹಿರಂಗವಾಗಿ 'ಧೊರೆ! ಪರಾಕು!' ಎನ್ನುತಿದ್ದವರು, 'ಹೆಬ್ಬುಲಿ' ಎಂಬ ಅಡ್ಡ ಹೆಸರನ್ನೂ ಇರಿಸಿದ್ದರು ಆತನಿಗೆ. ಅಂತರಂಗದಲ್ಲಿ ಮಾತ್ರ, 'ನೀಚ! ಇವನ ವಂಶ ನಿರ್ನಾಮವಾಗಲಿ!' ಎಂದು ಶಪಿಸುತಿದ್ದರು. ಕುಂಪಣಿ ಸರಕಾರಕ್ಕೆ ಕೊಡುವ ಕಂದಾಯವಲ್ಲದೆ, ರೈತರು ಈತನಿಗೂ ಒಂದು ಪಾಲು ಒಪ್ಪಿಸಬೇಕಾಗಿತ್ತು. ಒಳ್ಳೆಯ ಫಸಲು ಬರುವ ಭೂಮಿಯೆಲ್ಲ ಈತನದೇ. ದಂಡಾಯುಧದ ಭಯ ತೋರಿಸಿಯೇ ಇನ್ನೊಬ್ಬರ ಹೊಲವನ್ನು ಆತ ವಶಪಡಿಸಿಕೊಳ್ಳುತಿದ್ದ. ಆಸ್ತಿಯನ್ನು ತನಗೆ ಬರೆದು ಕೊಟ್ಟ ಹಾಗೆ, ಓಲೆಗರಿಗೆ ಒತ್ತಾಯದ ರುಜು ಹಾಕಿಸುತಿದ್ದ. ಇಷ್ಟು ಸಾಲದುದಕ್ಕೆ ಪರಸ್ತ್ರೀಯರ ಮೇಲಿನ ವ್ಯಾಮೋಹ ಬೇರೆ. ಕುದುರೆಯನ್ನೇರಿ ಆತ ಬಂದನೆಂದರ ಮನೆ ಬಾಗಿಲುಗಳು ಮುಚ್ಚಿಕೊಳ್ಳುತಿದ್ದುವು. [ಆದರೆ ಬಾಗಿಲ ಬಿರುಕುಗಳೆಡೆಯಿಂದ ಹೆಂಗಳೆಯರೆಲ್ಲ ತನ್ನನ್ನೆ ನೋಡುತಿದ್ದರೆಂಬುದು ರಾಮಪ್ಪಯ್ಯನಿಗೆ ಗೊತ್ತಿತ್ತು] ಹೀಗಿದ್ದರೂ ಎಲ್ಲೆಲ್ಲಿ ಎಂಥೆಂಥ ಹೆಣ್ಣು ಜೀವ ಇದೆ ಎಂಬುದನ್ನು ಆತ ತಿಳಿದಿದ್ದ....

ಸ್ತ್ರೀಯರ ಅಪಹರಣ. ಹಲವರ ಪಾಲಿಗೆ ಆತ ರಾಕ್ಷಸನಾದ. ಪ್ರತಿ

ಭಟನೆಯ ಉಸಿರು ಬಿಟ್ಟವರ ಬೆನ್ನಿನ ಮೇಲೆ ರಾಮಪ್ಪಯ್ಯನ ಬಂಟರು ಬರೆ ಎಳೆದರು. ಆತ್ಮರಕ್ಷಣೆಗೆಂದು ಕೈಎತ್ತಿದವರನ್ನು, ಹೆಡೆಮುರಿ ಕಟ್ಟಿ, ಧೊರೆಯ ಕಾಲಬುಡಕ್ಕೆ ತಂದೊಪ್ಪಿಸಿದರು. ಕಂಬಕ್ಕೊರಗಿಸಿ ನಿಲ್ಲಿಸಿ, ಹುರಿಹಗ್ಗದಿಂದ ಬಿಗಿದು, ಕುಟ್ಟಿದ ಮೆಣಸಿನ ಪುಡಿಯನ್ನು ಕಣ್ಣಿಗೆ ಎರಚಿದರು. ಮೀಸೆಗಳನ್ನು ಕಿತ್ತುಹಾಕಿದರು. ಅಸಹ್ಯ ಮಾತುಗಳಿಂದ ಮತ್ತೂ ಹೆಚ್ಚಿನ ನೋವು ಉಂಟು ಮಾಡಿದರು.

ಅಟ್ಲೂರಿನಲ್ಲಿದ್ದ ಆತನ ಮನೆಯೇ – ಅಲ್ಲ ಅರಮನೆಯೇ – ಆ ಧೊರೆಯ ದುರ್ಗವಾಯಿತು. "ಗುರುವ!" ಎಂದರೆ ಸಾಕು. "ಉಳ್ಳಯ್ಯಾ!" ಎಂದು ಓಡಿಬರುತಿದ್ದ ಸಶಸ್ತ್ರ ಚಾಕರ. ಹಾಗೆಯೇ ತನಿಯ, ತುಕ್ರ.... ಎಷ್ಟೊಂದು ಜನ! ಸುಬ್ಬಯ್ಯನಂತೂ ಚಿಗುರು ವೀಳೆಯದೆಲೆಗೆ ಸುಣ್ಣ ಹಚ್ಚಿ ಕೊಡುವುದಕ್ಕೆಂದೇ ನೇಮಕಗೊಂಡಿದ್ದ.

ನಾಳೆ ಏನಾಗುವುದೋ ಎಂದು ತತ್ತರಿಸುತಿದ್ದರೆ, ಧಿಮಾಕಿನಿಂದ ಆರ್ಭಟ ಅಟ್ಟಹಾಸಗಳನ್ನು ಮಾಡುತ್ತಾ ರಾಮಪ್ಪಯ್ಯ ಹೊತ್ತು ಕಳೆದ.

ಅತ್ಯಂತ ಅಸಹನೀಯವಾಗಿ ಜನರಿಗೆ ಕಂಡುದು ಅಣ್ಣಿಗೌಡನ ಪ್ರಕರಣ.

ಅದು ತೋಳ ಕುರಿಮರಿಯ ನ್ಯಾಯ.

'ನೀನಲ್ಲದಿದ್ದರೆ ನಿನ್ನಪ್ಪ ಇರಬೇಕು. ಬಿಟ್ಟುಕೊಡು ಆಸ್ತಿಯನ್ನು!' ಎಂದ ರಾಮಪ್ಪಯ್ಯ.

ಅಣ್ಣಿಗೌಡ ಜಪ್ಪಯ್ಯ ಎನ್ನಲಿಲ್ಲ. ದಿಟ್ಟತನದಿಂದ ಆತನೆಂದ:

'ಭೂಮಿತಾಯಿ ತನ್ನ ಸಂತಾನಕ್ಕೆಲ್ಲ ಸಾಕಾಗುವಷ್ಟು ಕೊಟ್ಟದ್ದಾಳೆ. ನಾನು ಮೈಬಗ್ಗಿಸಿ ಬೆವರು ಸುರಿಸಿ ಮಾಡಿದ್ದು ನನ್ನದು. ಅದು ನನ್ನ ಅನ್ನ. ಅದನ್ನು ಕಸಿದುಕೊಳ್ಳೋದಕ್ಕೆ ನೀವು ಯಾರು?'

ರಾಮಪ್ಪಯ್ಯ ಅಬ್ಬರಿಸಿದ:

'ನಾನೆ? ನಾನು ಹತ್ತೂರ ಧೊರೆ! ಅಮರ ಪಡ್ನೂರು ಕಡಬ ಸುಳ್ಯಗಳಿಗೆಲ್ಲ ಯಾರೂಂತ ಕೇಳಿ ಬಲ್ಲೆ? ಹಾಕು ಮಗನೇ, ರುಜು ಹಾಕು! ಇವತ್ತಿನಿಂದ ನಿನ್ನ ಯಾವತ್ತೂ ಆಸ್ತಿ ನನ್ನದು.'

'ಹಾಕೋದಿಲ್ಲ. ನ್ಯಾಯ ಈ ಊರಲ್ಲಿ ಸತ್ತೇಹೋಯ್ತೊ?'

'ಗುರುವ! ಲಗಾವ್!'

'ಹಾಯ್ ! ಆಯ್ !'

'ಅಹ್ಹಾ ! ಏನ್ಹೇಳ್ತೀಯಾ ಈಗ?'

'ಪಾಪಿ ! ದೇವರು ನಿನಗೆ ಶಿಕ್ಷೆಕೊಡ್ತಾನೆ. ನೋಡ್ಕೊ!'

'ದೇವರು ನಿನ್ನಂಥಾ ಮೂರ್ಖರ ಸಹಾಯಕ್ಕೆ ಬರೋದಿಲ್ಲ, ಅಣ್ಣಿ!'

ಪ್ರಜ್ಞಾ ಹೀನನಾಗಿ ಮುದುಡಿಬಿದ್ದ ಅಣ್ಣಿಗೌಡ. ರಾಮಪ್ಪಯ್ಯ ತನ್ನ ಭಟರಿಗೆ ನಿರ್ದೇಶವಿತ್ತ :

'ಇವನನ್ನು ತೋಪಿನ ಆಚೆಗೆ ಎಸೆಯಿರಿ ! ಇವನ ಹೊಲ ತೋಟ ವಶಪಡಿಸಿಕೊಳ್ಳಿ ! ಸಂಸಾರವನ್ನು ಮನೆಬಿಟ್ಟು ಓಡಿಸಿ!'

ಬಾಡಿಗೆಯ ಆಳುಗಳು ಧೊರೆಯ ಆ ಆಜ್ಞೆಯನ್ನು ಪರಿಪಾಲಿಸಿದರು.

ನಿಧಾನವಾಗಿ ಚೇತರಿಸಿಕೊಂಡ ಅಣ್ಣಿಗೌಡ, ಬಹಳ ದಿನಗಳ ಬಳಿಕ ಎದ್ದು ಓಡಾಡಲು ಶಕ್ತನಾದ. ಸೇಡಿನ ಕೆಂಡ ಆತನ ನಾಲಗೆಯ ಮೇಲೆಯೇ ನರ್ತಿಸಿತು. ಊರಿನ ಪ್ರಮುಖರಿಗೆಲ್ಲ ಆತ ಆಹ್ವಾನವಿತ್ತ: 'ಬಂದೇ, ನ್ಯಾಯ ದೊರಕಿಸಿಕೊಡಿ. ಇಲ್ಲವೆ, ಆತನನ್ನು ಕೊಲ್ಲೋದಕ್ಕೆ ನನಗೆ ಸಮ್ಮತಿ ನೀಡಿ !'........

........ಹೊಗೆಯಾಡುತ್ತಲಿದ್ದ ಅಮರ ಸುಳ್ಯ.

ಪುಟ್ಟಬಸವ ತಲೆದೂಗಿದ :

"ರಾಮಗೌಡರೆ, ಇಂಥ ರಾಕ್ಷಸ ಸಂತಾನವೆಲ್ಲ ನಮ್ಮ ವೀರಗತ್ತಿಗೆ ಬಲಿಯಾಗಲೇ ಬೇಕು. ಅಣ್ಣಿಗೌಡರಿಗೆ ಅಭಯ ನೀಡಿದಿರೋ ಇಲ್ಲವೋ ?"

ರಾಮಗೌಡ ಮರುನುಡಿದ :

"ನೀಡದೆ ಉಂಟೆ? ಆತನ ಮಾತು ಕೇಳಿದರೆ ದುರ್ಬಲ ತೋಳಿನಲ್ಲೂ ಶಕ್ತಿಯ ಸಂಚಾರವಾಗ್ತದೆ. ಸಾತ್ವಿಕನಾದ ಮನುಷ್ಯ ಹ್ಯಾಗಾದ ಅಂತ!"

"ಸ್ವಾಭಾವಿಕ. ಅಂಥವರ ಕೈಯಲ್ಲೇ ಖಡ್ಗಕ್ಕೆ ಆವೇಶ ಬರೋದು."

"ಒಮ್ಮೆ ಸ್ವಾತಂತ್ರ್ಯ ಬಾವುಟದ ಸುತ್ತಲೂ ಜನ ನೆರೀಲಿ. ಆಮೇಲೆ ಅವರನ್ನು ಅದುಮಿ ಹಿಡಿಯೋದು ಯಾರಿಂದಲೂ ಸಾಧ್ಯವಾಗದು."

ಹಾಗೆ ಜನ ನೆರೆಯುವ ನಾಳೆಯ ಕಲ್ಪನೆ ಎಲ್ಲರನ್ನೂ ಭ್ರಮೆಯ ಲೋಕಕ್ಕೊಯ್ದಿತು ಕ್ಷಣಕಾಲ.

ರಾಮಗೌಡನ ದೃಷ್ಟಿ ಪುಟ್ಟಬಸವನ ಮೇಲೆಯೇ ನೆಟ್ಟಿತು. ಹಿಂದಕ್ಕೆ

ಸರಿದಿದ್ದ ನುಣುಪಾದ ತಲೆಗೂದಲು, ಹರವಾದ ಹಣೆ, ಕುಡಿಮೀಸೆ, ಗಾಂಭೀರ್ಯವನ್ನು ಸೂಸುತ್ತಿದ್ದ ಗಲ್ಲ, ಯೋಚನೆಯಲ್ಲಿ ಮಗ್ನನಾದಾಗಲೂ ಮೆರೆಯುತಿದ್ದ ಮಂದಹಾಸ, ವಿಶಾಲವಾದ ಎದೆ....

ತೀರ್ಮಾನವಾಗದೆ ಉಳಿದಿದ್ದ ಬಹುಮುಖ್ಯವಾದೊಂದು ವಿಷಯವನ್ನು ಪ್ರಸ್ತಾಪಿಸುತ್ತ ನಂಜಯ್ಯನೆಂದ:

ದಿನ ಗೊತ್ತು ಮಾಡೋದು ವಾಸಿ, ಅಲ್ವೆ?"

ಆವರೆಗೂ ಮೌನವಾಗಿಯೇ ಕುಳಿತಿದ್ದ ಮಾಚಯ್ಯನೆಂದ:

"ಇನ್ನು ಒಂದು ವಾರದೊಳಗೆ ಕೊಯ್ಲು ಶುರುವಾಗ್ತದೇಂತ ಸೋಮಯ್ನೋರು ಅಂದರು."

"ನಮ್ಮಲ್ಲಂತೂ ಕೊಯ್ಲಿನ ಕೆಲಸ ಮುಗೀತಾ ಬಂತು," ಎಂದ ರಾಮಗೌಡ.

"ಈ ತಿಂಗಳಲ್ಲೇ ಶುರು ಮಾಡೋಣ. ಆಗದೆ ನಂಜಯ್ಯನವರೆ?"

"ಆದೀತು."

"ಹಾರುವಯ್ಯನೋರಿಗೆ ಹೇಳಿ ಕಳಿಸೋಣವೋ? ದಿನ ನಿಷ್ಕರ್ಷೆ ಮಾಡಲಿ."

ಆ ವಿಷಯವಾಗಿ ಆಗಲೆ ಯೋಚಿಸಿದ್ದ ರಾಮಗೌಡನೆಂದ:

"ನಿಮಗೆಲ್ಲಾ ಒಪ್ಪಿಗೆಯಾಗೋ ಹಾಗಿದ್ದರೆ ನಾನೊಂದು ಸೂಚನೆ ಮಾಡ್ತೀನಿ."

"ಅಗತ್ಯವಾಗಿ ಹೇಳಿ" ಎಂದ ಪುಟ್ಟಬಸವ.

"ಕೊಡಗಿನಲ್ಲಿ ತಯಾರಿ ನಡೀತಾನೇ ಇರಲಿ. ಯುಗಾದಿ ದಿವಸ ಸುಳ್ಯದಲ್ಲಿ ಸ್ವಾತಂತ್ರ್ಯ ಜಾಹೀರು ಮಾಡಿ ಮುಂದಕ್ಕೆ ಹೊರಡೋಣ."

ಆ ಸೂಚನೆಯನ್ನು ಕುರಿತೇ ಎಲ್ಲರೂ ಯೋಚಿಸಿದರು.

ಪುಟ್ಟಬಸವನ ದೃಷ್ಟಿ ತನ್ನೆಡೆಗೆ ಸರಿದುದನ್ನು ಕಂಡು ಚೆಟ್ಟಿ ನುಡಿದ:

"ಆಗಬೌದೂಂತ ತೋರ್‍ತೀತೆ."

ನಂಜಯ್ಯನೂ ಸಮ್ಮತಿ ಸೂಚಕವಾಗಿ ತಲೆಯಾಡಿಸಿದ.

ಪುಟ್ಟಬಸವ ನಕ್ಕು ನುಡಿದ:

"ಗೌಡರು ಎಲ್ಲಾ ಮೊದಲೇ ತೀರ್ಮಾನಿಸ್ಕೊಂಡು ಬಂದಿರೋ ಹಾಗಿದೆ!"

ರಾಮುಗೌಡನ ಮುಖ ಹೆಮ್ಮೆಯಿಂದ ರಂಗೇರಿತು. ಕಣ್ಣುಗಳು ಮಿಂಚಿದುವು.

ಮುಂದೆ ಆಡಬೇಕಾಗಿದ್ದ ಮಾತಿಗೆ ಎಂತಹ ಪೀಠಿಕೆಯಾಗಿತ್ತು ಆ ಪ್ರಶಂಸೆ! ಆದರೂ ಆ ಪ್ರಸ್ತಾಪವನ್ನು ಹೇಗೆ ಮಾಡಬೇಕೆಂಬುದು ಗೌಡ ನಿಗೆ ತಿಳಿಯದೆ ಹೋಯಿತು.

ಆ ತೊಂದರೆಯನ್ನು ನಿವಾರಿಸುವಂತೆ ಪುಟ್ಟಬಸವನೇ ನುಡಿದ:

"ಈಗೇನೋ ನಾವೆಲ್ಲಾ ಸೈನ್ಯಗಳಿಲ್ಲದ ಸರದಾರರು. ನಾಳೆ ಜನರು ಜಮೆಯಾದಾಗ ಯಾರು ಯಾರು ಎಲ್ಲೆಲ್ಲಿಗೆ ಹೋಗಬೇಕು ಅನ್ನೋದೂ ನಿಶ್ಚಯವಾಗಲಿ."

ಅದೇ ಸಂದರ್ಭವೆಂದು ರಾಮುಗೌಡ ಮುಂದುವರಿದ:

"ಕೊಡಗಿನ ಏರ್ಪಾಟನ್ನು ಬೇರೆ ಸರದಾರರಿಗೆ ಬಿಟ್ಟು ನೀವು ನಾಲ್ಕು ಜನರೂ ಸುಳ್ಯಕ್ಕೆ ಬರೋದು ಸಾಧ್ಯವಾದೀತೇನು?"

"ಯಾಕೆ ಸಾಧ್ಯವಾಗದು?" ಎಂದ ನಂಜಯ್ಯ.

"ಅರಸರ ಕಡೆಯವರೇ ಬಂದಿದಾರೆ ಎಂದರೆ ಜನರಿಗೆ ಹೆಚ್ಚು ವಿಶ್ವಾಸ ಉಂಟಾಗ್ತದೆ. ಕನ್ನಡ ಜಿಲ್ಲೆಯನ್ನು ಜಯಿಸೋದು ಬಹಳ ಸುಲಭ. ಅದನ್ನು ಮುಗಿಸ್ಕೊಂಡು ನಾವೆಲ್ಲಾ ಕೊಡಗಿಗೆ ಬಂದು ಮಡಿಕೇರಿಯ ಕೋಟೆ ಹಿಡೀಬಹುದು. ಅಷ್ಟು ಹೊತ್ತಿಗೆ ಇಲ್ಲಿಯೂ ಸಾಕಷ್ಟು ಕೆಲಸ ಆಗಿರ್ತದೆ."

ಪುಟ್ಟಬಸವ ಹೊಂಗುಟ್ಟಿ ನುಡಿದ:

"ಸರಿ."

ಈಜುಗಾರ ನೀರಿಗೆ ಧುಮುಕುವುದಕ್ಕೆ ಮುಂಚೆ ಮೈಯಾಡಿಸುವಂತೆ ಭುಜಗಳನ್ನು ಕುಲುಕಿ ರಾಮುಗೌಡನೆಂದ:

"ನೀವು ರಾಜರ ಸಂಬಂಧಿಕರೂಂತ ಜಾಹೀರು ಮಾಡ್ಬೇಕು."

ಪುಟ್ಟಬಸವ ಸೆಟೆದು ಕುಳಿತ.

"ನಿಮ್ಮ ಮಾತು ಅರ್ಥವಾಗಲಿಲ್ಲ!"

ನಿಮಗೂ ಅರ್ಥವಾಗಲಿಲ್ಲವೆ–ಎನ್ನುವ ಯಾಚನೆಯ ದೃಷ್ಟಿಯಿಂದ ರಾಮುಗೌಡ, ನಂಜಯ್ಯನನ್ನೂ ಕುಡಿಯ ಸೋದರರನ್ನೂ ನೋಡಿದ. ಎಲ್ಲ ಮುಖಗಳ ಮೇಲೂ ಪ್ರಶ್ನಾರ್ಥಕ ಚಿಹ್ನವನ್ನೇ ಕಂಡು, ವ್ಯಾಕುಲಗೊಂಡು, ಗೌಡ ವಿವರಿಸಿದ:

"ಇಂಗ್ಲಿಷರ ಮೇಲೆ ಯುದ್ಧ ಹೂಡೋದಕ್ಕೆ ನಿಮಗೆ ಅಧಿಕಾರ ಏನೂಂತ ಯಾರಾದರೂ ಕೇಳಬಹುದು. ನಮ್ಮ ನಾಯಕರು ರಾಜಮನೆತನ ದವರು, ರಾಜರ ಕಡೆಯುವರು ಅಂದರೆ, ಯಾವ ಸಂಶಯವೂ ಇನ್ನೋದಿಲ್ಲ."

"ಕ್ಷಮಿಸಿ ಗೌಡರೆ! ನಾವೇನಿದ್ದರೂ ವೀರರಾಜರ ಸೇವಕರು. ಅವರು ಕಾಶೀಲಿದ್ದಾರೆ. ಏನು ಮಾಡಿದರೂ ಅವರ ಹೆಸರಲ್ಲೇ ಮಾಡ್ತೇವೆಯೇ ಹೊರತು—"

ಪುಟ್ಟಬಸವನ ಧ್ವನಿ ಏರಿತ್ತು. ಗೌಡನೂ ಸ್ವರವೇರಿಸಿದ:

"ಯಾರು ಅಲ್ಲ ಅಂದೋರು? ನಾವೆಲ್ಲಾ ವೀರರಾಜರ ಪ್ರಜೆಗಳೇ. ಆದರೆ ಅವರು ಬರೋವರೆಗೆ ಕುಂಪಣಿಯವರ ಬದಲು ರಾಜ್ಯವಾಳೋದಕ್ಕೆ ನಮಗೆ ಹಕ್ಕೆಲ್ಲಿದೆ? ನಿಮ್ಮ ಮೂಲಕ ಆ ಹಕ್ಕು ನಮಗೆ ಬಂದಿದೇಂತ ಜನ ರಿಗೆ ಹೇಳ್ತೀವಿ."

"ಹಕ್ಕು ಯಾತಕ್ರೀ? ರಾಮ ವನವಾಸಕ್ಕೆ ಹೋದಾಗ ಭರತ ಸಿಂಹಾ ಸನದ ಮೇಲೆ ಅಣ್ಣನ ಪಾದುಕೆ ಇಟ್ಟು ರಾಜ್ಯಭಾರ ಮಾಡಿದ, ಗೊತ್ತೋ?"

"ಗೊತ್ತುಂಟು. ಆ ಭರತ ರಾಮನ ತಮ್ಮ ಆಗಿದ್ದ. ಅದನ್ನು ಮರೀಬೇಡಿ."

ನಂಜಯ್ಯನಿಗೆ ನಗು ಬಂತು.

"ನೀವು ಗೆದ್ದಿರಿ ರಾಮುಗೌಡರೆ," ಎಂದ ಆತ:

ಪುಟ್ಟಬಸವನೂ ನಸುನಕ್ಕು, ಕೇಳಿದ:

"ಇನ್ನು ನಾನು ರಾಜರ ಹಾಗೆ ಹೆಸರೂ ಬದಲಾಯಿಸ್ಬೇಕೊ?"

ರಾಮುಗೌಡನ ಪಾಲಿಗೆ ಅದು ನಗೆಮಾತಾಗಿರಲಿಲ್ಲ.

"ತಪ್ಪೇನು?"

"ಏನಂದಿರಿ? ಸಾಧ್ಯವಿಲ್ಲ! ಇದು ಮೋಸ!"

ರಾಮುಗೌಡ ಉಗುಳು ನುಂಗಿ, ಕೆಲ ನಿಮಿಷಗಳ ಕಾಲ ಮೌನವಾಗಿ ಕುಳಿತ. ಈ ರೀತಿಯ ವಿರೋಧ ಬಂದೀತೆಂದು ಆತ ನಿರೀಕ್ಷಿಸಿಯೇ ಇರಲಿಲ್ಲ. ಮುಂದೆ ತಾನು ವಹಿಸಬೇಕಾದ ವಾಗ್ಧೋರಣೆಯನ್ನು ರೂಪಿಸಿ, ಆತ ಮೆಲು ಧ್ವನಿಯಲ್ಲಿ ಮತ್ತೆ ಮಾತಿಗೆ ಆರಂಭಿಸಿದ.

"ಇವನು ಎಂಥವನಪ್ಪ ಶಕುನಿ - ಅಂತ ನಿಮಗೆ ತೋರೀತು. ನೀವಾ ಗಲೀ ನಂಜಯ್ಯನವರಾಗಲೀ ಇಲ್ಲಿರುವ ಯಾರೇ ಆಗಲೀ ರಾಜಕಾರ್ಯ ತಿಳಿ

ಯದವರಲ್ಲ. ಅಗತ್ಯ ಬಿದ್ದಾಗ ಒಂದಕ್ಕಿಂತ ಹೆಚ್ಚು ಹೆಸರು ಇಟ್ಟುಕೊಳ್ಳೋದರಲ್ಲಿ ಏನು ತಪ್ಪು? ಯಾರು ಎನ್ನುವುದು ತಿಳೀದೆ ಇಂಗ್ಲಿಷರು ಗಾಬರಿಯಾಗ್ಬೇಕು. ಪ್ರಜೆಗಳ ದೃಷ್ಟಿಯಿಂದಲೂ ಅದು ಅಗತ್ಯವೇ. ಇವೆಲ್ಲಾ ಒಬ್ಬಿಬ್ಬರು ಸರದಾರರ ಆಟ ಎನ್ನುವ ಅಭಿಪ್ರಾಯಕ್ಕೆ ಯಾಕೆ ಎಡೆ ಕೊಡ್ಬೇಕು? ಯೋಚಿಸಿ ನೋಡಿ...."

ಮತ್ತೆಯೂ ಮೌನ ನೆಲೆಸಿತು.

ರಾಮಗೌಡನ ವಿಷಯದಲ್ಲಾಗಲೆ ಆದರಭಾವವನ್ನು ತಳೆದಿದ್ದ ನಂಜಯ್ಯ, ನಸುನಕ್ಕು, ಪುಟ್ಟಬಸವನನ್ನು ನೋಡುತ್ತ ಕೇಳಿದ:

"ಬೇರೆ ಯಾವ್ದೂ ಹೆಸರಿಲ್ವಾ ನಿಮಗೆ?"

"ನೀವೆಲ್ಲಾ ತಮಾಷೆ ಮಾಡ್ತಿದೀರೋ ಹ್ಯಾಗೆ?" ಎಂದ ಪುಟ್ಟಬಸವ ಸಿಟ್ಟಾಗುತ್ತಾ.

"ಪುಣ್ಯಾತ್ಮ! ಅಗತ್ಯ ಬಿದ್ರೂಂತ ಸದಾಶಿವ ಕತ್ತೆ ಕಾಲು ಹಿಡಿದ ಅನ್ನೋದು ಕೇಳಿಲ್ವಾ? ಆ ಇಂಗ್ಲಿಷರೋನು ತಾನು ವ್ಯಾಪಾರಕ್ಕೆ ಬಂದೋನೂಂತ ಸುಳ್ಳು ಹೇಳ್ಕೊಂಡೇ ಅಲ್ವಾ ಈ ದೇಶಕ್ಕೆ ಕಾಲಿಟ್ಟದ್ದು? ನೀವು ಸುಮ್ನಿರಿ ಪುಟ್ಟಬಸಪ್ಪನವರೆ. ರಾಮಗೌಡರು ತಿಳಿವಳಿಕೆಯಿಂದ್ಲೇ ಒಳ್ಳೇ ಮಾತು ಆಡಿದಾರೆ. ನಿಮಗೆ ನಾವೇ ಇನ್ನೊಂದು ನಾಮಕರಣ ಮಾಡ್ತೀವಿ."

ಚೆಟ್ಟಿ – ಕರ್ತರ್ ಇಬ್ಬರಿಗೂ ನಗು ಬಂತು. ಪುಟ್ಟಬಸವನ ಸಿಟ್ಟುಗೊಂಡಿದ್ದ ಮುಖ ಶಿಥಿಲವಾಗಿ, ಮತ್ತೆ ಮಂದಹಾಸ ಮೂಡುವುದನ್ನೇ ಮಾಚಯ್ಯ ನಿರೀಕ್ಷಿಸಿದ. ರಾಮಗೌಡ, ತಾನಿನ್ನು ಗೆದ್ದಂತೆಯೇ ಎಂಬ ಮುಖಭಾವವನ್ನು ತೋರ್ಪಡಿಸಿದ.

ಪುಟ್ಟಬಸವನ ಬಿಗಿದಿದ್ದ ತುಟಿಗಳು ಮತ್ತೆ ಅರಳಿದುವು.

"ನಾನು ಸೋತುಹೋದೆ. ಆದರೆ ದಯವಿಟ್ಟು ಪೂರ್ತಿಯಾಗಿ ನನ್ನ ಮಾನ ಕಳೀಬೇಡಿ! ನನಗೆ ನಮ್ಮವರೇ ಇಟ್ಟರೋ ಇನ್ನೊಂದು ಹೆಸರಿದೆ. ಇದು ಸಾಕಾಗುತ್ತೋ ನೋಡಿ."

"ಯಾವುದು?" ಎಂದ ನಂಜಯ್ಯ.

"ನಾನು ಚಿಕ್ಕೋನಿದ್ದಾಗ ನಮ್ಮ ಸ್ವಾಮಿಯೋರು ಇಲ್ಲಿಗೆ ದಯಮಾಡಿಸಿದ್ರು. ನನ್ನನ್ನು ನೋಡಿ ಅವರು, 'ಕಲ್ಯಾಣಪ್ಪ ಇಲ್ಲಿ ಬಾ ಮಗೂ–' ಅಂದರು. 'ನನ್ನ ಹೆಸರು ಪುಟ್ಟಬಸ್ವಾಂತ'–ಎಂದೆ. 'ಇರಲಿ ಬಿಡಪ್ಪ.

ಆ ಕಲ್ಯಾಣಸ್ವಾಮಿ ಕೃಪೆ ಇದ್ದಿದ್ರಿಂದ್ಲೇ ನೀನು ಹೀಗೆ ಬೆಳೀತಾ ಇದೀಯೆ' ಎಂದರು ಆಮೇಲೆ ನಮ್ಮಜ್ಜಿ ಇರೋ ವರೆಗೂ ಒಮ್ಮೊಮ್ಮೆ ನನ್ನನ್ನು ಕಲ್ಯಾಣಪ್ಪ ಅಂತ ಆಕೆ ಕರೆಯೋದಿತ್ತು."

ರಾಮಗೌಡ ಥಟ್ಟನೆ ಕುಳಿತಲ್ಲಿಂದೆದ್ದ. ಯುವಕನ ಉತ್ಸಾಹದಿಂದ ಪುಟ್ಟಬಸವನೆಡೆಗೆ ಜಿಗಿದ. ಆತನ ಎರಡೂ ಕೈಗಳನ್ನೆತ್ತಿ ಆ ಅಂಗೈಗಳಲ್ಲಿ ತನ್ನ ಮುಖವಿರಿಸಿದ. ಎದೆ ಉದ್ವೇಗದಿಂದ ಏರಿ ಇಳಿಯಿತು. ಕಣ್ಣುಗಳಲ್ಲಿ ಕಂಬನಿ ತುಂಬಿತು. ಗಂಟಲಿನಿಂದ ಗೊಗ್ಗರ ಧ್ವನಿ ಹೊರಟಿತು:

"ಕಲ್ಯಾಣಸ್ವಾಮಿ ! ಕಲ್ಯಾಣಸ್ವಾಮಿ !"

ಈ ಭಾವಪ್ರದರ್ಶನ ಪೂರ್ವಾಲೋಚನೆ ಇಲ್ಲದೆಯೇ ನಡೆದ ಘಟನೆ.

ರಾಮಗೌಡ ಮುಖವೆತ್ತಿ ಪುಟ್ಟಬಸವನ ಬಲಮಗ್ಗುಲಲ್ಲಿ ನೇರವಾಗಿ ನಿಂತು, ಎಳೆಯ ಮಗುವಿನಂತೆ ಹರ್ಷಾತಿರೇಕದಿಂದ ನುಡಿದ:

"ಕಲ್ಯಾಣಸ್ವಾಮಿ ನಮ್ಮ ನಾಯಕರು ! ಅರಸರ ಪರವಾಗಿ ನಮ್ಮನ್ನೆಲ್ಲ ನಡಸಿಕೊಂಡು ಹೋಗೋ ರಾಜ್ಯಪಾಲರು !"

ಆ ಕ್ಷಣ, ಆ ಮಾತೇ ಉಳಿದವರ ಹೃದಯಗಳಲ್ಲೂ ಮಾರ್ದನಿಗೊಂಡಿತು.

ರಾಮಗೌಡ ಮತ್ತೊಮ್ಮೆ ಪುಟ್ಟಬಸವನ ಅಂಗೈಗಳನ್ನು ಮುದ್ದಿಸಿ, ಕವಾಯತಿನ ಬಯಲನ್ನು ಬಿಟ್ಟೋಡುವ ಹುಡುಗನಂತೆ ಅಡ್ಡಾದಿಡ್ಡಿಯಾಗಿ ಕಾಲಿಡುತ್ತ, ತಾನು ಹಿಂದೆ ಕುಳಿತಿದ್ದೆಡೆಗೇ ಬಂದ.

ನಂಜಯ್ಯ ತುಸು ಕಂಪಿಸುತಿದ್ದ ಸ್ವರದಲ್ಲಿ ನುಡಿದ:

"ಇಂಥ ದಿನ ಹೀಗೆ ಒದಗಿ ಬಂದೀತೂಂತ ನಾನು ಭಾವಿಸಿರ್ಲಿಲ್ಲ. ಒಳ್ಳೇದಾಯ್ತು !"

ಆ ಹೊಸ ಪರಿಸ್ಥಿತಿಗೆ ಕಾರಣನಾದ ರಾಮಗೌಡನನ್ನು ಕರೆದು ತಂದ ಹೆಮ್ಮೆಗೆ, ತಾನೊಬ್ಬನೇ ಹಕ್ಕುದಾರನೆಂದು ಮಾಚಯ್ಯ, ಎದೆ ಮುಖಗಳನ್ನು ಉಬ್ಬಿಸಿ ಕುಳಿತ.

ಒಂದು ಘಟ್ಟ ಮುಗಿಯಿತೆಂಬಂತೆ ನೀಳವಾಗಿ ಪುಟ್ಟಬಸವ ಉಸಿರು ಬಿಟ್ಟ.

....ಅಡುಗೆ ಮನೆಯಲ್ಲಿ ಸೊಸೆಗೆ ನೆರವಾಗುತ್ತ ಕುಳಿತಿದ್ದ ಗಂಗವ್ವ, ಮೆಲ್ಲನೆ ನಡೆದು ಜಗಲಿಗೆ ಬಂದಳು. ಮಗನೂ ಆತನ ಸ್ನೇಹಿತನೂ ಅಲ್ಲಿಯೇ

ಇದ್ದುದನ್ನು ಗಮನಿಸಿ ಅಕೆ ಅಂದಳು:

"ಇನ್ನು ಒಂದು ಘಳಿಗೇಲಿ ಊಟ ತಯಾರಾಗ್ತೇತೆ. ನೀವೆಲ್ಲಾ ಮೈ ತೊಳಕೊಂಡು ಬರೋಹಂಗಿದ್ರೆ ಓಗ್ಬನ್ನಿ."

"ಹೂನವ್ವಾ," ಎಂದ ಪುಟ್ಟಬಸವ.

ರಾಮಗೌಡನೆಂದ:

"ಇವತ್ತು ನಾನೂ ಇಲ್ಲೇ ಊಟಕ್ಕೇಳ್ತೀನಿ ತಾಯಿ."

ಆತ ಮಾಚಯ್ಯನ ಜೊತೆಗೆ ಬಂದವನೆಂಬುದನ್ನು ಆ ಸ್ವರದಿಂದಲೇ ಗುರುತಿಸಿ ಗಂಗವ್ವನೆಂದಳು:

"ಹೂ ಕಣಪ್ಪಾ. ನಿಮಗೂ ಅಡುಗೆ ಮಾಡಿವ್ನಿ."

ನಂಜಯ್ಯ ಪುಟ್ಟಬಸವನನ್ನು ಕುರಿತು ಹೇಳಿದ:

"ಏಳಿ ಸ್ವಾಮಿಯವರೆ. ಇನ್ನು ಯೋಚಿಸಬೇಕಾದ್ದು ಏನೂ ಉಳೀಲಿಲ್ಲ. ನಡೀರಿ. ಸ್ನಾನಕ್ಕೆ ಓಗಾನ"

ಯಾರು ? ಯಾವ ಸ್ವಾಮಿಯವರು ?

ಗಂಗವ್ವನಿಗೊಂದೂ ಗೊತ್ತಾಗಲಿಲ್ಲ.

೩

ಸೋಮಯ್ಯನ ಮನೆಗೆ ರಾತ್ರಿ ಅವರೆಲ್ಲ ಊಟಕ್ಕೆ ಹೋದರು. ಅದು ಬಾಂಧವರಿಗಾಗಿ ಏರ್ಪಡಿಸಿದ್ದ ಔತಣ. ಪುಟ್ಟಬಸವನಂತೆ ಶಾಕಾಹಾರಿಗಳೂ ಕೆಲವರು ಅಲ್ಲಿದ್ದರು. ಆದರೆ ಉಳಿದ ಹೆಚ್ಚಿನವರಿಗೋಸ್ಕರ, ಕಾಡುಗಳಲ್ಲಿ ಬೇಟೆಯಾಡಿ ತರಕಾರಿ ತರಲಾಗಿತ್ತು. ಕುಡಿಯಲು, ಸಿದ್ಧವಾಗಿತ್ತು ವಿವಿಧ ಹಣ್ಣುಗಳನ್ನು ಭಟ್ಟಿ ಇಳಿಸಿ ತಯಾರಿಸಿದ್ದ ಸಾರಾಯಿ.

ಪುಟ್ಟಬಸವ ಕುಡಿಯಲಿಲ್ಲ. ಕುಡಿಯುವ ಅಭ್ಯಾಸವೇ ಇರಲಿಲ್ಲ ಆತನಿಗೆ. ಮಾಂಸದ ಅಡುಗೆ ನಂಜಯ್ಯನಿಗೆ ಇಷ್ಟವಿರಲಿಲ್ಲವಾದರೂ ಕುಡಿತ ಪ್ರಿಯವಾಗಿತ್ತು.

ಶುದ್ಧ ಶಾಕಾಹಾರಿಗಳಿಗೆಂದೇ ಸಿದ್ಧವಾಗಿದ್ದುವು, ಭಕ್ಷ್ಯ ಭೋಜ್ಯಗಳು, ಒಡೆ ಪಾಯಸಗಳು.

ಪುಟ್ಟಬಸವನ ಮಗ್ಗುಲಲ್ಲೇ ಕುಳಿತಿದ್ದ ರಾಮಗೌಡ. ಬುಡ್ಡಿಗಳು ಒಂದೊಂದಾಗಿ ಬರಿದಾಗುತ್ತಿದ್ದರೂ ಆತ ಎಚ್ಚರ ತಪ್ಪಿರಲಿಲ್ಲ. ನಾಲಗೆ ತಡವರಿಸಲಿಲ್ಲ. ಕಣ್ಣುಗಳು ಮಾತ್ರ ಮಾದಕವಾದುವು, ಅಷ್ಟೆ.

ಬಾರಿಬಾರಿಗೂ ಪುಟ್ಟಬಸವನೆಡೆಗೆ ನೋಡುತ್ತಲಿದ್ದ ಆತ ಕೇಳಿದ:

"ಸ್ವಾಮಿಯವರಿಗೆ ಇಂಥಾ ಅಭ್ಯಾಸ ಒಂದೂ ಇಲ್ಲ ಹಾಗಾದರೆ."

ನಸುನಕ್ಕು ಪುಟ್ಟಬಸವನೆಂದ:

"ಇಲ್ಲ ಗೌಡರೆ."

ಆ ಸಂಭಾಷಣೆ ಕೇಳಿಸಿತು ನಂಜಯ್ಯನಿಗೆ. ಆತನ ವಿಚಾರದ ವೀಣೆಯಿಂದ ಆಗಲೇ ಅಪಸ್ವರ ಹೊರಡತೊಡಗಿತ್ತು. ನಾಲಗೆಯೂ ಪದಗಳನ್ನು ಜಗ್ಗಿ ಎಳೆಯುತಿತ್ತು. ಆತನೆಂದ:

"ಅವರದೇನು ಕೇಳ್ತೀರಿ? ಅವರಿನ್ನೂ ಮಗುವೇ. ಕೇಳ್ನೋಡಿ, ಹೌದೋ ಅಲ್ಲವೊ ಅಂತ."

"ಅಂದರೆ?" ಎಂದು ಕೇಳಿದ ಕರಿಯಪ್ಪ, ತನಗೆ ಅರ್ಥವಾಗಲಿಲ್ಲವೆಂದು.

ಉತ್ತರ ಕೊಡುವುದಕ್ಕೆ ಮುಂಚೆ ನಂಜಯ್ಯ 'ಖೊ ಖೊ ಖೋ' ಎಂದು ನಕ್ಕ.

"ಅಲ್ಲೋ ಕರಿಯಪ್ಪ, ನಿನಗಾದರೂ ಹ್ಯಾಗೆ ತಿಳೀಬೇಕು? ನೀನೂ ಮಗುವೇ!"

"ಸ್ವಾಮಿಯವರಿಗೆ ಲಗ್ನವಾಪರೂ ಆಗಿದೆ," ಎಂದ ಸೋಮಯ್ಯ.

"ಅದೇನಿದ್ರೂ ಮಕ್ಕಳಾಗೋವರೆಗೂ ಮಗೂನೆ ಕಣಪ್ಪಾ!"

ಆ ಮಾತು ಕೇಳಿ ಉಳಿದ ಕೆಲವರೂ ನಕ್ಕರು.

ಆ ನಗೆಗಡಲಿನಲ್ಲಿ ತಾನೂ ತೇಲುತ್ತ ಪುಟ್ಟಬಸವ ನುಡಿದ:

"ಪ್ರತಿಯೊಂದಕ್ಕೂ ಸಮಯ ಒದಗ್ಬರ್ಬೇಕು ಕಣ್ರಪ್ಪೋ."

"ಹೊ ಹ್ಹೊ ಹ್ಹೋ!" ಎಂದ ನಂಜಯ್ಯ, "ಭೇಷ್! ಇಂಗ್ಲಿಷಿನೋರನ್ನು ಕಡಲಿಗೆ ಎಸೆದ್ಮೇಲೆ ಪುಟ್ಟಬಸಪ್ನೋರು ದೊಡ್ಡಬಸಪ್ನಾಗ್ತಾರೆ! ಹ ಹ್ಹ ಹ್ಹಾ!"

ರಾಮಗೌಡನೆಂದ:

"ಆಮೇಲೆ ಸ್ವಾಮಿಯೋರು ನಮ್ಜತೆ ಕುಡೀತಾರೆ."

ಬೇರೆ ಮಾತುಗಳೂ ಕೇಳಿಸಿದುವು:

"ಕುಣೀತಾರೆ."

"ಹಾಡ್ತಾರೆ."

ಹೊರಗೆ ಅಂಗಳದಲ್ಲಿ ಅಗ್ಗಿಷ್ಟಿಕೆಯ ಕೆಂಡದ ಮೇಲೆ ಕೈ ಒಣಗಿಸುತಿದ್ದ ಒಬ್ಬ ಕೂಗಿಕೊಂಡ:

"ಯಾರಾದರೂ ಹಾಡ್ರಪ್ಪೋ."

ತಪೋಮಗ್ನ ಶಿವನಂತೆ ಕುಳಿತಿದ್ದ ಚೆಟ್ಟಿಯನ್ನು ಕುರಿತು ಪುಟ್ಟಬಸವ ಹೇಳಿದ:

"ಹಾಡಬಾರ್ದ ?"

ಕರಿಯ ಕಲ್ಲಿನಿಂದ ಕಡೆದ ವಿಗ್ರಹವಾಗಿದ್ದ ಚೆಟ್ಟಿ. ಎವೆಗಳಷ್ಟೇ ಆಗಾಗ್ಗೆ ಮುಚ್ಚಿ ತೆರೆದು, ಕೆಂಪಡರಿದ್ದ ಕಣ್ಣುಗಳನ್ನು ತೋರಿಸುತಿದ್ದುವು.

ತನ್ನನ್ನು ಉದ್ದೇಶಿಸಿ ಪುಟ್ಟಬಸವ ಮಾತನಾಡಿದನೆಂದು ಸಂತುಷ್ಟನಾದ ಚೆಟ್ಟಿ, ಮುಖದಗಲಕ್ಕೂ ನಗೆಯರಳಿಸಿ ನುಡಿದ:

"ಎಲ್ಲೈತೆ ದುಡಿ ?"

ಸೋಮಯ್ಯ ಮಕ್ಕಳನ್ನು ಕರೆದು ಹೇಳಿದ:

"ತಗಂಬನ್ನಿ ದುಡಿ. ಕಾಯಿಸಿ!"

ಅಗ್ಗಿಷ್ಟಿಕೆಯ ಉರಿಯನ್ನು ಬಲಗೊಳಿಸಿದರು. ಆ ಕಾರಿರುಳಲ್ಲೂ ಕರಿಯ ಬಿಳಿಯ ಗೋದಿ ಬಣ್ಣದ ಮೈಗಳನ್ನೆಲ್ಲ ಬೆಂಕಿ ಬೆಳಗಿತು. ಚೆಟ್ಟಿ ಗೋಸ್ಕರ ಜಾಗಬಿಟ್ಟು ಬೆಂಕಿಯ ಸುತ್ತಲೂ ಜನ ನೆರೆದರು. ನಿದ್ದೆಯ ಯೋಚನೆಯಿಲ್ಲದೆ ಚಿಕ್ಕವರೂ ಬಂದರು. ತಮ್ಮ ಊಟದ ಕೆಲಸವನ್ನು ಮುಗಿಸಿದ್ದ ಆ ಮನೆಯ–ಸುತ್ತಮುತ್ತಲಿನ– ಹೆಂಗಸರೂ ಕೂಡಾ. ಮನೆ ಬಾಗಿಲ ಬಳಿಯಲ್ಲೂ ಮೆಟ್ಟಲುಗಳ ಮೇಲೂ ಅವರು ಕುಳಿತರು.

ಎತ್ತರ ದೇಹದ ಚೆಟ್ಟಿ ಎದ್ದು ನಿಂತ. ದುಡಿಯ ತೂಗುದಾರ ಆತನ ಕೊರಳನ್ನು ಬಳಸಿತು.

'ಡುಮ್‌ಕಿ ಡಿಕಿ' ಎಂದು ದುಡಿಯನ್ನು ಸದ್ದುಮಾಡಿ ಚೆಟ್ಟಿ ಕೇಳಿದ:

"ಯಾವ ಹಾಡು ಹಾಡ್ಲಿ ?"

ಕರಿಯಪ್ಪನೆಂದ:

"ಯಾವುದಾದರೂ ಹಾಡ್ರೀ."

"ಬೆಳಕು ಹಬ್ಬದ ಪದ ಹೇಳ್ಲಿ ?"

ನಂಜಯ್ಯ ನಕ್ಕ.

"ಓಹೋ ! ಈ ಕಗ್ಗತ್ಲೇಲಿ ಬೆಳಕುಹಬ್ಬದ ಹಾಡೇ ಸರಿ !"

ಚೆಟ್ಟಿಯ ಭುಜ ಕುಲುಕಿತು. ಮೈ ಮಿಸುಕಿತು. ಕಮಾನಿನಂತೆ ಬಾಗುತ್ತ ದುಡಿಯನ್ನು ಮೇಲಕ್ಕೊಯ್ದು ಕೆಳಕ್ಕೆ ತಂದು, 'ಡುಮ್‌ಕಿ ಡಿಕಿ' ಎಂದ ಆತ. ತೆರೆದ ಬಾಯಿಂದ ಆಲಾಪನೆ ಹೊರಟು ಆ ಆವರಣವನ್ನು ಭೇದಿಸಿ, ಹೊಲಗಳನ್ನು ದಾಟಿ, ಅಡವಿಯತ್ತ ಹರಿಯಿತು.

ಚೆಟ್ಟಿ ಆರಂಭಿಸಿದ:

"ಹಿಗ್ಗಿ ಬೋಗಿ ಬೋಗಿ ಬೊ ! ಹೊ ! ಏಹಿ ! ಯೊ ! ಎಯ್ಯೊ !
ಏಹಿ ! ಯೊ !
ಹುರ್ ತೂಮು ! ಬೊಗಿ ಬೊ ಹೊ ! ಓ ಕುಯಿ ! ಏಹಿ ! ಏಹಿ !
ಯೊ ! ಎಯ್ಯೊ ! ಏಹಿ ! ಯೊ !"

ಮತ್ತೆ ಮತ್ತೆ ಆ ಸಾಲು. ಅಗ್ಗಿಷ್ಟಿಕೆಗೆ ಯಾರೊ ತರಗೆಲೆಗಳನ್ನು ಸುರಿದರು. ಭುಗ್‌ಭುಗಿಲೆಂದು ಹತ್ತಿಕೊಂಡಿತು ಬೆಂಕಿ. ಕೇಚಲು ಧ್ವನಿಯಲ್ಲಿ ಹುಡುಗರು ಕೂಗಾಡಿದರು. "ಹುಯ್ ‌!" ಎಂದ, ಉತ್ಸಾಹಿತನಾದ ನಂಜಯ್ಯ.

ಚೆಟ್ಟಿಯ ಸ್ವರವೇರಿತು. ಆತ ಆವೇಶಗೊಂಡು ಹಾಡಿದ. ಪಾದಗಳೂ ಆಗೊಮ್ಮೆ ಈಗೊಮ್ಮೆ ತಾಳಕ್ಕೆ ತಕ್ಕಂತೆ ಹಾರಿ ಕುಣಿದುವು. ಪ್ರತಿಯೊಂದು ಸಾರೆ ಮೈ ಕಮಾನಿನಂತೆ ಬಾಗಿ, ದುಡಿ ಮೇಲಕ್ಕೆ ಸರಿದು ಕೆಳಕ್ಕೆ ಇಳಿದಾಗಲೂ, ಬಲಿಬೀಸುವ ಬೆಸ್ತನಾಗುತ್ತಿದ್ದ ಈ ಕುಡಿಯ. ಅದು ಹರ್ಷೋನ್ಮಾದದ ಸುಳಿಗೆ ಆ ಜನರನ್ನೆಲ್ಲ ಹಿಡಿದೆಳೆಯುವ ಬಲೆ.

"ಹಿಗ್ಗಿ ಬೋಗಿ ಬೋಗಿ ಬೊ ! ಹೊ ! ಏಹಿ ! ಯೊ ! ಎಯ್ಯೊ !
ಏಹಿ ! ಯೊ !
ತುಮ್ಮ ದೇವಿ ! ದೇವಿತಾ ! ಓ ! ಏಹಿ ! ಯೊ ! ಎಯ್ಯೊ !
ಏಹಿ ! ಯೊ !
ಶಂಭೊ ! ಶಿವೊ ! ಮಾದೇವೊ ! ಓ ! ಏಹಿ ! ಯೊ ! ಎಯ್ಯೊ !
ಏಹಿ ! ಯೊ !"

ಒಂದರ ಬಳಿಕ ಇನ್ನೊಂದು. ಒಬ್ಬರ ಬಳಿಕ ಇನ್ನೊಬ್ಬರು. ಅದು ಮುಗಿಯುವುದಕ್ಕೆ ಮುಂಚೆ ನಡುವಿರುಳು ದಾಟಿ ಬೆಳಕು ಹರಿದರೂ ಹರಿಯಿತೇ.

ಅದನ್ನು ಚೆನ್ನಾಗಿ ತಿಳಿದಿದ್ದ ಪುಟ್ಟಬಸವ ಮನೆಗೆ ಹೊರಡುವ ಯೋಚನೆ ಮಾಡಿದ.

ನಾಲಗೆಯಾಗಲೆ ಸಡಿಲವಾಗಿದ್ದ ರಾಮಗೌಡ ಹೇಳಿದ:

"ಕೊಡಗರೆಲ್ಲಾ ಒಳ್ಳೆಯವರು. ನಿಮ್ಮಲ್ಲಿ ಭೇದಭಾವನೆ ಇಲ್ಲ. ಎಲ್ಲರೂ ದುಡಿ ತೆಗೆದು ಹಾಡ್ತೀರಿ. ನಮ್ಮಲ್ಲಿ ಹಾಗಿಲ್ಲ. ದುಡಿ ಹಿಡಿದು ಹಾಡುವ ಜನ ಬೇರೆಯೇ. ಆದರೆ ಇತ್ತೀಚೆಗೆ ಯಕ್ಷಗಾನ ಅಂತ ಒಂದು ಶುರುವಾಗಿದೆ. ಅ್ಹ ! ಏನು ಹೇಳ್ತೀರಿ !....ಅದು ಭಾರೀ ತಮಾಷೆಯಾಗಿರ್ತದೆ !"

ಪುಟ್ಟಬಸವ ಮೆಲ್ಲನೆದ್ದು ನಿಂತ. ರಾಮಗೌಡನೂ ಎದ್ದ. ಏಳಲು ಪ್ರಯಾಸಪಡಬೇಕಾಯಿತು.

"ಸ್ವಾಮಿಯೋರು ಯಾಕೆ ಎದ್ದಿರಿ ?"

"ಮನೆಯ ಕಡೆಗೆ ಹೋಗ್ತೀನಿ."

"ಒಬ್ಬರೇ ? ಛೆ! ಆಗದು! ನಾನೂ ಬರ್ತೀನಿ ನಡೀರಿ."

"ಏನೂ ಬೇಡಿ. ನಾನು ಇದೇ ಊರವನು. ಒಬ್ಬನೇ ಹೋಗಬಲ್ಲೆ."

"ಛೆ! ಛೆ! ಅದು ಸಾಧ್ಯವೇ ಇಲ್ಲ."

ರಾಮಗೌಡ ಜತೆಯಲ್ಲೇ ಹೊರಡಲು ಸಿದ್ಧನಾಗಿದ್ದ. ಆದರೆ ಪಾದಗಳು ಅಸ್ಥಿರವಾದುವು. ಶರೀರ ತೂರಾಡತೊಡಗಿತು. ಅದನ್ನು ಪುಟ್ಟಬಸವ ಗಮನಿಸಿದ.

ಆ ರಾತ್ರೆ ಹೆಚ್ಚು ಕುಡಿಯದೇ ಇದ್ದ ಸೋಮಯ್ಯ ಅವರೆಡೆಗೆ ಬಂದ.

"ಹೋಗ್ತೀರೇನು? ತಾಳಿ. ನಮ್ಮ ಹುಡುಗರನ್ನ ಕಳಿಸ್ತೀನಿ. ಗೌಡರೆ, ಇಲ್ಲೇ ಇರಿ. ನೀವು ಅತಿಥಿಗಳು. ನಿಮಗೆ ಕೆಲಸ ಕೊಡೋದೇ?"

"ಯಾರಾದರೂ ಒಟ್ಟಿಗೆ ಹೋದರೆ ಸರಿ."

"ನೀವು ಕೂತ್ಕೊಳ್ಳಿ ಗೌಡರೆ," ಎಂದ ಪುಟ್ಟಬಸವ.

"ಅಂಥಾದ್ದೇನಿಲ್ಲ. ನನಗೇನೂ ಆಗಿಲ್ಲ." ಎಂದು ರಾಮಗೌಡ ಹೇಳಿದನಾದರೂ ನಿಂತಲ್ಲೆ ಕುಸಿಕುಳಿತ.

"ಎಲ್ಲಿಯೋ ಒಂದು ತೊಟ್ಟು ಹೆಚ್ಚಾಗಿರ್ಬೇಕು. ಸ್ವಾಮಿಯೋರು ಕ್ಷಮಿಸ್ಬಿಡಿ," ಎಂದ ಆತನೆ, ಪುಟ್ಟಬಸವನನ್ನು ನೋಡಿ ನಸುನಕ್ಕು.

ಸೋಮಯ್ಯನ ಮಕ್ಕಳಲ್ಲಿ, ಕರ್ತುಕುಡಿಯ ಒಣಸೋಗೆಯ 'ಸೂಟೆ' ಹಚ್ಚಿ ಕಾಣಿಸಿಕೊಂಡ.

"ನೀನು ಬರ್ತೀಯಾ ಕರ್ತು?" ಎಂದು ಕೇಳಿದ ಪುಟ್ಟಬಸವ.

"ಹೂಂ. ಅಣ್ಣಾವರು ನಡೀರಿ."

"ಬೆಳಗ್ಗೆ ಹತ್ತು ಘಂಟೆಗೆ ಎಲ್ರೂ ನಮ್ಮಲ್ಲಿಗೆ ಬಂದ್ಬಿಡಿ ಸೋಮಯ್ಯನವರೆ."

"ಆಗಲಿ," ಎಂದ ಸೋಮಯ್ಯ.

........ಕರ್ತು ದೀವಟಿಗೆಯನ್ನು ಬೀಸುತ್ತ ಮುಂದಾದ. ಆತನನ್ನು ಹಿಂಬಾಲಿಸಿದ ಪುಟ್ಟಬಸವ.

ಜರದಾರಿಯ ಹಾದಿ ನಡೆಯುತ್ತ, ಮೌನವನ್ನು ಮುರಿದು ಅವರು ಆಗೊಮ್ಮೆ ಈಗೊಮ್ಮೆ ಮಾತನಾಡಿದರು—ಔತಣದ ಏರ್ಪಾಟಿನ ಪ್ರಶಂಸೆ, ಹಾಡುಗಾರನಾದ ಚಿಟ್ಟೆಯನ್ನು ಕುರಿತು ಹೊಗಳಿಕೆ, ಇನ್ನು ಸ್ವಲ್ಪವೇ ಸಮಯದಲ್ಲಿ ವಿರಾಟ್‌ರೂಪ ತಳೆಯಬೇಕಾದ ಅವರ ಯೋಜನೆಯ ವಿವರ.... ಹೀಗೆ, ಬೇರೆ ಬೇರೆ ವಿಷಯ. ಅಣ್ಣನೆದುರು, ಉಳಿದವರೆದುರು, ಯಾವಾಗಲೂ ಸುಮ್ಮನಿರುತಿದ್ದ ಕರ್ತು ಈಗ ಸಂಕೋಚವಿಲ್ಲದೆ ಮಾತನಾಡಿದ.

ಆದರೂ ಅದು ತೂಕದ ಮಾತೇ. ಎಷ್ಟು ಬೇಕೋ ಅಷ್ಟು.

ಪುಟ್ಟಬಸವನಿಗಾದರೋ ಆ ಸಂಭಾಷಣೆ ಅಗತ್ಯವಾಗಿತ್ತು. ಆತನ ಪಾಲಿಗೆ ಮಹತ್ವಪೂರ್ಣವಾಗಿತ್ತು, ಕಳೆದ ಆ ಒಂದು ದಿನ. ಒಡನಾಡಿಗಳ ಜತೆಯಲ್ಲಿ ಆತ ಮುಖ್ಯ ನಿರ್ಧಾರಗಳನ್ನು ಕೈಗೊಂಡಿದ್ದ. ಕೃತಿಗಿಳಿದಾಗ ರಾಜ್ಯದ ಭವಿಷ್ಯತ್ತನ್ನೇ ಬದಲಾಯಿಸುವಂತಹ ತೀರ್ಮಾನಗಳು. ಸಣ್ಣ ಪುಟ್ಟ ಕದನವಲ್ಲ; ಸ್ವಾತಂತ್ರ್ಯವನ್ನು ಕಬಳಿಸಿದ್ದ ಸಮರ್ಥರಾದ ಪರಕೀಯ ಧೂರ್ತರೊಡನೆ ಹೋರಾಟ. ಈ ಸುದ್ದಿ ತಿಳಿದಾಗ ವೀರರಾಜರಿಗೆಷ್ಟೊಂದು ಸಮಾಧಾನವಾಗದು! ಕನ್ನಡ ಜಿಲ್ಲೆಯ ಜನರೊಡನೆ ಕೊಡಗಿನವರ ಮೈತ್ರಿ ಸಂಬಂಧ. ಇದೂ ಮುಖ್ಯ ಘಟನೆಯೇ. ಘಟ್ಟದ ಮೇಲಿನವರು, ಬಯಲು ಸೀಮೆಯವರು, ಕರಾವಳಿ ಪ್ರದೇಶದವರು – ಹೀಗೆ ಎಲ್ಲರೂ ಒಂದಾದಾಗಲೇ ಸ್ವಾತಂತ್ರ್ಯ ರಕ್ಷಣೆ ಸಾಧ್ಯ....

ಆ ತೀರ್ಮಾನಗಳಿಂದ ಆಪ್ತರಿಗೆಲ್ಲ ಸಂತೋಷವಾಗಿತ್ತು. ಅಂತೆಯೇ ಅತ್ಯಂತ ಸಮಯೋಚಿತವಾಗಿತ್ತು ಆ ಔತಣ.

ಅವರಂತೆಯೇ ತನಗೂ ಸಂತೋಷವಾಗದೆ ಇಲ್ಲ. ಆದರೂ ಹೆಚ್ಚಿನ ಭಾರ ತನ್ನ ಭುಜದ ಮೇಲೆಯೇ ಎನ್ನುವಂತೆ ಅಳುಕು. ನಾಯಕನಾಗಿರಲು ಸಮ್ಮತಿ ಇತ್ತುದಾಯಿತು. ನಂಜಯ್ಯ ವಯಸ್ಸಿನಲ್ಲಿ ಹಿರಿಯರಾದರೂ ತನ್ನನ್ನೇ ಮುಖ್ಯಸ್ಥನಾಗಿ ಮಾಡಲು ಒಪ್ಪಿದರು. ಇನ್ನು ತಾನು ಪುಟ್ಟ ಬಸವನಲ್ಲ, ಕಲ್ಯಾಣಸ್ವಾಮಿ. ಈ ಬದಲಾವಣೆ ಅಗತ್ಯವಿತ್ತೋ ಇಲ್ಲವೋ. ಆದರೂ ರಾಮಗೌಡ, ಎಷ್ಟು ದಕ್ಷತೆಯಿಂದ ವಾದಿಸಿ ಉಳಿದ ಎಲ್ಲರ ಬಾಯಿ ಕಟ್ಟಿಸಿದ! ಆತ ವೀರನೇ ಸರಿ. ಅಂಥವರ ಆಪ್ತತ್ವದಿಂದ ಒಳಿತಾಗುವುದು ಮಾತ್ರ ಸಾಧ್ಯ....

ನಡೆಯುತ್ತಲಿದ್ದಂತೆ ಈ ಎಲ್ಲ ವಿಷಯಗಳನ್ನೂ ಕುರಿತು ಮತ್ತೆ ಮತ್ತೆ ಯೋಚಿಸಿದ ಪುಟ್ಟಬಸವ; ಕರ್ತುವಿನೊಡನೆ ಮಾತನಾಡಿದ. ಆ ಯೋಚನೆಯಿಂದ ಮಾತುಕತೆಯಿಂದ ಪ್ರತಿಯೊಂದೂ ಮತ್ತಷ್ಟು ಸ್ಪಷ್ಟವಾಯಿತು, ಸ್ಫುಟವಾಯಿತು.

....ಮನೆ ಸಮೀಪಿಸಿತು. ಕುದುರೆಗಳು ತಾವಿನ್ನೂ ಎಚ್ಚರವಾಗಿಯೆ ಇರುವೆವೆಂದು ಕೆನೆದುವು. ತಮ್ಮ ಒಡೆಯರನ್ನು ಗುರುತಿಸಿ, ಪುಟ್ಟಬಸವನ

ಕಂದು ಬಣ್ಣದ ಕುದುರೆಯೂ ಕರ್ತುಕುಡಿಯನದೂ ಮತ್ತೊಮ್ಮೆ ಹೇಂಕರಿ
ಸಿದುವು.

ನಡುಮನೆಯಲ್ಲಿ ಸಣ್ಣಗೆ ಉರಿಯುತಿದ್ದ ಹಣತೆಯ ಬೆಳಕು, ಬಾಗಿಲ ಬಿರುಕಿನೆಡೆಯಿಂದ ಹೊರ ಬರಲು ಯತ್ನಿಸುತಿತ್ತು.

ತಾಯಿಗೆ ಎಚ್ಚರವಾಗಬಾರದೆಂದು ಪುಟ್ಟಬಸವ, ಮೆಲ್ಲನೆ ಬಾಗಿಲು ತಟ್ಟಿ ಮೆಲುಧ್ವನಿಯಲ್ಲಿ ಕರೆದ:

"ಗಿರಿಜಾ!"

೪

ರಾತ್ರಿ ಬಹಳ ಹೊತ್ತಿನವರೆಗೂ ಎಚ್ಚರವಾಗಿಯೇ ಇದ್ದ ಗಿರಿಜವ್ವನಿಗೆ ಮಂಪರು ಒಂದಿತ್ತು ಅದೇ ಆಗ. ಆದರೂ ಗಂಡ ಕರೆದುದು ಕೇಳಿಸಿತು. ಗಡಬಡಿಸಿ ಆಕೆ ಎದ್ದಳು. ಅವಸರವಾಗಿ ಬಾಗಿಲು ತೆರೆದು ಕೇಳಿದಳು:

" ಎಷ್ಟೊತ್ತಾಯ್ತು ಬಂದು ? ಕರೆದದ್ದು ಕೇಳಿಸ್ಲೇ ಇಲ್ಲ ನಂಗೆ."

ತಾಯಿಗೆ ನಿದ್ರಾಭಂಗವಾಗಬಾರದೆಂದು ತಗ್ಗಿದ ಧ್ವನಿಯಲ್ಲೇ ಪುಟ್ಟ ಬಸವನೆಂದ:

" ಇದೇ ಈಗ್ಬಂದೆ. ಕರೆದದ್ದು ಒಂದೇ ಸಲ. ಅಷ್ಟರಲ್ಲೆ ನೀನು ಎದ್ಬಿಟ್ಟೆ."

" ಊಟವಾಯ್ತಾ ?"

" ಹೂಂ. ಭಾರೀ ಔತಣ."

" ನಾನು ಬಹಳ ಹೊತ್ತು ಎಚ್ಚರವಾಗೇ ಇದ್ದೆ. ಅದು ಹ್ಯಾಗೋ ನಿದ್ದೆ ಬಂದ್ಬಿಡ್ತು."

" ಇರಲಿ ಬಿಡು. ಅವ್ವ ಮಲಕೊಂಡಳಾ ?"

ಪುಟ್ಟಬಸವನ ದೃಷ್ಟಿಯಾಗಲೆ ತನ್ನ ತಾಯಿ ಮಲಗುವ ಜಾಗವನ್ನು ನೋಡಿತ್ತು. ಅಲ್ಲಿ ಆಕೆ ಇರಲಿಲ್ಲ. ಮಗ ಬಂದೇ ಬರುವನೆಂದು ತಿಳಿದಿದ್ದ ಆಕೆ, ಅಡುಗೆ ಮನೆಯಲ್ಲಿ ಮಲಗಿದ್ದಳು.

" ಹೂಂ. ಎಲ್ಲರೂ ಬಂದವರಾ ?"

" ಇಲ್ಲ. ಕರ್ತು ಒಬ್ನೇ ಬಂದಿರೋದು. ಚಾಪೆ ಹಾಸಿದಿಯಾ ?"

" ಹೂಂ."

" ಬಿಂದಿಗೆ ನೀರು ?"

" ಮಡಗಿವ್ನಿ."

ಕುದುರೆಗಳ ಬಳಿಗೊಮ್ಮೆ ಹೋಗಿ ಬಂದ ಕರ್ತು ಚಾಪೆಯಮೇಲೆ ಮೈ ಚಾಚುತಿದ್ದ ಹೊರಗೆ. ತನ್ನನ್ನು ಕುರಿತೇ ಮಾತು ನಡೆದಿರಬೇಕೆಂದು ಶಂಕಿಸಿ ಆತ ಹೇಳಿದ:

" ನಾನು ಮಲಕ್ಕೊತೀನಿ ಅಣ್ಣ."

“ ಆಗಲಿ ಕರ್ತು,” ಎಂದ ಪುಟ್ಟಬಸವ.

ಆತನೂ ಉಡುಪು ಕಳಚಿ ಕೈಕಾಲು ತೊಳೆದು ಬಂದ. ತೇಗು ತೊಂದರೆಕೊಡುತಿತ್ತೆಂದು ಒಂದು ಲೋಟ ನೀರು ಕುಡಿದ.

“ ದೀಪ ಆರಿಸ್ಲಾ ?” ಎಂದು ಗಿರಿಜವ್ವ ಕೇಳಿದಳು.

“ ಹೂಂ.”

ಗಿರಿಜಾ ‘ಫ್ಞೂ’ ಎಂದು ಉಸಿರುಬಿಟ್ಟಳು. ದೀಪ ಆರಿಹೋಯಿತು. ಆ ಕತ್ತಲೆಯಲ್ಲಿ ಪುಟ್ಟಬಸವ ಮೈ ಮುರಿದು ‘ಶಿವಾ’ ಎಂದು ದಿಂಬಿನಮೇಲೆ ತಲೆ ಇರಿಸಿದ.

ಆತನ ಮಗ್ಗುಲಲ್ಲಿ ಮಲಗಿಕೊಂಡ ಗಿರಿಜಾ, ಗಂಡನ ಎದೆಯ ವಿಸ್ತಾರದ ಮೇಲೆ ತನ್ನ ಅಂಗೈ ಇರಿಸಿದಳು.

ಆಕೆ ಕೇಳಿದಳು:

“ ಭಾರೀ ದಣಿವಾಗ್ಯೆತಾ ?”

“ ದಣಿವು ? ಏನು ಕಡಿದಿದೀನಿ ಅಂತ ? ಸೋಮಯ್ಯನ ಮನೆವರೆಗೆ ಒಂದ್ಸಲ ಹೋಗ್ಬಂದ್ರೆ ಸುಸ್ತಾಗ್ತದಾ ?”

“ ಸಾವಿರ ಹರದಾರಿ ಸವಾರಿ ಮಾಡಿದ್ರೂ ನನ್ನ ರಾಜರಿಗೆ ಸುಸ್ತಾಗಾಕಿಲ್ಲ, ಅಲ್ವಾ ?”

ರಾಜರು. ಪುಟ್ಟಬಸವ ಸಣ್ಣನೆ ನಕ್ಕ. ಹೆಂಡತಿಗೆ ಹೇಳಬೇಕು ತಾನು. ಆ ಜನರೆಲ್ಲ ತನ್ನಲ್ಲಿಟ್ಟಿದ್ದ ವಿಶ್ವಾಸ, ಕೈಗೊಳ್ಳಲಾದ ತೀರ್ಪು, ತಾನು ಹೊರಡಬೇಕಾದ ಪ್ರಮೇಯ....

ಹೇಗೆ ಆರಂಭಿಸಲೆಂದು ಆತ ಯೋಚಿಸುತ್ತಿದ್ದಂತೆ, ಒಳಗಿನಿಂದ ಗಂಗವ್ವನ ಸ್ವರ ಕೇಳಿಸಿತು:

“ ಬಂದಿಯಾ ಪುಟ್ಟಬಸ್ಯಾ ? ಬಂದಿಯಾ ಮಗನೇ ?”

ನಿದ್ದೆಯಿಂದ ಮಸಕಾಗಿದ್ದ ಸ್ವರ.

“ ಹೂನವ್ವಾ. ನೀನು ಮಲಕೋ.”

“ ಹೂಂ.”

ಸ್ವಲ್ಪ ಹೊತ್ತು ಮೌನ ನೆಲೆಸಿತು.

ಬಳಿಕ ಗಿರಿಜಾ ಹೇಳಿದಳು:

“ ಈಚೀಚೆಗೆ ಅತ್ತೆಯವರಿಗೆ ನಿಮ್ಮ ನೆನಪು ಜಾಸ್ತಿಯಾಗೇತೆ.”

"ಹಂಗಾರೆ ನಿನಗೆ ನನ್ನ ನೆನಪಾಗೋದಿಲ್ವಾ?"

ತುಂಟತನದ ಪ್ರಶ್ನೆ. ಗಿರಿಜೆಯ ಮೈ ಮಿಸುಕಿತು. ಆಕೆಯ ಸಡಿಲಗೊಂಡಿದ್ದ ಹೆರಳಿನೆಡೆಯಲ್ಲಿ ಪುಟ್ಟಬಸವ ತನ್ನ ಕೈ ಓಡಿಸಿದ.

"ಊಹೂಂ."

'ಊ' ಎಂದು ರಾಗವೆಳೆಯುತ್ತ ಪುಟ್ಟಬಸವ ಆಕೆಯ ಮುಖದೆಡೆಗೆ ತನ್ನ ತುಟಿಗಳನ್ನೊಯ್ದ.

ಮೆಲ್ಲನೆ ಆತ ಕೇಳಿದ:

"ನಿನಗೆ ಏನು ಕೊಡಲೆ ಗಿರಿಜಾ?"

ಸುಖಿಯಾಗಿದ್ದ ಆಕೆ ಅಂದಳು:

"ನೀವು ನನ್ನ ಬಿಟ್ಟಿರದೇ ಇದ್ದರೆ ಸಾಕು. ನನಗೆ ಇನ್ನೇನೂ ಬೇಡ."

ತಂಗಾಳಿ ಮೈಕೊರೆದ ಹಾಗಾಯಿತು ಪುಟ್ಟಬಸವನಿಗೆ. ಆ ಆಶ್ವಾಸನೆಯನ್ನು ಕೊಡುವುದು ಆತನಿಂದ ಸಾಧ್ಯವಿರಲಿಲ್ಲ. ತಾನು ತಿಳಿಸಬೇಕೆಂದಿದ್ದುದಕ್ಕೆ ಎಂತಹ ಹಿನ್ನೆಲೆಯಾಗಿತ್ತು ಹೆಂಡತಿಯ ಮಾತು!

ಗಂಡ ಮೌನವಾಗಿದ್ದ. ಆತನ ಅಂಗೈಯನ್ನು ತನ್ನೆರಡೂ ಕೈಗಳಿಂದ ಹಿಡಿದು ಎದೆಯ ಬಳಿಗೊಯ್ಯುತ್ತಾ ಗಿರಿಜೆ ಕೇಳಿದಳು:

"ಯಾಕೆ ಸುಮ್ಕಿದೀರಿ?"

ಬಾಯಿ ತೆರೆದು, ಹೃದಯ ಬಿಚ್ಚಿ, ಮಾತನಾಡಲು ಬಲು ಕೆಟ್ಟ ಸಮಯ.

ಅಥವಾ ಅದೇ ಸರಿಯಾದ ಅವಕಾಶವೋ ಏನೋ....

"ಇನ್ನು ಒಂದ್ಸಲ ಹೋಗ್ಬಿಟ್ಟು ಬರ್ತೀನಿ. ಆಮೇಲೆ ಎಲ್ಲಿಗೂ ಹೋಗೊಲ್ಲ."

ತಾನು ಕೇಳಿದುದು ಚಂದಮಾಮನನ್ನೆ ಎಂಬುದು ಗಿರಿಜೆಗೆ ಗೊತ್ತಿರಲಿಲ್ಲವೆಂದೆ? ಆದರೂ—

"ಓಗ್ತೀರಾ? ಎಲ್ಲಿಗೆ? ಯಾಕೆ?"

ತಿಳಿಯಹೇಳುವ ವಿಶ್ವಾಸದ ಧ್ವನಿಯಲ್ಲಿ ಪುಟ್ಟಬಸವನೆಂದ:

"ನಿನಗೆ ಗೊತ್ತಿಲ್ವಾ ಗಿರಿಜಾ? ಎಂಥ ದುರವಸ್ಥೆ ಬಂದೈತೆ ನಮ್ಮ ರಾಜ್ಯಕ್ಕೆ!....ಒಂದ್ಸಲ ಇಂಗ್ಲಿಷ್ನೋರನ್ನ ಓಡಿಸಿದ್ಮೇಲೆ...."

ಯಾರೋ ಕಸಿದುಕೊಳ್ಳುತಿದ್ದ ತನ್ನ ಒಡವೆಯನ್ನು ಬಿಟ್ಟುಕೊಡದೆ

ಪ್ರತಿಭಟಿಸುವಂತೆ, ಆತನ ಕೈಯನ್ನು ಬಲವಾಗಿ ಹಿಡಿದುಕೊಂಡಳು ಗಿರಿಜಾ. ತಾನು ಅಸಹಾಯಳೆಂಬುದು ತಿಳಿದೂ ಆಕೆ ಚಡಪಡಿಸಿದಳು. ಕತ್ತಿನ ನರಗಳು ಬಿಗಿದುಬಂದುವು. ಹನಿಗೂಡಿದುವು ಕಣ್ಣುಗಳು....

ಆ ಜೀವದ ವೇದನೆಯನ್ನು ಅರ್ಥಮಾಡಿಕೊಳ್ಳುತ್ತ ಪುಟ್ಟಬಸವನೆಂದ:

"ಅಳಬಾರದು."

ಕ್ಷೀಣವಾಗಿದ್ದ ಸ್ವರದಲ್ಲಿ ಗಿರಿಜಾ ಉತ್ತರವಿತ್ತಳು:

"ಇಲ್ಲ."

"ನೀನು ವೀರನಾರೀಂತ ತಿಳ್ಕೊ ಗಿರಿಜಾ. ಗಂಡಂದಿರು ಒಳ್ಳೇ ಕೆಲಸಕ್ಕೆ ಹೊರಟಾಗ ವೀರಪತ್ನೀರು ಏನ್ಮಾಡ್ತಾರೆ ಗೊತ್ತಾ ?"

ಅಳಲಿನ ಅಣೆಕಟ್ಟು ಇನ್ನು ಬಿರಿಯುವೆನೆಂದು ಬೆದರಿಕೆ ಹಾಕಿತು. ಆದರೂ ಗಿರಿಜಾ ಅದನ್ನು ತಡೆದಳು. ಪದಗಳು ಒಂದೊಂದಾಗಿ ಹೊರಬಿದ್ದುವು.

"ಯಾವತ್ತು....ಹೊರಡ್ತೀರಾ ನೀವು ?...."

ಬಯಸಿದುದರ ಬದಲು ಮಗುವಿಗೆ ಇನ್ನೇನನ್ನೊ ಕೊಟ್ಟು ರಮಿಸುವವನಂತೆ ಪುಟ್ಟಬಸವನೆಂದ:

"ಎಲ್ಲರೂ ಸೇರ್ಕೊಂಡು ನನ್ನನ್ನು ನಾಯಕ ಅಂತ ಮಾಡವರೆ ಗೊತ್ತೈತಾ ? ನಂಜಯ್ನೋರು – ಎಲ್ರೂ – ನನಗೇ ದೊಡ್ಡಸ್ಥಾನ ಕೊಟ್ಟವರೆ."

ಆಕೆಯ ಗಂಡ ನಾಯಕನಾಗದೆ ಕೆಳಗಿನ ಸ್ಥಾನದಲ್ಲಿ ಇದ್ದುದಾದರೂ ಯಾವತ್ತು ? ಆದರೂ ಗಿರಿಜಾ, ಮಹತ್ವದ್ದೇನನ್ನೋ ಗಂಡ ಹೇಳಿದನೆಂದು ಆ ಮಾತನ್ನು ಮೆಲುಕು ಹಾಕಿದಳು.

ಪುಟ್ಟಬಸವ ಮುಂದುವರಿಸಿದ:

"ನಮ್ಮ ಸೈನ್ಯಕ್ಕೆಲ್ಲ ಇನ್ನು ನಾನೇ ಸೇನಾಧಿಪತಿ. ಕೊಡಗಿನ ಸೈನ್ಯ, ಕನ್ನಡಜಿಲ್ಲೇದು – ಎಲ್ಲದಕ್ಕೂ. ಇಂಗ್ಲೀಷರನ್ನು ಓಡಿಸಿ ರಾಜರನ್ನು ವಾಪಸು ಬರಮಾಡಿಕೊಳ್ಳೋನು ನಾನೇ."

ಅದೀಗ ದೊಡ್ಡ ವಿಷಯವೆಂಬುದು ಗಿರಿಜೆಗೆ ಸ್ಪಷ್ಟವಾಯಿತು. ಆಕೆ ಉದ್ಗಾರವೆತ್ತಿದಳು:

" ಓ !"

" ಆಮೇಲೆ ಏನಾಗ್ತೇತೆ ಹೇಳು ?"

ಗಿರಿಜಾ ಸಣ್ಣನೆ ನಕ್ಕು ನುಡಿದಳು:

" ರಾಜರು ನಿಮಗೆ ಸನ್ಮಾನ ಮಾಡ್ತಾರೆ."

" ನನಗೊಬ್ಬನಿಗೆ ಅಲ್ವೇ. ನಮಗೆ ಅನ್ನು. ನಮ್ಮಿಬ್ಬರಿಗೂ."

" ಹೂಂ."

ಆದರೆ, ಆ ಸನ್ಮಾನಕ್ಕಿಂತಲೂ ಹಿರಿದಾದ ಆಸೆಯಿತ್ತು ಗಿರಿಜೆಗೆ. ಅವಳೆಂದಳು:

" ಅದು ಮುಗಿಸ್ಕೊಂಡು ಇಲ್ಲಿಗೆ ಬಂದೋರು, ಮುಂದೆ ಯಾವಾಗಲೂ ಇಲ್ಲೇ ಇರ್ತೀರಿ, ಅಲ್ರಾ ?"

ಬಳಸಿದ ಬಾಹುವನ್ನು ಬಿಗಿಗೊಳಿಸುತ್ತಾ ಪುಟ್ಟಬಸವನೆಂದ:

" ಇರ್ತೀನಿ ಚಿನ್ನಾ."

ಗಿರಿಜವ್ವನಿಗೆ ಒಮ್ಮೆಲೆ ಉಸಿರುಕಟ್ಟಿದಂತಾಯಿತು. ಮೈಗೆ ನೋವಾಯಿತೆಂದು ಕಂಡರೂ ಪ್ರಿಯವಾಗಿದ್ದ ಅಪ್ಪುಗೆ. ಸುಧಾರಿಸಿಕೊಳ್ಳುತ್ತ ಆಕೆ ಅಂದಳು:

" ಈಗ್ಹೋದೋರು ಎಷ್ಟು ದಿವಸದೊಳಗೆ ಬರ್ತೀರಾ ?"

ದಿವಸಗಳೆ? ಶ್ರೀಮಂಗಲನಾಡಿನ ಗಿರಿಜಾ, ಕೊಡಗಿನ ವಿಸ್ತಾರವನ್ನು ತಿಳಿಯದವಳಲ್ಲ. ಕನ್ನಡ ಜಿಲ್ಲೆ ಅದಕ್ಕಿಂತಲೂ ದೊಡ್ಡದೆಂಬುದನ್ನೂ ಆಕೆ ಬಲ್ಲಳು. ಅಷ್ಟಿದ್ದೂ—

" ಮಳೆಗಾಲದೊಳಗೇ ಎಲ್ಲಾ ಮುಗಿಸ್ಬೇಕೂಂತಿದೀವಿ ಗಿರಿಜಾ. ಮಿಂಚಿನ ಹಾಗೆ ಅವರ ಮೇಲೆ ಬೀಳ್ಬೇಕು. ಕೂತೋರು ಎದ್ದು ನಿಲ್ಲೋದಕ್ಕೂ ಅವಕಾಶ ಕೊಡಬಾರ್ದು."

ಯುದ್ಧಭೂಮಿಯ ಭಯ ಗಿರಿಜೆಗಿದ್ದೇ ಇತ್ತು. ಆದರೂ ಎಷ್ಟೋ ಯುದ್ಧಗಳನ್ನು ಜಯಿಸಿಬಂದ ವೀರ ಆಕೆಯ ಗಂಡ. ಅವನೆದುರು ತನ್ನೊಳಗಿನ ಅಳುಕಿನ ಪ್ರಸ್ತಾಪ ಮಾಡುವುದು ಯೋಗ್ಯವಾಗಿರಲಿಲ್ಲ.

ಆದರೂ ವ್ಯಕ್ತಪಡಿಸಲಾಗದ ಭಾವನೆಗಳ ಒತ್ತಡಕ್ಕೆ ಸಿಲುಕಿ ತನ್ನ ಗಂಡನಿಗೆ ಬಲವಾಗಿ ಆತುಕೊಂಡಳು ಗಿರಿಜಾ.

ಎಲ್ಲರಿಗೂ ನಾಯಕನಾದ ಧೀರನಾದ ಸರ್ವಶಕ್ತನಾದ ಪತಿ. ರಾಜರ

ಬಳಿಕ ಆತನೇ ಮುಖ್ಯಸ್ಥ. ಅಂತಹ ಮುಖ್ಯಸ್ಥ ತನ್ನವನು; ತನ್ನ ಸೊತ್ತು– ತನ್ನೊಬ್ಬಳ ಸೊತ್ತು.

ಶಾಖ ಏರಿದ ಮೈಯ ನರನಾಡಿಗಳು ಧಿಮಿಗುಟ್ಟಿದುವು. ಗಹಗಹಿಸಿ ನಗಬೇಕೆನಿಸಿತು ಆಕೆಗೆ. ಸಂತೋಷದಿಂದ ಅಳಬೇಕೆನಿಸಿತು. ಆತನನ್ನು ಅಗಲಿರುವುದು ಸುಳ್ಳುಮಾತು. ಆತ ಯಾವಾಗಲೂ ತನ್ನ ಬಳಿಯಲ್ಲೇ ಇರುವ – ತನ್ನಲ್ಲೇ.

"ನನ್ನ ಚಿನ್ನಾ" ಎಂದ ಪುಟ್ಟಬಸವ.

"ಮಳೆಗಾಲದ ವರೆಗೆ ಇರೋದಿಲ್ಲ ನೀವು," ಎಂದಳು ಗಿರಿಜಾ. ಯಾರದೋ ಎನ್ನುವಂತಹ ಸ್ವರ.

ಆಕೆಯ ಬಿಸಿಯುಸಿರಿನ ಸ್ಪರ್ಶ ಆತನಿಗಾಯಿತು.

ಗೊಗ್ಗರಧ್ವನಿಯಲ್ಲಿ ಪುಟ್ಟಬಸವನೆಂದ:

"ಚಿನ್ನಾ !"

## ೫೩

ರಾಮುಗೌಡನ ನಡೆಯಷ್ಟೇ ಸ್ಪಷ್ಟವಾಗಿತ್ತು ನುಡಿ ಕೂಡಾ. ಆತ ಪುಟ್ಟಬಸವನನ್ನುದ್ದೇಶಿಸಿ ಹೇಳಿದ:

" ಸ್ವಾಮಿಯವರು ಅಪ್ಪಣೆ ಕೊಡಿಸ್ಬೇಕು. ನಾಳೆ ಬೆಳಗಿನ ಜಾವ ನಾನೂ ಮಾಚಯ್ಯನವರೂ ಹೊರಡ್ತೇವೆ. ಕುದುರೆಗಳು ಸಿಗೋದು ಸಾಧ್ಯ ವಾದರೆ...."

" ಕೊಡಿಸೋಣ, ಕುದುರೆಗಳು ಸಿಗ್ತವೆ," ಎಂದ ನಂಜಯ್ಯ.

" ಹಾಗಾದರೆ ಕುದುರೆ ಸವಾರರಾಗಿಯೇ ಹೋಗ್ತೇವೆ. ನೀವೆಲ್ಲಾ ಬರುವುದಕ್ಕೆ ಎರಡು ದಿವಸ ಮೊದಲೇ ನಾವು ಊರು ಸೇರ್ಬೇಕು. ಒಳ್ಳೆಯ ಮೂಹೂರ್ತ ನೋಡ್ಕೊಂಡು—"

" ಇನ್ನು ನಾಲ್ಕೈದು ದಿವಸ ಬಿಟ್ಕೊಂಡು ನಾವೆಲ್ಲಾ ಹೊರಡೋದು ಸಾಧ್ಯವಾದೀತು," ಎಂದು ಸೋಮಯ್ಯನೆಂದ.

" ಹಾಗೇ ಮಾಡಿ. ಅಷ್ಟರಲ್ಲಿ ಕೊಡಗಿನ ಬೇರೆ ಬೇರೆ ಊರುಗಳಿಗೆ ಆದೇಶ ಕಳಿಸೋದೂಂತೂ ಇದ್ದೇ ಇದೆ. ಸರಿಯೋ ?"

" ಆಗಲಿ ಗೌಡರೆ."

" ಹೆಚ್ಚೆಂದರೆ ಎರಡು ದಿವಸದ ಪ್ರಯಾಣ. ನೀವೆಲ್ಲಾ ಬರು ವಾಗಲೂ ಬೆಳಗಿನ ಜಾವ ಸ್ವಲ್ಪ ಹೊತ್ತು ತಿಂಗಳ ಬೆಳಕು ಇರ್ತದೆ. ಅಷ್ಟು ಸಾಕು."

" ಸರಿ," ಎಂದ ಕರಿಯಪ್ಪ.

ರಾಮುಗೌಡ ಮುಗುಳುನಕ್ಕು, ಪುಟ್ಟಬಸವನ ಮುಖವನ್ನೆ ನೋಡಿದ.

" ಏನು ?" ಎಂದ ಪುಟ್ಟಬಸವ, ತಾನೂ ಪ್ರತಿಯಾಗಿ ಮುಗುಳು ನಗುತ್ತ.

" ಏನಿಲ್ಲ. ಚಂದ್ರನ ಬೆಳಕಿನ ವಿಷಯ ಯೋಚನೆ ಮಾಡ್ದೆ. ಬರೋದು ಅಮಾವಾಸ್ಯೆ. ಅನಂತರದ ಹುಣ್ಣಿಮೆ ರಾತ್ರೆ ನಾವು ಕಡಲ ದಂಡೆಯ ಮೇಲಿರ್ತೇವೆ, ಹೌದೋ ?"

" ಓಹೋ !" ಎಂದ ಪುಟ್ಟಬಸವ.

ಸೋಮಯ್ಯನೆಂದ:

" ನಾವು ದಂಡೆಯ ಮೇಲಿರ್ತೇವೆ; ಇಂಗ್ಲಿಷ್ನೋರು ಉಪ್ಪುನೀರು ಕುಡಿದಿರ್ತಾರೆ!"

" ಹೌದು. ಉಪ್ಪುನೀರು ಕುಡಿದು, ತಿಮಿಂಗಿಲದ ಹೊಟ್ಟೇಲಿ ಕಂಪೆನಿಯ ಬ್ಯಾಂಕ್ ತೆರೀಲಿ!" ಎಂದ ಕರಿಯಪ್ಪ.

ಎಲ್ಲರೂ ನಕ್ಕರು.

ನಂಜಯ್ಯ ಯೋಚಿಸಿ ಹೇಳಿದ:

" ನಾವು ಕೊಡಗಿನಲ್ಲಿ ಈಗಿನಿಂದಲೇ ಇಂಗ್ಲಿಷರ ಮೇಲೆ ಯುದ್ಧ ಸಾರಿದ ಹಾಗೇಂತ ಲೆಕ್ಕ. ಆದರೆ ನಮ್ಮ ಸೈನ್ಯ ಮಡಿಕೇರಿಗೆ ನುಗ್ಗೋದು ಕನ್ನಡ ಜಿಲ್ಲೇನ ವಶಪಡಿಸಿಕೊಂಡಮೇಲೆಯೇ. ಅಲ್ವಾ?"

ಪುಟ್ಟಬಸವ ಉತ್ತರಿಸಿದ:

" ಹೌದು. ಅಷ್ಟರವರೆಗೆ ಮುಖಾಮುಖಿಯಾಗಿ ಇಂಗ್ಲಿಷರನ್ನು ಎದುರಿಸದೆಯೇ ಇಲ್ಲಿ ಯುದ್ಧ ನಡೀಲಿ."

ರಾಮಗೌಡನ ಹಣೆಯ ಮೇಲೆ ನೆರಿಗೆ ಮೂಡಿತು. ಕ್ಷಣ ಹೊತ್ತು ಹಾಗೆಯೇ ಇದ್ದು, ಬಳಿಕ ಹಿಂದಿನ ಉತ್ಸಾಹದಿಂದಲೆ. ಆತನೆಂದ:

" ಆಗಲಿ. ಯುದ್ಧ ತಂತ್ರದ ದೃಷ್ಟಿಯಿಂದಲೂ ಅದು ಒಳ್ಳೇದು. ನಾವು ಮಂಗಳೂರು ಕಡೆಗೆ ಹೋದಾಗ, ಇಂಗ್ಲಿಷರ ಸೈನ್ಯ ಮಡಿಕೇರಿಯಿಂದ ಸುಳ್ಯಕ್ಕೆ ಬರ್ತದೆ. ಆಗ ಕೊಡಗಿನೊಳಗೆ ಕೆಲಸ ಸುಲಭವಾಗ್ತದೆ. ಆಮೇಲೆ ಮೇಲಿನಿಂದಲೂ ಕೆಳಗಿನಿಂದಲೂ ಎರಡೂ ಕಡೆಯಿಂದ ಒತ್ತಿದರೆ ಅವರು ಪುಡಿಪುಡಿ – ಅಡಕತ್ತರಿಯಲ್ಲಿ ಸಿಕ್ಕಿದ ಅಡಿಕೆಯ ಹಾಗೆ." .

" ಸರಿ ಹೇಳಿದಿರಿ ರಾಮಗೌಡರೆ," ಎಂದ ಪುಟ್ಟಬಸವ.

ನಂಜಯ್ಯ ತಲೆಯಾಡಿಸಿ ನುಡಿದ:

" ಗೌಡರೆ. ನಿಮ್ಮ ಮಾತು ಕೇಳಿದರೆ ಜೀವಮಾನವೆಲ್ಲಾ ಯುದ್ಧ ಭೂಮಿಯಲ್ಲೇ ನೀವು ಕಳೆದಿದೀರೇನೋ ಅಂತ ಯಾರಾದರೂ ಭಾವಿಸ್ಬೇಕು! ಇಂಗ್ಲಿಷ್ನೋರು ಈ ದೇಶಕ್ಕೆ ಬರದೇ ಇದ್ದಿದ್ದರೆ ನಿಮ್ಮಂಥ ದಂಡನಾಯಕನ ಪರಿಚಯ ನಮಗೆ ಆಗ್ತಿರ್ಲಿಲ್ಲ!"

ಸಮರಪಟುವೊಬ್ಬನಿಂದ ದೊರೆತ ಪ್ರಶಂಸೆ. ಹೃದಯದ ಅಂತರಾಳದಿಂದಲೆ ಬಂದಿತ್ತು ಮೋಹಕವಾಗಿದ್ದ ಮಾತು.

ಲಜ್ಜೆಯಿಂದ ರಾಮಗೌಡನ ಮುಖ ತುಸು ಕೆಂಪೇರಿತು.

"ಸರಿ, ಸರಿ! ಎಂಥ ದಂಡನಾಯಕ? ಬರೀ ದಂಡಕ್ಕೆ! ಹುಡುಗರು ತಮಾಷೆ ಮಾಡಿದರೆ ಸುಮ್ಮನಿರಬಹುದು. ನನ್ನಷ್ಟೇ ವಯಸ್ಸಾಗಿರುವ ನೀವೂ ಹೀಗೆ ಹೇಳೋದೆ?"

ಹುಸಿಮುನಿಸು ಬೇರೆ!

"ಆಗಲಿ. ಇನ್ನೇನೂ ಹೆಚ್ಚು ದಿವಸ ಇಲ್ವಲ್ಲಾ. ನಾನು ಮಾಡಿದ್ದು ತಮಾಷೆಯೋ ಏನೂಂತ ಲೋಕಕ್ಕೇ ಆಗ ತಿಳಿದೀತು!"

ರಾಮಗೌಡ ಎರಡೂ ಕೈಗಳನ್ನು ಮೇಲಕ್ಕೆತ್ತಿ, ಮಡಚಿ, ಬಿಡಿಸಿ, ಮಾಂಸಖಂಡಗಳನ್ನು ತೋರಿಸುತ್ತಾ ಹೇಳಿದ:

"ನೋಡಿ, ರೈತನಾಗಿ ನೇಗಿಲು ಹಿಡಿದ ಕೈಗಳು. ಪೈರು ಹಾಳು ಮಾಡೋದಕ್ಕೆ ಕಾಡು ಹಂದಿ ಬಂದಾಗ ಯುದ್ಧಕ್ಕೆ ಹೋದದ್ದುಂಟು. ಬಂದೂಕು ಹಿಡಿಯೋದು ಅಭ್ಯಾಸವಾದ್ಮೇಲೆ ಒಂದು ಪಟ್ಟೇ ಹುಲಿ ಹೊಡೆದಿದ್ದೇನೆ. ಸಾಕೋ ದಂಡನಾಯಕನ ಚರಿತ್ರೆ?"

ಮಾಚಯ್ಯ ನಗುತ್ತ ಮಾತು ಸೇರಿಸಿದ:

"ಇವರು ಹೇಳೋದು ನಂಬಬೇಡಿ ನಂಜಯ್ಯಣ್ಣ. ಅಮರಸುಳ್ಯದಲ್ಲೆಲ್ಲಾ ರಾಮಗೌಡರು ಮಹಾ ಶೂರ ಅಂತ ಪ್ರಖ್ಯಾತರಾದವರು. ರಾಮಪ್ಪಯ್ಯನನ್ನು ಹಣ್ಣು ಮಾಡೋ ಶಕ್ತಿ ಯಾರಿಗಾದರೂ ಇದ್ದರೆ ಇವರಿಗೆ ಮಾತ್ರ ಅಂತ ಜನರು ತಿಳ್ಕೊಂಡವರೆ."

"ಸುಮ್ನಿರಿ ನೀವು!" ಎಂದ ರಾಮಗೌಡ, ಸಿಟ್ಟುಗೊಂಡವನಂತೆ.

"ಸೂರ್ಯನಿಗೆ ಅಂಗೈ ಅಡ್ಡ ಹಿಡಿದೋರುಂಟೆ?" ಎನ್ನುತ್ತ ನಂಜಯ್ಯ ನಕ್ಕ.

ನಗೆಮಾತಿನ ತೆರೆ, ಕೆಲ ನಿಮಿಷಗಳಲ್ಲೆ ಹಿಂದಕ್ಕೆ ಸರಿದು, ಮತ್ತೆ ಗಭೀರತೆ ನೆಲೆಸಿತು.

ರಾಮಗೌಡನೆಂದ:

"ಹಾಗಾದರೆ ನೀವೆಲ್ಲಾ ಈ ಸಲ ಯುಗಾದಿ ಹಬ್ಬ ಆಚರಿಸೋದು ನಮ್ಮ ಊರಿನಲ್ಲಿಯೇ."

"ಆವತ್ತು ಸಾಯಂಕಾಲವೆ ನಮ್ಮ ಸೈನ್ಯದ ಮೊದಲ ಕವಾಯಿತು," ಎಂದ ಪುಟ್ಟಬಸವ.

"ಹೌದು ಸ್ವಾಮಿಯವರೆ. ನಾವು ಮೊದಲ್ನೇ ಜಯಗಳಿಸೋದು ಕೂಡಾ ಆವತ್ತೆ."

ಆ ಮೊದಲ ದಿನದ ಕಾರ್ಯಕ್ರಮವನ್ನು ಮನಸಿನಲ್ಲಿಯೆ ಚಿತ್ರಿಸಿ ಕೊಳ್ಳುತಿದ್ದ ನಂಜಯ್ಯನೆಂದ:

"ರಾಮಪ್ಪಯ್ಯ ಒಂದು ಹುಳ ಇದ್ದ ಹಾಗೆ. ಹೊಸಕಿ ಎಸೀಬೇಕು ಬಹಳ ಸುಲಭವಾಗಿ ಆ ಕೆಲಸ ಆಗ್ಬೇಕು. ನಮ್ಮ ಪಾಲಿಗೆ ಯಾವ ನಷ್ಟವೂ ಇಲ್ಲದೆ ಆ ಜಯ ಗಳಿಸ್ಬೇಕು. ಅಲ್ಲವೆ ರಾಮಗೌಡರೆ ?"

"ಹೌದು, ಒಪ್ಪಿದೆ."

ಪುಟ್ಟಬಸವ ನುಡಿದ:

"ಪ್ರತಿ ಸಲವೂ ನಮ್ಮ ದೃಷ್ಟಿ ಹಾಗೆಯೇ ಇರೋದು ಅಗತ್ಯ. ಸುಮ್ಮ ಸುಮ್ಮನೆ ನಮ್ಮ ಕಡೆ ಯಾವ ಹಾನಿಯೂ ಆಗಬಾರದು. ಸೈನ್ಯ ಅಂದ್ಮೇಲೆ ನಮ್ಮೆಲ್ಲರ ಪ್ರಾಣಕ್ಕೂ ಒಂದೇ ಬೆಲೆ."

"ಹೌದು ಸ್ವಾಮಿಯವರೆ."

"ಹಾಗಾದರೆ ಸುಳ್ಯವೆ ನಮ್ಮ ಮೊದಲ್ನೆ ಠಾಣ್ಯ."

"ಹೌದು. ಕೊಡಗಿನಲ್ಲಿ ಹುಟ್ಟಿದ ಈ ಒರತೆ ಬಲಿತುಕೊಳ್ಳೋದು ಸುಳ್ಯದಲ್ಲಿ. ಅಲ್ಲಿ ನದಿಯ ಅಗಲ ಎಷ್ಟು, ಆಳ ಎಷ್ಟು, ಅಂತ ಈಗ್ಲೇ ಕೇಳ್ಬೇಡಿ. ನೀವೇ ನೋಡುವಿರಂತೆ. ಮುಂದೆ ಹೋಗ್ತಾ ಹೋಗ್ತಾ ನದಿ ದೊಡ್ಡದಾಗ್ತದೆ. ಅದಕ್ಕೆ ಉಪನದಿಗಳು ಸೇರ್ತವೆ. ಮಂಗಳೂರು ಮುಟ್ಟೋ ಹೊತ್ತಿಗೆ ನದಿಯೇ ಸಾಗರವಾಗಿರ್ತದೆ."

ಪುಟ್ಟಬಸವ ಮನಃಪೂರ್ವಕವಾಗಿ ನುಡಿದ:

"ಭೇಷ್ ರಾಮಗೌಡರೆ ! ನೀವು ಕಲಿಯೂ ಹೌದು, ಕವಿಯೂ ಹೌದು. ಪ್ರತಿಯೊಂದೂ ನಿಮ್ಮ ಈ ಕವಿತ್ವದ ಕಲ್ಪನೆ ಪ್ರಕಾರವೇ ನಡೀ ತದೆ. ಯಾವ ಸಂದೇಹವೂ ಇಲ್ಲ."

ನಂಜಯ್ಯ ತನ್ನ ಜಾಗದಿಂದೆದ್ದು, ನಿಧಾನವಾಗಿ ನಡೆದು, ರಾಮ ಗೌಡನ ಬಳಿಗೆ ಹೋದ. ಗೌಡನ ಮಗ್ಗುಲಲ್ಲಿ ಕುಳಿತು, ಆತನ ತೊಡೆಯ ಮೇಲೆ ತನ್ನ ಅಂಗೈ ಇರಿಸಿದ. ವಿಶ್ವಾಸದ ನೋಟದಿಂದ ರಾಮಗೌಡನ ಕಣ್ಣುಗಳನ್ನು ನೇರವಾಗಿ ದಿಟ್ಟಿಸುತ್ತ ಆತ ಕೇಳಿದ :

"ಅಣ್ಣಾ, ನಿಮಗೆ ಸಂಪೂರ್ಣ ತೃಪ್ತಿಯಾಯ್ತೆ ?"

ಅಂತಹ ತೃಪ್ತಿಯೆ ಆಗಿತ್ತು ರಾಮುಗೌಡನಿಗೆ. ಸಹಕಾರದ ಹಸ್ತವನ್ನು ಆತ ಅದುಮಿದ್ದ. ಒಲವಿನ ತುಂಬುಬಟ್ಟಲು ಹೃದಯದ ದಾಹಕ್ಕೆ ಪಾನೀಯವಾಗಿ ದೊರೆತಿತ್ತು. ಗಾಢ ಮೈತ್ರಿಯ ಆಲಿಂಗನದಿಂದ ಪುಲಕಗೊಂಡಿತ್ತು ಮೈ.

ಸಾವಧಾನವಾಗಿ ಸಂತೃಪ್ತ ಸ್ವರದಲ್ಲಿ ಆತನೆಂದ:

"ಏನೇನು ಆಸೆ ಕಟ್ಟಿಕೊಂಡು ಘಟ್ಟ ಹತ್ತಿ ಬಂದಿದ್ದೆನೋ ಅದೆಲ್ಲಾ ನೆರವೇರಿದ ಹಾಗಾಯ್ತು ನಂಜಯ್ಯನವರೆ."

"ಸಂತೋಷ, ನಿಮ್ಮ ಬಾಯಿಂದಲೇ ಆ ಮಾತು ಕೇಳಬೇಕೂಂತ ಅಪೇಕ್ಷೆಯಾಗಿತ್ತು."

"ಗುರುತು ಪರಿಚಯವಿಲ್ಲದ ಜನ. ಹೊಸಬರು. ಆದೇನಿದ್ದರೂ ನಾವು ಒಡಹುಟ್ಟಿದವರೇ ಅಂತ ನಂಬಿಕೊಂಡು ಇಲ್ಲಿಗೆ ಬಂದೆ. ನನ್ನ ನಂಬಿಕೆ ಸುಳ್ಳಾಗಲಿಲ್ಲ. ನಿಮ್ಮನ್ನೆಲ್ಲಾ ನೋಡಿದ್ಮೇಲೆ, ನಿಮ್ಮ ಹತ್ತಿರ ಮಾತನಾಡಿದ್ಮೇಲೆ, ನಾವೆಲ್ಲಾ ಅಣ್ಣ ತಮ್ಮಂದಿರು ಅನ್ನೋದು ಸ್ಪಷ್ಟವಾಯ್ತು."

ನಂಜಯ್ಯ ಹೇಳಿದ:

"ಗೌಡರೆ, ನಿಜವಾಗಿ ನೋಡಿದರೆ ಈ ವಯಸ್ನಲ್ಲಿ ನಮ್ಮಂಥವರು ಮೊಮ್ಮಕ್ಕಳನ್ನು ತೊಡೆಮೇಲಿರಿಸಿಕೊಂಡು ಆಡಿಸ್ತಾ ಮನೇಲಿ ಕೂತಿರ್ಬೇಕು. ಆದರೆ ನಾವೆಲ್ಲಿದೇವೆ ಈಗ? ನಾನು ನನ್ನ ಕುಟುಂಬದ ಮುಖ ನೋಡದೆ ಎಷ್ಟು ಕಾಲವಾಯ್ತೊ — ಆ ಎಣಿಕೆಯೇ ಮರೆತು ಹೋಗಿದೆ!"

"ನನಗೆ ನಾಲ್ಕು ಮಕ್ಕಳಿದ್ದಾರೆ ನಂಜಯ್ಯನವರೆ. ದೊಡ್ಡೋನು ಪ್ರಾಯಕ್ಕೆ ಬಂದಿದಾನೆ. ಈ ವರ್ಷ ಮನೆಗೆ ಸೊಸೆ ತರಬೇಕೂಂತಿದ್ದೆ. ಈಗ ಆ ಯೋಚನೆ ಇಲ್ಲ."

ಒಮ್ಮಿಂದೊಮ್ಮೆಲೆ ಆ ಇಬ್ಬರೊಳಗೆ ಆರಂಭವಾದ ಈ ಮಾತುಕತೆಯನ್ನು ಕೇಳುತ್ತ ಉಳಿದವರಿಗೆ ಆಶ್ಚರ್ಯವಾಯಿತು. ವಯಸ್ಸಿನಲ್ಲಿ ಇಬ್ಬರಿಗಿಂತಲೂ ಹಿರಿಯನಾದ ಸೋಮಯ್ಯ ನುಡಿದ:

"ನನ್ನನ್ನು ಯಾಕೆ ಮರೆತಿರಿ? ನಾನು ಯಾವ ತಪ್ಪು ಮಾಡಿದೇಂತ?"

ಪುಟ್ಟಬಸವ ಮುಗುಳುನಕ್ಕ.

"ನಂಜಯ್ಯನವರೆ, ರಾಮುಗೌಡರೆ, ಕೇಳಿದಿರಾ ಸೋಮಯ್ನೋರು

ಮಾತನ್ನ? ಮದುವೆಗೆ ಬೆಳೆದಿರೋ ಮೊಮ್ಮಗಳಿದಾಳೆ ಅವರಿಗೆ!"

ನಂಜಯ್ಯ, ರಾಮಗೌಡ, ಇಬ್ಬರೂ ಸೋಮಯ್ಯನ ಕಡೆಗೆ ನೋಡಿದರು.

ಗೌಡನೆಂದ:

"ಕ್ಷಮಿಸೀಪ್ಪಾ. ಒಂದು ಬೆಟ್ಟಕ್ಕೆ ಇನ್ನೊಂದು ಬೆಟ್ಟ ಅಡ್ಡವಾಗಿರ್ತದೆ ಅನ್ನೋದು ಮರೆತ್ಹೋಯ್ತು!"

ಸೋಮಯ್ಯ ನಕ್ಕು ಸುಮ್ಮನಾದ.

ತಪ್ಪು ಮಾಡಿದವನಂತೆ ಗೌಡ ಹೇಳಿದ:

"ಮಾತು ಎಲ್ಲಿಗೋ ಹೋಯ್ತು. ಆದರೂ ಒಂದು ರೀತೀಲಿ ಮಕ್ಕಳನ್ನು ಮರೀದೆ ಈ ಕೆಲಸ ಮಾಡೋದೆ ಮೇಲು. ನಮಗೆ ಬಿದ್ದಿರೋ ಈ ಸಂಕೋಲೆಗಳನ್ನ ಈಗ ಮುರಿದರೆ, ಸ್ವತಂತ್ರ ದೇಶದಲ್ಲಿ ನಮ್ಮ ಸಂತಾನ ಬೆಳೆಯೋದು ಸಾಧ್ಯವಾದೀತು. ಅವರಿಗಾಗಿಯೇ ನಾವು ಇದನ್ನೆಲ್ಲಾ ಮಾಡ್ತಿರೋದು ಅಂತ ಹೇಳಿದರೆ ತಪ್ಪೇನು?"

ಪುಟ್ಟಬಸವನೆಂದ:

"ಏನೇನೂ ತಪ್ಪಿಲ್ಲ. ನಿಜಸ್ಥಿತಿ ಇರೋದೇ ಹಾಗೆ. ಇವತ್ತು ನಾವು ಸುಮ್ಮನೆ ಕೂತರೆ, ಮುಂದಿನ ಜನಾಂಗ ನಮಗೆ ಶಾಪಕೊಡೋದು ಖಂಡಿತ....."

ಎಲ್ಲರ ಹೃದಯಗಳೂ ಭಾರವಾದುವು. ಯಾವಕಾರಣವೂ ಇಲ್ಲದೆ ಯಾಕೆ ಹೀಗೆ?—ಎಂದು ಪ್ರತಿಯೊಬ್ಬರೂ ಯೋಚಿಸುವಂತಾಯಿತು."

ಅನಿವಾರ್ಯವಾಗಿ ಬೆಳೆಬೀಸಿದ ಮೌನವನ್ನು ಬದಿಗೆ ಸರಿಸುತ್ತ ರಾಮಗೌಡ ಹೇಳಿದ:

"ಸ್ವಾಮಿಯವರೆ, ಹಾಗಾದರೆ ನಾಳೆ ನಾವು ಹೊರಡುವುದು ನಿಶ್ಚಯವಾಯ್ತು."

ಹೌದೆಂದು ಪುಟ್ಟಬಸವ ತಲೆಯಾಡಿಸಿದ:

"ರಾತ್ರೆ ಇಲ್ಲಿಯೇ ತಂಗಿದ್ದು ಬೆಳಬೆಳಗ್ಗೆ ಹೊರಟುಬಿಡಿ."

ಚೆಟ್ಟಿ ಹೇಳಿದ:

"ಕರ್ತರದೂ ನನ್ನದೂ ಕುದುರೆಗಳಿವೆಯಲ್ಲ. ಗೌಡರೂ ಮಾಚಯ್ನೋರೂ ಅವುಗಳನ್ನೇ ತಗೊಂಡು ಹೋಗ್ಲಿ."

“ಆದೀತು. ಬೇರೆ ಇನ್ನೂ ಮೂರು ನಾಲ್ಕು ನಾಳೆ ಹೊಂದಿಸ್ತೀನಿ,” ಎಂದ ಸೋಮಯ್ಯ.

ರಾಮಗೌಡ ಒಪ್ಪಿಗೆ ಸೂಚಿಸುತ್ತ ನುಡಿದ:

“ಆಗಲಿ. ಆದಷ್ಟು ಹೆಚ್ಚು ಕುದುರೆಗಳನ್ನು ನಾವು ಉಪಯೋಗಿಸ್ಬೇಕು. ಇರೋದನ್ನೆಲ್ಲಾ ತಗೊಂಡ್ಬನ್ನಿ. ಸುಳ್ಯದಲ್ಲಿ ಅವುಗಳಿಗೆ ಜೋಡಿಯಾಗಿ ನಾಲ್ಕೈದು ಸಿಕ್ಕಿಯೇ ಸಿಗ್ತವೆ.”

# ೬

ಬೆಳಗಿನ ಜಾವ ಹೊರಟು ನಿಂತ ರಾಮುಗೌಡ–ಮಾಚಯ್ಯರಿಗೋಸ್ಕರ ಬುತ್ತಿಗಳು ಸಿದ್ಧವಾಗಿದ್ದುವು. ಸವಾರಿ ಮಾಡುವವರು ಬೇರೆ ಜನರೆಂದು ತಿಳಿದರೂ ಕುದುರೆಗಳು ಸನ್ನದ್ಧವಾದುವು. ಇಬ್ಬರದೇ ಪ್ರಯಾಣ ಎಂಬುದು ಸ್ಪಷ್ಟವಾದಾಗ ಆ ಕುದುರೆಗಳು, ಉಳಿದ ಎರಡರೊಡನೆ ಬೀಳ್ಕೊಡುಗೆಯ ನಾಟಕವಾಡಿದುವು.

ಮನುಷ್ಯರು ಸಹಜವಾಗಿಯೆ ಪ್ರಾಣಿಗಳನ್ನು ಮೀರಿಸಿದರು.

ಗಂಗವ್ವ ರಾಮುಗೌಡನನ್ನು ಉದ್ದೇಶಿಸಿ ಹೇಳಿದಳು:

"ಅವಸರದಲ್ಲಿ ಬಂದು ಅವಸರದಲ್ಲೆ ಹೊರಟಿದೀರಿ. ನಾಲ್ಕು ದಿವಸ ಇರಲಿಲ್ಲ ಮಾಡಲಿಲ್ಲ."

ಗೌಡನೆಂದ:

"ಇನ್ನೊಂದ್ಸಲ ಪುರಸೊತ್ತು ಮಾಡ್ಕೊಂಡು ಬರ್ತೀನಿ ತಾಯಿ. ನೀವು ಕಟ್ಟಿಕೊಟ್ಟ ಬುತ್ತಿ ಮುಗಿದರೂ ನಿಮ್ಮ ನೆನಪಿನ ಬುತ್ತಿ ನಾನು ಸಾಯೋವರೆಗೂ ಇರ್ತದೆ."

"ಶಿವ ನಿಮ್ಮನ್ನು ಚೆನ್ನಾಗಿಡಲಪ್ಪಾ."

"ಈ ವಾರದಲ್ಲೆ ನಿಮ್ಮ ಮಗನನ್ನು ನಮ್ಮೂರಿಗೆ ಕಳಿಸ್ಕೊಡಿ ತಾಯಿ."

"ನನ್ಗೆಲ್ಲೇನಪ್ಪಾ ಇದೆ? ನಾನೇನು ಹೊಟ್ಟೆಯೊಳಗೆ ಬಚ್ಚಿಟ್ಕೊಳ್ಳೋ ಕಾಗ್ತದಾ ಮಗನನ್ನ? ಹೊರಟ ಅಂದರೆ ಹೊರಟ್ನೇ!"

ಮಾಚಯ್ಯನೂ ಹೇಳಿದ:

"ಓಗ್ಬರ್ತೀನಿ ತಾಯಿ."

"ಆಗಲಪ್ಪಾ...."

ಗಿರಿಜಾ ಹಿಂಬದಿಯಲ್ಲಿ ನೆರಳಿನ ಮರೆಯಲ್ಲೇ ನಿಂತಳು. ಆಕೆಯ ದೃಷ್ಟಿಯಲ್ಲಿ ಮಾಚಯ್ಯ ರಾಮುಗೌಡರು ಬರಿಯ ಪರಿಚಿತರಲ್ಲ, ಸ್ನೇಹಿತರಲ್ಲ. ಗೌಡನಂತೂ ದಂಡನಾಯಕ. ನಾಳೆಯ ದಿನ ತನ್ನ ಪತಿದೇವನ ಜತೆ ಭುಜಕ್ಕೆ ಭುಜ ಕೊಟ್ಟು ಕಾದುವ ವೀರ....

ಗಿರಿಜೆ ಆ ಇಬ್ಬರನ್ನೂ ನೋಡಿದಳು. ಕಳುಹಿಕೊಡಲೆಂದು ನಿಂತಿದ್ದ

ಉಳಿದೆಲ್ಲರನ್ನೂ ನೋಡಿದಳು. ಕೊನೆಯದಾಗಿ ಆಕೆಯ ನೋಟ ತನ್ನ ಗಂಡನ ಮೇಲೆಯೇ ನೆಟ್ಟಿತು.

"ಶುಕ್ರವಾರದೊಳಗೆ ನಾವೂ ಅಲ್ಲಿರ್ತೀವಿ ಗೌಡರೆ," ಎಂದ ನಂಜಯ್ಯ.

"ಹೌದು. ಕಾದಿರ್ತೀವಿ."

ರಾಮುಗೌಡ ಪುಟ್ಟಬಸವನೆದುರು ನಿಂತು ಬಾಗಿ ನಮಿಸಿದ.

"ನೀವು ಹೀಗೆ ಮಾಡಬಾರದು ಗೌಡರೆ. ವಯಸ್ನಲ್ಲಿ ನೀವು ನನಗಿಂತ ಹಿರಿಯೋರು," ಎಂದ ಪುಟ್ಟಬಸವ.

"ಸ್ವಾಮಿಯೋರು ನನಗೆ ನಾಯಕರು!"

ಗೌಡನ ಭುಜಗಳನ್ನು ಹಿಡಿದು ಎತ್ತಿದ ಪುಟ್ಟಬಸವ.

"ಇಷ್ಟು ಬೇಗ್ನೆ ತಿರುಗಿ ನಾವೆಲ್ಲಾ ಸೇರ್ತೀವಿ ಅನ್ನೋ ನಿರೀಕ್ಷೇಲಿ, ಈ ಅಗಲಿಕೆಯ ಸಂಕಟವನ್ನ ಮರಿತೀವಿ."

ಮಾತಿಗಾಗಿ ತಡವರಿಸುವಂತಾಯಿತು ರಾಮುಗೌಡನಿಗೆ.

"ನಾನು ಏನು ಹೇಳಬೇಕೊ, ತೋಚುತ್ತಿಲ್ಲ. ಇನ್ನು ಅಪ್ಪಣೆ ಕೊಡಿ ಸ್ವಾಮಿಯವರೆ. ಹೊರಡ್ತೀವಿ."

"ಆಗಲಿ ಗೌಡರೆ, ಆಗಲಿ ಮಾಚಯ್ಯ. ಸುರಕ್ಷಿತವಾಗಿ ಹೋಗಿ ತಲಪಿ. ನಿಮ್ಮ ಹಿಂದಿನಿಂದಲೇ ನಾವೂ ಬಂದ್ಬಿಡ್ತೀವಿ."

ಹೊರಟು ನಿಂತ ಅಶ್ವದ್ವಯಗಳೂ ಉಳಿದೆರಡು ಕುದುರೆಗಳೂ ಮತ್ತೊಮ್ಮೆ ಪರಸ್ಪರ ವಿದಾಯದ ಮಾತು ಆಡಿದುವು.

ಚಿಟ್ಟಿ ಮತ್ತು ಕರ್ತು, ಕಾಲು ಹಾದಿ ತಲಪುವ ತನಕವೂ ಕುದುರೆಗಳ ಜತೆಯಲ್ಲೆ ಹೋದರು.

* * * *

ಆ ಹಗಲು, ಬಂಡಾಯವೇಳುವಂತೆ ಸೂಚಿಸಿ ಕಳುಹುವ ಸಂದೇಶ ಸಿದ್ಧವಾಯಿತು. ಪುಟ್ಟಬಸವನೂ ನಂಜಯ್ಯನೂ ಅದರ ಪ್ರತಿಗಳನ್ನು ಮಾಡಿದರು. ಆ ಒಕ್ಕಣೆಗೆ ಇಬ್ಬರೂ ಸಹಿ ಹಾಕಿದರು.

ಕೊಡಗಿನ ನಾಲ್ಕು ಮೂಲೆಗಳಿಗೂ ಹೋಗಿಬರಲು ಇಬ್ಬರು ಕುದುರೆ ಸವಾರರಾದ ಹರಿಕಾರರನ್ನು ಸೋಮಯ್ಯ ಗೊತ್ತುಮಾಡಿದ.

ಕ್ಷೋಭೆಯ ಕಿಡಿಯನ್ನು — ಬಂಡಾಯದ ಕರೆಯನ್ನು — ಹೊತ್ತ ಒಕ್ಕಣೆ, ತಾವುನಾಡು ಬೇಂಗುನಾಡುಗಳ ಮಡಿಕೇರಿನಾಡು ನಾಲ್ಕುನಾಡು

ಗಳ ಉಮ್ಮತ್ತುನಾಡು ಶ್ರೀಮಂಗಲನಾಡುಗಳ ಅಭಿಮುಖವಾಗಿ ಸಾಗಿತು.

ಆ ಒಕ್ಕಣೆಯಲ್ಲಿತ್ತು :

" ಇಂಗ್ಲಿಷರ ವಿರುದ್ಧ ಯುದ್ಧ ಸಾರಿಯಾಯ್ತೂಂತ ತಿಳಿದುಕೊಳ್ಳಿ. ಕೊಡಗು ಸ್ವತಂತ್ರವೆಂದೇ ಭಾವಿಸಿರಿ. ಪರಕೀಯರ ಆಳ್ವಿಕೆಯನ್ನು ಒಪ್ಪಿಕೊಳ್ಳಲು ಜನರು ನಿರಾಕರಿಸಲಿ. ಹೋರಾಟಕ್ಕೆ ಎಲ್ಲರೂ ಸನ್ನದ್ಧರಾಗಿ. ನಮ್ಮ ಸೈನ್ಯ ಸದ್ಯದಲ್ಲಿಯೇ ಬರಲಿದೆ."

ಜತೆಯಲ್ಲೆ, ನಡೆದಿದ್ದ ಮಹಾಯತ್ನದ ವಿವರವನ್ನು ತಿಳಿಸುವಂತೆ, ಪುಟ್ಟಬಸವ ಓಲೆಕಾರರಿಗೆ ನಿರ್ದೇಶಗಳನ್ನೂ ನೀಡಿದ.

* * * *

ಅನಂತರದ ಹಗಲು ಇರುಳುಗಳು ಬಲು ಬೇಗನೆ ಉರುಳಿದುವು. ಸಾಕಷ್ಟು ಸಂಖ್ಯೆಯಲ್ಲಿ ಗಂಡಸರನ್ನು ಹಿಂದೆ ಬಿಟ್ಟು ಉಳಿದವರೆಲ್ಲ ಹೊರಡಬೇಕೆಂಬುದೇ ತೀರ್ಮಾನವಾಗಿತ್ತು. ಹೊರಡುವುದಕ್ಕಂತೂ ಎಲ್ಲರೂ ಉತ್ಸುಕರಾಗಿಯೇ ಇದ್ದರು.

ಹಾಗೆ ಆ ಹಳ್ಳಿಯಿಂದಲೂ ಸಮೀಪದ ಒಂದೆರಡು ಹಳ್ಳಿಗಳಿಂದಲೂ ಹೊರಟವರ ಸಂಖ್ಯೆ ಇಪ್ಪತ್ತನ್ನು ಮೀರಿತು.

" ನೀವು ನಮ್ಮ ಜತೇಲಿ ಇರಿ ಸೋಮಯ್ಯ. ಉಳಿದವರನ್ನೆಲ್ಲಾ ಕರಿಯಪ್ಪ ಕರಕೊಂಡು ಮೊದಲೇ ಹೋಗ್ಲಿ," ಎಂದ ಪುಟ್ಟಬಸವ.

ಹೀಗೆ, ಕಾಲ್ನಡಿಗೆಯ ಪ್ರವಾಸದ ಆ ತಂಡ ಮುಂದಾಗಿಯೇ ಹೊರಟಿತು.

* * * *

ಇದ್ದಲ್ಲೆ ಇದ್ದು ಬೇಸರವಾಗಿದೆಯೆಂದು ಕುದುರೆಗಳು ಗದ್ದಲ ಮಾಡಿದುವು. ಹತ್ತಾರು ಮೈಲು ಸುತ್ತಾಡಿ ಸೋಮಯ್ಯ ಬೇರೆಯೂ ಮೂರು ಕುದುರೆಗಳನ್ನು ತಂದ.

ಹೊರಡುವ ದಿನ ಬಂತು. ಆ ದಿನಕ್ಕೆ ಹಿಂದಿನದು, ನಡುವಿರುಳಿನವರೆಗೂ ಎಲ್ಲರೂ ಎಚ್ಚರವಾಗಿಯೇ ಇದ್ದ ರಾತ್ರಿ. ಆಮೇಲೂ ಬೆಳ್ಳಿ ಮೂಡುವ ವರೆಗೆ ಮಾತ್ರ, ಸ್ವಲ್ಪವೇ ಸಮಯದ ನಿದ್ದೆ.

ಗಿರಿಜಾ ಅಳಲಿಲ್ಲ. ಗಂಗವ್ವನೊಬ್ಬಳೇ ಮಗನ ಜತೆಯಲ್ಲಿ, ಆತನ ಆಪ್ತರ ಜತೆಯಲ್ಲಿ, ಎಡೆಬಿಡದೆ ಮಾತನಾಡಿದಳು.

ಆಕೆ ಅಂದಳು:

" ನೀವೆಲ್ಲಾ ಒಟ್ಟಿಗೆ ಇದೀರೀಂತ ನನಗೆ ಸಮಾಧಾನ."

" ನಾವು ಮಂಗಳೂರುವರೆಗೂ ಹೋಗ್ತೀವಿ. ನಿಮಗೇನು ಬೇಕು ಹೇಳಿ ತಾಯಿ," ಎಂದ ನಂಜಯ್ಯ.

" ನನಗೇನೂ ಬೇಡೀಪ್ಪಾ. ನನ್ನ ಪುಟ್ಟಬಸ್ಯನೂ ನೀವೂ ಬೇಗ್ನೆ ವಾಪಸು ಬನ್ನಿ. ಅಷ್ಟೇ ಸಾಕು."

" ನಿಮ್ಮಂಥ ತಾಯಿ ಕೈಲಿ ಒಳ್ಳೇ ಮಗ ಅನಿಸ್ಕೊಳ್ಳೋದು ಬಹಳ ಸುಲಭ."

ಆ ಹೊಗಳಿಕೆ ಕೇಳಿ ಲಜ್ಜೆ ಎನಿಸಿತು ಗಂಗವ್ವನಿಗೆ.

....ನಿಷ್ಟೆಗೆಂದು ಮಲಗಿದ್ದ ಆ ರಾತ್ರಿ ಗಿರಿಜವ್ವ ಒಂದು ಕ್ಷಣವೂ ಎವೆ ಮುಚ್ಚಲಿಲ್ಲ.

ಆಡಬೇಕಾಗಿದ್ದ ಮಾತುಗಳನ್ನೆಲ್ಲ ಅವರು ಆ ಮೊದಲೇ ಆಡಿ ಮುಗಿಸಿದ್ದರು. ಈಗ ಏನಿದ್ದರೂ ಕಡಿದು ಬರುತಿತ್ತು, ಯಾವುದೋ ಒಂದು ಪದ, ಏನನ್ನೋ ತಿಳಿಸುವ ಆಸೆಯಿಂದ.

" ಗಿರಿಜಾ...."

" ಹೂಂ ?"

" ಏನಿಲ್ಲ...."

ಅಳುವ ಅಪೇಕ್ಷೆ. ಅಳಬಾರದೆನ್ನುವ ಛಲ.

ಹೊರಡುವ ಗಂಡ ಏನೂ ಹೇಳದೆ ಹೋಗುವುದೆಂದರೇನು ?

" ಅವ್ವನನ್ನು ನೋಡ್ಕೊ ಗಿರಿಜಾ. ದೃಷ್ಟಿ ಪೂರ್ತಿ ಮಂದವಾದರೆ ಅವಳಿಗೆ ಬಹಳ ಕಷ್ಟ."

" ನೋಡ್ಕೊತೀನಿ."

ಬಳಿಕ ಸಣ್ಣ ಪುಟ್ಟ ವಿಷಯಗಳು.

" ನನ್ನ ನಿಲುವಂಗಿ – ಷರಾಯಿ...."

" ಒಗೆದು ಒಣಗಿಸಿ ಮಡಚಿ ಇಟ್ಟಿದ್ದೀನಿ."

" ಜತೆಗೆ ಇವತ್ತು ಹಾಕೊಂಡಿದ್ದೂ ಇದ್ಕೊಳ್ಳುತ್ತೆ."

" ಹೂಂ...."

ಗಂಡನ ಆರೋಗ್ಯ ರಕ್ಷಣೆಯ ಯೋಚನೆಯೂ ಒಂದಿತ್ತು ಗಿರಿಜೆಗೆ.

" ಹಾದೀಲಿ ತಣ್ಣೀರು ಕುಡೀಬೇಡಿ."

" ಇಲ್ಲ."

" ನೆಗಡಿ ಜ್ವರ ಆದರೆ ನೋಡ್ಕೊಳ್ಳೋರು ಯಾರು ?"

" ಹೆದರ ಬೇಡ್ವೆ. ಕಾಹಿಲೆ ಬರಿಸ್ಕೊಳ್ಳೋಕೆ ಪುರುಸೊತ್ತೆಲ್ಲಿರುತ್ತೆ ನಂಗೆ ?"

" ನೀವೊಬ್ಬರು...."

ಮಾತು ಕರಗಿ ಮೌನದ ದ್ರವವಾಯಿತು. ಆ ದ್ರವ ಆರಿ ನಿದ್ದೆಯ ಉಗಿಯಾಯಿತು. ಪುಟ್ಟಬಸವನ ಶ್ವಾಸೋಚ್ಛ್ವಾಸ ಒಂದೇ ಸಮನಾದೊಡನೆ ಆತನಿಗೆ ನಿದ್ದೆ ಬಂತೆಂದು ಊಹಿಸಿ, ಗಿರಿಜಾ ಮೆಲ್ಲನೆ ಕಣ್ಣು ತೆರೆದಳು. ಮಲಗಿದ್ದ ಗಂಡನ ಮುಗುಮುಖದ ರೂಪು ರೇಖೆಗಳನ್ನು ಆ ಕತ್ತಲೆಯಲ್ಲೂ ಆಕೆ ಎವೆ ಇಕ್ಕದೆ ನೋಡಿದಳು.

ಇದ್ದೂ ಇಲ್ಲದಂತೆ ಮೇಲಕ್ಕೆ ಏರಿ ಗಾಳಿಯೊಡನೆ ಬೆರೆತಿತ್ತು ನಿದ್ದೆಯ ಉಗಿ. ಗಟ್ಟಿಯಾಗಿ ಒಮ್ಮೆ ಉಸಿರು ಬಿಟ್ಟು ಪುಟ್ಟಬಸವ ಕಣ್ದೆರೆದು ನೋಡಿದ.

" ನಿದ್ದೆ ಬಂದಿಲ್ವಾ ಗಿರಿಜಾ ?"

" ಇಲ್ಲ...."

" ಎಷ್ಟು ಹೊತ್ತಾಯ್ತೋ ?"

" ಇನ್ನೇನು ಮೊದಲ ಕೋಳಿ ಕೂಗೋ ಸಮಯ."

" ಹೌದಾ ?"

" ಹೂಂ...."

ಒಳಗಿನಿಂದ ಗಂಗವ್ವನ ಸ್ವರ ಕೇಳಿಸಿತು:

" ಗಿರಿಜಾ, ಏಳು ಮಗೂ. ಬಿಸಿಯಾಗಿ ಎರಡೆರಡು ರೊಟ್ಟಿ ತಟ್ಟೋನ."

....ಉಪಾಹಾರ ಮುಗಿಸಿ, ಉಡುಪು ಧರಿಸಿ ಖಡ್ಗಗಳನ್ನು ಸೊಂಟಕ್ಕೆ ಬಿಗಿದು, ಬಂದೂಕಗಳನ್ನು ಭುಜಕ್ಕೇರಿಸಿ, ಪುಟ್ಟಬಸವನೂ ಸಂಗಡಿಗರೂ ಹೊರಟು ನಿಂತರು. ಹುಲ್ಲು ನೀರು ಇನ್ನು ಬೇಡವೆಂದು ಕುದುರೆಗಳು ತಮ್ಮ ಸಿದ್ಧತೆಯನ್ನೂ ಸೂಚಿಸಿದುವು.

ಗಿರಿಜಾ, ಸೆರಗನ್ನು ನಡುವಿಗೆ ಬಿಗಿದು ಕಂಚಿನ ತಟ್ಟೆಯಲ್ಲಿ ಆರತಿ ತಂದಳು. ಅರುಣೋದಯದ ಹೊಂಬಣ್ಣದೊಡನೆ ಆರಳೆ ಬತ್ತಿಯ ಬೆಳಕು

ತಾನೂ ಸ್ಪರ್ಧಿಸಿತು. ಆ ಐವರು ಧೀರರು ನಿಶ್ಚಲರಾಗಿ ನಿಂತರು. ಗಭೀರತೆಯೆ ಬೇರುಬಿಟ್ಟು ಪ್ರತಿಯೊಂದೂ ಸ್ತಬ್ಧವಾದಂತಿತ್ತು ವಾತಾವರಣ. ಗಿರಿಜಾ ಆರತಿ ಬೆಳಗಿದಳು, ತನ್ನ ಗಂಡನಿಗೆ, ಆ ನಾಲ್ವರಿಗೆ. ಅವರೆಲ್ಲರ ಹಣೆಗಳಿಗೆ ಕುಂಕುಮವಿರಿಸಿದಳು ಆಕೆ.

ಅದೆಲ್ಲವೂ ಮುಗಿದ ಬಳಿಕ ಪುಟ್ಟಬಸವ ತಾಯಿಯ ಪಾದಗಳಿಗೆ ನಮಿಸಿದ.

"ಆಶೀರ್ವಾದ ಮಾಡು ಅವ್ವಾ."

ಗಂಗವ್ವ ಮಗನ ತಲೆಗೂದಲನ್ನು ಮುಟ್ಟಿದಳು.

"ಜಯ ಗಳಿಸ್ಕೊಂಡು ಬಾ ಮಗ."

ಎದ್ದು ನಿಂತ ಪುಟ್ಟಬಸವ ಒಲವು ತುಂಬಿದ ದೃಷ್ಟಿಯಿಂದ ಹೆಂಡತಿಯನ್ನು ನೋಡಿದ.

ಆಕೆಗೋಸ್ಕರವೆನ್ನುವಂತೆ ಆತನೆಂದ:

"ಬರ್ತೀನಿ."

ಬಳಿಕ—

"ಬರ್ತೀನಿ ಅವ್ವಾ."

ವೀರನಾಗಿದ್ದರೂ ಪುಟ್ಟಬಸವನ ಸ್ವರ ಕಂಪಿಸಿತು.

ಗದ್ಗದ ಕಂಠದಿಂದ ತಾಯಿ ಅಂದಳು:

"ಹೊನಪ್ಪಾ. ಜೋಪಾನ. ಎಲ್ರೂ ಒಟ್ಗೇ ಇರಿ."

ನೆಲಕ್ಕೆ ಅಂಟಿಕೊಂಡಿದ್ದ ಪಾದಗಳನ್ನು ಕದಲಿಸುತ್ತ ನಂಜಯ್ಯನೆಂದ:

"ಬರ್ತೀವಿ ತಾಯಿ"

ಕುದುರೆಗಳ ಬಳಿಗೆ ಸರಿಯುತ್ತ ಉಳಿದವರೂ ಅಂದರು:

"ಓಗ್ಬರ್ತೀವಿ, ಬರ್ತೀವಿ!"

ಆಧಾರಕ್ಕೆಂದು ಜಗಲಿಯ ಗೋಡೆಯನ್ನು ಹಿಡಿದುಕೊಳ್ಳುತ್ತಾ ತಾಯಿ ಹೇಳಿದಳು:

"ಓಗ್ಬನ್ನಿ. ಓಗ್ಬನ್ನೀಪ್ಪಾ...."

....ಹೊಲಗಳನ್ನು ನಡೆದು ದಾಟಿ ಅವರೆಲ್ಲ, ಕಾಡಿನ ಅಂಚನ್ನು ತಲಪಿ ಕಾಲಹಾದಿಗೆ ಬಂದರು.

ಅಗಲ ಕಿರಿದಾದ ಆ ಹಾದಿಯಲ್ಲಿ ಸಾಗಬೇಕಾದ ರೀತಿಯನ್ನು ವಿವರಿ

ಸುತ್ತ ಸಂಜಯ್ಯ ಹೇಳಿದ:

"ಚೆಟ್ಟಿ ಮುಂದುಗಡೆ; ಎರಡ್ನೇದಾಗಿ ಸೋಮಯ್ಯೋರು. ಕರ್ತುಗ ಹಿಂದುಗಡೆ; ಆತನ ಎದುರಿಗೆ ನಾನು. ನಡುವಿನಲ್ಲಿ ಸ್ವಾಮಿಯವರು—ಕಲ್ಯಾಣಸ್ವಾಮಿಯವರು. ಸರಿಯಾ?"

"ಸರಿ," ಎಂದರು ಚೆಟ್ಟಿಯೂ ಸೋಮಯ್ಯನೂ ಜತೆಯಾಗಿಯೇ.

ಎಲ್ಲರೂ ಕುದುರೆಗಳನ್ನೇರಿದರು.

ಪುಟ್ಟಬಸವ – ಕಲ್ಯಾಣಸ್ವಾಮಿಯಾಗಿದ್ದ ಪುಟ್ಟಬಸವ – ಎಡಕ್ಕೆ ತಿರುಗಿ ಮನೆಯ ಕಡೆಗೊಮ್ಮೆ ನೋಡಿದ:

ಬಿಳಿದು, ಕರಿದು, ಮೋಡದ ಹಾಗೆ ಪ್ರತಿಯೊಂದೂ ಮಸಕಾಗಿತ್ತು. ಬಳಿಕ ಮೋಡ ಚೆದರಿದ ಹಾಗೆ ಸ್ಪಷ್ಟವಾಗಿ ಕಾಣಿಸಿತು ಮನೆ. ಜಗಲಿಯ ಗೋಡೆಯನ್ನು ಆಧರಿಸಿ ಗಂಗವ್ವ ಇನ್ನೂ ನಿಂತೇ ಇದ್ದಳು. ಆಕೆಯ ಮಗ್ಗುಲಲ್ಲೇ ಇದ್ದಳು ಗಿರಿಜಾ....

ಅಲ್ಲಿಂದ ದೃಷ್ಟಿಯನ್ನು ಪ್ರಯಾಸಪಡುತ್ತ ಕಿತ್ತು, ಕಲ್ಯಾಣಸ್ವಾಮಿ ನೇರವಾಗಿ ಮುಂದಕ್ಕೆ ನೋಡಿದ.

# ೭

ಎರಡು ದಿನಗಳ ಎಡೆಬಿಡದ ಪ್ರಯಾಣದಿಂದ ಕುದುರೆಗಳು ಬಳಲಿದ್ದುವು.

"ಇವತ್ತು ರಾತ್ರೆ ವಸ್ತಿ ಎಲ್ಲಿ ಸೋಮಯ್ಯನವರೆ?" ಎಂದು ಕಲ್ಯಾಣಸ್ವಾಮಿ ಕೇಳಿದ.

ಆ ಹಾದಿಯಾಗಿ ಹಿಂದೊಮ್ಮೆ ಬಂದಿದ್ದ ಸೋಮಯ್ಯನೆಂದ:

"ಸುಳ್ಯದಲ್ಲೇ!"

"ಹತ್ತಿರ ಬಂದೆವೇನು ಹಾಗಾದರೆ?"

"ಓಹೋ. ಇನ್ನು ಮೂರೇ ಹರದಾರಿ ಹಾದಿ."

ಸೋಮಯ್ಯನ ಆ ಮಾತು ಕೇಳಿ ಉಳಿದವರಿಗೆಲ್ಲ ಸಂತೋಷವಾಯಿತು. ತಮಗೂ ಅದು ಅರ್ಥವಾಯಿತೆನ್ನುವಂತೆ ಕುದುರೆಗಳೂ ಉತ್ಸಾಹ ತೋರಿದುವು.

ಸೂರ್ಯನಾಗಲೆ ಪಡುವಣಕ್ಕೆ ಇಳಿದಿದ್ದ. ಮಾರ್ಗ ಕ್ರಮಿಸಿದಂತೆ ಹಾದಿಯೂ ಅಗಲವಾಯಿತು. ಬಿಸಿಲೆಘಾಟಿಯ ದಾರಿಯಾಗಿಯೆ ಅವರು ಬಂದುದು. ಒಂದೆರಡು ಕಡೆ ಉಪಾಹಾರಕ್ಕೋಸ್ಕರ ನಿಂತುದು ಎಷ್ಟೋ ಅಷ್ಟೆ. ಉಳಿದ ಊರುಗಳನ್ನೆಲ್ಲ, ಯಾರ ದೃಷ್ಟಿಗೂ ಬೀಳಬಾರದೆಂದು, ಅವರು ಬಳಸಿಯೇ ಬಂದಿದ್ದರು.

ಎತ್ತರತಗ್ಗಾದ ಹಾದಿ. ಕೆಮ್ಮಣ್ಣು. ಕುಯಿಲು ಮುಗಿದು ಬರಿದಾಗಿ ಒಣಗಿದ್ದ ಹೊಲಗಳು. ಕಾಡು, ನಡು ನಡುವೆ. ಬೆಂಕಿ ಬಿದ್ದು 'ಮುಳಿ' ಹುಲ್ಲೆಲ್ಲ ಸುಟ್ಟುಹೋಗಿದ್ದ ಬೋಳು ಗುಡ್ಡಗಳು. ಒಮ್ಮೊಮ್ಮೆ ಕಾಲು ಹಾದಿಗೆ ಸಮೀಪವಾಗಿಯೆ ಹರಿಯುತಿದ್ದ ನೀರು....

ಮುಂದು ಮುಂದಕ್ಕೆ ಸಾಗಿದಂತೆ ಹಾದಿ ನುಣ್ಣಗಾಗುತ್ತ ಬಂತು. ಜನ ಹೆಚ್ಚು ಹೆಚ್ಚಾಗಿ ಓಡಾಡುವ ದಾರಿ ಅದೆಂಬುದಕ್ಕೆ ಸಾಕ್ಷ್ಯ. ಸೂರ್ಯ ಪಶ್ಚಿಮದಲ್ಲಿ ಅದೆಲ್ಲಿ ಮರೆಯಾದನೋ. ಮಳೆ ಮೋಡಗಳು ಒಮ್ಮಿಂದೊಮ್ಮೆಲೆ ಮುಸುಕಿದ ಹಾಗೆ ಕತ್ತಲು ಕವಿಯತೊಡಗಿತು.

"ಕತ್ತಲಾಗ್ತಾ ಬಂತಲ್ಲಾ," ಎಂದ ನಂಜಯ್ಯ.

" ಇನ್ನೇನು ಬಂದೆವು. ಅಗೋ ಊರು !" ಎಂದ ಸೋಮಯ್ಯ.

ಆಲದ, ಸಾಗುವಾನಿಯ, ಹೊಂಗೆಯ ಮರಗಳೆಡೆಯಿಂದ ಬಿದಿರ ಮೆಳೆಗಳಾಚೆಯಿಂದ, ಅಸ್ಪಷ್ಟವಾಗಿ ಕೇಳಿಸಿತು ಊರಿನ – ಜನವಸತಿಯ— ಕಲರವ.

ಹತ್ತಾರು ಮಾರು ಮುಂದಾಗಿಯೆ ಸಾಗಿದ್ದ ಚೆಟ್ಟಿ, ಕಡಿವಾಣವೆಳೆದು ಕುದುರೆಯನ್ನು ಜಗ್ಗಿಸಿ ನಿಲ್ಲಿಸಿ, ಹಿಂದಕ್ಕೆ ತಿರುಗಿ ಏರುಧ್ವನಿಯಲ್ಲಿ ಹೇಳಿದ:

" ಜನರ ಗುಂಪು ಕೂಡಿದೆ ! ಅವರೆಲ್ಲಾ ಹಾದಿಗಡ್ಡವಾಗಿ ನಿಂತ ಹಾಗಿದೆ !"

ಉಳಿದವರೂ ಆತನ ಬಳಿ ಸಾರಿ ಕುದುರೆಗಳನ್ನು ನಿಲ್ಲಿಸಿದರು.

ನಂಜಯ್ಯನೆಂದ :

" ಉಕ್ಕಡದ ಪಹರೆಯವರೋ ಏನೋ."

" ಹಿಂದೆ ಈ ಊರಲ್ಲಿ ಉಕ್ಕಡದ ಕಾವಲು ಇರ್ಲಿಲ್ವಲ್ಲಾ," ಎಂದ ಸೋಮಯ್ಯ.

" ಏನು ಮಾಡಲಿ ಸ್ವಾಮಿಯೋರೆ ? ನಾನೊಬ್ಬನೇ ಮುಂದೆ ಹೋಗಿ ನೋಡ್ಲೇನು ?" ಎಂದು ಕೇಳಿದ ಚೆಟ್ಟಿ.

" ಬೇಡ !" ಎಂದ ಕಲ್ಯಾಣಸ್ವಾಮಿ, " ಇದು ಸುಳ್ಯ ತಾನೇ ?"

" ಹೌದು."

" ನಡೀರಿ ಹಾಗಾದರೆ. ಏನಿದ್ದರೂ ಸರಿಯೆ. ಎಲ್ಲರೂ ಮುಂದೆ ಹೋಗೋಣ !"

ಕುದುರೆಗಳು ಮತ್ತೆ ಹೆಜ್ಜೆ ಇಟ್ಟುವು.

ಇನ್ನೂರರಷ್ಟು ಜನರ ಗುಂಪು. ಕೆಲವರು ಸ್ತ್ರೀಯರು. ಖಡ್ಗಧಾರಿಗಳಾದ ಜನರಿದ್ದರು. ಫಾಲು, ಬರ್ಚಿಗಳೂ ಕೂಡಾ. ಬಂದೂಕು ಹಿಡಿದವರೂ ಕೆಲವರಿದ್ದರು.

ಇದೇನಿರಬಹುದೆಂದು ನಂಜಯ್ಯ ಊಹಿಸುತಿದ್ದಂತೆಯೆ ಜನ ಬೀದಿ ಗಡ್ಡವಾಗಿ ನಿಂತರು. ಯಾರೂ ಒರೆ ಹಿರಿಯಲಿಲ್ಲ, ಬಂದೂಕುಗಳನ್ನೆತ್ತ ಲಿಲ್ಲ. ಬದಲು, ಎರಡೂ ಕೈಗಳನ್ನು ಮೇಲಕ್ಕೆತ್ತಿ ಅವರು ಕೂಗಾಡಿದರು :

" ಹೋ ಹೋ ಹೋ ! ನಿಲ್ಲಿ ! ನಿಲ್ಲಿ !"

ಆ ಜನರಿಗಿದಿರಾಗಿ ಸಮೀಪವಾಗಿಯೆ ಕುದುರೆಗಳು ನಿಂತುವು.

ಸೋಮಯ್ಯ ಧ್ವನಿ ಏರಿಸಿ ಕೇಳಿದ :

" ಏನಿದು ? ಯಾಕೆ ಅಡ್ಡ ನಿಂತಿದೀರಿ ?"

" ಈ ಹಾದೀಲಿ ಬಂದೋರ್‍ನ ಇಲ್ಲೇ ನಿಲ್ಲಿಸ್ಬೇಕೂಂತ ಗೌಡರ ಅಪ್ಪಣೆಯಾಗ್ಯೆತೆ."

" ಯಾವ ಗೌಡರು ?"

ಸ್ವಲ್ಪ ಸಿಟ್ಟಾಗಿ ಒಬ್ಬನೆಂದ :

" ರಾಮಗೌಡರು ! ಕೇಳಿಲ್ವಾ ?"

ಕಲ್ಯಾಣಸ್ವಾಮಿ ನಸುನಕ್ಕ. ಆತನ ಸಂಗಡಿಗರೆಲ್ಲ ಸುಪ್ರಸನ್ನ ರಾದರು.

ಸೋಮಯ್ಯನ ಕಣ್ಣುಗಳಲ್ಲಿ ನಗೆ ತುಳುಕಿತು. ಆದರೂ ದರ್ಪದ ಧ್ವನಿಯನ್ನು ಬದಲಿಸದೆ ಆತನೆಂದ :

" ನಿಮ್ಮ ಗೌಡರನ್ನ ಕರಕೊಂಡ್ಬನ್ನಿ."

" ನೀವು ಯಾರೂಂತ ತಿಳಿಸಿ."

ನಂಜಯ್ಯ ಆ ಮನುಷ್ಯನನ್ನು ಉದ್ದೇಶಿಸಿ ಕೇಳಿದ :

" ಯಾರು ಬರ್‍ತಾರೇಂತ ಇಲ್ಲಿ ಕಾಯ್ತಿದೀರ ನೀವು ?"

" ಕೊಡಗಿನಿಂದ ಸ್ವಾಮಿಯೋರು ಬರಬೌದು, ಇಲ್ದೇ ಓದರೆ ಅವರ ಕಡೆಯೋರಾದರೂ ಬರಬೌದು – ಅಂತ ಗೌಡರು ಹೇಳವರೆ. ಬೆಳಗ್ನಿಂದ್ಲೇ ನಾವು ಕಾದಿದೀವಿ."

" ಭೇಷ್! ನಾವು ಸ್ವಾಮಿಯೋರ ಕಡೆ ಜನವೇ."

ಆ ಮನುಷ್ಯ ಹಲ್ಲು ಕಿರಿದ :

" ಸಂತೋಷವಾಯ್ತು. ಹಾಗಾದರೆ ಇಳೀರಿ. ಗೌಡರು ಈ ಕ್ಷಣ ಬಂದ್ಬಿಡ್ತಾರೆ."

ಆತ ಗುಂಪಿನಲ್ಲಿದ್ದೊಬ್ಬನಿಗೆ ನಿರ್ದೇಶವಿತ್ತ :

" ತನಿಯಪ್ಪ, ಗೌಡರನ್ನ ಕರಕೊಂಡ್ಬಾ. ಸ್ವಾಮಿಯೋರ ಕಡೆ ಯೋರು ಐದು ಜನ ಸವಾರರು ಬಂದವರೇಂತ ತಿಳಿಸು !"

ತನಿಯಪ್ಪ ಹೊರಬೀಳಲು ಗುಂಪು ಹಾದಿಮಾಡಿಕೊಟ್ಟಿತು. ಕುದು ರೆಯೊಂದು ನಾಗಾಲೋಟದಿಂದ ಕೆಂಧೂಳಿ ಎಬ್ಬಿಸುತ್ತ ಊರೊಳಕ್ಕೆ ಧಾವಿ ಸಿತು.

" ಇಳಿಯೋಣ ಇನ್ನು. ಜೋರಾಗೇ ಇದೆ ಗೌಡರ ಶಿಸ್ತು," ಎಂದ ಸೋಮಯ್ಯ.

ಎಲ್ಲರೂ ಕುದುರೆಗಳಿಂದ ಕೆಳಗಿಳಿದರು.

ತಾವು ನಿರೀಕ್ಷಿಸುತ್ತಿದ್ದ ಸ್ವಾಮಿ ಅಲ್ಲದೆ ಹೋದರೂ ಅವರ ಕಡೆಯವ ರಾದರೂ ಬಂದರೆಂದು ನೆರೆದಿದ್ದ ಜನರಿಗೆ ತುಸು ಸಮಾಧಾನವಾಯಿತು. ತಾವಾಗಿಯೇ ಆ ಸವಾರರೊಡನೆ ಮಾತನಾಡಲು ಯಾರೂ ಇಷ್ಟಪಡಲಿಲ್ಲ. ಕಣ್ಣುಗಳೂ ಬಗೆ ಬಗೆಯಾಗಿ ಆ ಐವರನ್ನು ನೋಡಿದುವು. ರಾಮಗೌಡನಿ ಗೋಸ್ಕರವೆ ಅವರೆಲ್ಲ ಕಾದು ನಿಂತರು.

ನಿಮಿಷಗಳು ದೀರ್ಘವಾಗಿರಲಿಲ್ಲ.

" ಬಂದರು!" ಎಂದಿತೊಂದು ಸ್ವರ.

" ಹಾದಿ ಬಿಡಿ!"

ಗುಂಪು ಎರಡು ಭಾಗಗಳಾಗಿ ಬಿರಿಯಿತು.

ಮೊದಲು ಬಂದುದು ಗೌಡ; ಬಳಿಕ ಮಾಚಯ್ಯ; ಅನಂತರ, ಗೌಡ ನನ್ನು ಕರೆಯಲು ಹೋಗಿದ್ದ ತನಿಯಪ್ಪ.

ಕುದುರೆಯಿಂದ ಕೆಳಕ್ಕೆ ಧುಮುಕುತ್ತ, ಏದುಸಿರು ಬಿಡುತ್ತ, ರಾಮ ಗೌಡ ಹೇಳಿದ:

" ಮಹಾಪರಾಧವಾಯಿತು ಸ್ವಾಮಿ, ಕ್ಷಮಿಸ್ಬೇಕು. ಈವರೆಗೂ ಇಲ್ಲೇ ಇದ್ದೋನು ಏರ್ಪಾಟು ನೋಡಿಕೊಂಡು ಬರುವ ಎಂತ ಊರಿನೊಳಗೆ ಹೋದೆ."

ಆತ ಆ ಐವರಿಗೂ ದೂರದಿಂದಲೆ ಸ್ವಲ್ಪ ಬಾಗಿ ನಮಿಸಿದ. ಬಳಿಕ ಅವರೆಡೆಗೆ ನೇರವಾಗಿ ನಡೆದು, ಒಬ್ಬನೆದುರಿಗೆ ನಡುವಿನವರೆಗೂ ಬಾಗಿದ.

ತಲೆಯೆತ್ತಿ ನಿಂತು, ಜನರೆಡೆಗೆ ತಿರುಗಿ, ಬಲತೋಳನ್ನು ಬೀಸುತ್ತ ಆತನೆಂದ:

" ಹೇಳಿ! ಕಲ್ಯಾಣಸ್ವಾಮಿಯವರಿಗೆ ಜಯವಾಗಲಿ!"

ದಿಗ್ಭ್ರಮೆಗೊಂಡ ಜನರು, ರಾಮಗೌಡ ಬಳಿ ಸಾರಿ ನಿಂತಿದ್ದ ವ್ಯಕ್ತಿ ಯನ್ನು – ಕಲ್ಯಾಣಸ್ವಾಮಿಯನ್ನು – ನೋಡಿದರು.

ಅರೆಕ್ಷಣವೂ ಇರದಿದ್ದ ಮೌನ ಕೊನೆಗಂಡು, ಎಲ್ಲರೂ ಜಯಘೋಷ ಮಾಡಿದರು:

"ಕಲ್ಯಾಣಸ್ವಾಮಿಯವರಿಗೆ ಜಯವಾಗಲಿ!"

ಗೌಡ ಮತ್ತೂ ಅಂದ:

"ಕೊಡಗಿನ ಶ್ರೀ ವೀರರಾಜೇಂದ್ರ ಮಹಾ ಪ್ರಭುಗಳಿಗೆ ಜಯವಾಗಲಿ!"

ಅರಸನ ಹೆಸರನ್ನು ಸರಿಯಾಗಿ ಉಚ್ಚರಿಸುವುದು ಹಲವರಿಗೆ ತೊಡಕಿನದಾಗಿ ತೋರಿತು. ಹೀಗಾಗಿ 'ಜಯವಾಗಲಿ!' ಘೋಷದಲ್ಲಿ ಏಕನಾದವಿರಲಿಲ್ಲ.

ರಾಮಗೌಡ ಗಟ್ಟಿಯಾಗಿ ನುಡಿದ:

"ಎಲ್ಲಿ ಆರತಿ ?"

ಆತುರ ಸಂಕೋಚಗಳಿಂದ ಹಿಂದುಮುಂದಾಗುತ್ತ ಸುಮಂಗಲಿಯರಿಬ್ಬರು ಆರತಿ ಬೆಳಗಿದರು.

ಬಳಿಕ ಗೌಡ, ಜನರಿಗೆ ಆಣತಿ ಇತ್ತ:

"ಇನ್ನು ಎಲ್ರೂ ನಿಮ್ಮ ನಿಮ್ಮ ಮನೆಗೆ ಹೋಗಿ:"

ಗುಂಪು ಅತ್ತಿತ್ತ ಚಲಿಸಿತೇ ಹೊರತು, ಜನ ಚೆದರುವ ಲಕ್ಷಣ ತೋರಲಿಲ್ಲ.

"ಕುದುರೆಗಳಿಗೆ ಆಯಾಸವಾಗಿರ್ಬೇಕು," ಎಂದ ರಾಮಗೌಡ ಏನೋ ಯೋಚಿಸತೊಡಗಿ.

"ಯಾಕೆ? ಗೌಡರ ಮನೆ ಬಹಳ ದೂರವೆ?" ಎಂದ ನಂಜಯ್ಯ.

"ಇಲ್ಲ. ಓ ಇಲ್ಲೇ ಇದೆ, ಮನೆ."

"ನಡೆಯಿರಿ ಹಾಗಾದರೆ."

"ಸ್ವಾಮಿಯವರೊಬ್ಬರಾದರೂ ನನ್ನ ಕುದುರೆ ಮೇಲೆ ಕೂತಿರ್ಲಿ."

"ಒಂದೂ ಬೇಡಿ ಗೌಡರೆ. ನಾನು ನಡೀಬಾರದೂಂತ ಇದೆಯೇನು?" ಎಂದ ಕಲ್ಯಾಣಸ್ವಾಮಿ.

ರಾಮಗೌಡ ವಾದಿಸಲಿಲ್ಲ.

ಆತನ ಕಡೆಯವನೊಬ್ಬ ಕೇಳಿದ:

"ಪೂರ್ತಿ ಕತ್ತಲಾಯ್ತು. ದೀವಟಿಗೆ ತರಲೆ?"

ಆ ಪ್ರಶ್ನೆಗೆ ನೇರವಾಗಿ ಉತ್ತರಕೊಡದೆ ರಾಮಗೌಡ ಕಲ್ಯಾಣಸ್ವಾಮಿಯ ಮುಖ ನೋಡಿದ.

“ ದೀವಟಿಗೆ ಯಾತಕ್ಕೆ ಗೌಡರೆ ? ನಡೀರಿ. ಮನೆ ಸೇರೋಣ.”

ಕುದುರೆಗಳನ್ನೆಲ್ಲ ಕರೆದೊಯ್ದು ಮೇಯಿಸಲು ಒಬ್ಬನಿಗೆ ನಿರ್ದೇಶ ವೀಯುತ್ತ ರಾಮುಗೌಡ, ಕುಡಿಯ ಸೋದರರನ್ನೊಮ್ಮೆ ನೋಡಿ, ನಸುನಕ್ಕು, ನುಡಿದ :

“ ನಿಮ್ಮ ಕುದುರೆಗಳು ಸೊಗಸಾಗಿ ವಿಶ್ರಾಂತಿ ತಗೋತಿವೆ. ಬನ್ನಿ.”

ಗೌಡನೂ ಮಾಚಯ್ಯನೂ ಕುದುರೆ ಏರಿ ಬಂದಿದ್ದಾಗಲೆ, ಅವು ತಮ್ಮ ವಲ್ಲವೆಂದು ಗಮನಿಸಿದ್ದ ಕರ್ತು ಮತ್ತು ಚೆಟ್ಟಿ, ಗೌಡನ ಮಾತು ಕೇಳಿ ಮುಗುಳು ನಕ್ಕರು.

“ ಕಾಳಪ್ಪನೆಲ್ಲಿ ಮಾಚಯ್ಯ ?” ಎಂದು ಕೇಳಿದ ಕಲ್ಯಾಣಸ್ವಾಮಿ, ಅಮರಸುಳ್ಯಕ್ಕೆ ಹಿಂದೆ ಕಳುಹಿದ್ದ ಇನ್ನೊಬ್ಬ ದೂತನ ನೆನಪಾಗಿ.

ಉತ್ತರ ಬರುವುದಕ್ಕೆ ಮುಂಚೆಯೆ ಆತ ಇನ್ನೊಂದು ಪ್ರಶ್ನೆ ಕೇಳಿದ :

“ ನಮ್ಮ ತಂಡ ಬಂದು ಸೇರಿತೆ ಗೌಡರೆ ?”

ಅವರೆಲ್ಲ ಮುನ್ನಡೆಯ ತೊಡಗಿದಂತೆ ರಾಮುಗೌಡನೆಂದ :

“ ಓಹೋ ? ಇವತ್ತು ಬೆಳಗಿನ ಜಾವ ಬಂದರು. ಅವರನ್ನು ನೊಡ್ಕೊಳ್ಳೋ ಜವಾಬ್ದಾರಿ ಕಾಳಪ್ಪನವರಿಗೇ ವಹಿಸಿದೇನೆ. ಊಟಮಾಡಿ ಮಲಗಿದವರು ಇದೇ ಈಗ ಎದ್ದಿರಬಹುದೂಂತ ಕಾಣ್ತದೆ.”

“ ಹಾಗಾದರೆ ನಮಗೂ ಊಟಮಾಡಿಸಿ ಮಲಗಿಸಿಬಿಡ್ತೀರೋ ಈಗ ?” ಎಂದು ನಂಜಯ್ಯ ನಗುತ್ತ ಕೇಳಿದ.

“ ಅಷ್ಟಲ್ದೆ ಇನ್ನೇನು ?” ಎಂದ ರಾಮುಗೌಡ.

* * * *

ಅದು ನಿಜವಾಗಿರಲಿಲ್ಲ. ಊಟವಾದೊಡನೆ ಅವರ ಪಾಲಿಗೆ ನಿದ್ದೆ ಇರಲಿಲ್ಲ.

ರಾಮುಗೌಡನ ಮನೆಯ ಮುಂದೆ ವಿಶಾಲವಾಗಿ ಚಪ್ಪರ ಹಾಕಿದ್ದರು.

“ ಯಾಕೆ ಈ ಚಪ್ಪರ ?” ಎಂದು ಕೇಳಿದ ಕಲ್ಯಾಣಸ್ವಾಮಿ.

“ ಸ್ವಾಮಿಯವರು ಕೋಪಿಸಬಾರದು. [ಸ್ವರ ತಗ್ಗಿಸಿ] ನನ್ನ ಮಗ ನಿಗೆ ಮದುವೆ ಅಂತ ಪುಕಾರು ಹುಟ್ಟಿಸಿದೇನೆ. ಇಷ್ಟೊಂದು ಜನ ನೆಂಟರು. ನೀವೆಲ್ಲಾ ಬರ್ತಿರುವಾಗ ಇಂಥ ಚಪ್ಪರ ಇಲ್ಲದೆ ಹ್ಯಾಗೆ? ಮೆರವಣಿಗೆ

ಹೊರಡುವ ಜಾಗಕ್ಕೆ ಇಷ್ಟಾದರೂ ಶೋಭೆ ಬೇಡವೇನು?"

ರಾಮಗೌಡನ ಆತ್ಮೀಯತೆ, ಮುಂಜಾಗರೂಕತೆ, ಹೃದಯ ವೈಶಾಲ್ಯ, ಹಿರಿದಾದ ರೀತಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವ ಸಾಮರ್ಥ್ಯ, ಇವೆಲ್ಲವನ್ನೂ ಕುರಿತು ಯೋಚಿಸುತ್ತಾ ಕಲ್ಯಾಣಸ್ವಾಮಿ ತಲೆದೂಗಿದ.

ಮೂರೇ ದಿನಗಳ ಅಂತರದಲ್ಲಿ ಹೊರಟಿದ್ದರೂ ಕಾದು ಎಷ್ಟೋ ವರ್ಷಗಳಾದುವೇನೋ ಎನ್ನುವಂತೆ ಕರಿಯಪ್ಪನೂ ಆತನ ಜತೆ ಬಂದಿದ್ದವರೂ ತಮ್ಮ ಊರವರನ್ನು ಕಂಡರು.

ಚೆಟ್ಟಿಯೂ ಕರ್ತುವೂ ತಮ್ಮ ಕುದುರೆಗಳನ್ನು ಮುದ್ದಿಸಿ ಬಂದರು.

ಬಿಸಿನೀರು ಸಿದ್ಧವಾಗಿತ್ತು ಸ್ನಾನಕ್ಕೆ. ಇರುವೆಗಳಂತೆ ಶಿಸ್ತಿನಿಂದ ಕೆಲಸಮಾಡುತಿದ್ದರು ಆಳುಗಳು.

ಕಲ್ಯಾಣಸ್ವಾಮಿಯೊಡನೆ ಕಾಳಪ್ಪ ಮಾತನಾಡುತಿದ್ದುದನ್ನು ಗಮನಿಸಿ ರಾಮಗೌಡ ಅತ್ತ ಹೋಗಿ ಹೇಳಿದ:

"ಕಾಳಪ್ಪನವರೀಗ ಸುಳ್ಯದವರೇ ಆಗಿದಾರೆ. ಅವರಿಗೆ ಹೆಣ್ಣು ಕೊಡೋದಕ್ಕೂ ತಯಾರಾಗಿದ್ದಾರೆ ನಮ್ಮ ಜನ!"

ಆ ಮಾತು ಗದ್ದಲ ಸಂಭ್ರಮ – ಸಾಧಾರಣವಾಗಿ, ಅದು ಮದುವೆಯ ಮನೆಯಲ್ಲವೆಂದು ಹೇಳುವುದು ಹೇಗೆ ಸಾಧ್ಯವಿತ್ತು ?

ಆದರೂ ಎಲ್ಲರನ್ನೂ ಪೋಸಗೊಳಿಸಲು ಸಮರ್ಥವಾಗಿರಲಿಲ್ಲ ಆ ಏರ್ಪಾಟು.

ಬಂದವರಿಗೆ ಸ್ನಾನ ಊಟಗಳಾದೊಡನೆಯೆ ರಾಮಗೌಡ ಪಿಸುಧ್ವನಿಯಲ್ಲಿ ನುಡಿದ:

"ತುರ್ತಾಗಿ ಈಗಿಂದೀಗ ತೀರ್ಮಾನಿಸಬೇಕಾದ ಒಂದು ಸಮಸ್ಯೆಯುಂಟು."

"ಆಗಲಿ. ಏನು ವಿಷಯ ?" ಎಂದು ಕೇಳಿದ ಕಲ್ಯಾಣಸ್ವಾಮಿ.

"ಬನ್ನಿ. ಒಳಗಿನ ಕೊಠಡಿಗೆ ಹೋಗುವಾ."

ಅಲ್ಲಿ ಪ್ರಮುಖರ ಆಪ್ತಾಲೋಚನೆ ನಡೆಯಿತು. ಅದಕ್ಕೆ ಪೂರ್ವಭಾವಿಯಾಗಿ ಪರಿಸ್ಥಿತಿಯ ಪರಿಚಯವನ್ನು ರಾಮಗೌಡ ಮಾಡಿಕೊಟ್ಟ.

ಬಂಡಾಯವೇಳಲು ಗೊತ್ತು ಮಾಡಿದ್ದ ಯುಗಾದಿಗೆ ಇನ್ನೂ ಎಂಟು ದಿನಗಳಿದ್ದುವು ನಿಜ. ಆದರೆ ಯೋಜನೆಯ ರಹಸ್ಯ ಸ್ವಲ್ಪ ಮಟ್ಟಿಗೆ

ಆಗಲೆ ಬಯಲಾಗಿಬಿಟ್ಟಿತ್ತು. ಅದರ ಸುಳಿವು ಸಿಕ್ಕಿದ ರಾಮಪ್ಪಯ್ಯ ಓಲೆಕಾರರನ್ನು ಮಂಗಳೂರಿಗೂ ಮಡಿಕೇರಿಗೂ ಅಟ್ಟಿದ್ದ. ಆದರೆ ಅಣ್ಣಿಗೌಡನ ಸಾಹಸದಿಂದ ಇಬ್ಬರು ಓಲೆಕಾರರೂ ರಾಮುಗೌಡನ ಜನರ ಕೈಗೆ ಬಿದ್ದರು. ಅದನ್ನು ತಿಳಿದು ಕಿಡಿಕಿಡಿಯಾದ ರಾಮಪ್ಪಯ್ಯ, ಕುದುರೆ ಏರಿ ಸುಳ್ಯಕ್ಕೆ ಬಂದು ಹೂಂಕರಿಸಿ ಗರ್ಜಿಸಿದ. ತನಗಿದಿರು, ಇಲ್ಲವೆ ಕುಂಪಣಿ ಸರಕಾರಕ್ಕಿದಿರು, ಯಾವನಾದರೂ ಉಸಿರೆತ್ತಿದರೆ ಅಲ್ಲೇ ಕತ್ತರಿಸಿ ನರಿನಾಯಿಗಳಿಗೆ ಎಸೆಯುವುದಾಗಿ ಬೆದರಿಸಿದ. ರಾಮುಗೌಡನ ಮನೆಗೆ ಬರಲಿಲ್ಲವಾದರೂ ದೂರದಲ್ಲೆ ನಿಂತು 'ಮದುವೆಗೋಸ್ಕರ' ಸಿದ್ಧವಾಗುತಿದ್ದ ಚಪ್ಪರವನ್ನು ನೋಡಿದ. ಯೋಜನೆ ಮೂರ್ತಸ್ವರೂಪಕ್ಕೆ ಬರುವುದಕ್ಕೆ ಮುಂಚೆಯೇ ಪರಿಸ್ಥಿತಿ ವಿಕೋಪಕ್ಕೆ ಹೋಗಬಾರದೆಂದು, ರಾಮುಗೌಡ ಆತನನ್ನು ಕೆಣಕಲಿಲ್ಲ. ಅಣ್ಣಿಗೌಡನೂ ಇದಿರು ಬರಲಿಲ್ಲ. ರಾಮಪ್ಪಯ್ಯ ಯಾವುದೊಂದೂ ಸ್ಪಷ್ಟವಾಗದೆ, ಗೊಂದಲಕ್ಕೀಡಾಗಿಯೆ, ಅಟ್ಲೂರಿಗೆ ಹಿಂತಿರುಗಿದ.

ಆದರೆ ಆತ ಸುಮ್ಮನಿರದೆ, ಮಂಗಳೂರಿನ ಕಲೆಕ್ಟರ್ ಧೊರೆಗೆ ಮತ್ತೊಮ್ಮೆ ಎಚ್ಚರಿಕೆಯ ಸುದ್ದಿ ಕಳುಹಿದನೆಂದು ಭಾವಿಸಲು ಆಧಾರಗಳಿದ್ದುವು.

ಅದೆಲ್ಲವನ್ನೂ ಕೇಳಿ, ಅಣ್ಣಿಗೌಡನ ಕೆಲ ಮಾತುಗಳಿಗೂ ಕಿವಿಗೊಟ್ಟು, ಕಲ್ಯಾಣಸ್ವಾಮಿ ನುಡಿದ:

"ಇದು ದೊಡ್ಡ ವಿಷಯವಲ್ಲ, ರಾಮುಗೌಡರೆ. ಯುಗಾದಿಗಿಂತ ಮುಂಚೆಯೇ ನಾವು ಕಣಕ್ಕಿಳಿಯಬೇಕು ಅನ್ನೋದು ದೈವೇಚ್ಛೆಯಾದರೆ ಹಾಗೇ ಆಗಲಿ."

"ಶುಭಸ್ಯ ಶೀಘ್ರಂ—ಅಂತಲೋ ಏನೋ ಹೇಳ್ತಾರಲ್ಲ ಹಾಗಾಯ್ತು."

"ನಮ್ಮ ತಯಾರಿ ಪೂರ್ಣವಾಗಿದೆಯೇನು ?"

"ಆಗಿದೆ."

"ಒಳ್ಳೇದು," ಎನ್ನುತ್ತ, ನಂಜಯ್ಯನೆಡೆಗೂ ಇತರ ಆಪ್ತರ ಕಡೆಗೂ ನೋಡಿ ಕಲ್ಯಾಣಸ್ವಾಮಿ ಕೇಳಿದ:

"ಏನು ಹೇಳ್ತೀರಿ?"

"ತಡಮಾಡದೆ ದಂಡಯಾತ್ರೆ ಹೊರಡ್ಬೇಕೂಂತ ಗೌಡರ ಅಭಿಪ್ರಾಯವೊ ?" ಎಂದು ಪ್ರಶ್ನಿಸಿದ ನಂಜಯ್ಯ.

ರಾಮುಗೌಡನೆಂದ:

" ಹೌದು."

" ಆಗಬಹುದು. ಆ ರಾಮಪ್ಪಯ್ಯನನ್ನ—"

" ಆ ವಿಷಯ ನನಗೆ ಬಿಟ್ಟಿಡಿ. ನಾಳೆ ಸಾಯಂಕಾಲದೊಳಗೆ ಅವನ ಸಮಾಪ್ತಿಯಾಗ್ತದೆ," ಎಂದ ಅಣ್ಣಿಗೌಡ, ಉದ್ವೇಗದಿಂದ.

ಆತನನ್ನೆ ದಿಟ್ಟಿಸಿ, ದೃಢವಾದ ಮೃದು ಧ್ವನಿಯಲ್ಲಿ ಕಲ್ಯಾಣಸ್ವಾಮಿಯೆಂದ:

" ನಿಮ್ಮ ವಿಷಯ ರಾಮುಗೌಡರು ಆಗಲೆ ಹೇಳಿದ್ದಾರೆ, ಅಣ್ಣಿಗೌಡರೆ. ಇದು ವೈಯಕ್ತಿಕ ಪ್ರಶ್ನೆಯಲ್ಲ. ಆಪತ್ತು ಇಡೀ ದೇಶಕ್ಕೇ ಬಂದಿದೆ ನೋಡಿ. ಆಗಲಿ. ರಾಮಪ್ಪಯ್ಯನ ವಿಚಾರ ನಿಮಗೆ ಬಿಡ್ತೇವೆ. ಆದರೆ ನೀವೊಬ್ಬರೇ ಈ ಕೆಲಸ ಮಾಡಬಾರದು. ನಮ್ಮ ಆಪ್ತರಾದ ಸರದಾರರನ್ನೂ ಕರಕೊಂಡು ಹೋಗಿ. ಒಂದು ನರಭಕ್ಷಕ ಹುಲೀನ ಬೇಟೆಯಾಡ್ತಿದೇವೆ ಅಂತ ಭಾವಿಸ್ಕೊಂಡು ಆತನನ್ನು ಮುಗಿಸಿ. ಸರಿಯೇ ?"

ಆ ಮಾತು ಸರಿ, ಎಂದರು ಎಲ್ಲರೂ.

ಕಲ್ಯಾಣಸ್ವಾಮಿ ಕೇಳಿದ :

" ಹಾಗಾದರೆ ನಾಳೆ ಸಂಜೆಯೇ ಅಮರ ಸುಳ್ಯದಲ್ಲಿ ಸ್ವಾತಂತ್ರ್ಯ ಘೋಷಣೆಯೊ ?"

ಎಲ್ಲರ ಪರವಾಗಿ ಎನ್ನುವಂತೆ ರಾಮುಗೌಡನೆಂದ:

" ಹೌದು."

# ೮

" ಏನು ಕೊಬ್ಬು ! ಅಹಂಕಾರ ! ಹುಂ !"

ಬಲಬದಿಯ ಲೋಡಿಗೊರಗಿ ಕುಳಿತಿದ್ದ ರಾಮಪ್ಪಯ್ಯ, ಎಡಬದಿಗೆ ತಿರುಗಿ ಔಡುಗಚ್ಚಿದ. ಮೀಸೆಯನ್ನು ಕುಣಿಸಿದ. ಮುಷ್ಟಿಕಟ್ಟಿ ದಿಂಬನ್ನು ಗುದ್ದಿದ.

ಕೈಮುಗಿದು ಬಾಗಿ ನಿಂತೇ ಇದ್ದ ಕಿಂಕರ ಹೇಳಿದ :

" ರಾಮಗೌಡನ ಮನೆಯಲ್ಲೇ ಅವರೆಲ್ಲರ ಠಾಣ್ಯ. ಎಲ್ಲರೂ ಕೊಡಗಿನ ರಾಜರ ಕಡೆಯವರೇ. ಕಾಶಿಯಿಂದ ರಾಜರು ವಾಪಸು ಬರ್ತಿದ್ದಾರಂತೆ. ಸುಳ್ಯಕ್ಕೇ ಬರ್‍ತಾರಂತೆ."

" ಸುಳ್ಳು ! ಹಸಿ ಸುಳ್ಳು ! ಕಾಶಿಗೆ ಹೋದವನು ಬರೋದಂದರೇನು ? ನನಗೆ ಗೊತ್ತಿಲ್ಲವೋ? ಇಷ್ಟರಲ್ಲೇ ಇಂಗ್ಲಿಷರು ಅವನ ಕತೆ ಮುಗಿಸಿರ್‍ತಾರೆ!"

" ಅಣ್ಣಿಗೌಡನಂತೂ ಎಂಥ ಮಾತು ಹೇಳ್ದ !"

" ಏನೆಂದ ಆ ಕುನ್ನಿ ?"

" ಹೇಳೋದಕ್ಕೆ ಭಯವಾಗ್ತದೆ."

" ಬೊಗಳು ! ಇದ್ದದ್ದು ಇದ್ದ ಹಾಗೇ ಬೊಗಳು !"

" ಆ – ಆ – ಆ ರಾಮಪ್ಪಯ್ಯನಿಗೆ ಧೈರ್ಯ ಇದ್ದರೆ ಸುಳ್ಯಕ್ಕೊಮ್ಮೆ ಬಂದು ಹೋಗೂಂತ ಹೇಳು ಎಂದ."

" ಹಾಗಂದ್ನೋ ? ಎಲಾ !"

" ಏಕವಚನದಲ್ಲಿ ಇನ್ನೂ ಏನೇನೋ ಕೆಟ್ಟ ಮಾತು ಹೇಳ್ದ."

" ಸೀಳ್ತೀನಿ ಅವನ ನಾಲಗೆ! ನಾಯಿ ಮಗನನ್ನ ಆವತ್ತೆ ಯಮಪುರಿಗೆ ಅಟ್ಬೇಕಾಗಿತ್ತು."

" ಮೊನ್ನೆ ಬಂದಿದ್ದಿರಲ್ಲ, ಹಾಗೆ ಇವತ್ತು ಕೂಡಾ ನೀವು ಸುಳ್ಯಕ್ಕೆ ಬರದೇ ಇದ್ದರೆ, ಹೆದರ್‍ಕೊಂಡು ಓಡ್ಹೋದಿರೀಂತ ಭಾವಿಸ್ತೇವೆ – ಅಂದ."

" ಆರೇ, ಅವನ !"

" ಅಲ್ಲಿಗೆ ಬರೋ ಧೈರ್ಯ ನಿಮಗೆ ಇಲ್ದೇ ಇದ್ರೆ, ಅವನೇ ಇಲ್ಲಿಗೆ ಬರ್‍ತಾನಂತೆ."

"ಇಲ್ಲಿಗೆ? ಇದು ಮಾದಿಗರ ಹಟ್ಟೀಂತ ತಿಳಕೊಂಡ್ನೇನು? ಇದು 'ಹತ್ತೂರ ಧೊರೆ'ಯ ಅರಮನೆ."

"ಅಣ್ಣೀಗೌಡ ಅದನ್ನೂ ಹೇಳ್ದ. ಆ ಹತ್ತೂರ ಧೊರೆ ಮುಖದ ಮೇಲೆ ಮೀಸೆ ಇದ್ದದ್ದೇ ಆದ್ರೆ ಬರಲಿ ಇವತ್ತು ಸುಳ್ಯಕ್ಕೆ' ಅಂತ."

ರಾಮಪ್ಪಯ್ಯ, ಕುಳಿತಿದ್ದ ಮಂಚದ ಮೇಲಿಂದ ಕೆಳಕ್ಕೆ ಧುಮುಕಿ ಗರ್ಜಿಸಿದ :

"ಆ ಕ್ರಿಮಿಯನ್ನು ಇವತ್ತೇ ಮುಗಿಸದಿದ್ರೆ ನಾನು ರಾಮಪ್ಪಯ್ಯ ನಲ್ಲ!"

ಆಳು ಹಿಂದು ಹಿಂದಕ್ಕೆ ಸರಿದ.

"ತೊಲಗಾಚೆಗೆ! ಅಷ್ಟು ಹೇಳಿದ ನೀಚನನ್ನು ಹಾಗೇ ಬಿಟ್ಟು ಬಂದೆ ಯಲ್ಲ! ಹೇಡಿ!"

ಬದುಕಿದೆ ಎನ್ನುತ್ತ ಚಾವಡಿಯಿಂದ ಹೊರಕ್ಕಿಳಿದು, ಏನಾಯಿತೆಂದು ತಿಳಿಯುವ ಕುತೂಹಲದಿಂದ ಕಾದಿದ್ದ ಇತರ ಆಳುಗಳೆಡೆಗೆ ಆ ಚಾಕರ ನಡೆದ.

ಬಂಡಾಯದ ಸುದ್ದಿ ಅವರಿಗೆಲ್ಲ ಅಸ್ಪಷ್ಟವಾಗಿ ತಿಳಿದಿತ್ತು. ಬಗೆ ಬಗೆಯ ಪ್ರತಿಕ್ರಿಯೆಗಳು ಅವರ ಮನಸ್ಸಿನಲ್ಲಿ ಮೂಡುತಿದ್ದುವು. ಆದರೆ ಬಾಯಿತೆರೆದು ಮಾತನಾಡುವ ಸಾಹಸವನ್ನು ಮಾತ್ರ ಯಾರೂ ತೋರಲಿಲ್ಲ.

ಅವಮಾನಿತನಾದ ರಾಮಪ್ಪಯ್ಯ, ಸುಬ್ಬಯ್ಯ ಮಡಚಿ ತಂದ ವೀಳೆಯ ದೆಲೆಯನ್ನು ಆಚೆಗೆ ತಳ್ಳಿದ.

ಭಯವಿಹ್ವಲಳಾಗಿದ್ದ ಭಾಗೀರಥಿ – ಆತನ ಹೆಂಡತಿ – ಅಂಜುತ್ತ ಅಂಜುತ್ತ ಗಂಡನ ಬಳಿಗೆ ಬರಲು ಯತ್ನಿಸಿದಳು.

"ನಡಿ ಒಳಕ್ಕೆ! ಹೆಂಗಸರ ಜಾಗ ಅಡುಗೆ ಮನೇಲಿ!" ಎಂದಾತ ಆಕೆಯನ್ನು ಗದರಿಸಿದ.

"ಕುದುರೆ ಸಿದ್ಧವಾಗಲಿ!" ಎಂದು ಆಜ್ಞಾಪಿಸಿದ, ಹೊರಗಿದ್ದ ಆಳು ಗಳಿಗೆ.

ನಿಲುವಂಗಿ ತೊಟ್ಟು, ಹಾವುಗೆ ಮೆಟ್ಟಿ, ಖಡ್ಗವನ್ನು ಸೊಂಟಕ್ಕೆ ಬಿಗಿದು, ಚಿತ್ತವಿಕಲನಂತೆ ಮನೆಯಿಂದ ಹೊರಗೆ ಧಾವಿಸಿ, ಸುಳ್ಯಕ್ಕೆ ಅಭಿ ಮುಖವಾಗಿ ಆತ ಹೊರಟ....

ಆ ಹಾದಿಯಾಗಿಯೇ ಪಾದಚಾರಿಗಳಾಗಿ ಸುಳ್ಯದಿಂದ ಸಾಗಿಬರುತಿದ್ದರು, ಅಣ್ಣಿಗೌಡ ಮತ್ತು ಮೂವರು. ಕುದುರೆ ಎದುರು ಬರುತಿದ್ದುದು ಅವರಿಗೆ ಕಾಣಿಸಿತು.

ಅಣ್ಣಿಗೌಡ ಅವಸರವಾಗಿ ನುಡಿದ:

"ಅರಬ್ಬಿ ಕುದುರೆ! ಆತನೆ ರಾಮಪ್ಪಯ್ಯ!"

"ತಡೆದು ನಿಲ್ಲಿಸೋಣ," ಎಂದ ಕರಿಯಪ್ಪ.

"ಹೂಂ."

"ಹೇಳಿ, ಕೊಡಗಿನ ಕತ್ತಿಗೆ ಆಹುತಿಯೋ, ನಿಮ್ಮದಕ್ಕೋ?"

"ದಯವಿಟ್ಟು ಈ ಕೆಲಸ ನನಗೆ ಬಿಟ್ಬಿಡಿ!"

ಅಗಲ ಕಿರಿದಾಗಿದ್ದ ಆ ಹಾದಿಗೆ ನಾಲ್ವರೂ ಅಡ್ಡವಾಗಿ ನಿಂತರು.

ಕರಿಯಪ್ಪ ಕೇಳಿದ:

"ಆತ ಕುದುರೆ ನಿಲ್ಲಿಸದೇ ಇದ್ದರೆ?"

"ಬಂದೂಕು ಸಿದ್ಧವಾಗಿದೆ!" ಎಂದ ಅಣ್ಣಿಗೌಡ.

ಹಾಗೆ ನಿಂತವರು ಯಾರೆಂಬುದು ಮೊದಲು ರಾಮಪ್ಪಯ್ಯನಿಗೆ ಗೊತ್ತಾಗಲಿಲ್ಲ. ಕುದುರೆಯನ್ನು ದೌಡಾಯಿಸಿಕೊಂಡೆ ಮುಂದಕ್ಕೆ ಹೋಗಬೇಕೆಂದು ಆತ ನಿರ್ಧರಿಸಿದ. ಅಪರಿಚಿತರೇ ರಾಮಪ್ಪಯ್ಯನ ಕಣ್ಣಿಗೆ ಮೊದಲು ಬಿದ್ದುದು. ಬಳಿಕ ಆತ ಅಣ್ಣಿಗೌಡನನ್ನು ಗುರುತಿಸಿದ.

ಅಣ್ಣಿಗೌಡ!

ರಾಮಪ್ಪಯ್ಯನ ಪಿತ್ತಕೆರಳಿ ವಿಚಾರ ಮಂಕಾಯಿತು.

ಕಡಿವಾಣವನ್ನೆಳೆದು, ಜನರೆಡೆಗೆ ಬರುತ್ತ, ಆತ ಕೆಳಕ್ಕೆ ಧುಮುಕಿದ. ಅಣ್ಣಿಗೌಡನ ಮೇಲೆರಗುತ್ತ ಒರೆ ಹಿರಿದ.

ಎವೆಮುಚ್ಚಿ ತೆರೆಯುವುದರೊಳಗೆ ಅಣ್ಣಿಗೌಡನ ಖಡ್ಗ ಗಾಳಿಯನ್ನು ಸೀಳಿತು; ರಾಮಪ್ಪಯ್ಯನ ಬಲಗೈಯನ್ನು ಕತ್ತರಿಸಿತು.

ಗಾಯಗೊಂಡ ಸಿಂಹದ ರಣ ಗರ್ಜನೆಯಾಗಿತ್ತು ರಾಮಪ್ಪಯ್ಯನ ಆಕ್ರೋಶ.

"ಥೂ! ತಡಿ! ಕುನ್ನಿಯೆ!"

ರಕ್ತ ಸುರಿಯುತಿದ್ದ ಮೊಂಡುಗೈಯನ್ನೆ ಕುಣಿಸುತ್ತ ಅಣ್ಣಿಗೌಡನತ್ತ ನುಗ್ಗಿದ ರಾಮಪ್ಪಯ್ಯ.

ಬಿಗಿದ ತುಟಿಗಳ ಅಣ್ಣಿಗೌಡನೋ ಯಮಭಯಂಕರನಾಗಿದ್ದ. ಕೊರಳಿಗೆಂದು ಬೀಸಿದ ಆತನ ಖಡ್ಗ ಎದೆಗೆ ಬಡಿಯಿತು.

"ಆ್ಹ !" ಎನ್ನುತ್ತ ರಾಮಪ್ಪಯ್ಯ ಕೆಳಗುರುಳಿದ.

"ಹೇಡಿ! ಧೈರ್ಯ ಇದ್ದಿದ್ರೆ.....ಯುದ್ಧ ಮಾಡಿ ಸೋಲಿಸ್ಬೇಕಾಗಿತ್ತು...." ಎಂದು ಬಂತು ಸ್ವರ ಆತನ ಗಂಟಲಿನಿಂದ, ಬಲು ಪ್ರಯಾಸದಿಂದ.

ಅಣ್ಣಿಗೌಡನ ಖಡ್ಗ, ಅಂಗಾತ ಬಿದ್ದವನ ಎದೆಗುಂಡಿಗೆಯನ್ನೆ ಇರಿಯಿತು.

ಒಂದು ಮಾತು ಗೌಡ ಆಡಿದ.

"ಮನುಷ್ಯನ ಜತೇಲಾದರೆ ಯುದ್ಧ. ನೀನು ಕಾಡುಪ್ರಾಣಿ. ಕ್ರೂರ ಮೃಗವನ್ನು ಕೊಲ್ಲೋದೇ ಹೀಗೆ...."

ಕರಿಯಪ್ಪನೆಂದ:

"ಕುದುರೆ, ಹಿಡಕೊಳ್ಳಿ ಕುದುರೇನ!"

ಬೆದರಿದ ಕುದುರೆ ಹಿಂತಿರುಗಿ ಅಟ್ಲೂರಿನೆಡೆಗೇ ಓಡಿತು.

ಅಣ್ಣಿಗೌಡ, ಬಿದ್ದವನ ದೇಹದಿಂದ ಖಡ್ಗವನ್ನು ಹೊರಕ್ಕೆಳೆಯುತ್ತಿದ್ದಂತೆಯೆ, ರಾಮಪ್ಪಯ್ಯನ ಕತೆ ಮುಗಿದು ಹೋಯಿತು.

ಕರಿಯಪ್ಪ ಕೇಳಿದ:

"ಎಲ್ಲಿಗೆ ಹೋಗೋಣ ಗೌಡರೆ? ವಾಪಸು ಸುಳ್ಯಕ್ಕೋ? ಅಲ್ಲ ಅಟ್ಲೂರಿಗೋ?"

ಸಾಧುಸಜ್ಜನರಿಗೆ ಪ್ರಾಣಕಂಟಕನಾಗಿ ಬದುಕಿದ್ದ ವ್ಯಕ್ತಿಯ ಅವಸಾನವಾಗಿತ್ತು. ಸತ್ತು ಬಿದ್ದ ಆತನನ್ನು ಅಣ್ಣಿಗೌಡ ನೋಡುತ್ತ 'ಥೂ' ಎಂದು ಉಗುಳಿದ.

"ನಡೀರಿ, ಅಟ್ಲೂರಿನವರೆಗೆ ಹೋಗಿಯೆ ವಾಪಸು ಬರೋಣ. ಹ್ಯಾಗೂ ಸಂಜ್ಞೆ ಕೊಡ್ತೀವೀಂತ ತಿಳಿಸಿದೇವಲ್ಲ?"

....ಓಡಿಬಂದ ಕುದುರೆಯಾಗಲೆ ಭಾಗೀರಥಿಯನ್ನು ಗಾಬರಿಗೆ ಗುರಿಮಾಡಿತ್ತು. ಆಕೆ ಅಂಗಳದಲ್ಲಿ ನಿಂತು ಆಳುಗಳನ್ನೆಲ್ಲ ಕೂಗಿ ಕರೆಯುತ್ತ ಗೋಳಾಡಿದಳು:

"ಹೋಗ್ರೋ! ಹೋಗಿ! ನಿಮ್ಮ ಧಣಿಗೇನಾಯ್ತು ನೋಡಿ! ಹೋಗಿ!"

ಸುಬ್ಬಯ್ಯನೆ? ಗುರುವನೆ? ಫಕೀರನೆ? ತುರಕನೆ? ವಿಸುಕಬೇಕೆ ಒಬ್ಬರಾದರೂ?

ಏನು ನಡೆದಿರಬಹುದೆಂದು ಅವರು ಆಗಲೇ ಊಹಿಸಿದ್ದರು.

ಭಾಗೀರಥಿಯ ರೋದನ ಹೆಚ್ಚಾಯಿತೆಂದು ಆ ಜನ ಅಲ್ಲಿಂದ ಕಾಲ್ದೆಗೆದರು. ಆದರೆ ಸುಳ್ಯದ ಕಡೆಗೆ ಮಾತ್ರ ಹೊರಡಲಿಲ್ಲ.

ಅಣ್ಣಿಗೌಡನ ಮುಂದಾಳುತನದಲ್ಲಿ ಆ ಜನ ಬಂದಾಗ, ಯಾವ ಸಂದೇಹಕ್ಕೂ ಅವಕಾಶ ಉಳಿಯಲಿಲ್ಲ. ಅಪಾಯವನ್ನಿದಿರಿಸಲು ಕರಿಯಪ್ಪ ಸಿದ್ಧವಾಗಿದ್ದ. ಆದರೆ ಅಲ್ಲಿ ದೊರೆತುದು ಉದ್ದಂಡ ನಮಸ್ಕಾರ; ಕೇಳಿಸಿದುದು ಶರಣು ಧ್ವನಿ.

ಏನಾಯಿತೆಂಬುದು ಸ್ಪಷ್ಟವಾಗದೆ ಇದ್ದರೂ ಗಂಡನಿಗೆ ಅಪಾಯ ಸಂಭವಿಸಿರಲೇಬೇಕೆಂಬುದು ಭಾಗೀರಥಿಗೆ ಮನದಟ್ಟಾಯಿತು.

"ಅಯ್ಯೋ! ಯಾರೂ ಇಲ್ಲವೇ? ಹೀಗಾಗ್ತದೇಂತ ನನಗೆ ಗೊತ್ತಿತ್ತು! ಅಯ್ಯೋ!" ಎಂದಾಕೆ ಹಲುಬಿದಳು.

ಅಣ್ಣಿಗೌಡ ಮೂವರು ಹೊಲೆಯರನ್ನು ಕರೆದು ಹೇಳಿದ:

"ಈ ಅಮ್ಮನನ್ನು ಕರಕೊಂಡು ಸುಳ್ಯದ ಕಡೆಗೆ ಹೋಗಿ. ಇವರ ಗಂಡ ಹಾದೀಲಿ ಬಿದ್ದವನೆ."

ಆತ ಮತ್ತೂ ಒಂದು ಮಾತು ಅಂದ:

"ಅದಾದ್ಮೇಲೆ ನಿಮಗೆ ಬಿಡುಗಡೆ! ಅಟ್ಲೂರಿನ ಮೂಲದ ಹೊಲೆಯರೆಲ್ಲಾ ಇನ್ನು ಸ್ವತಂತ್ರರು! ಎಲ್ಲರಿಗೂ ಹೇಳಿ ಕಳಿಸಿ! ಅವರವರ ಆಸ್ತಿ ಇನ್ನು ಅವರವರಿಗೇ. ರಾಮಪ್ಪಯ್ಯ ಬರೆಸಿಕೊಂಡಿದ್ದ ಕರಾರುಪತ್ರಗಳಿಗೆಲ್ಲಾ ದಹನಕ್ರಿಯೆ ನಡೀತದೆ!"

ಭಯದಿಂದಲೂ ಕಾತರದಿಂದಲೂ ಮನೆ ಬಿಟ್ಟು ಹೋದ ಭಾಗೀರಥಿಯನ್ನು, ಅನುಕಂಪದಿಂದಲ್ಲ—ಅಣ್ಣಿಗೌಡ ಆಜ್ಞಾಪಿಸಿದನೆಂದು—ಮೂವರು ಹೊಲೆಯರು ಹಿಂಬಾಲಿಸಿದರು.

ರಾಮಪ್ಪಯ್ಯ ಹತನಾದ ಸುದ್ದಿ ಸ್ವಲ್ಪ ಹೊತ್ತಿನಲ್ಲೆ ದೂರ ದೂರದ ಮನೆಗಳಿಗೆ, ಹಟ್ಟಿಗಳಿಗೆ ಹಬ್ಬಿತು. ಹೊಟ್ಟು ಹಾರಿಸುತಿದ್ದವರು, ಭತ್ತ ಕುಟ್ಟುತಿದ್ದವರು, ದನಕರುಗಳನ್ನು ಮೇಯಿಸುತಿದ್ದವರು, ಸುಳ್ಯದಿಂದ ಬಂದಿದ್ದ ಯುದ್ಧ ಸಿದ್ಧತೆಯ ಕಿಂವದಂತಿಗಳನ್ನು ಕುರಿತು ಮಾತನಾಡು

ತಿದ್ದವರು, ಉಟ್ಟ ಬಟ್ಟೆಯಲ್ಲೇ ಅಟ್ಲೂರಿನ 'ಅರಮನೆ'ಗೆ ಧಾವಿಸಿದರು. ಒಬ್ಬನಾದರೂ ಕಂಬನಿ ಸುರಿಸಲಿಲ್ಲ ಆ ಸತ್ತವನಿಗೋಸ್ಕರ. ಸಮಾಧಾನದ ನಿಟ್ಟುಸಿರು ಬಿಡುವವರೇ ಎಲ್ಲರೂ. ರಾಮಪ್ಪಯ್ಯ ಬದುಕಿದ್ದಾಗ 'ಆತನ ಅನುಚರರಾಗಿ ದುಷ್ಕೃತ್ಯಗಳಲ್ಲಿ ಭಾಗಿಗಳಾಗಿದ್ದ ಒಬ್ಬಿಬ್ಬರು ಪಾತಕಿಗಳು ಮಾತ್ರ ನಾಪತ್ತೆಯಾದರು. ಬೇರೆ ಕೆಲವರು. ಹೊಗಳು ಭಟರು, ಸತ್ತವನನ್ನು ದೂಷಿಸುತ್ತ, ತಮಗೆ ತಟ್ಟಿದ್ದ ಕಳಂಕವನ್ನು ಮುಚ್ಚಿಕೊಳ್ಳಲೆತ್ನಿಸಿದರು.

ಆ ಮನೆಯೊಳಗಿಂದ ಕರಾರು ಪತ್ರಗಳನ್ನು—ಹೇರಳವಾಗಿದ್ದ ಓಲೆಯ ಗರಿಗಳನ್ನು – ಹೊರಗೆ ತಂದುದಾಯಿತು. ಸೂರ್ಯಾಸ್ತವಾದಂತೆಯೆ ಆ ದಾಖಲೆಗಳಿಗೆ ಅಗ್ನಿಸ್ಪರ್ಶವಾಯಿತು. ಆ ಬೆಳಕಿನಲ್ಲಿ ಬಡಪಾಯಿ ರೈತರ ಮುಖಗಳು ಬೆಳಗಿದುವು.

ಯಾರೋ ಅಂದರು:

" ಈ ಮನೆಯನ್ನು ಸುಡಬೇಕು !"

ಮನೆ ? ಅದರೊಳಗೆ ಭತ್ತದ ಕಣಜಗಳಿದ್ದುವು; ಸಿರಿ ಸಂಪದವಿತ್ತು.

ಅಣ್ಣಿ ಗೌಡನೆಂದ:

"ಮನೆಯನ್ನು ಸುಡಬೇಡಿ. ನಿಮ್ಮೊಳಗೇ ಮುಖ್ಯಸ್ಥರನ್ನು ಆರಿಸಿ. ಏನೇನು ಯಾರುಯಾರಿಗೆ ಸಲ್ಲಬೇಕೋ ಅದನ್ನವರು ಒಯ್ಯಲಿ !"

ಒಬ್ಬನೆಂದ:

" ನಿಮ್ಮ ಹೊಲಕ್ಕೆ ನೀವೇ ಬನ್ನಿ ಅಣ್ಣಿಗೌಡರೆ."

" ನಾನು ಬರೋದು ಇನ್ನೂ ತಡ ! ಆದರೆ ಹೆಂಡತಿ ಮಕ್ಕಳನ್ನು ಕಳಿಸ್ತೇನೆ."

ತೋಟದ ಮೂಲೆಯಲ್ಲಿ ಹುಲ್ಲಿನ ಬಣವೆಯಿತ್ತು.

ಕುದುರೆಯನ್ನು ಆಗಲೆ ಹಿಡಿದುಕೊಂಡಿದ್ದ ಕರಿಯಪ್ಪನತ್ತ ನೋಡಿ, ಬಣವೆಯ ಕಡೆ ಬೊಟ್ಟು ಮಾಡುತ್ತ ಅಣ್ಣಿಗೌಡ ಕೇಳಿದ:

" ನಿಶಾನೆ ಏರಿಸೋಣವೊ ? ಹತ್ತೂರ ಧೊರೆ ಇನ್ನಿಲ್ಲ ಅನ್ನೋದು ಹತ್ತೂರ ಪ್ರಜೆಗಳಿಗೆ ಗೊತ್ತಾಗಲಿ ! ಸುಳ್ಯಕ್ಕೆ ಸುದ್ದಿ ಮುಟ್ಟಲಿ !"

" ಸರಿ !"

ಬಣವೆ ಉರಿದುಕೊಂಡು ಬೆಂಕಿ ಗಗನಕ್ಕೇರಿತು.

* * * * *

ಅಣ್ಣಿಗೌಡನೂ ಸಂಗಡಿಗರೂ ಒಳ ಹಾದಿಯಲ್ಲಿ ನಡೆದು ತಲಪಿದಾಗ ಕತ್ತಲಾಗಿ ಆಗಲೆ ನಾಲ್ಕು ಘಳಿಗೆಗಳಾಗಿದ್ದುವು. ಮನೆಗಳಲ್ಲಿ ಜನರೇ ಇಲ್ಲ ವೇನೋ ಎನ್ನುವಂತಹ ನೀರವತೆ. ಆದರೆ, ಸ್ವಲ್ಪವೆ ದೂರದಲ್ಲಿ 'ಮದುವೆ' ಗೆಂದು ರಾಮಗೌಡ ಹಾಕಿಸಿದ್ದ ಚಪ್ಪರದಲ್ಲಿ, ಜನಜಾತ್ರೆ ನೆರೆದಿತ್ತು. ಪಂಜುಗಳು ಸಾಲಾಗಿ ಉರಿಯುತಿದ್ದುವು. ಒಬ್ಬೊಬ್ಬರದು ಒಂದೊಂದು ಬಗೆಯ ಉಡುಪು. ಅಡ್ಡ ಪಂಚೆ ಇಲ್ಲವೆ ಧೋತರ, ನಿಲುವಂಗಿ, ಮುಂಡಾಸು; ಬರಿಮೈ ಹಲವರಿಗೆ. ಸಂಭ್ರಮದ ಮಾತು ನಗೆ ಅಲ್ಲಿರಲಿಲ್ಲ. ಉತ್ಸಾಹ ಉದ್ವಿಗ್ನತೆ ಎಲ್ಲವನ್ನೂ ಅದುಮಿ, ರುದ್ರಗಭೀರತೆ ನೆಲೆಸಿತ್ತು. ಚಪ್ಪರ ದೊಳಗೆ ಒಂದು ಕಡೆ, ಮಂಚವನ್ನಿರಿಸಿ ಮೆತ್ತೆಗಳ ಮೇಲೆ ಕೆಂಪುರೇಶಿಮೆ ಯನ್ನು ಹಾಸಿದ್ದರು; ಒರಗುದಿಂಬುಗಳಿದ್ದುವು. ನಡುವೆ ಉದ್ದಕ್ಕೂ ಹಾದಿಬಿಟ್ಟು ಎರಡು ಕಡೆಗಳಲ್ಲೂ ಜನ ಒಬ್ಬರಿಗೊಬ್ಬರು ಒತ್ತಿಕೊಂಡು ನಿಂತಿದ್ದರು. ಎಲ್ಲರೂ ಮಂಚದ ಕಡೆಗೆ, ಅದರ ಹಿಂದಿದ್ದ ರಾಮಗೌಡನ ಮನೆ ಬಾಗಿಲ ಕಡೆಗೆ, ನೋಡುತಿದ್ದರು.

ಅಣ್ಣಿಗೌಡನು ಬಂದ ಸುದ್ದಿಯನ್ನು ಒಬ್ಬ ಒಳಕ್ಕೆ ಒಯ್ದ. ನೆರೆದ ಜನರೆಲ್ಲ ಕತ್ತೆತ್ತಿ ಚಪ್ಪರದ ಮಹಾದ್ವಾರದತ್ತ ದೃಷ್ಟಿ ಬೀರಿದರು.

ಪಿಸುಧ್ವನಿಯಲ್ಲಿ ನೂರಾರು ಜನ ಆಡಿಕೊಂಡರು:

"ಅಣ್ಣಿಗೌಡರು ಬಂದರು! ಅಗೋ ಅಣ್ಣಿಗೌಡರು!"

ದೃಢ ಹೆಜ್ಜೆಗಳನ್ನಿಡುತ್ತ ಶಾಂತ ಮುಖಮುದ್ರೆಯಿಂದ ಅಣ್ಣಿಗೌಡ ಮಂಚದವರೆಗೂ ನಡೆದುಬಂದ. ಕೊಡಗರಂತೆ ತಲೆಗೆ ಕರವಸ್ತ್ರವನ್ನು ಕಟ್ಟಿ, ಕೋವಿ ಖಡ್ಗ ಎರಡನ್ನೂ ಧರಿಸಿದ್ದ ಕರಿಯಪ್ಪ, ಉಳಿದಿಬ್ಬರೊಡನೆ ಅಣ್ಣಿ ಗೌಡನನ್ನು ಹಿಂಬಾಲಿಸಿದ.

ಗುಸುಗುಸು ಧ್ವನಿ ಒಮ್ಮೆಲೆ ನಿಂತಿತು.

ಮನೆ ಬಾಗಿಲಿನಿಂದ ಹೊರಬಿದ್ದು ರಾಮಗೌಡ, ಉಳಿದವರನ್ನು ಒಳ ಗಿಂದ ಬರಮಾಡಿಕೊಂಡ. ಠೀವಿಯಿಂದ ಚಪ್ಪರಕ್ಕೆ ಬಂದ ಕಲ್ಯಾಣಸ್ವಾಮಿ. ಆತನ ಹಿಂದಿನಿಂದಲೆ ಕೊಡಗಿನ ಪರಿವಾರ....

ಯುವಕ ಕಂಠದಿಂದ ಸ್ವರ ಕೇಳಿಸಿತು:

"ಶ್ರೀ ಕಲ್ಯಾಣಸ್ವಾಮಿಯವರಿಗೆ ಜಯವಾಗಲಿ!"

ಸಹಸ್ರ ಕಂಠಗಳಿಂದ ಆ ಘೋಷ ಮತ್ತೆ ಮೊಳಗಿತು.

ಹಾಗೆಯೇ ಇನ್ನೊಂದು:

" ಕೊಡಗಿನ ಮಹಾರಾಜರಿಗೆ ಜಯವಾಗಲಿ!"

ರಾಮಗೌಡನೊಬ್ಬನೆ ಮುಂದೆ ಬಂದು, ಮಂದಹಾಸ ಸೂಸುತ್ತ, ಅಣ್ಣಿಗೌಡನ ಎರಡೂ ಭುಜಗಳ ಮೇಲೆ ತನ್ನ ಕೈಗಳನ್ನಿರಿಸಿ ಹೇಳಿದ:

" ಶಹಭಾಸ್ ಅಣ್ಣಿಗೌಡ! ಪವಿತ್ರ ಕೆಲಸಕ್ಕೆ ನಾಂದಿಯಾದಂತಾಯ್ತು. ಬಾ!"

ಕಲ್ಯಾಣಸ್ವಾಮಿ ಉಚ್ಚಕಂಠದಲ್ಲಿ ಹೇಳಿದ:

" ಬನ್ನಿ ಅಣ್ಣಿಗೌಡರೆ! ಬೇಟೆ ಯಶಸ್ವಿಯಾಯ್ತು ಅನ್ನೋದಕ್ಕೆ ಆಗ್ಲೆ ನಿಶಾನೆ ನೋಡಿದ್ವಿ. ಸಂತೋಷ!"

ಅಣ್ಣಿಗೌಡ ಕಲ್ಯಾಣಸ್ವಾಮಿಯ ಕಡೆಗೆ ಸರಿದು ಬಾಗಿ ನಮಿಸಿದ.

ಕಚ್ಚೆಪಂಚೆ, ನೇರಳೆ ಬಣ್ಣದ ನಿಲುವಂಗಿ, ಸೊಂಟದ ಪಟ್ಟಿಯಾಗಿ ಬಿಗಿದಿದ್ದ ಕೆಂಪು ಶಾಲು, ಎಡಕ್ಕೆ ಇಳಬಿಟ್ಟಿದ್ದ ಖಡ್ಗ, ಎಣ್ಣೆಗಪ್ಪು ಮೈಬಣ್ಣ, ಸುಂದರವಾಗಿ ಹಿಂದಕ್ಕೆ ಬಾಚಿದ್ದ ತಲೆಗೂದಲು....ಕಲ್ಯಾಣಸ್ವಾಮಿಯ ಮುಖದಲ್ಲಿ ತೇಜಸ್ಸಿತ್ತು.

ಅಣ್ಣಿಗೌಡನ ವಂದನೆಯನ್ನು ಸ್ವೀಕರಿಸಿ ಆತ ಮುಗುಳುನಕ್ಕು ಕೇಳಿದ:

" ಕಾಡುಹಂದಿಯ ಅವಸಾನವಾಯ್ತೂಂತ ರೈತರಿಗೆ ಸಮಾಧಾನವಾಗಿದೆಯೋ?"

" ಅವರಿಗೆಲ್ಲಾ ಸಂತೋಷವಾಗಿದೆ ಸ್ವಾಮಿಯವರೆ. ನಮ್ಮನ್ನು ಸೇರೋದಕ್ಕೇಂತ ಅಟ್ಲೂರಿನ ಸುತ್ತುಮುತ್ತಲಿನ ಇನ್ನೂರು ಮಂದಿ ಹೊರಟಿದ್ದಾರೆ."

" ಕೇಳಿದಿರಾ ರಾಮಗೌಡರೆ, ಸೈನ್ಯ ಭರ್ತಿ ಹ್ಯಾಗೆ ನಡೆದಿದೇಂತ?"

ರಾಮಗೌಡ ಸಂತುಷ್ಟನಾಗಿ ನುಡಿದ:

" ಮೊದಲ್ನೇ ಉಪನದಿ ಸ್ವಾಮಿಯವರೆ."

" ಒಳ್ಳೇದು. ಇನ್ನು ಶುರುಮಾಡಿ."

" ತಾವು ಕೂತ್ಕೊಳ್ಳಿ."

ಕಲ್ಯಾಣಸ್ವಾಮಿ ಮಂಚದ ಮೇಲೆ ಆಸೀನನಾದಂತೆ ಕೊಂಬು ಊದಿದರು, ವಾದ್ಯ ಮೊಳಗಿತು.

ಎಲ್ಲರೂ ಕುಳಿತುಕೊಳ್ಳಬೇಕೆಂದು ರಾಮಗೌಡ ಸಂಜ್ಞೆ ಮಾಡಿದ. ಮಂಚದ ಹಿಂಭಾಗದಲ್ಲಿ ನಿಂತಿದ್ದ ನಾಲ್ವರು ಸಶಸ್ತ್ರ ಯೋಧರನ್ನು ಹೊರತು ಉಳಿದವರೆಲ್ಲ ಚಪ್ಪರದಲ್ಲಿ ಕುಳಿತರು. ಮತ್ತೂ ಬರುತ್ತಲೇ ಇದ್ದವರಷ್ಟೆ, ಚಪ್ಪರದ ಆವರಣದ ಸುತ್ತಲೂ ನಿಂತರು.

ಕಲ್ಯಾಣಸ್ವಾಮಿಯ ಕಡೆಗೊಮ್ಮೆ ನೋಡಿ ನಮಿಸಿ ರಾಮಗೌಡ ಆರಂಭಿಸಿದ:

"ಅಮರ ಸುಳ್ಯ ಮಾಗಣೆಯ ಹತ್ತೂರ ಸಮಸ್ತರೇ! ವೀರರೇ!"

ಕಲಿಯೂ ಹೌದು, ಕವಿಯೂ ಹೌದು–ಎಂದಿದ್ದ ಕಲ್ಯಾಣಸ್ವಾಮಿ ಹಿಂದೆಯೇ, ರಾಮಗೌಡನನ್ನು ಕುರಿತು. ಮಾತನಾಡುತಿದ್ದ ಗೌಡ ಆ ನುಡಿಯ ಸತ್ಯತೆಯನ್ನು ಮತ್ತೊಮ್ಮೆ ಮನಗಾಣಿಸಿಕೊಟ್ಟ. ಅನ್ಯಾಯವನ್ನು ಇದಿರಿಸಿದ ಬಂಡಾಯಗಾರ, ಪಾರತಂತ್ರ್ಯವನ್ನು ಧಿಕ್ಕರಿಸಿದ ದೇಶಪ್ರೇಮಿ, ಆತ್ಮವಿಶ್ವಾಸವಿದ್ದ ಶಿಲ್ಪಿ, ಭವಿಷ್ಯತ್ತಿನ ರೂಪುರೇಖೆಗಳನ್ನು ಜೊಟ್ಟು ಮಾಡಿ ತೋರಿಸುವ ಪ್ರವಾದಿ, ಯೋಧರನ್ನು ಹುರಿದುಂಬಿಸುವ ಸೇನಾನಿ. ಎಷ್ಟೊಂದು ಮಧುರಸ್ವರಗಳ ಸಮರ್ಥಸಮ್ಮಿಶ್ರಣವಾಗಿತ್ತು ಆ ವಾಗ್ಝರಿ! ಆದರೆ, ಶಬ್ದಾಡಂಬರವಿರಲೇ ಇಲ್ಲ ಅಲ್ಲಿ. ಕುಟಿಲ ರಾಜಕಾರಣಿಯ ಕಪಟದ ಆಶ್ವಾಸನೆಗಳಿರಲಿಲ್ಲ. ಉಳಿದವರನ್ನು ತನಗಿಂತ ಕಡಮೆಯವರಾಗಿ ಕಾಣುವ ಪ್ರವೃತ್ತಿ ಇರಲಿಲ್ಲ....

"....ಮಳೆಗಾಲದ ಗದ್ದೆ ಕೆಲಸಕ್ಕೆ ನಾವು ವಾಪಸಾಗ್ಬೇಕು ಏನು ಹೇಳ್ತೀರಿ? ಗುಡುಗಿನ ಹಾಗೆ ಸೇನೆಯ ನಡಿಗೆ. ಮಿಂಚಿನ ಹಾಗೆ ವೇಗ. ಇಂಗ್ಲಿಷರ ಪಾಲಿಗೆ ನಾವೇ ಕುಂಭದ್ರೋಣ ಮಳೆ. ಆದರೆ ಬೇಸಗೆ ಮುಗಿಯೋದಕ್ಕಿಂಚೆ ನಮ್ಮ ಕೆಲಸ ಮುಗಿಸ್ಬೇಕು ನಾವು. ಸಾಧ್ಯವೊ? ಹೇಳಿ, ಸಾಧ್ಯವೊ?"

ನೆರೆದವರು ಮರುನುಡಿದರು:

"ಸಾಧ್ಯ! ಸಾಧ್ಯ!"

"ಈ ಪವಿತ್ರ ಯುದ್ಧದಲ್ಲಿ ನಾವು ಭಾಗವಹಿಸಿದೆವೂಂತ ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಅವರ ಮುಂದಿನ ಸಂತಾನ ಯಾವಾಗಲೂ ಹೆಮ್ಮೆ ಪಡಬೇಕು. ಏನು ಹೇಳ್ತೀರಿ?"

"ಹೌದು! ಹೌದು!"

"ನಮ್ಮ ರಾಜರಿಗೆ– ಜಯವಾದ್ಮೇಲೆ ಸೈನಿಕರಿಗೆಲ್ಲಾ ಸನ್ಮಾನ. ಅಷ್ಟರವರೆಗೆ ಕಷ್ಟನಷ್ಟ ಮಾತ್ರ. ಆದೀತೋ ?"

ಒಂದೆರಡು ಸ್ವರಗಳೆಂದುವು :

"ನಮಗೆ ಯಾವ ಪ್ರತಿಫಲವೂ ಬೇಡ!"

ರಾಮಗೌಡ ಕೇಳಿದ :

"ಉಳಿದವರಿಗೆ?"

"ಯಾರಿಗೂ ಬೇಡ ರಾಮಣ್ಣ" ಎಂದುವು ಹಲವಾರು ಕಂಠಗಳು.

"ಸಂತೋಷ. ನಿಮ್ಮೆಲ್ಲರ ಸಮ್ಮುಖದಲ್ಲಿ ಸುಳ್ಯ ಸ್ವತಂತ್ರವಾಯ್ತೂಂತ ಘೋಷಣೆ ಮಾಡೋಣವೊ ?"

"ಆಗ್ಬೌದು."

"ಹಾಗಾದರೆ ಅಂಥಾ ಘೋಷಣೆ ಆಗಲೀಂತ ರಾಜ್ಯಪಾಲರಾದ ಕಲ್ಯಾಣಸ್ವಾಮಿಯವರನ್ನು ಪ್ರಾರ್ಥಿಸೋಣ."

....ಅನಂತರ ಎದ್ದವನು ಕೊಡಗಿನ ನಾಯಕ ನಂಜಯ್ಯ. ಷರಾಯಿ, ಕರಿಕಂಬಳಿಯ ನಿಲುವಂಗಿ, ತಲೆಗೆ ಕರವಸ್ತ್ರ. ಬಲವಾಗಿಯೆ ಇದ್ದ ಮೀಸೆ....

ಆತ ಕನ್ನಡ ಜಿಲ್ಲೆಯ ಪ್ರಜೆಗಳಿಗೆ, ತುಳುನಾಡ ಬಾಂಧವರಿಗೆ, ನಮಿಸಿದ. ಸ್ವಾತಂತ್ರ್ಯ ಸೇನೆಯನ್ನು ಸೇರಿದ್ದ ವೀರರಿಗೆ ವಂದಿಸಿದ.

"ನಮ್ಮ ಸ್ವಾತಂತ್ರ್ಯ ನಾಶವಾದದ್ದನ್ನು ಕಣ್ಣಾರೆ ಕಂಡ ಪಾಪಿ ನಾನು. ಆ ಸ್ವಾತಂತ್ರ್ಯವನ್ನು ಪುನಃ ಗಳಿಸೋದೇ ಪಾಪಕ್ಕೆ ಪ್ರಾಯಶ್ಚಿತ್ತ...."

ಕೊಡಗು ಜನಾಂಗವೂ ತುಳು ಜನಾಂಗವೂ ಒಂದಾದ ಆ ಘಳಿಗೆ ಪವಿತ್ರವೇ ಸರಿ. ಒಬ್ಬೊಬ್ಬರಾಗಿದ್ದರೆ ಸೋಲಿಸಬಹುದು. ಒಟ್ಟಾಗಿದ್ದರೆ? ಭಾಷೆ ಕೂಡಾ ಬಾರದ ಯಾರೋ ಕೆಲವರು ಸಮುದ್ರ ದಾಟಿ ಈ ದೇಶಕ್ಕೆ ಬಂದು ನಮ್ಮನ್ನು ಆಳುವುದು ಅಂದರೇನು? ನಮ್ಮ ಪಾಲಿಗೆ ಇದು ಎಂತಹ ಅವಮಾನದ ಸಂಗತಿ! ಮರಾಠರು, ರಜಪೂತರು, ಕೇರಳೀಯರು, ತಮಿಳರು—ನಮ್ಮೊಳಗಿನ ಅನೈಕ್ಯದಿಂದಲೇ ಈ ಗತಿ ಪ್ರಾಪ್ತವಾಯಿತು ದೇಶಕ್ಕೆ! ಈಗ ಆ ತಪ್ಪನ್ನು ನಾವು ಸರಿಪಡಿಸಬೇಕು....

"....ನಮ್ಮಲ್ಲಿ ಏನು ಕಡಿಮೆ ಆಗಿದೇಂತ? ಪೌರುಷ ಇಲ್ವೋ? ಬುದ್ಧಿ ಇಲ್ವೊ? ಜನಬಲಕ್ಕೆ ಅಭಾವವೋ? ಯಾವುದರ ಕೊರತೇಂತ? ಇಷ್ಟಿದ್ದೂ ನಮ್ಮ ದೇಶದ ರಕ್ಷಣೆ ನಾವು ಮಾಡಿಕೊಳ್ಳೋದು ಬೇಡ್ವೆ?

"ನನಗೆ ಈ ಸೈನಿಕ ಜೀವನ ಸಾಕಾಗಿದೆ. ಹಳ್ಳಿಯಲ್ಲಿದ್ದು ಹೊಲ ಉಳಬೇಕೊಂತ ಆಸೆ. ಆದರೆ ಇದೊಂದು ಧರ್ಮಯುದ್ಧವನ್ನು ನಾನು ಮಾಡಲೇಬೇಕು. ನಾವೆಲ್ಲಾ ಹೋರಾಡಲೇಬೇಕು. ಸ್ವಾತಂತ್ರ್ಯವನ್ನು ಪುನಃ ಗಳಿಸಿ, ಸಿಂಹಾಸನದ ಮೇಲೆ ರಾಜರನ್ನು ಕೂಡ್ರಿಸಿ, ನಾನು ಖಡ್ಗ ಕೆಳಗಿಡ್ತೇನೆ. ಅಷ್ಟರವರೆಗೆ ನಿಮ್ಮ ಜತೆಯವನಾಗಿ ನಾನು ರಣ ಭೂಮಿಯಲ್ಲಿರುವವನೇ. ಅಕಸ್ಮಾತ್ ಯುದ್ಧರಂಗದಲ್ಲಿ ನಾನೇನಾದರೂ ಸತ್ತರೆ ನನ್ನ ಪಾಲಿಗೆ ಅದು ವೀರಸ್ವರ್ಗ! ಹುಲಿಕುಂದ ನಂಜಯ್ಯ ಯಾವತ್ತೂ ಹೇಡಿಯಾಗಿರಲಿಲ್ಲ, ದ್ರೋಹಿಯಾಗಿರಲಿಲ್ಲ, ಆತ ವೀರನಾಗಿಯೇ ಮಡಿದ– ಅಂತ, ನನ್ನ ಪೀಳಿಗೆಯವರು ಮುಂದೆ ಹೇಳಿಯಾರು!"

ಹರ್ಷೋದ್ಗಾರ ಕರತಾಡನಗಳ ಪ್ರತಿಕ್ರಿಯೆ ದೊರೆಯಿತು ನಂಜಯ್ಯನ ಮಾತುಗಳಿಗೆ....

ಕಲ್ಯಾಣಸ್ವಾಮಿ ಎದ್ದು ನಿಂತಾಗ, ಸದ್ದು ಅಡಗಿ ಮಹಾಮೌನ ನೆಲೆಸಿತು. ಆ ನಾಯಕ ತಮ್ಮೆಲ್ಲರ ಆಶೋತ್ತರಗಳ ಪ್ರತೀಕ ಎನ್ನುವಂತೆ ಜನ ಆತನನ್ನೆ ನೆಟ್ಟ ದೃಷ್ಟಿಯಿಂದ ನೋಡಿದರು.

"ಸ್ವಾತಂತ್ರ್ಯ ಸಮರದ ಸಹಯೋಧರ"ನ್ನು ಉದ್ದೇಶಿಸಿ ಕಲ್ಯಾಣಸ್ವಾಮಿ ಮಾತನಾಡಿದ. ಬಲು ಆಳದಿಂದ ಬರುತಿದ್ದ ಗಂಭೀರ ಧ್ವನಿ. ಮೊದಲು ಮೆಲ್ಲಮೆಲ್ಲನೆ. ಬಳಿಕ ತೀವ್ರ ಗತಿಯಿಂದ. ಕೊನೆಗೆ ಜಲಪಾತದ ಹಾಗೆ ಭೋರ್ಗರೆಯುತ್ತ.

ಅವರೆಲ್ಲರ ಮುಂದಿದ್ದ ಸ್ವಾತಂತ್ರ್ಯ ಪ್ರಶ್ನೆಯನ್ನು ವಿವರಿಸಿ ಆತ ಹೇಳಿದ:

"ಸತ್ಯಕ್ಕೆ ಸಾವಿಲ್ಲ. ನ್ಯಾಯಮಾರ್ಗದಲ್ಲಿ ನಡೆವಾತ ಒಳ್ಳೆಯ ಮನುಷ್ಯ. ಅಸತ್ಯ ಅನ್ಯಾಯಗಳಿಗೆ ವಿರುದ್ಧವಾಗಿ ಹೋರಾಡುವವನು ಧರ್ಮವೀರ. ರಾಮಾಯಣ ಮಹಾಭಾರತಗಳ ಕಥೆ ನಮಗೆ ಏನು ಹೇಳ್ತದೆ? ದುಷ್ಟ ಶಕ್ತಿಗಳಿಗೆ ಯಾವಾಗಲೂ ಸೋಲು ಕಟ್ಟಿಟ್ಟದ್ದೇ. ಇವತ್ತು ರಾಕ್ಷಸ ರಾಮುಪ್ಪಯ್ಯ ಸತ್ತದ್ದೂ ಅದೇ ನಿಯಮದ ಪ್ರಕಾರ. ನಾಳೆ ಇಂಗ್ಲಿಷರು ಸೋತು ಓಡಿಹೋಗೋದೂ ಅದೇ ನಿಯಮದ ಪ್ರಕಾರ...."

ಅವರು ಸಾಧಿಸಿದ್ದುದಾದರೂ ಎಂತಹ ಅಪೂರ್ವ ಐಕ್ಯ!

"ನಾನಾ ಭಾಷೆಗಳು. ನಾನಾ ಜಾತಿಗಳು....ಗೌಡರು, ಲಿಂಗವಂತರು,

ಕೊಡವರು, ಮಾಪಿಳ್ಳೆಯರು, ಕೊಂಕಣರು, ಬ್ರಾಹ್ಮಣರು—ಹೀಗಿದ್ದರೂ ನಾವೆಲ್ಲಾ ಒಂದೇ ಧ್ಯೇಯಕ್ಕಾಗಿ ಒಟ್ಟಾಗಿದೇವೆ. ಇಂಥ ಪವಿತ್ರ ಒಗಟ್ಟಿಗೆ ಯಾವ ಕಾಲದಲ್ಲೂ ಚ್ಯುತಿ ಇಲ್ಲ. ನಮ್ಮೆಲ್ಲರದೂ ಸತ್ಯದ ನ್ಯಾಯದ ಪಕ್ಷ. ಆದ್ದರಿಂದ ನಮಗೆ ಸೋಲಿಲ್ಲ."

ಸಿದ್ಧವಾಗಿದ್ದ ಬಾವುಟ ಬಂದಿತು. ಕರಿಯಪ್ಪ ಅದನ್ನೆತ್ತಿಕೊಂಡು ತಂದ. ವಾದ್ಯ ಮೊಳಗಿದಂತೆ ಅರಸೊತ್ತಿಗೆಯ ಆ ಧ್ವಜವನ್ನು ಅರಳಿಸಿ ಕಲ್ಯಾಣಸ್ವಾಮಿ ನುಡಿದ :

" ಇದೋ, ನಮ್ಮ ಸ್ವಾತಂತ್ರ್ಯದ ಚಿಹ್ನೆಯಾದ ನಿಶಾನೆ! ಈ ಘಳಿಗೆಯಿಂದ ಸುಳ್ಯ ಮಾಗಣೆ ಸ್ವತಂತ್ರವಾಯ್ತು ! ಸೂರ್ಯ ಚಂದ್ರರಿರೋವರೆಗೂ ಈ ಸ್ವಾತಂತ್ರ್ಯ ಚಿರಸ್ಥಾಯಿಯಾಗೋ ಹಾಗೆ ಹೋರಾಡೋಣ! ಇಂಗ್ಲಿಷರನ್ನು ಓಡಿಸಿ, ನಮಗೆ ತಟ್ಟಿರೋ ಕಳಂಕವನ್ನು ನಿವಾರಿಸೋಣ! ಹೇಳಿ! ಜಯಘೋಷ ಮಾಡಿ! ಸ್ವಾತಂತ್ರ್ಯ ಚಿರಸ್ಥಾಯಿಯಾಗಲಿ!"

ಸಹಸ್ರ ಕಂಠಗಳಿಂದ ಹೊರಟು ಆ ಘೋಷ ಪ್ರತಿಧ್ವನಿಸಿತು :

" ಸ್ವಾತಂತ್ರ್ಯ ಚಿರಸ್ಥಾಯಿಯಾಗಲಿ!"

ಮತ್ತೆ ಮೌನ ನೆಲೆಸಿದಾಗ ಕಲ್ಯಾಣಸ್ವಾಮಿ ನುಡಿದ :

" ನಾಳೆಯಿಂದ ನಮ್ಮ ಸೈನ್ಯದ ದಂಡಯಾತ್ರೆಗೆ ಆರಂಭ! ರಾಕ್ಷಸ ಸಂತಾನವನ್ನು ಹುಟ್ಟಡಗಿಸಿದ ಮೇಲೆಯೇ ನಮಗೆಲ್ಲ ವಿಶ್ರಾಂತಿ. ಸಂಪೂರ್ಣ ಜಯ ಸಿಗೋವರೆಗೂ ನಾವು ಹೋರಾಡ್ತೇವೆ ಅಂತ ವೀರಗತ್ತಿ ಹಿಡಿದು ಪ್ರತಿಜ್ಞೆ ಮಾಡೋಣ, ಯೋಧರೇ, ಬನ್ನಿ! ಮುಂದೆ ಬನ್ನಿ! ಸಮರದೀಕ್ಷೆ ಸ್ವೀಕರಿಸಿ!"

ಕುಳಿತಿದ್ದ ಜನಸ್ತೋಮ ಎದ್ದು ನಿಂತಿತ್ತು ಆಗಲೆ.

ಮಹಾನಾಯಕ ರಾಜ್ಯಪಾಲ ಕಲ್ಯಾಣಸ್ವಾಮಿ ನಿಂತಿದ್ದ ಕಡೆಗೆ ಜನ, ನಾಮುಂದು ತಾಮುಂದು ಎನ್ನುವಂತೆ, ಪ್ರತಿಜ್ಞಾಬದ್ಧರಾಗಲು ಮುನ್ನುಗ್ಗಿದರು.

ಹರ್ಷಧ್ವನಿ ಜಯಕಾರಗಳು ಯಾವ ಸೂಚನೆಯೂ ಇಲ್ಲದೆ ಮೊರೆದುವು.

" ದೀವಟಿಗೆ ತನ್ನಿ!" ಎಂದ ಅಣ್ಣಿಗೌಡ.

ಕಟ್ಟಾಳುವೊಬ್ಬ ಬೆಳ್ಳಿಯ ಹಿಡಿಯಿದ್ದ ಪಂಜನ್ನು ಹೊತ್ತು ತಂದ

ಆದರ ತುದಿಯಲ್ಲಿ ಶುಭ್ರವಾದ ಬಿಳಿಯ ಬಟ್ಟೆ ಇತ್ತು. ಅದನ್ನು ಅಲ್ಲಿಯೆ ಎಣ್ಣೆಯಲ್ಲಿ ತೋಯಿಸಿದರು. ಕಲ್ಯಾಣಸ್ವಾಮಿ ತಾನೇ ಆ ಪಂಜಿಗೆ ಸೊಡರು ಮುಟ್ಟಿಸಿದ.

ಅದು ಪ್ರಕಾಶವಮಾನವಾಗಿ ಉರಿಯತೊಡಗಿದಂತೆ ಆತನೆಂದ:

"ಇದು ಸ್ವಾತಂತ್ರ್ಯ ದೀವಟಿಗೆ. ನಮ್ಮ ಗುರಿ ಸಾಧಿಸುವ ವರೆಗೂ ಈ ದೀವಟಿಗೆ ಉರಿಯುತ್ತಲೇ ಇರಬೇಕು!"

ಮುನ್ನುಗ್ಗಿದ ಜನ, ಆ ದೀವಟಿಗೆಯನ್ನು ನೋಡಿದರು. ಆದರ ಬೆಳಕಿನಲ್ಲಿ, ಪ್ರತಿಜ್ಞಾವಿಧಿಗೆಂದು ಕಲ್ಯಾಣಸ್ವಾಮಿ ಹಿಡಿದಿದ್ದ ಖಡ್ಗ ಚಕಚಕಿಸಿತು.

# ಸ್ವಾತಂತ್ರ್ಯ ದೀವಟಿಗೆ

೧

ಮದುವೆಯ ಚಪ್ಪರ ಸೈನ್ಯದ ಶಿಬಿರವಾಗಿ ಮಾರ್ಪಟ್ಟಿತ್ತು. ಹೊರಗೆ ಹಾರಾಡುತ್ತಿದ್ದ ಬಾವುಟ, ಉರಿಯುತ್ತಿದ್ದ ಪಂಜು; ಸುತ್ತಲೂ ಸಶಸ್ತ್ರ ಕಾವಲುಗಾರರು. ಕೋಳಿಯ ಮೊದಲ ಕೂಗಿನೊಡನೆ 'ಕೊಂಬು' ಮೊಳಗಿತು. ಮಲಗಿದ್ದವರು ಎದ್ದರು. ಮನೆಗಳಿಗೆ ಹೋಗಿದ್ದವರು ಎದುರು ಬಂದರು. ಮುಖಮಾರ್ಜನಾದಿ ಪ್ರಾತರ್ವಿಧಿಗಳಾದುವು.

ದೀಪದ ಬೆಳಕಿನಲ್ಲಿ, ಚಿಂತಾಕ್ರಾಂತವಾಗಿದ್ದ ರಾಮಗೌಡನ ಮುಖವನ್ನು ದಿಟ್ಟಿಸಿ ಕಲ್ಯಾಣಸ್ವಾಮಿ ಕೇಳಿದ:

"ಗೌಡರೆ ಏನು ವಿಷಯ ?"

ಉತ್ತರ ತಡವಾಗಲಿಲ್ಲ.

"ನನ್ನ ಮಗನೂ ನಮ್ಮ ಜತೆಯಲ್ಲೆ ಬರ್ತಾನಂತೆ, ಸ್ವಾಮಿಯವರೆ."

"ಯಾರು ? ಮದುವೆಯ ಗಂಡು ?"

"ಅವನೇ !"

"ನಿಮಗಿಷ್ಟ ಇಲ್ಲವೋ ?"

"ನನಗಿದೆ ! ಆದರೆ ಅವನ ಅಜ್ಜಿ ಮತ್ತು ತಾಯಿ—"

"ಸರಿ, ಸರಿ ! ನಿನ್ನೆಯೇ ಒಂದು ಮಾತು ಹೇಳಲು ಮರೆತೆ. ಎಲ್ಲಿ, ನಿಮ್ಮ ಚಿರಂಜೀವನನ್ನು ಕರೀರಿ."

ಹದಿನಾರು ಹದಿನೇಳರ ಕೃಷ್ಣಗೌಡ, ಕಲ್ಯಾಣಸ್ವಾಮಿಯ ಎದುರು ಬಂದು ನಿಂತು, ವಿನಯದಿಂದ ನಮಿಸಿದ. ತಂದೆಯ ಅಚ್ಚಿನಲ್ಲೇ ಎರಕ ಹೊಯ್ದಿದ್ದ ಎಳೆಯ ಜೀವ. ಆ ಸಿಂಹದ ಮರಿಯೇ."

ಕಲ್ಯಾಣಸ್ವಾಮಿ ನಸುನಕ್ಕು ನುಡಿದ :

"ತಮ್ಮಾ, ನಿನ್ನ ಮನಸಿನ ಬಯಕೆ ತಿಳಿದು ಸಂತೋಷವಾಯ್ತು."

ಕೃಷ್ಣಗೌಡನ ಮುಖವರಳಿತು. ಕೃತಜ್ಞತೆ ಸೂಚಿಸಲೆಂದು ತುಟಿಗಳು ಅಲುಗಿದುವು. ಅಷ್ಟರಲ್ಲಿ, ಬೆರಳೆತ್ತಿ ಮೌನವಾಗಿರಲು ಸೂಚಿಸುತ್ತ ಕಲ್ಯಾಣಸ್ವಾಮಿಯೆಂದ :

"ಆದರೆ ನಮ್ಮ ಸೈನ್ಯದ ನಿಯಮದ ಪ್ರಕಾರ ಅದಕ್ಕೆ ಅವಕಾಶವಿಲ್ಲ.

ಒಂದು ಕುಟುಂಬದಿಂದ ಒಬ್ಬ ಮಾತ್ರ ನಮ್ಮ ಜತೆಗೆ ಬರಬಹುದು."

ಕೃಷ್ಣಗೌಡನ ಮುಖ ಕಪ್ಪಿಟ್ಟಿತು. ಆತನ ತಂದೆಯ ಕಣ್ಣುಗಳು ತುಂಟತನದಿಂದ ಮಿನುಗಿದುವು.

"ಇದು ಎಲ್ಲರಿಗೂ ಅನ್ವಯಿಸೋ ಆಜ್ಞೆ ರಾಮುಗೌಡರೆ. ಹೊಸ ತಾಗಿ ಸೈನ್ಯ ಸೇರುವವರಿಗೆಲ್ಲ ಈ ವಿಷಯ ಜಾಹೀರು ಮಾಡಿ ತಿಳಿಸಿರಿ."

"ಆಗಲಿ ಸ್ವಾಮಿಯವರೆ," ಎಂದ ರಾಮುಗೌಡ. ಕಲ್ಯಾಣಸ್ವಾಮಿ ಎದ್ದು ಬಂದು, ಕೃಷ್ಣಗೌಡನ ಭುಜ ಮುಟ್ಟಿ ಹೇಳಿದ:

"ತಂದೆಯಂತೆ ಮಗ! ತಮ್ಮಾ, ಬೇಸರ ಪಡಬೇಡ. ನಮ್ಮೊಟ್ಟಿಗೆ ನೀನು ಬರದೇ ಇದ್ದರೂ ಕುಟುಂಬದ ರಕ್ಷಣೆಯ ಜತೆಯಲ್ಲಿ ಸುಳ್ಯದ ಸ್ವಾತಂತ್ರ್ಯವನ್ನು ಕಾಪಾಡೋ ಭಾರವೂ ನಿನ್ನ ಮೇಲಿದೆ – ನಿನ್ನ ಓರಗೆಯ ಎಲ್ಲರ ಮೇಲಿದೆ."

ಕೃಷ್ಣಗೌಡ ನಮಿಸಿ, ಮನೆಯೊಳಕ್ಕೆ ಹೋದ.

"ಚಿಂತೆ ದೂರವಾಯ್ತೊ ರಾಮುಗೌಡರೆ?" ಎಂದು ಕೇಳಿದ ಕಲ್ಯಾಣ ಸ್ವಾಮಿ.

"ಮೂಕನಾಗಿದ್ದೇನೆ ಸ್ವಾಮಿಯವರೆ."

"ನಿಮ್ಮ ಮನೆಗೆ ಅನ್ವಯಿಸಿರೋದು ಎಲ್ಲಾ ಸಂಸಾರಗಳಿಗೂ ಅನ್ವಯವಾಗಲಿ, ಅಷ್ಟೆ."

"ಅಪ್ಪಣೆ."

....ಕಲ್ಯಾಣಸ್ವಾಮಿಯ ತೀರ್ಪನ್ನು ಕೇಳಿ ಚೆಟ್ಟಿಕುಡಿಯ ಕರ್ತು ಕುಡಿಯರು ಪರಸ್ಪರರನ್ನು ನೋಡಿ ಮುಗಳುನಕ್ಕರು.

ಅದನ್ನು ಗಮನಿಸಿ ಕಲ್ಯಾಣಸ್ವಾಮಿ ಕೇಳಿದ:

"ಈ ನಿಯಮದಿಂದ ನಿಮಗಿಬ್ಬರಿಗೆ ಧಕ್ಕೆ ಇಲ್ಲ. ಇದು ಹೊಸಬರಿಗೆ ಮಾತ್ರ!"

....ಕಲ್ಯಾಣಸ್ವಾಮಿಯೂ ಸೇನಾನಿಗಳೂ ಮಡಿಯುಟ್ಟು ದೇವಾಲ ಯಕ್ಕೆ ಹೋದರು. ಜನಜಂಗುಳಿ ಅವರನ್ನು ಹಿಂಬಾಲಿಸಿತು. ದೇವರು ಚೆನ್ನಕೇಶವಮೂರ್ತಿಗೆ ಎಲ್ಲರೂ ಉದ್ದಂಡಪ್ರಣಾಮ ಮಾಡಿದರು. ವಿಶೇಷ ಪೂಜಾದಿಗಳಾದುವು. ಹಿಡಿದ ಕೆಲಸ ಕೈಗೂಡುವಂತೆ ಅನು ಗ್ರಹಿಸೆಂದು ಎಲ್ಲರ ಪರವಾಗಿ ಕಲ್ಯಾಣಸ್ವಾಮಿ ದೇವರನ್ನು ಪ್ರಾರ್ಥಿಸಿದ.

ಅರ್ಚಕರು ಪ್ರಸಾದವನ್ನು ಹಂಚಿದರು.

ಸೈನ್ಯದ ಶಿಬಿರದಲ್ಲಿ ಕೊಪ್ಪರಿಗೆ ಕಡಾಯಿಗಳನ್ನಿರಿಸಿ ಬ್ರಾಹ್ಮಣರು ಸಿದ್ಧಗೊಳಿಸಿದ ಹಬ್ಬದ ಅಡುಗೆಯನ್ನು ಎಲ್ಲರೂ ಉಂಡರು.

ವಿಶ್ರಾಮಕ್ಕೆಂದು ಮೀಸಲಾದ ನಿಮಿಷಗಳು ಕೆಲವೇ.

ಸುಳ್ಯದಲ್ಲಿ ದೊರೆತಿದ್ದ ನಾಲ್ಕಾರು ಕುದುರೆಗಳಲ್ಲಿ ರಾಮಪ್ಪಯ್ಯನ ಅರಬ್ಬೀಕುದುರೆಯೇ ಅತ್ಯುತ್ಕೃಷ್ಟವಾಗಿತ್ತು.

"ಈ ಕುದುರೆ ಸ್ವಾಮಿಯವರಿಗಿರಲಿ, ಆಗದೆ?" ಎಂದು ರಾಮಗೌಡ ನಂಜಯ್ಯನನ್ನು ಕೇಳಿದ.

"ಅವರನ್ನು ಒಪ್ಪಿಸೋದು ಕಷ್ಟ," ಎಂದ ನಂಜಯ್ಯ.

ಆ ಮಾತು ನಿಜವಾಗಿತ್ತು.

"ನಾನು ಸಾಕಿ ಬೆಳಸಿದ್ದನ್ನು ಬಿಟ್ಟು ಇನ್ನೊಂದರ ಮೇಲೆ? ಊಹೂಂ. ಅದನ್ನು ಅಣ್ಣಿಗೌಡರಿಗೆ ಕೊಡಿ," ಎಂದ ಕಲ್ಯಾಣಸ್ವಾಮಿ.

ಆತನೂ ಒಪ್ಪಲಿಲ್ಲ.

"ಆ ಕುದುರೆಮೇಲೆ ಕಣ್ಣಿಟ್ಟಿದ್ದೋರು ಕರಿಯಪ್ಪಣ್ಣ," ಎಂದ ಅಣ್ಣಿ ಗೌಡ.

ಕರಿಯಪ್ಪ. "ಇನ್ನು ಆ ರಾಮಪ್ಪಯ್ಯನನ್ನು ಮರೆತ್ಬಿಡು. ಯುದ್ಧ ಮುಗಿದ್ಮೇಲೆ ನಿನ್ನನ್ನು ಕೊಡಗಿಗೆ ಕರಕೊಂಡ್ಹೋಗಿ ಸಾಕ್ತೀನಿ" ಎಂದ ಕುದುರೆಯನ್ನುದ್ದೇಶಿಸಿ, ಅದರ ಭುಜ ತಟ್ಟುತ್ತಾ.

ಸೈನ್ಯದ ಉಸ್ತುವಾರಿಯ ವಿವರಗಳು, ಯೋಧರಿಗೆ ಕೊಡಬೇಕಾದ ಅಪ್ಪಣೆ ಕಟ್ಟಪ್ಪಣೆಗಳು, ಸಿದ್ಧವಾದುವು.

"ಇನ್ನು ಒಂದು ಗಳಿಗೆಯೊಳಗೆ ಸೈನ್ಯ ಹೊರಡ್ತದೆ, ತಯಾರಾಗಿ!" ಎಂದು ರಾಮಗೌಡ ಅನುಜ್ಞೆ ಇತ್ತ.

ಆಯುಧಗಳು? ಸುಳ್ಯದಲ್ಲಿ ಎಲ್ಲಿತ್ತು ಶಸ್ತ್ರಾಗಾರ?

ಆ ವಿಷಯವನ್ನೂ ರಾಮಗೌಡ ಸ್ಪಷ್ಟಪಡಿಸಿದ:

"ಏನೇನಿದೆಯೋ ಅದನ್ನೆಲ್ಲಾ ತನ್ನಿ. ಇರೋ ಕೋವಿಗಳು ಕೆಲವೇ. ಅವು ಅಭ್ಯಾಸ ಇರುವವರಿಗೆ ಮಾತ್ರ. ಖಡ್ಗ, ಭರ್ಜಿ, ಈಟಿ, ಕಠಾರಿ – ಏನಿದ್ದರೂ ಹಂಚಿಕೊಳ್ಳಿ. ಏನೂ ಇಲ್ಲದವರು ಸದ್ಯಕ್ಕೆ ಬಡಿಗೆ ದೊಣ್ಣೆ ತನ್ನಿ."

ಯಾರೋ ಒಬ್ಬ ಸೂಚಿಸಿದ:

"ಕೊತ್ತಳಿಗೆ?"

ಆ ಸೂಚನೆ ಯೋಗ್ಯವಾಗಿದ್ದರೂ ರಾಮಗೌಡ ಕೇಳಿದ:

"ತೆಂಗಿನ ಮರ ಹತ್ತಿ ಕಾಯಿ ಕೀಳುವ ಚಪಲವೋ?"

"ಛೆ! ಛೆ! ಒಂದು ಕಾಯಿಯೂ ಕೆಳಗೆ ಬೀಳದ ಹಾಗೆ ಕೊತ್ತಳಿಗೆ ಕಡೀತೀವಿ."

"ಸರಿ ಹಾಗಾದರೆ. ತಡಮಾತ್ರ ಮಾಡ್ಬೇಡಿ. ಇನ್ನೊಂದೇ ಘಳಿಗೆ ಪುರಸೊತ್ತು!"

ಕೊಡಗಿನಿಂದ ಬಂದಿದ್ದ ವೀರರಿಗೆ, ದೂರದ ಹಳ್ಳಿಗಳಿಂದ ಬಂದಿದ್ದವರಿಗೆ ಬೀಳ್ಕೊಡುವ ತೊಂದರೆ ಇರಲಿಲ್ಲ. ಆದರೆ ಊರಿನವರಿಗೆ ಹಾಗಲ್ಲ. ತಾಯಂದಿರು ಮಕ್ಕಳನ್ನು, ಹೆಂಡತಿಯರು ಗಂಡಂದಿರನ್ನು, ಬಂಧುಗಳು ಆಪ್ತರನ್ನು, ವಿಯೋಗ ದುಃಖದ ಕಣ್ಣೀರಿನೊಡನೆ, ಸಲಹೆ ಸೂಚನೆಗಳೊಡನೆ, ಹಾರೈಕೆಯೊಡನೆ ಕಳುಹಿಕೊಟ್ಟರು.

ರಾಮಗೌಡನ ಮನೆಯ ಮುಂದಣ ಬಯಲಲ್ಲಿ ಸೈನ್ಯದ ಕೂಚು ನಡೆಯಿತು. ಒಟ್ಟು ಏಳುನೂರನ್ನು ಮೀರಿಸಿತ್ತು ಸಂಖ್ಯೆ. ಅಷ್ಟು ಜನರಲ್ಲೂ ಒಬ್ಬೊಬ್ಬರದು ಒಂದೊಂದು ವಿಧದ ಕವಾಯಿತು.

"ನಾಲ್ಕು ಹೊಡೆತ ಬಿದ್ದಮೇಲೆಯೇ ಈ ಕಬ್ಬಿಣ ಉಕ್ಕಾಗೋದು," ಎಂದ ನಂಜಯ್ಯ.

ರಾಜ್ಯಪಾಲ ಕಲ್ಯಾಣಸ್ವಾಮಿಯೇ ಸೈನ್ಯವನ್ನು ಉದ್ದೇಶಿಸಿ ಮಾತನಾಡಿದ; ನೇಮಕಗಳ ವಿವರ ನೀಡಿದ; ಸೈನ್ಯದ ನಿಯಮಗಳನ್ನು ಜಾಹೀರು ಮಾಡಿದ.

"ಸುಳ್ಯದ ರಾಮಗೌಡರೂ ಕೊಡಗಿನ ಹುಲಿಕುಂದದ ನಂಜಯ್ಯನವರೂ ನಮ್ಮ ಸೈನ್ಯದ ದಂಡನಾಯಕರು. ಅಣ್ಣಿಗೌಡರೇ ಕೋಶಾಧಿಕಾರಿ. ಚೆಟ್ಟಿಕುಡಿಯ ಮತ್ತು ಕರ್ತುಕುಡಿಯರು ದಳಪತಿಗಳು. ಇವರ ಆಜ್ಞೆಗೆ ಮೀರಿ ಯಾರೂ ನಡೆಯಬಾರದು.

"ನಮ್ಮ ಯುದ್ಧ ಇಂಗ್ಲೀಷಿನೋರ ವಿರುದ್ಧ ಅನ್ನೋದನ್ನು ನೆನಪಿಡಿ. ನಮ್ಮ ನಾಡ ಬಾಂಧವರು ಯಾರೂ ನಮಗೆ ವೈರಿಗಳಲ್ಲ. ರಾಮಪ್ಪಯ್ಯನಂಥ ವಿಷಜಂತುಗಳಿದ್ದರೆ ಮಾತ್ರ, ಅಂಥವರ ಮೇಲೂ ನಾವು ಖಡ್ಗ ಹಿರಿದೇವು. ಪ್ರತಿಯೊಬ್ಬ ಸೈನಿಕನೂ ಪಾಲಿಸಬೇಕಾದ ಸೂತ್ರಗಳನ್ನು

ಹೇಳ್ತೀವೆ, ಕೇಳಿ: ಶರಣಾಗತರಿಗೆ ರಕ್ಷಣೆ ಕೊಡಬೇಕು, ಅಡ್ಡಿಯಾದವರನ್ನಷ್ಟೆ ಮಟ್ಟ ಹಾಕ್ಬೇಕು; ಬ್ರಾಹ್ಮಣಾದಿಗಳ ತಂಟೆಗೆ ಹೋಗಬಾರದು; ಸ್ತ್ರೀಯರನ್ನು ಮುಟ್ಟಬಾರದು; ಅನ್ಯಾಯದ ಸುಲಿಗೆ ಮಾಡಬಾರದು; ಹೆಂಡ ಕುಡಿಯಬಾರದು! ಈ ಸೂತ್ರಗಳಿಗೆ ಸೈನಿಕರು ಯಾರಾದರೂ ಅವಿಧೇಯರಾದರೆ ಅವರಿಗೆ ಅಲ್ಲೇ ಶಿಕ್ಷೆ ವಿಧಿಸಲಾದೀತು!"

ರಾಮುಗೌಡ ಸೈನಿಕರನ್ನು ಕೇಳಿದ:

"ಅರ್ಥವಾಯ್ತೊ?"

"ಆಯ್ತು," ಎಂದು ಸಾರ್ವತ್ರಿಕವಾಗಿ ಉತ್ತರ ಬಂತು.

ನಂಜಯ್ಯ, ರಾಜ್ಯಪಾಲರ ಇಸ್ತಿಹಾರನ್ನೋದಿದ.

ಆ ಇಸ್ತಿಹಾರು ಪ್ರಜಾಕೋಟಿಗೆ ಆಶ್ವಾಸನೆ ನೀಡಿತು:

"ಜಯಲಭಿಸಿದ ಬಳಿಕ್ಕ ಮೂರು ವರ್ಷಗಳ ವರೆಗೆ ಭೂಮಿಕಂದಾಯವನ್ನು ಎತ್ತುವುದಿಲ್ಲ. ಆಮೇಲೆ ಧಾನ್ಯರೂಪದಲ್ಲೇ ಕಂದಾಯವನ್ನು ಪಡೆಯಲಾಗುವುದು. ಇನ್ನು ಮುಂದೆ ಕನ್ನಡ ಜಿಲ್ಲೆಯಲ್ಲಿ ಉಪ್ಪು ಮತ್ತು ಹೊಗೆಸೊಪ್ಪು ಮಾರಾಟದ ಗುತ್ತಿಗೆ ಇರುವುದಿಲ್ಲ. ಯಾರು ಬೇಕಾದರೂ ಹೊಗೆಸೊಪ್ಪನ್ನು ಬೆಳಸಿ ಮಾರಬಹುದು."

ಆ ವಾಚನದ ಬಳಿಕ ಸೈನಿಕರು ಹರ್ಷಧ್ವನಿ ಮಾಡಿದರು. ಸ್ವಾತಂತ್ರ್ಯದ ಅರ್ಥವೇನೆಂಬುದು ಸ್ಪಷ್ಟವಾಯಿತೆಂದು ದೂರದಲ್ಲಿ ನೆರೆದಿದ್ದ ಇತರ ಜನರೂ ಜಯಕಾರ ಮಾಡಿದರು.

ಸುಳ್ಯ ಮಾಗಣೆಗೆ ಸುಭೇದಾರನೊಬ್ಬನನ್ನು ನೇಮಿಸುವ ಒಂದೇ ಕೆಲಸ ಉಳಿದಿತ್ತು. ಇಳಿವಯಸ್ಸಿನ ಹಿರಿಯನೊಬ್ಬನನ್ನು ರಾಮುಗೌಡ ಕರೆತಂದ.

"ಇವರು ತಿಮ್ಮಪ್ಪಯ್ಯನವರು, ಸ್ವಾಮಿಯವರೆ."

"ಸಂತೋಷ," ಎಂದ ಕಲ್ಯಾಣಸ್ವಾಮಿ. ನೆರೆದಿದ್ದ ಎಲ್ಲರನ್ನೂ ಉದ್ದೇಶಿಸಿ ಆತ ಹೇಳಿದ:

"ಇವತ್ತಿನಿಂದ, ಯುದ್ಧ ಮುಗಿಸಿ ನಮ್ಮ ಸೈನ್ಯ ಹಿಂತಿರುಗಿ ಬರುವವರೆಗೂ ತಿಮ್ಮಪ್ಪಯ್ಯನವರನ್ನು ಸುಳ್ಯಮಾಗಣೆಯ ಸುಭೇದಾರರಾಗಿ ನಾವು ನೇಮಿಸಿದ್ದೇವೆ."

ನೇಮಕ ತನಗೆ ಸಮ್ಮತವೆಂದು ಕೈ ಜೋಡಿಸಿ ನಿಂತಿದ್ದ ತಿಮ್ಮಪ್ಪಯ್ಯನನ್ನು ಒಪ್ಪಿಗೆಯ ದೃಷ್ಟಿಯಿಂದ ಜನ ನೋಡಿದರು.

ರಾಮುಗೌಡ ಜೋಯಿಸರತ್ತ ಸರಿದ. ಘಳಿಗೆಗಳನ್ನು ಗುಣಿಸುತ್ತಿದ್ದ ಆ ಜೋಯಿಸರೆಂದರು :

" ಇನ್ನು ಹೊರಡಬಹುದು !"

ಕಲ್ಯಾಣಸ್ವಾಮಿಗೆ ಅದನ್ನು ತಿಳಿಸುತ್ತ ರಾಮುಗೌಡ ಹೇಳಿದ.

" ಎಲ್ಲಾ ಸಿದ್ಧವಾಗಿದೆ."

" ಸರಿ. ಮುಂದಿನ ಕಾರ್ಯಕ್ರಮವನ್ನು ಜಾಹೀರು ಮಾಡಿ. ಊದಲು ಕೊಂಬು ಒಂದಿದ್ದರಾಯ್ತು. ಉಳಿದ ವಾದ್ಯಗಳನ್ನು ಇಲ್ಲೇ ಬಿಟ್ಟುಬಿಡಿ."

" ಅಪ್ಪಣೆ."

ರಾಮುಗೌಡನ ಕುದುರೆ, ಸೈನಿಕರು ನಿಂತಿದ್ದ ಉದ್ದಗಲಕ್ಕೂ ಹೋಗಿ ಬಂತು. ಅವರೆಲ್ಲರ ಮೇಲೂ ತನ್ನ ನೋಟವನ್ನು ಬೀರುತ್ತ ಆತ ಹೇಳಿದ :

" ಇನ್ನು ಸೈನ್ಯ ಮುಂದಕ್ಕೆ ಹೊರಡ್ತದೆ! ರಾತ್ರಿ ಬೆಳ್ಳಾರೆ ಕೋಟೆಯೊಳಗೇ ನಮಗೆ ವಿಶ್ರಾಂತಿ ! ಎಲ್ಲಿ, ವಾದ್ಯದವರು !"

ಕೊಂಬು ಕೂ—ಕುವೋ—ಕುವೋ—ಕೂ ಎಂದಿತು. ವಾದ್ಯ ಮೊಳಗಿತು.

ಉರಿಯುತಿದ್ದ ದೀವಟಿಗೆಯನ್ನು ಹೊತ್ತು ಸುಳ್ಯದ ಒಬ್ಬ ಕಟ್ಟಾಳು ಮುಂಭಾಗಕ್ಕೆ ಹೋಗಿ ನಿಂತ. ಅರಬ್ಬೀ ಕುದುರೆಯನ್ನೇರಿದ್ದ ಕೊಡಗಿನ ಕರಿಯಪ್ಪ, ಕೈಯಲ್ಲಿ ಬಾವುಟ ಹಿಡಿದು, ಆ ಮನುಷ್ಯನ ಹಿಂಭಾಗದಲ್ಲಿ ವಿರಮಿಸಿದ. ಆತನ ಹಿಂದೆ ಖಡ್ಗಧಾರಿಗಳಾದ ಕೊಡವರು, ಕನ್ನಡಿಗರು, ಗೌಡರು, ಬಂಟರು, ಸೇರ್ವೆಗಾರರು, ಬಲ್ಲಾಳರು. ಕೊತ್ತಳಿಗೆಯ ಸಾಲು ಉದ್ದಕ್ಕೂ—ಬಡಿಗೆ, ದೊಣ್ಣೆ. ನಡುವೆ ದಂಡನಾಯಕ ನಂಜಯ್ಯ. ಆತನ ಬದಿಯಲ್ಲೇ ಕಂದು ಕುದುರೆಯನ್ನೇರಿದ್ದ ಕಲ್ಯಾಣಸ್ವಾಮಿ. ಹಿಂದೆ ಅಣ್ಣಿಗೌಡ ಮತ್ತು ಸೋಮಯ್ಯ. ಪುನಃ ಸಾಲಿನುದ್ದಕ್ಕೂ ಸೈನಿಕರು. ಸೈನ್ಯದ ಹಿಂಬದಿಯಲ್ಲಿ ಕುದುರೆಗಳನ್ನೇರಿ ಕುಳಿತಿದ್ದ ಬಂದೂಕುಧಾರಿಗಳಾದ ಕುಡಿಯ ಸೋದರರು. ಸಾಲಿನುದ್ದಕ್ಕೂ ಅತ್ತಿತ್ತ ಚಲಿಸುತ್ತಿದ್ದ ರಾಮುಗೌಡ.

ಪ್ರತಿಯೊಂದನ್ನೂ ಪರಾಂಬರಿಸಿದ ಬಳಿಕ ಆ ದಂಡನಾಯಕ, ತನ್ನ ಮನೆಯ ಕಡೆಗೊಮ್ಮೆ ನೋಡಿ, ಜನರೆಡೆಗೆ ಕೈ ಬೀಸಿ, ಯೋಧರನ್ನುದ್ದೇಶಿಸಿ, ಆಜ್ಞೆ ಇತ್ತ :

"ಸೈನ್ಯ ಚಲಿಸಲಿ!"

ಜಯಕಾರ ಹರ್ಷೋದ್ಗಾರಗಳಾದುವು. ಕಂಬನಿಯ ಒತ್ತಡವನ್ನೂ ಲೆಕ್ಕಿಸದೆ ಹೆಂಗಸರು ಮಕ್ಕಳು ಮುದುಕರು ಆ ಘೋಷಗಳೊಡನೆ ತಾವೂ ಧ್ವನಿಗೂಡಿಸಿದರು.

ಸೈನ್ಯದ ಸಾಲಿನ ಕೊನೆಯಲ್ಲಿದ್ದ ಕುಡಿಯ ಸೋದರರು ಆಕಾಶದ ಕಡೆಗೆ ಏಕಕಾಲದಲ್ಲಿ ಗುಂಡು ಹಾರಿಸಿದರು.

ಸ್ವಾತಂತ್ರ್ಯಸೇನೆ ಮುಂದಕ್ಕೆ ಹೆಜ್ಜೆ ಇಟ್ಟಿತು.

## ೨

ಊರು ದಾಟಿ ಒಂದು ಹರದಾರಿ ಮಾರ್ಗ ಕ್ರಮಿಸಿದ ಬಳಿಕ, ನಡಿಗೆಯ ಶಿಸ್ತು ಶಿಥಿಲವಾಯಿತು. ಕಾಲು ಹಾದಿಯ ಮೇಲ್ಗಡೆ, ಅಡ್ಡದಿಡ್ಡಿಯಾಗಿ ಬೆಳೆದ ಮರಗಳ ರೆಂಬೆ ಕೊಂಬೆಗಳು ದಟ್ಟವಾಗಿದ್ದುದರಿಂದ, ಬಿಸಿಲಿನ ತಾಪ ಬಲವಾಗಲಿಲ್ಲ. ಆದರೂ ಎಲ್ಲರಿಗೂ ಮೈ ಬೆವರಿತು. ನಡಿಗೆಯ ಬೇಸರ ಕಳೆಯಲೆಂದು ಹೊರಟಿತು ಮಾತು. ನೂರು ವಿಷಯಗಳ ಮೇಲೆ ನೂರಾರು ಅಭಿಪ್ರಾಯಗಳು. ಎಡೆಬಿಡದ ಚಿಲಿಪಿಲಿ ಸದ್ದು.

ಆಗೊಮ್ಮೆ ಈಗೊಮ್ಮೆ ಹಾದಿಗಡ್ಡವಾಗಿ ಸಿಗುತ್ತಿದ್ದ ಹಳ್ಳಿಗರು ದೂರ ಸರಿದು ನಿಂತು, ಸಾಗುತ್ತಿದ್ದ ಜನರನ್ನು ಬೆರಗಾಗಿ ನೋಡಿದರು. ಹೆದರಿ ಓಡಿಹೋದವರು ಕೆಲವರು. ಬೇರೆ ಕೆಲವರು ಧೈರ್ಯಗೊಂಡು ಯಾವನಾದರೊಬ್ಬ ಸೈನಿಕನನ್ನು ಕೇಳುತ್ತಿದ್ದರು:

"ಎಲ್ಲಿಗೋಯ್ತಾದೆ ದಂಡು?"

ದೊರೆಯುತ್ತಿದ್ದ ಉತ್ತರ:

"ಕುಂಪಣಿ ಸರಕಾರನ ಓಡಿಸೋಕೆ."

ಕುಂಪಣಿ ಸರಕಾರ ಯಾವುದೆಂಬುದೂ ಅವರಲ್ಲಿ ಕೆಲವರಿಗೆ ಗೊತ್ತಿರಲಿಲ್ಲ.

ಅಥವಾ ಬೇರೆ ರೀತಿಯ ಪ್ರಶ್ನೆಯೂ ಇರುತ್ತಿತ್ತು:

"ಇದು ಯಾರದಪ್ಪೋ ದಂಡು?"

"ಕಲ್ಯಾಣಸ್ವಾಮಿಯೋರ್ದು ಕಣ್ರಪ್ರೋ,—ಕಲ್ಯಾಣಪ್ನೋರ್ದು...."

ಬಾವುಟ ಹಿಡಿದವನೆ ಕಲ್ಯಾಣಸ್ವಾಮಿಯೇನೋ ಎಂದು ಕರಿಯಪ್ಪನತ್ತ ನೋಡುತ್ತಿದ್ದರು ಜನ.

"ಅವರು ಕಲ್ಯಾಣಪ್ನೋರು," ಎಂದು ನಡುವೆ ಇದ್ದ ಕಂದು ಕುದುರೆಯತ್ತ ಬೊಟ್ಟು ಮಾಡುತ್ತಿದ್ದರು ಸೈನಿಕರು.

ಸುಳ್ಯ ಸ್ವತಂತ್ರವಾಯಿತೆನ್ನುವ ಸುದ್ದಿ ಹಳ್ಳಿಯ ರೈತರಿಗೆ ದೊರೆಯಿತು. ಇನ್ನು ಧಾನ್ಯವನ್ನು ಮಾರಿ ಕಂದಾಯ ಕೊಡಬೇಕಾದುದಿಲ್ಲ, ಭೂಮಿ ಕಂದಾಯವೇ ಇಲ್ಲ ಮೂರು ವರ್ಷ! ಮೂವರು ನಾಲ್ವರು ಹಳ್ಳಿ

ಗರಿದ್ದ ಕಡೆ ಸ್ವತಃ ರಾಮಗೌಡನೇ ನಿಂತು, ರಾಜ್ಯಪಾಲ ಕಲ್ಯಾಣಸ್ವಾಮಿಯವರ ಇಸ್ತಿಹಾರವನ್ನು ವಿವರಿಸುತ್ತಿದ್ದ. ಕಂದಾಯದ ವಿಷಯ ಅರ್ಥವಾದೊಡನೆಯೆ ಆ ಜನ ಹರಸುತ್ತಿದ್ದರು:

"ನಿಮ್ಮ ಹೊಟ್ಟೆ ತಣ್ಣಗಿರಲಿ! ದೇವರು ನಿಮಗೆ ಒಳ್ಳೇದು ಮಾಡಲಿ!"

....ನಂಜಯ್ಯ ಸೂಚಿಸಿದ:

"ಇನ್ನು ಬೇಹುಗಾರರನ್ನು ಮುಂದಕ್ಕೆ ಕಳಿಸೋದು ವಾಸಿ."

ಬೆಳ್ಳಾರೆಯ ಊರನ್ನೂ ಕೋಟೆಯನ್ನೂ ಕಂಡು ಅರಿತಿದ್ದ ಇಬ್ಬರನ್ನು ರಾಮಗೌಡ ಆರಿಸಿದ.

'ಮುಂದಾಗಿಯೇ ಹೋಗಿ, ಕುದುರೆಗಳನ್ನು ಹೊರಗೆ ಬಿಟ್ಟು, ನೀವು ಊರು ಸೇರಬೇಕು. ಕತ್ತಲಾಗುವ ಹೊತ್ತಿಗೆ ಸೈನ್ಯ ಬೆಳ್ಳಾರೆ ತಲಪ್ತದೆ. ಆಗ ನೀವು ವಾಪಸು ಬಂದು ಒಳಗಿನ ಪರಿಸ್ಥಿತಿ ಏನೂಂತ ನಮಗೆ ತಿಳಿಸ್ಬೇಕು. ಆಯುಧ ಇಲ್ಲೇ ಬಿಟ್ಟು ಬರಿಗೈಯಲ್ಲಿ ಸಾಮಾನ್ಯ ಜನರ ಹಾಗೆ ಮುಂದೆ ಸಾಗಿ,' ಎಂದು ಆ ಇಬ್ಬರು ಆಜ್ಞಪ್ತರಾದರು.

ಹರಿಯುವ ನೀರು ದೊರೆತ ಕಡೆ, ಬಿಸಿಲು ಬಾಡುವವರೆಗೆ, ತುಸು ಹೊತ್ತು, ದಂಡು ವಿರಮಿಸಿತು. ಕಾಲಿಗೆ ಮುಳ್ಳು ಚುಚ್ಚಿತ್ತೆಂದು ಕೆಲವರು ಪಾದಗಳ ಆರೈಕೆ ಮಾಡಿದರು. ಬಾಯಾರಿತ್ತೆಂದು ನೀರು ಕುಡಿದರು. ಅಲ್ಲಿಯೆ ಕಾಡು ಮಾವಿನ ಮರದಲ್ಲಿ ಹಣ್ಣುಗಳನ್ನು ಕಂಡು ಅದನ್ನೇರಿದರು ಕೆಲವರು ಮಾಗಿದ ಒಳ್ಳೆಯ ಹಣ್ಣುಗಳು ರಾಜ್ಯಪಾಲರಿಗೆ. ರುಚಿ ಇತ್ತೆಂದು ಮೊದಲೆ ಕಚ್ಚಿ ನೋಡಿದ ಬಳಿಕ ಈ ಕಾಣಿಕೆ. ಹಾಗೆಯೇ ದಂಡನಾಯಕರಿಗೆ, ದಳಪತಿಗಳಿಗೆ.

ಎಣ್ಣೆ ಹೊತ್ತಿದ್ದವನು ದೀವಟಿಗೆಯನ್ನು ತೋಯಿಸಿದ. ಚಲಿಸದೆ ನಿಂತಿದ್ದ ಪಂಜು, ಸೂರ್ಯನನ್ನೂ ಲೆಕ್ಕಿಸದೆ ಈಗ ಉರಿಯಿತು.

ಆ ವಿಶ್ರಾಂತಿಯ ಬಳಿಕ ಮತ್ತೆ ಸೇನೆಯ ಮುನ್ನಡೆ.

....ಎಣಿಸಿದ್ದಂತೆಯೆ, ಸೂರ್ಯ ಮುಳುಗುವ ಹೊತ್ತಿಗೆ ಅವರು ಬೆಳ್ಳಾರೆಯ ಹೊರ ವಲಯಕ್ಕೆ ಬಂದರು. ಬೇಹುಗಾರರು ಕಾಲು ಹಾದಿಗಿಂತ ಸ್ವಲ್ಪ ದೂರದಲ್ಲಿ ಮರಕ್ಕೆ ಕಟ್ಟಿ ಹೋಗಿದ್ದ ಕುದುರೆಗಳು ಕೆನೆದು, ತಮ್ಮ ಇರವನ್ನು ಸಾರಿದುವು. ಅವರಿಗಾಗಿ ಏನು ಕಾದಿತ್ತೋ ಬೆಳ್ಳಾರೆಯೊಳಗೆ? ಕತ್ತಲಾಯಿತು. ಅದು ಅನಿಶ್ಚಯತೆಯ ಘಳಿಗೆ, ಬೇಹು

ಗಾರರು ಇನ್ನೂ ಯಾಕೆ ಬರಲಿಲ್ಲವೆಂದು ಕಲ್ಯಾಣಸ್ವಾಮಿ ಮಿಡುಕಿದ. ರಾಮಗೌಡ, ನಂಜಯ್ಯರಿಗೂ ಅಷ್ಟೆ. ಬೇಹುಗಾರರಿಗೆ ಅಪಾಯವೇನಾದರೂ ತಟ್ಟಿತೇನೋ, ಕೋಟೆಯೊಳಗೆ ಕುಂಪಣಿ ಸರಕಾರದ ತುಕ್ಕಡಿ ಇದೆಯೇನೋ, ಎಂದು ಸಂದೇಹಗೊಂಡು ಅವರ ಮನಸ್ಸು ಚಡಪಡಿಸಿತು.

ಚೆಟ್ಟಿ, ಕಲ್ಯಾಣಸ್ವಾಮಿಯ ಬಳಿಗೆ ಬಂದು ನುಡಿದ :

" ಎಷ್ಟೂಂತ ಕಾಯೋಕಾಗ್ತೇತೆ ? ಒಳಕ್ಕೆ ನುಗ್ಗೋಣವೇನು ?"

" ಇನ್ನೂ ಸ್ವಲ್ಪ ಹೊತ್ತು ಕಾದು ನೋಡೋಣ," ಎಂದ ಕಲ್ಯಾಣಸ್ವಾಮಿ.

ಹಾಗೆ ಹೇಳಿದ ಎರಡು ನಿಮಿಷಗಳಲ್ಲೆ ಬೇಹುಗಾರರ ಆಗಮನವಾಯಿತು. ಲವಲವಿಕೆಯಿಂದಲೆ ಅವರಿಬ್ಬರೂ ನಾಯಕರ ಬಳಿ ಸಾರಿದರು. ಪ್ರಶ್ನಿಸಬೇಕಾದ ಅಗತ್ಯವೇ ಇರಲಿಲ್ಲ. ಅವರ ವರ್ತನೆಯಿಂದಲೇ ಸ್ಪಷ್ಟವಾಗಿತ್ತು ಪರಿಸ್ಥಿತಿಯ ಸ್ವರೂಪ.

ಅವರಲ್ಲೊಬ್ಬನೆಂದ :

" ಕೋಟೆಯಲ್ಲಿ ಸೈನ್ಯವಿಲ್ಲ. ಕಾವಲಿಗೆ ಮೂರು ನಾಲ್ಕು ಜನ ಇದಾರೆ,ಅಷ್ಟೆ. ಖಜಾನೆ ನೋಡ್ಕೊಂಡು ಇರುವವರು ಅಮಲ್ದಾರ ಮತ್ತು ಗುಮಾಸ್ತರು ಮಾತ್ರ. ಕೆಳಗೆ ನಿಂತು ಹೇಳಿ ಕಳಿಸಿದರೂ ಸಾಕು, ಅವರು ಬಂದುಬಿಡಬೌದು."

" ಸರಿ! ನಡೀರಿ ಮುಂದಕ್ಕೆ!" ಎಂದ ಕಲ್ಯಾಣಸ್ವಾಮಿ.

ರಾಮಗೌಡನ ಕುದುರೆ ದೀವಟಿಗೆಯವರೆಗೂ ಹೋಯಿತು. ಮುಂದುವರಿಯಲು ಆತ ಸಂಜ್ಞೆಯಿತ್ತ. ಅಗಲವಾಗುತ್ತಲಿದ್ದ ಹಾದಿಯಲ್ಲಿ ಸೈನಿಕರು ಇಬ್ಬಿಬ್ಬರಂತೆ ಸಾಲುಗಟ್ಟಿದರು.

ಬೆಳ್ಳಾರೆಯ ಮನೆಗಳಲ್ಲಿ ಅದೇ ಆಗ ದೀಪ ಹಚ್ಚುತಿದ್ದ ಹೆಂಗಳೆಯರು, ದಂಡು ಬಂದಿತೆಂಬ ಸುದ್ದಿ ಕೇಳಿದರು. ಪೇಟೆಯಲ್ಲಿ ವರ್ತಕರು ಅವಸರ ಅವಸರವಾಗಿ ಕದವಿಕ್ಕಿದರು. ಯಾರದೋ ಸೈನ್ಯ ಬಂತೆಂದು ಹಾಹಾಕಾರವೆದ್ದಿತು. ಮುನ್‌ಸೂಚನೆಯಿಲ್ಲದೆ ನದಿಯಲ್ಲಿ ಮಹಾಪೂರ ಬಂದಾಗ ಜನ ಹೆದರುವಂತೆ, ಬೆಳ್ಳಾರೆಯ ನಿವಾಸಿಗಳು ಭೀತಿಗೊಂಡರು.

ಆದರೆ, ಆ ಭಯ ನಿವಾರಣೆಯಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಜಯಘೋಷಗಳು ಆ ಕೆಲಸ ಮಾಡಿದುವು.

ಸೇನೆಗಿಂತಲೂ ಮುಂಚಿತವಾಗಿ ಸುದ್ದಿ ಓಡಿತು:

"ಕೊಡಗು ರಾಜರ ಸೈನ್ಯ ಬಂತು! ಕಲ್ಯಾಣಪ್ಪನ ದಂಡು ಬಂತು!"

ಕೋಟೆಯ ದ್ವಾರದ ವರೆಗೂ ಸೇನೆ ಸಾಗಿತು.

ರಾಮುಗೌಡ ಊರ ಪ್ರಮುಖರನ್ನು ಕರೆದ. ಕೈಜೋಡಿಸಿ ನಡುಗುತ್ತ ನಿಂತವರನ್ನು ಉದ್ದೇಶಿಸಿ ಆತ ಹೇಳಿದ:

"ಹೆದರಬೇಡಿ! ನಾವು ಬಂದದ್ದು ನಿಮ್ಮ ರಕ್ಷಣೆಗೇ. ನಮ್ಮ ಯುದ್ಧ ಕುಂಪಣಿ ಸರಕಾರದ ವಿರುದ್ಧ. ಬನ್ನಿ. ರಾಜ್ಯಪಾಲರಾದ ಕಲ್ಯಾಣಸ್ವಾಮಿ ಯವರನ್ನು ಭೇಟಿಮಾಡಿ!"

ಊರವರು ತಂದಿರಿಸಿದ ಪೀಠದ ಮೇಲೆ ಕುಳಿತು ಕಲ್ಯಾಣಸ್ವಾಮಿ, ಪ್ರಮುಖರಾದಿಯಾಗಿ ಆ ಜನರಿಗೆಲ್ಲ ಅಭಯ ನೀಡಿದ.

ಬೆಳ್ಳಾರೆಯವರು ಅಂಜಲಿಬದ್ಧರಾಗಿ ನಿಂತು ಹೇಳಿದರು.

"ನಮ್ಮಿಂದೇನಾಗಬೇಕು ಅಪ್ಪಣೆ ಕೊಡಿಸಿ."

ಕಲ್ಯಾಣಸ್ವಾಮಿ ಕೇಳಿದ:

"ನಮ್ಮ ಸೈನಿಕರಿಗೆ, ಊಟದ ಏರ್ಪಾಟು ಮಾಡೋದು ಸಾಧ್ಯ ವೇನು? ಖರ್ಚು ಎಷ್ಟಾಗ್ತದೋ ಅದನ್ನು ನಮ್ಮ ಬೊಕ್ಕಸದಿಂದ ನಾವು ಕೊಡ್ತೇವೆ."

"ಖಂಡಿತವಾಗಿ ಮಾಡ್ತೇವೆ. ಆ ಜವಾಬ್ದಾರಿ ನಮ್ಮದು. ತಾವು ಏನೂ ಕೊಡಬೇಕಾಗಿಲ್ಲ."

ರಾಮುಗೌಡನನ್ನೂ ದಂಡನಾಯಕನನ್ನೂ ಕರೆದು ಕಲ್ಯಾಣಸ್ವಾಮಿ ಹೇಳಿದ:

"ದಂಡನಾಯಕರೆ! ನಮ್ಮ ಸೈನಿಕರಿಂದ ಪ್ರಜೆಗಳಿಗೆ ಯಾವ ತೊಂದ ರೆಯೂ ಆಗದಿರಲಿ. ಅಡುಗೆ ಬಲ್ಲ ಸೈನಿಕರು ಊಟ ತಯಾರಿಸೋದರಲ್ಲಿ ಊರಿನವರಿಗೆ ಸಹಾಯಮಾಡಲಿ."

ಅಣ್ಣಿಗೌಡನನ್ನು ಕರೆದು ಆತ ಆಜ್ಞಾಪಿಸಿದ:

"ಕೋಶಾಧಿಕಾರಿಗಳೇ, ಅಗತ್ಯವಿದ್ದಷ್ಟು ಯೋಧರನ್ನು ಕರೆದು ಕೊಂಡು ನೀವು ಕೋಟೆಯ ಮೇಲೆ ಹೋಗಿ, ಖಜಾನೆಯನ್ನು ವಶಪಡಿಸಿ ಕೊಳ್ಳಿ. ಅಮಲ್ದಾರ ಅಡ್ಡಿಮಾಡಿದರೆ ಅವನನ್ನು ಬಂಧಿಸಿ! ಕಾವಲಿನವರು ಕತ್ತಿ ಹಿರಿದರೆ ಅವರನ್ನು ದಂಡಿಸಿ!"

ಬಡಪಾಯಿ ಕಾವಲುಗಾರರು ಕೈಮುಗಿದು ಹೆಬ್ಬಾಗಿಲು ತೆರೆದರು.

ಅಮಲ್ದಾರ ಬದುಕಿದರೆ ಸಾಕೆಂದು, ನಡುಗುತಿದ್ದ ಕೈಗಳಿಂದ, ಖಜಾನೆಯ ಕೀಲಿಕೈ ಒಪ್ಪಿಸಿದ. ಸಾವಿರ ವರಹಗಳಿದ್ದ ಖಜಾನೆ ದಂಡಿನ ವಶವಾಯಿತು.

ಕೋಟೆಯಲ್ಲಿಯೇ ವಸತಿಗೆ ಅನುಕೂಲವಿತ್ತೆಂದು, ಊಟ ಮುಗಿಸಿದ ಬಳಿಕ ಸೈನಿಕರು ಅಲ್ಲಿಗೆ ಹೋದರು. ಕೊಡಗಿನ ರಾಜರ ಬಾವುಟ ಕೋಟೆಯ ಮೇಲೆ ಹಾರಾಡಿತು ; ಪಂಜು ಉರಿಯಿತು.

ಮಹಾದ್ವಾರದಲ್ಲಿ ಸಶಸ್ತ್ರ ಸೈನಿಕರು ಕಾವಲು ನಿಂತರು. ಉಳಿದವರೆಲ್ಲ ನಿದ್ದೆ ಹೋದ ಮೇಲೂ ಕಲ್ಯಾಣಸ್ವಾಮಿ ಬಹಳ ಹೊತ್ತಿನ ವರೆಗೆ ದಂಡನಾಯಕರೊಡನೆ ಮುಂದಿನ ಹೆಜ್ಜೆಯನ್ನು ಕುರಿತು ಆಪ್ತಾಲೋಚನೆ ನಡಸಿದ.

ನಡುವಿರುಳು ದಾಟಿ ಒಂದು ಘಳಿಗೆಯಾಗಿತ್ತು. ಆತ ಮಲಗಿಕೊಂಡು ಆಕಾಶದತ್ತ ದಿಟ್ಟಿಸಿದಾಗ. ಅನಂತ ನಕ್ಷತ್ರಗಳಿದ್ದುವು ಮೇಲ್ಗಡೆ. ಹಕ್ಕಿಯಂತೆ ಹಾರಿ ನಕ್ಷತ್ರಗಳ ಜಾಡು ಹಿಡಿದು ಎಲ್ಲಿಗೋ ಸಾಗಬೇಕೆನಿಸಿತು ಕಲ್ಯಾಣಸ್ವಾಮಿಯ ಮನಸ್ಸಿಗೆ. ದೂರದಲ್ಲಿದ್ದ ಘಟ್ಟಗಳಾಚೆಗೆ ಕೊಡಗು ಸೀಮೆಯ ಪುಷ್ಪಗಿರಿ ಬೆಟ್ಟದ ತಪ್ಪಲಲ್ಲಿತ್ತು, ಆತನ ಹಳ್ಳಿ. ಅಷ್ಟು ಹೊತ್ತಿಗಾಗಲೇ ನಿದ್ದೆ ಹೋಗಿರಬೇಕು ತನ್ನ ತಾಯಿ ಮತ್ತು ಕೈ ಹಿಡಿದಾಕೆ. ಎಷ್ಟೊಂದು ಕಾಲವಾಯಿತು ತಾನು ಊರು ಬಿಟ್ಟು! ಐದೇ ದಿನಗಳು? ಛೆ! ಹೇಗೆ ಸಾಧ್ಯ? ಒಂದೆರಡು ವರ್ಷಗಳ ಕಾಲವೇ ತಗಲುವಷ್ಟು ಕೆಲಸವಾಗಲಿಲ್ಲವೆ ಈ ಎರಡು ಇರುಳಲ್ಲಿ – ಎರಡು ಹಗಲಲ್ಲಿ? ತಾನೂ ತನ್ನ ಸೇನೆಯೂ ಹಿಡಿದ ಮೊದಲ ದುರ್ಗ....ಇದು ಯುದ್ಧವಲ್ಲ, ವಿಹಾರ.... ಜಾತ್ರೆಗೆ ಜನ ಹೋದ ಹಾಗೆ ಈ ದಂಡಯಾತ್ರೆ. ಸಮಬಲನಾದ ವೈರಿ ಎದುರಿಗೆ ಬಂದಾಗಲೇ ಸರಿಯಾದ ಕಾಳಗ. ಸ್ವಾತಂತ್ರ್ಯ ಸೈನ್ಯದ ಸತ್ವ ಪರೀಕ್ಷೆಯಾಗುವುದು ಆಗ – ಆ ಹೊತ್ತಿನಲ್ಲಿ!

ಅದೆಲ್ಲವೂ ಮುಗಿದು ಅಂತಿಮ ವಿಜಯವನ್ನು ಘೋಷಿಸಿದ ಬಳಿಕ ಮರಳಿ ಊರಿಗೆ....

....ಯೋಚನೆ ಅಲ್ಲಿಗೆ ನಿಂತು ಶ್ವಾಸೋಚ್ಛ್ವಾಸ ಬಲವಾಯಿತು.

ತಾಯಿ ಕರೆದು ಕೇಳಿದಂತಾಯಿತು ಕಲ್ಯಾಣಸ್ವಾಮಿಗೆ.

'ಪುಟ್ಟಬಸ್ಯಾ, ನಿದ್ದೆ ಬಂತಾ?'

"ಊ" ಎಂದ ಕಲ್ಯಾಣಸ್ವಾಮಿ, ಗಾಢ ನಿದ್ದೆಯ ಸುಳಿಯೊಳಕ್ಕೆ ಸಿಲುಕುತ್ತ.

೩

ಬೆಳಗಿನ ಕೂಚು ನಡಸಿದ ಬಳಿಕ ನಂಜಯ್ಯ ಸೈನಿಕರಿಗೆ ಹೇಳಿದ:

" ಬೇಕಿದ್ದರೆ ಊರೊಳಗೆ ನೀವು ಅಡ್ಡಾಡಿ ಬರಬಹುದು. ಊಟ ಕೋಟೆಯೊಳಗೇ ಏರ್ಪಾಟಾಗ್ತದೆ. ರಾಜ್ಯಪಾಲರ ಇಸ್ತಿಹಾರಿನ ವಿವರನ್ನ ಊರವರಿಗೆ ನೀವು ತಿಳಿಸಿಕೊಡಿ. ನಮ್ಮ ಜತೆ ಸೇರೋದಕ್ಕೆ ಇಷ್ಟವಿರುವ ಗಟ್ಟಿಮುಟ್ಟಾದ ಜವ್ವನಿಗರನ್ನು ಕರಕೊಂಡು ಬನ್ನಿ. ಪೇಟೆಯಲ್ಲಿ ಶಿಸ್ತಿನಿಂದ ಗೌರವದಿಂದ ವರ್ತಿಸಿ. ಸೈನ್ಯದ ಸೂತ್ರಗಳನ್ನು ಮರೀಬೇಡಿ !"

ಕವಾಯಿತು ಮುಗಿದ ಬಳಿಕ ರಾಮಗೌಡ ಸೂಚಿಸಿದ :

" ಪುತ್ತೂರಿಗೆ ಯಾವನಾದರೊಬ್ಬನನ್ನ ಮೊದಲೇ ಕಳಿಸೋದು ವಾಸಿ. • ನಡಕೊಂಡೇ ಹೋಗ್ಲಿ."

" ಹಾಗೇ ಮಾಡಿ" ಎಂದ ಕಲ್ಯಾಣಸ್ವಾಮಿ.

ಪುತ್ತೂರಿನ ಪರಿಚಯವಿದ್ದ ತನಿಯಪ್ಪನನ್ನು ಆ ಕೆಲಸಕ್ಕೆ ರಾಮಗೌಡ ಆರಿಸಿದ.

ದಂಡನಾಯಕರೂ ದಳಪತಿಗಳೂ ಸುತ್ತು ನೆರೆದಾಗ ಕಲ್ಯಾಣಸ್ವಾಮಿ ನಂಜಯ್ಯನತ್ತ ನೋಡಿ ಹೇಳಿದ:

" ಕಾಶಿಗೆ ದೂತರನ್ನು ಇಲ್ಲಿಂದಲೆ ಕಳಿಸೋಣ, ಆಗದೆ? ಪ್ರವಾಸಕ್ಕೇ ದಿನ ಹೋಗುತ್ತದಲ್ಲ ?"

ನಂಜಯ್ಯನೆಂದ:

" ಹೌದು. ಈಗಲೆ ಕಳಿಸ್ಬೇಕು. ಯಾತ್ರೆ ಹೊರಟವರೊಂತ್ಲೇ ದೂತರು ಹೋಗೋದು ಅಗತ್ಯ. ಕುದುರೆ ಸವಾರಿ ಮಾಡೋಹಾಗೂ ಇಲ್ಲ. ಹಾದಿಯಲ್ಲಿ ಇಂಗ್ಲಿಷರ ಕೈಗೆ ಬೀಳಬಾರದು. ಯಾತ್ರಿಕರು ಸಿಕ್ಕಿಯೇ ಸಿಗ್ತಾರೆ. ಅವರ ಜತೆ ಸೇರ್ಕೊಂಡೇ ಹೋಗ್ಬೇಕು."

" ಮಹಾರಾಜರು ಇನ್ನು ತಡಮಾಡೋದು ಸರಿಯಲ್ಲ. ವೇಷಪಲ್ಲಟ ಮಾಡಿ ಈ ಸೀಮೆಗೆ ಬಂದುಬಿಡಬೇಕೂಂತ ತಿಳಿಸೋಣ."

" ಸರಿ."

" ದೂತರನ್ನು ನೀವೇ ಆರಿಸಿ. ಇಬ್ಬರು ಸಾಕು ಅಲ್ವೆ? ಒಬ್ಬನಿಗಾ

ದರೂ ಹಿಂದೂಸ್ಥಾನಿ ಬರ್ತಿರ್ಬ್ಬೇಕು."

"ಹೌದು. ಗೊತ್ತಾಗ್ತಿದ್ದೀನಿ."

"ಮಾಚಯ್ಯ ಹೇಗೆ?"

"ಒಬ್ಬ ಆತನೇ. ಇನ್ನೊಬ್ಬನನ್ನು ಸೋಮಯ್ನೋರನ್ನ ಕೇಳಿ ಆರಿಸ್ತೀನಿ."

"ಸರಿ."

....ಆ ಆಯ್ಕೆ ಮುಗಿಯಿತು. ಮಧ್ಯಾಹ್ನದ ಊಟವಾದೊಡನೆ, ಕಾಶಿಯಲ್ಲಿ ರಾಜರಿಗೆ ತಲಪಿಸಬೇಕಾದ ಸಂದೇಶ ಪಡೆದು, ಮಾಚಯ್ಯ ಇನ್ನೊಬ್ಬನೊಡನೆ ಹೊರಡಲನುವಾದ. ಬಂದೂಕು ಖಡ್ಗಗಳಿರಲಿಲ್ಲ. ಕುದುರೆ ಇರಲಿಲ್ಲ. ಅವರು ಬರಿಯ ಯಾತ್ರಿಕರು ಅವರು ಅಲ್ಲಿಂದ ಹೊರ ಬಿದ್ದುದೂ ಗುಪ್ತವಾಗಿಯೇ – ಸೈನಿಕರಿಗೂ ತಿಳಿಯದಂತೆ. ಊರು ನೋಡಲೆಂದು ಆ ಇಬ್ಬರು ಹೋದರು. ಮರಳಿ ಬರಲಿಲ್ಲ, ಅಷ್ಟೆ.

"ಎಲ್ಲಿ ಮಾಚಯ್ಯ?" ಎಂದು ಗುರುತಿನವರು ಕೇಳಿದಾಗ ದೊರೆತ ಉತ್ತರವಿಷ್ಟೆ:

"ರಾಜ್ಯಪಾಲರು ಎಲ್ಲಿಗೋ ಕಳಿಸವರೆ."

....ಬೇರೆಯೂ ಇಬ್ಬರು ಓಲೆಕಾರರ ಅಗತ್ಯವಿತ್ತು.

ಕಲ್ಯಾಣಸ್ವಾಮಿ ಕೇಳಿದ:

"ಕೊಡಗು ಸೀಮೆಗೂ ಇಲ್ಲಿಂದ ಓಲೆ ಕಳಿಸೋಣ, ಏನು ಹೇಳ್ತೀರಾ?"

ನಂಜಯ್ಯನೆಂದ:

"ನಾನೂ ಅದನ್ನೇ ಸೂಚಿಸ್ಬೇಕೂಂತಿದ್ದೆ."

"ಏನು ತಿಳಿಸೋಣ?"

ನಡುವೆ ಬಾಯಿ ಹಾಕಿ ಚೆಟ್ಟಿಯೆಂದ:

"ಇನ್ನೇನು ತಿಳಿಸೋದು? ಹೊರಟು ಬನ್ನಿ ಅಂತ."

"ಬಂದು ನಮ್ಮನ್ನು ಸೇರಿಕೊಳ್ಳಲಿ, ಅಲ್ವೆ?"

"ಹೂಂ."

ಅದು, ಇಸ್ತಿಹಾರಿನ ರೂಪದಲ್ಲಿದ್ದ ಓಲೆ. ಎಲ್ಲಾ ಸರದಾರರಿಗೆ ದೇಶಪ್ರೇಮಿಗಳಿಗೆ. ಅದು ರಾಜರ ಹೆಸರಲ್ಲಿ, ಪವಿತ್ರವಾದ ಸ್ವಾತಂತ್ರ್ಯದ ಹೆಸರಲ್ಲಿ, ಕೊಡಲಾದ ಕರೆ.

‘ ರಾಜಭಕ್ತಿಯುಳ್ಳ ಪ್ರಜೆಗಳಿಗಳೆಲ್ಲರೂ ಆಯುಧ ಸಹಿತವಾಗಿ ಬಂದು ತಮ್ಮನ್ನು ಸೇರಬೇಕೆ’ಂದು, ರಾಜ್ಯಪಾಲ ಕಲ್ಯಾಣಸ್ವಾಮಿ ಆ ಇಸ್ತಿಹಾರಿನಲ್ಲಿ ಆದೇಶವಿತ್ತ.

ಓಲೆಕಾರರು, ಬಾಯ್ದೆರೆಯಾಗಿಯೂ ದಂಡಿನ ಮುನ್ನಡೆಯನ್ನು ಬಣ್ಣಿಸಲು ತರಬೇತು ಪಡೆದರು.

ಹೀಗೆ, ಊರು ನೋಡಲೆಂದೇ ಸಶಸ್ತ್ರರಾಗಿ ಹೊರಟ ಆ ಇಬ್ಬರು ಯೋಧರೂ ಹಿಂದಿರುಗಲಿಲ್ಲ.

ಸಂಜೆ ಊರಪ್ರಮುಖರನ್ನು ಕಲ್ಯಾಣಸ್ವಾಮಿ ಬರಹೇಳಿದ. ಬಂದವರನ್ನು, ಹಾಸಿದ್ದ ಜಮಖಾನದ ಮೇಲೆ ಕುಳಿತುಕೊಳ್ಳಲು ಸೂಚಿಸುತ್ತ ಆತನೆಂದ:

“ ನಾವು ಕೈಗೊಂಡಿರುವ ಈ ಯುದ್ಧದ ಉದ್ದೇಶ ಅರ್ಥವಾಯ್ತೆ ?”

ಅವರಲ್ಲಿ ಹಿರಿಯನಂತಿದ್ದ ಒಬ್ಬ ನುಡಿದ:

“ ನಿನ್ನೆ ರಾತ್ರೆ ಸ್ಪಷ್ಟವಾಗಿರಲಿಲ್ಲ ಸ್ವಾಮಿ. ಈಗ ತಿಳೀತು.”

“ ನಮ್ಮ ಸೈನಿಕರು ನಿಮಗೇನಾದರೂ ತೊಂದರೆ ಕೊಟ್ಟರೆ?”

“ ಇಲ್ಲ ಸ್ವಾಮಿಯವರೆ.”

“ ನಿನ್ನೆ ರಾತ್ರೆ ಸಂಶಯ ಪಡುತ್ತಲೆ ನೀವು ಊಟ ಹಾಕಿದಿರಿ. ರಾತ್ರೆ ನಮ್ಮ ದಂಡು ಲೂಟ ಮಾಡ್ತದೇನೋ ಅಂತ ನೀವು ಸರಿಯಾಗಿ ನಿದ್ದೆ ಮಾಡ್ಲಿಲ್ಲ, ಅಲ್ವೆ ?”

ಆ ಮಾತಿನಲ್ಲಿದ್ದ ವಿಶ್ವಾಸದ ಧ್ವನಿಯನ್ನು ಗುರುತಿಸಿ, ತಪ್ಪೊಪ್ಪಿಕೊಳ್ಳುವಂತೆ ಆ ಪ್ರಮುಖರು. ನಸುನಕ್ಕರು.

ಕಲ್ಯಾಣಸ್ವಾಮಿ ತಾನೂ ಮುಗುಳ್ನಕ್ಕು ಹೇಳಿದ:

“ ನಾಳೆ ಬೆಳಗ್ಗೆ ನಮ್ಮ ಸೈನ್ಯ ಪುತ್ತೂರಿಗೆ ಹೊರಡ್ತದೆ. ಅಲ್ಲಿಂದ ಮುಂದೆ ಹೋಗಿ ಮಂಗಳೂರನ್ನು ವಶಪಡಿಸಿಕೊಳ್ತೇವೆ. ಕುಂಪಣಿ ಸರಕಾರ ನಿರ್ನಾಮವಾಗೋವರೆಗೂ ನಮ್ಮ ಯುದ್ಧ ನಡೀತದೆ. ಸ್ವತಂತ್ರರಾಗಿ ಇರೋದು ನಿಮಗೆ ಇಷ್ಟವೋ ?”

ಪ್ರಮುಖರಲ್ಲಿ ಹಿರಿಯ ಹೇಳಿದ:

“ ಎಂಥ ಪ್ರಶ್ನೆ ಕೇಳ್ತೀರಿ ಸ್ವಾಮಿಯವರೆ ? ಅನ್ನ ಬೇಡ, ಅಮೇಧ್ಯ ಬೇಕು–ಅಂತ ಯಾರಾದರೂ ಕೇಳೋದುಂಟೆ ?”

ಆತನನ್ನೆ ದಿಟ್ಟಿಸಿ ನೋಡಿ ಕಲ್ಯಾಣಸ್ವಾಮಿ ಕೇಳಿದ:

"ಹಾಗಾದರೆ ನೀವು ನಮಗೇನು ಕೊಡ್ತೀರಿ?"

ಹಿರಿಯ, ಉಳಿದವರ ಮುಖನೋಡುತ್ತ ಹೇಳಿದ:

"ಏನು ಬೇಕಾದರೂ ಕೊಡ್ತೇವೆ."

"ರತ್ನಾಭರಣಗಳು, ಹಣ, ವಸ್ತ್ರ?"

"ಆಗಲಿ."

"ಇಲ್ಲಿ ಕೇಳಿ, ಇಂಥದೊಂದೂ ನಮಗೆ ಬೇಕಾಗಿಲ್ಲ. ಹೋರಾಡೋದಕ್ಕೆ ಗೊತ್ತಿರೋ ಯುವಕರು ನಮಗೆ ಬೇಕು! ಶಸ್ತ್ರಾಸ್ತ್ರಗಳು ಬೇಕು!"

"ನಮ್ಮೂರಿನಿಂದ ಮುನ್ನೂರರಷ್ಟು ಜನ ಆಗಲೆ ಹೊರಟಿದ್ದಾರೆ ಸ್ವಾಮಿಯವರೆ. ಇದ್ದ ಶಸ್ತ್ರಗಳನ್ನೆಲ್ಲ ಅವರು ಒಟ್ಟುಕೂಡಿಸಿದ್ದಾರೆ."

"ಸಂತೋಷ. ಹಾಗಾದರೆ ತಾತ್ಕಾಲಿಕವಾಗಿ ಬೆಳ್ಳಾರೆಗೊಬ್ಬ ಸುಭೇದಾರರನ್ನು ನೀವೇ ಆರಿಸಿ."

ಆ ಹಿರಿಯನ ಕಡೆಗೇ ಹಲವು ಕಣ್ಣುಗಳು ನೆಟ್ಟುವು. ಅವರ ಅಪೇಕ್ಷೆಯನ್ನು ಅರಿತು ಕಲ್ಯಾಣಸ್ವಾಮಿಯೆಂದ:

"ಒಳ್ಳೇದು. ನಿಮ್ಮ ಈ ಮುಖಂಡರೇ ಸುಭೇದಾರರು. ನೀವು ಒಂದು ಕೆಲಸ ಮಾಡ್ಬೇಕು. ಕಡಬ ಪಂಜಗಳ ಪ್ರಜೆಗಳಿಗೂ ನಮ್ಮ ಇಸ್ತಿಹಾರಿನ ವಿವರ ತಲಪಿಸ್ಬೇಕು."

"ಆಗಬಹುದು."

"ನಮ್ಮ ದಂಡಿಗೆ ಸೇರುವವರನ್ನೆಲ್ಲಾ ಪ್ರೀತಿಯಿಂದ ಕಳಿಸ್ಕೊಡಿ. ಇವತ್ತು ರಾತ್ರೆ ನಮ್ಮ ಸೈನಿಕರಿಗೆ ಒಳ್ಳೇ ಊಟ ಹಾಕಿ. ಮಾಂಸಾಹಾರಿಗಳಿಗೆ ಮಾಂಸ, ಸಸ್ಯಾಹಾರಿಗಳಿಗೆ ಅವರಿಗೆ ಬೇಕಾದ್ದು. ನಿಮಗೆ ತೊಂದರೆಯಾಗೋದಿಲ್ಲ ತಾನೆ?"

"ಎಂಥಾ ತೊಂದರೆ? ನಮ್ಮ ಮಕ್ಕಳಿಗೆ ನಾವು ಊಟ ಹಾಕೋದು ತೊಂದರೆಯೆ?"

....ಮಾತಿಗೆ ತಪ್ಪದೆ ಊರಿನ ಪ್ರಮುಖರು ಆ ರಾತ್ರೆ ಅದ್ದೂರಿಯ ಔತಣ ಏರ್ಪಡಿಸಿದರು. ಮಾರನೆಯ ದಿನಕ್ಕೆಂದು ಬುತ್ತಿ ಕಟ್ಟಿಕೊಟ್ಟರು.

ಧನಕನಕಗಳನ್ನು ಕೇಳದ ಕಲ್ಯಾಣಸ್ವಾಮಿಗೆ, ಆ ಊರಿನಲ್ಲಿದ್ದ ಒಳ್ಳೆಯ ಮೂರು ಕುದುರೆಗಳನ್ನು ಅವರು ತಂದೊಪ್ಪಿಸಿದರು.

....ಮುಂಜಾವದಲ್ಲೆ ಸಹಸ್ರ ಜನರ ದಂಡು ಮುಂದೆ ಹೊರಟಿತು. ವೇಗವಾಗಿ ನಡೆದರೆ ಪುತ್ತೂರಿಗೆ ಒಂದೇ ಹೊತ್ತಿನ ಹಾದಿ. ಆದರೆ, ಅಗತ್ಯವಿಲ್ಲದೆ ಸೈನಿಕರು ಬಿಸಿಲಲ್ಲಿ ದಣಿಯಬಾರದೆಂದು, ನೀರು ತಣುಪುಗಳಿದ್ದ ಕಡೆ ಮಧ್ಯಾಹ್ನದ ವಿಶ್ರಾಂತಿಯನ್ನು ರಾಮಗೌಡ ಏರ್ಪಡಿಸಿದ.

ಬುತ್ತಿಯುಂಡು ನೀರು ಕುಡಿದು ದಣಿವಾರಿಸಿದ ಬಳಿಕ ಮತ್ತೆ ನಡಿಗೆ. ಬಿಸಿಲು ಕಡಮೆಯಾಗುತ್ತಿದ್ದಂತೆಯೇ ಪುತ್ತೂರನ್ನು ಅವರು ಸಮೀಪಿಸಿದರು. ಹಿಂದಿನ ದಿನವೇ ಬಂದು ಊರಲ್ಲೆಲ್ಲಾ ಸುತ್ತಾಡಿದ್ದ ತನಿಯಪ್ಪ, ದಂಡು ಬರುವುದನ್ನೇ ಇದಿರುನೋಡುತ್ತ ಊರಹೊರಗೆ ನಿಂತಿದ್ದ. ಆತನ ಮುಖದ ಮೇಲೆ ಸಂತೋಷದ ಚಿಹ್ನೆಯೂ ಇರಲಿಲ್ಲ; ಕಾತರದ ಭಾವವೂ ಇರಲಿಲ್ಲ.

ತನಿಯಪ್ಪನ ಹತ್ತಿರ ಬರುತ್ತ ನಂಜಯ್ಯ ಕೇಳಿದ:

" ಏನಪ್ಪಾ, ಏನು ಸಮಾಚಾರ ?"

" ದಂಡು ಬರುವ ವಿಷಯ ಪುತ್ತೂರಲ್ಲಿ ಈಗಾಗಲೇ ಸುದ್ದಿ ಹಬ್ಬಿದೆ."

" ರಾಮಪ್ಪಯ್ಯ ಸಾಯೋದಕ್ಕೆ ಮುಂಚೆಯೇ ಕುಂಪಣಿ ಸರಕಾರಕ್ಕೆ ಬಂಡಾಯದ ಸಂಗತಿ ಗೊತ್ತಾಗಿರ್‍ಬೇಕು," ಎಂದು ತರ್ಕಿಸಿದ ಅಣ್ಣಿಗೌಡ.

" ಜನರು ಏನು ಹೇಳ್ತಾರೆ ?"

" ವರ್ತಕರೇನೋ ಹೆದರ್‍ಕೊಂಡಿದಾರೆ."

[" ದುಡ್ಡಿರೋರು ಯಾವಾಗಲೂ ಅಷ್ಟೆ. ಸೈನ್ಯ ಅಂದರೆ ಭಯ," ಎಂದ ರಾಮಗೌಡ.]

" ಜನ ಸಾಮಾನ್ಯರು ?" ಎಂದು ಕೇಳಿದ ಕಲ್ಯಾಣಸ್ವಾಮಿ.

" ಕುಂಪಣಿ ಸರಕಾರ ಸೋತ್ಹೋಗೋದು ಖಂಡಿತ ಅಂತ ಮಾತಾಡಿಕೊಳ್ತಿದ್ದಾರೆ."

" ನಮ್ಮ ಇಸ್ತಿಹಾರಿನ ವಿವರ ಅವರಿಗೆ ಗೊತ್ತಿರಲಾರದು."

" ಇಲ್ಲ. ಗೊತ್ತಾದಾಗ ಅವರಿಗೆಲ್ಲ ಸಂತೋಷವಾಗೋದರಲ್ಲಿ ಸಂದೇಹವೇ ಇಲ್ಲ."

" ಬೇರೇನು ಸುದ್ಧಿ ?"

" ಜಿಲ್ಲೆಯ ಕಲೆಕ್ಟರು ನಿನ್ನೆ ಮಂಗಳೂರಿಂದ ಪುತ್ತೂರಿಗೆ ಬಂದ."

ನಂಜಯ್ಯ ಹುಬ್ಬು ಕುಣಿಸಿ ಹೇಳಿದ:

"ಆಹಾ ! ಅದೇ ಮುಖ್ಯ ವಿಷಯ !"

"ಆದರೆ ಇವತ್ತು ಕುದುರೆ ಹತ್ಕೊಂಡು ವಾಪಸು ಹೊರಟ್ಹೋದ !"

"ಯಾಕೆ, ಏನಾಯ್ತಂತೆ? "ಎಂದು ಕೇಳಿದ ರಾಮುಗೌಡ.

"ಮಂಗಳೂರಿನ ಬಂದೋಬಸ್ತಿನ ಏರ್ಪಾಟು ಮಾಡ್ಬೇಕೂಂತ ಹೋದನಂತೆ! "

"ಹಾಗೋ! "

ಕಲ್ಯಾಣಸ್ವಾಮಿ ಕೇಳಿದ:

"ಹಾಗಾದರೆ ಸರಕಾರದ ಕಡೆಯೋರು ಪುತ್ತೂರಿನಲ್ಲಿ ಯಾರಿದ್ದಾರೆ?"

"ಶಿರಸ್ತೇದಾರ. ಕರಣಿಕ ದೇವಪ್ಪಯ್ಯ ಅಂತ."

"ಜೋರಾದ ಆಸಾಮಿ !" ಎಂದ ರಾಮುಗೌಡ, ದೇವಪ್ಪಯ್ಯನನ್ನು ಕುರಿತು.

ಕಲ್ಯಾಣಸ್ವಾಮಿ ತನಿಯಪ್ಪನೊಡನೆ ವಿಚಾರಿಸಿದ :

"ಕಚೇರಿಯಲ್ಲಿ ಸೈನ್ಯ ಇಟ್ಟಿದಾರೇನು ?"

"ಸೈನ್ಯವಿಲ್ಲ. ಕಾವಲಿನವರೇನೋ ಸಿಪಾಯಿಗಳು ಕೆಲವರಿದ್ದಾರೆ."

"ಹಾಗಾದರೆ ಇವತ್ತೂ ಯುದ್ಧ ಇಲ್ಲ," ಎಂದ ನಂಜಯ್ಯ ನಿರಾಶೆಯಿಂದ.

ಕಲ್ಯಾಣಸ್ವಾಮಿ ರಾಮುಗೌಡನನ್ನು ಕೇಳಿದ :

"ಹೊರಡೋಣವೊ ?"

"ಓಹೋ! ಹಗಲು ಹೊತ್ತಿನಲ್ಲೇ ನಮ್ಮ ದಂಡನ್ನು ಜನ ನೋಡಲಿ."

....ಹಗಲು ಹೊತ್ತಿನಲ್ಲೇ ಪುತ್ತೂರಿನ ಜನ ದಂಡನ್ನು ನೋಡಿದರು. ಉರಿಯುತಿದ್ದ ದೀವಟಿಗೆ, ಬಾವುಟ. ಕುದುರೆ ಸವಾರರು, ಕಾಲಾಳುಗಳು. ಬಂದೂಕಿನಿಂದ ಹಿಡಿದು ಕೊತ್ತಳಿಗೆಯ ವರೆಗೆ ಆಯುಧಗಳು. ಚಿತ್ರ ವಿಚಿತ್ರ ಸೈನಿಕರು.

ಸೈನ್ಯ ದಾಟುತಿದ್ದರೆ, ಬೀದಿಯ ಮೂಲೆಗಳಲ್ಲಿ, ರಾಜ್ಯಪಾಲ ಕಲ್ಯಾಣ ಸ್ವಾಮಿಯ ಇಸ್ತಿಹಾರನ್ನು ರಾಮುಗೌಡ ಓದಿಸಿದ. ಮನೆ ಬಾಗಿಲುಗಳನ್ನು ಮುಚ್ಚಿದರೂ ಮಳಿಗೆಗಳಿಗೆ ಕದವಿಕ್ಕಿದರೂ ಜನರು ಆ ಇಸ್ತಿಹಾರಿನ ವಿವರಕ್ಕೆ ಕಿವಿಗೊಟ್ಟರು. ಜಯಘೋಷಗಳನ್ನು ಅರ್ಥಮಾಡಿಕೊಳ್ಳುತ್ತ ಅವರು, ಬೆರಗುಗಣ್ಣಿನಿಂದ, ಸಾಗುತಿದ್ದ ಸೇನೆಯನ್ನು ದಿಟ್ಟಿಸಿದರು.

ರಾಮುಗೌಡನ ಸೂಚನೆಯಂತೆ, ಆಗಲೆ ಕುದುರೆಯನ್ನೇರಿದ್ದ ತನಿಯಪ್ಪನ ನೇತೃತ್ವದಲ್ಲಿ ಐವರು ಸವಾರರು, ಕಚೇರಿಗೆ ಮುಂದಾಗಿಯೆ ಧಾವಿಸಿದರು. ಅಲ್ಲಿಂದ ಹೊರಬೀಳಲೆತ್ನಿಸುತಿದ್ದ ಕರಣಿಕ ದೇವಪ್ಪಯ್ಯನನ್ನು ಬಂಧಿಸಿದರು. ಬಂದೂಕುಗಳನ್ನು ಬಿಸುಟು ಓಡುತಿದ್ದ ಕಾವಲುಗಾರರಲ್ಲಿ, ಕೈಗೆ ಸಿಕ್ಕಿದ ಇಬ್ಬರು ಮೂವರನ್ನು ಹಿಡಿದರು.

ಕಚೇರಿಯ ಎದುರು ಸೇನೆ ನೆರೆದಂತೆ, ಕಲ್ಯಾಣಸ್ವಾಮಿ ಕಟ್ಟಡವನ್ನು ಪ್ರವೇಶಿಸಿದ. ಆ ಭವನದಲ್ಲೊಂದು ಕಡೆ ವಿಕ್ಟೋರಿಯಾ ರಾಣಿಯ ಚಿತ್ರವನ್ನು ತೂಗಹಾಕಿ, ಕೆಳಗೆ ಈಸ್ಟ್ ಇಂಡಿಯಾ ಕಂಪೆನಿಯ ಅಂಕಿತವನ್ನು ಬರೆದಿದ್ದರು. ಅಲ್ಲೇ ನೆಲದ ಮೇಲೆ ಭವ್ಯವಾದೊಂದು ಆಸನವಿತ್ತು.

ಕಲ್ಯಾಣಸ್ವಾಮಿ ಗಟ್ಟಿಯಾಗಿ ನಕ್ಕು ಹೇಳಿದ:

"ಕುಂಪಣಿ ಸರಕಾರ ಅಂತ ಒಂದು ಇದೆ ಅನ್ನೋದಕ್ಕೆ ಇದು ಸಾಕ್ಷ್ಯ."

ನಂಜಯ್ಯ ಕೇಳಿದ:

"ಕಲೆಕ್ಟರ್ ಸಾಹೇಬ ಕೂತುಕೊಳ್ಳೋ ಪೀಠವೋ ಅದು?"

"ಹೌದು" ಎಂದ, ಗುಂಪಿನಲ್ಲಿದ್ದ ಒಬ್ಬ.

ಕಲ್ಯಾಣಸ್ವಾಮಿ ಆ ಆಸನವೆಡೆಗೆ ಸಾಗಿ ಎಡಗೈಯಿಂದ ಅದನ್ನು ಹಿಡಿದು ಅತ್ತಿತ್ತ ಸರಿಸಿದ.

"ರಾಜ್ಯಪಾಲರು ಕಚೇರಿ ನಡಸಬೇಕು," ಎಂದ ರಾಮುಗೌಡ.

ಕಲ್ಯಾಣಸ್ವಾಮಿ ನಕ್ಕು, ಆ ಪೀಠದ ಮೇಲೆ ಕುಳಿತು, ನುಡಿದ:

"ಎಲ್ಲಿ ಆ ಕರಣಿಕ? ಕರಕೊಂಡು ಬನ್ನಿ."

ಕತ್ತಿ ಕೋವಿ ದೊಣ್ಣೆಗಳನ್ನು ಹಿಡಿದ ಭಟರು ಆ ಆಸನದ ಸುತ್ತಲೂ ನಿಂತರು. ಸೇನೆಯ ಪ್ರಮುಖರಿದ್ದರು ಎರಡು ಬದಿಗಳಲ್ಲೂ.

ಹಗ್ಗದಿಂದ ಎರಡೂ ಕೈಗಳನ್ನು ಬಿಗಿದುಕಟ್ಟಿದ್ದ ಕೈದಿ ದೇವಪ್ಪಯ್ಯನನ್ನು ಕಲ್ಯಾಣಸ್ವಾಮಿಯ ಎದುರು ತಂದು ನಿಲ್ಲಿಸಿದರು.

"ನೀನೆ ಏನು ಕರಣಿಕ ದೇವಪ್ಪಯ್ಯ?"

ಕಲ್ಯಾಣಸ್ವಾಮಿಯ ಮಾತಿಗೆ ದೇವಪ್ಪಯ್ಯ ಉತ್ತರವೀಯಲಿಲ್ಲ. ಮಧ್ಯ ವಯಸ್ಸಿನ ಮನುಷ್ಯ. ದಪ್ಪಗಿನ ಕುಳ್ಳ ದೇಹ. ಎರಡೂ ಕಡೆಗಳಿಗೆ ಇಳಿದಿದ್ದ ಮೀಸೆ. ಅಗಲವಾದ ಕಣ್ಣುಗಳು. ಕೈದಿಯಾಗಿದ್ದರೂ ಅಹಂಕಾರ ಮೂರ್ತಿಮತ್ತಾಗಿತ್ತು.

ಆತನನ್ನು ಹಿಡಿದಿದ್ದ ಸೈನಿಕ ಆತನ ಮೈಮೇಲಿದ್ದ ಅಂಗಿಯನ್ನು ಹಿಡಿದು ತಿರುವುತ್ತ ಗದರಿದ:

"ಬೊಗಳೋ! ಮಾತು ಬರದೇನು?"

"ಸುಮ್ನಿರು, ಅಪಮಾನ ಮಾಡ್ಬೇಡ" ಎಂದ ಕಲ್ಯಾಣಸ್ವಾಮಿ.

ಬಳಿಕ ದೇವಪ್ಪಯ್ಯನೆಡೆಗೆ ತಿರುಗಿ, ಆತನೆಂದ:

"ಏನಪ್ಪಾ, ಇನ್ನು ನೀನು ನಮ್ಮ ಕರಣಿಕನಾಗ್ತೀಯ?"

ದೇವಪ್ಪಯ್ಯ ತಿವಿಯುವ ದೃಷ್ಟಿಯಿಂದ ಕಲ್ಯಾಣಸ್ವಾಮಿಯನ್ನು ನೋಡುತ್ತ ಹೇಳಿದ:

"ನಾನು ನಿಮ್ಮಂಥ ದರೋಡೆಖೋರರ ಚಾಕರಿ ಮಾಡುವವನಲ್ಲ!"

ಸೋಮಯ್ಯ ಸಿಟ್ಟು ತಡೆಯಲಾರದೆ ಗುಡುಗಿದ:

"ಮುಚ್ಚು ಬಾಯಿ!"

ದೇವಪ್ಪಯ್ಯನ ಉದ್ಧಟತನವನ್ನು ಕಂಡು ಕನಲಿದ ಕಲ್ಯಾಣ ಸ್ವಾಮಿಯೂ ಆಕ್ರೋಶಮಾಡಿದ:

"ಎಂಥ ಧೈರ್ಯ! ಹುಂ! ನೀನು ಯಾರ ಜತೆಯಲ್ಲಿ ಮಾತ ನಾಡ್ತಿದೀ ಗೊತ್ತಿದೆಯೇನು? ಹೀಗೆ ಇದಿರಾಡಿದರೆ ನಿನ್ನ ತಲೆ ಕಡಿಸಿಬಿಟ್ಟೇವು. ಹುಷಾರ್!"

ಕಲ್ಯಾಣಸ್ವಾಮಿ ಕ್ರುದ್ಧನಾದುದನ್ನು ಮೊದಲಬಾರಿಗೆ ಕಂಡ ಹಲವ ರಿಗೆ ಆ ಧ್ವನಿ ಕೇಳಿ ರೋಮಾಂಚವಾಯಿತು.

ದೇವಪ್ಪಯ್ಯನ ಅವಸ್ಥೆ ಮುಗಿದಂತೆಯೇ ಎಂದು ಭಾವಿಸಿದರು ಅಲ್ಲಿ ನೆರೆದಿದ್ದವರು.

ಒಂದು ಕ್ಷಣ ಕಲ್ಯಾಣಸ್ವಾಮಿ ದುರದುರನೆ ದೇವಪ್ಪಯ್ಯನನ್ನು ನೋಡುತಿದ್ದು ಸೈನಿಕರಿಗೆ ಆಜ್ಞಾಪಿಸಿದ:

"ಈತನನ್ನು ಸೆರೆಯಲ್ಲಿಟ್ಟುಕೊಳ್ಳಿ! ಜತೆಯಲ್ಲಿ ಈ ಪ್ರಾಣಿಯನ್ನು ತೆಗೆದುಕೊಂಡು ಹೋಗೋಣ. ಇತರರಿಗೆ ಪಾಠವಾಗಲಿ!"

....ಊರಪ್ರಮುಖರು ರಾಜ್ಯ ಪಾಲರ ಭೇಟಿಗೆ ಬಂದರು. ವರ್ತಕರು ಅಭಯ ಬೇಕೆಂದರು.

ಅವರೆಲ್ಲರೂ ಹೇಳಿದರು:

"ನಮ್ಮಿಂದೇನಾಗಬೇಕೊ ಅಪ್ಪಣೆ ಕೊಡಿಸ್ಲಿ."

ಸರಕಾರದ ಖಜಾನೆಯನ್ನಾಗಲೆ ವಶಪಡಿಕೊಂಡಿದ್ದ ಅಣ್ಣಿಗೌಡನನ್ನು ನೋಡುತ್ತ ಕಲ್ಯಾಣಸ್ವಾಮಿಯೆಂದ :

"ನಿಮ್ಮ ಹಣ ನಮಗೆ ಬೇಕಾಗಿಲ್ಲ. ಆದರೆ ಜನಬಲ ಶಸ್ತ್ರ ಸಾಮಗ್ರಿ ಎಷ್ಟಿದ್ದರೂ ಸಾಲದು. ಇಸ್ತಿಹಾರನ್ನು ಕೇಳಿದಿರಿತಾನೆ? ನಿಮ್ಮ ದೇಶ ಪ್ರೇಮದ ವಿಷಯಯಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಜನರು ತಾವಾಗಿಯೇ ನಮ್ಮ ಕಡೆ ಸೇರ್‍ತಾರೇಂತ ನಾವು ನಂಬಿದೇವೆ."

"ಆಗಲಿ ಸ್ವಾಮಿ. ನಮ್ಮ ಕೈ ಮೀರಿ ಪ್ರಯತ್ನಿಸ್ತೇವೆ. ಬೇರೆ ನಮ್ಮಿಂದೇನಾದರೂ—"

ನಂಜಯ್ಯ ಮಧ್ಯೆ ಪ್ರವೇಶಿಸಿ ಕಲ್ಯಾಣಸ್ವಾಮಿಯ ಕಡೆ ನೋಡಿ ಹೇಳಿದ :

"ಇಲ್ಲಿ ನಮ್ಮ ಅಡುಗೆ ನಾವೇ ಮಾಡ್ಕೊಳ್ಳಬೌದು. ಬೆಲೆ ತಗೊಂಡು ಅಕ್ಕಿ ಬೇಳೆ ಕೊಡಲಿ. ಪಾತ್ರೆಗಳು ಸಿಗ್ತಾವೆಯೊ?"

ವರ್ತಕರು ಹೇಳಿದರು:

"ಬೆಲೆ ತೆಗೆದುಕೊಳ್ಳುವುದು ಅಂದರೇನು? ದಯವಿಟ್ಟು ಈ ಸರಬರಾಜಿನ ವಿಷಯ ಯೋಚಿಸ್ಬೇಡಿ...."

ರಾಮಗೌಡನೊಡನೆಯೂ ನಂಜಯ್ಯನೊಡನೆಯೂ ವಿಚಾರವಿನಿಮಯ ಮಾಡಿದ ಬಳಿಕ, ಕಲ್ಯಾಣಸ್ವಾಮಿ ಕಚೇರಿಯಿಂದ ಹೊರಬಂದ. ಆತನ ಜತೆಯಲ್ಲೇ ಇದ್ದ ದಂಡನಾಯಕ ನಂಜಯ್ಯ, ಸೇನೆಯನ್ನುದ್ದೇಶಿಸಿ ಹೇಳಿದ:

"ದೇವಸ್ಥಾನದ ಬಯಲಲ್ಲಿ ನಮ್ಮ ಸೈನ್ಯದ ಶಿಬಿರ. ಅಲ್ಲೇ ಡೇರೆ ಹೊಡೆಯೋದಕ್ಕೆ ಏರ್ಪಾಟು ಮಾಡ್ತೇವೆ. ಶಿಸ್ತಿನಿಂದ ಸೈನ್ಯ ಅಲ್ಲಿಗೆ ಸಾಗಲಿ!"

ದೇವಸ್ಥಾನದ ಬಯಲಿಗೆ ಹಾದಿಯನ್ನು ತೋರಿಸಲೆಂದು ಕುದುರೆಯನ್ನೇರಿ ರಾಮಗೌಡ, ಬಾವುಟ ಹಿಡಿದಿದ್ದ ಕರಿಯಪ್ಪನ ಮಗ್ಗುಲಿಗೆ ಬಂದ.

## ೪

ಮೂರನೆಯ ದಿನ ದಂಡು ಊರೆಲ್ಲ ಸುತ್ತಿತು. ಅದು ಸೇನೆಯ ಶಕ್ತಿ ಪ್ರದರ್ಶನ. ಎಳೆಯರ ಹಿಂಡು ದಂಡನ್ನು ಹಿಂಬಾಲಿಸಿತು. ಇಂಗ್ಲಿಷರೊಡನೆ ಹೋರಾಡುವ ಸಾಮರ್ಥ್ಯ ಇವರಿಗಿದೆಯೇ ಎಂದು ಕೆಲವರು ಶಂಕಿಸಿದರೆ, ಹಲವರು, ಕುಂಪಣಿ ಸರಕಾರಕ್ಕೆ ಸೋಲು ಖಂಡಿತ ಎಂದು ಭಾವಿಸಿದರು. ಅಂತಹ ಹೋರಾಟದ ಕಲ್ಪನೆಯಿಂದ ಸ್ಫೂರ್ತಿಗೊಂಡು, ತಾವೂ ಸೈನಿಕರಾಗಲು ಎಷ್ಟೋ ಜನ ಬಯಸಿದರು.

ಸುಳ್ಯದಿಂದ ಹೊರಟಾಗ ಇದ್ದ ಸೈನಿಕರ ಸಂಖ್ಯೆ ಸುಲಭವಾಗಿ ಇಮ್ಮಡಿಯಾಯಿತು.

ಸೇನೆಗೆ ಸೇರುತಿದ್ದ ಪ್ರತಿಯೊಬ್ಬರೂ ಸ್ವಾತಂತ್ರ್ಯ ಸಾಧನೆಗೋಸ್ಕರ ಪ್ರಾಣ ತೆರುವುದಕ್ಕೂ ಸಿದ್ಧರಾಗಿದ್ದರು—ಎಂದಲ್ಲ. ಹೂವಿನೊಳಗೆ ನುಸುಳಿಕೊಂಡ ಕ್ರಿಮಿಗಳೂ ಇದ್ದುವು ಕೆಲವು. ಸ್ವಾತಂತ್ರ್ಯ ಸಮರದ ಹೆಸರಲ್ಲಿ ಶ್ರೀಮಂತರಾಗುವ ಉದ್ದೇಶವಿತ್ತು ಅಂತಹ ಜನರಿಗೆ.

ಮಹಾಲಿಂಗೇಶ್ವರ ದೇವಸ್ಥಾನದ ಕೊಳದಲ್ಲಿ ಆ ದಂಡಿನವರು ಮಿಂದರು. ದೇವರಿಗೆ ಅಡ್ಡ ಬಿದ್ದರು.

ಕಲ್ಯಾಣಸ್ವಾಮಿ ಆ ದಿನವೂ ಕಚೇರಿ ನಡಸಿದ. ಊರವರನ್ನು ಕರೆದು ಅವರ ಅಹವಾಲುಗಳನ್ನು ಕೇಳಿದ. ಕುಂಪಣಿ ಸರಕಾರದ ರೀತಿ ನೀತಿಗಳ ವಿವರವನ್ನು ತಿಳಿದ. ಆಡಳಿತ ನೋಡಿಕೊಳ್ಳಲು ತಾತ್ಕಾಲಿಕ ಅಧಿಕಾರಿಗಳನ್ನು ನೇಮಿಸಿದ.

ಖಡ್ಗಗಳ ಮಾತು ಬಂದಾಗ ಊರಪ್ರಮುಖರಲ್ಲೊಬ್ಬ ಹೇಳಿದ :

" ಕಮ್ಮಾರರನ್ನು ಕರೆಸಿ ಮಾಡಿಸೋಣ."

ಕಲ್ಯಾಣಸ್ವಾಮಿಗೆ ನಗು ಬಂತು. ಆತನೆಂದ :

" ಬೆಂಕಿ ಬಿದ್ದಮೇಲೆ ಬಾವಿತೋಡುವ ಲೆಕ್ಕಾಚಾರವಾಯ್ತಲ್ಲ! ನಮ್ಮ ಕಮ್ಮಾರರು ಆಯುಧ ತಯಾರಿಸಿಕೊಡೋವರೆಗೂ ಇಂಗ್ಲಿಷರ ಸೈನ್ಯ ಕಾದಿರ್ತದೇನು? "

ಸಲಹೆ ನೀಡಿದ ಪ್ರಮುಖ ಹಲ್ಲುಕಿರಿದ.

ಕಲ್ಯಾಣಸ್ವಾಮಿ ಆದೇಶವಿತ್ತ :

"ಯಾರು ಯಾರಲ್ಲಿ ಕತ್ತಿ ಬಂದೂಕು ಇದೆಯೋ ಅವರೆಲ್ಲಾ ಆಯುಧಗಳನ್ನು ಕಚೇರಿಗೆ ತಂದೊಪ್ಪಿಸಲಿ. ಅದು ಎರವಲು ಸಾಮಾನು ಅಂತ ನಾವು ಭಾವಿಸ್ತೇವೆ. ಯುದ್ಧ ಮುಗಿದ್ಮೇಲೆ ವಾಪಸುಮಾಡ್ತೇವೆ."

ಮುಂದಿನ ಊರುಗಳಿಗೆ ಬೇಹುಗಾರರು ಹೋದರು.

ವಿಟ್ಲದ ತುಂಡರಸನಿಗೆ ಭೇಟಿಗೆ ಬರಬೇಕೆಂದು ಸವಾರರಿಬ್ಬರೊಡನೆ ಕಲ್ಯಾಣಸ್ವಾಮಿ ಕರೆಯೋಲೆ ಕಳುಹಿದ.....

ಕಪ್ಪಕಾಣಿಕೆಗಳೊಡನೆ ಧಾವಿಸಿ ಬಂದ ಆ ಅರಸನನ್ನು ಉದ್ದೇಶಿಸಿ ರಾಜ್ಯಪಾಲನೆಂದ :

"ನಾವು ಹೇಳಿಕಳಿಸೋವರೆಗೂ ಬರಬಾರದು ಅಂತ" ಮಾಡಿದ್ದಿರೋ?

ಮಾತಿಗಾಗಿ ತಡವರಿಸಿದ ವಿಟ್ಲದ ಅರಸು.

"ತಮ್ಮ ಮನೋಧರ್ಮ ತಿಳಿಯದೆ ಸಂಕೋಚವಾಯ್ತು."

"ಈಗ ನಮ್ಮ ಮನೋಧರ್ಮ ತಿಳೀತೇನು? ನಮ್ಮ ಧ್ಯೇಯ ಏನೂಂತ ಅರ್ಥಮಾಡಿಕೊಂಡಿರೋ?"

"ಹೌದು."

"ಕುಂಪಣಿಯವರನ್ನು ಏನು ಮಾಡೋಣ?"

"ಯುದ್ಧವೇ ಸರಿ. ನಮ್ಮಲ್ಲಿ ಶಕ್ತಿ ಸಾಲದೆ ಈವರೆಗೂ ಸುಮ್ಮ ನಿದ್ದೆವು."

"ನಮ್ಮ ಜತೆ ಬರುತ್ತೀರೇನು ಹಾಗಾದರೆ?"

ಉತ್ತರ ನಿಧಾನವಾಯಿತು.

"ನನಗೆ ವಯಸ್ಸಾಯ್ತು...."

"ಈ ಯುವಕರನ್ನು ನೋಡಿದೀರೇನು?" ಎಂದ ಕಲ್ಯಾಣಸ್ವಾಮಿ, ವೃದ್ಧ ಸೋಮಯ್ಯನೆಡೆಗೆ ಬೊಟ್ಟುಮಾಡುತ್ತಾ, ನಸುನಕ್ಕು.

ತನಗಿಂತಲೂ ಹಿರಿಯನಾಗಿದ್ದ ಸೋಮಯ್ಯನನ್ನು ಕಂಡು ವಿಟ್ಲದ ಅರಸನ ಮುಖ ಕಪ್ಪಿಟ್ಟಿತು.

ವೃಥಾ ಮಾತು ಬೆಳಸುವುದರಲ್ಲಿ ಅರ್ಥವಿಲ್ಲವೆಂದು, ಕಲ್ಯಾಣಸ್ವಾಮಿ ಹೇಳಿದ :

"ಹೋಗಲಿ ಬಿಡಿ. ವಿಟ್ಲದಿಂದ ಆಯುಧ ಸಮೇತರಾಗಿ ಯೋಧರನ್ನು ಕಳಿಸ್ಕೊಡಿ."

ಬದುಕಿದೆನೆಂದು ಸರಾಗವಾಗಿ ಉಸಿರು ಬಿಡುತ್ತ ಆ ತುಂಡರಸನೆಂದ:

"ತಮ್ಮ ದಂಡನ್ನು ಸೇರಬೇಕೂಂತ ಜನರು ಆಗಲೆ ಮಾತಾಡ್ತಾ ಇದ್ದರು."

"ಹಾಗೋ? ಒಳ್ಳೇದು. ನೀವು ಕೊಡಗುರಾಜರ ಸ್ನೇಹಿತರೆಂತಲೇ ಭಾವಿಸ್ತೀವಿ. ಕಡಮೆಯೆಂದರೆ ನೂರು ಜನ ಸೈನಿಕರಾದರೂ ವಿಟ್ಲದಿಂದ ಬರಬೇಕು."

"ನೂರೈವತ್ತು ಜನರನ್ನು ಕಳಿಸ್ತೇನೆ."

ಸಾಯುವವರು ಬೇರೆಯವರ ಮಕ್ಕಳೆಂದಾದರೆ ನೂರೈವತ್ತೇನು, ಇನ್ನೂರೇನು,—ಎಂದು ಮನಸಿನೊಳಗೇ ನಗುತ್ತ, ಕಲ್ಯಾಣಸ್ವಾಮಿ ಹೇಳಿದ.

"ಆಗಲಿ. ಇವತ್ತು ನಮ್ಮಲ್ಲೇ ನೀವು ಆತಿಥ್ಯ ಸ್ವೀಕರಿಸ್ಬೇಕು."

ಅರಸು ಪುನಃ ಹಿಂದುಮುಂದು ನೋಡಿದ:

"ಕ್ಷಮಿಸಬೇಕು. ನಾವು – ತಾವು –"

"ನಿಮಗೆ ತೊಂದರೆಯಾಗುವ ಹಾಗಿದ್ದರೆ ಬೇಡ. ಬನ್ನಿ. ಶಿಬಿರವನ್ನು ನೋಡಿ ಊರಿಗೆ ಹೋಗುವಿರಂತೆ."

....ಹಗಲು ಪತ್ತೆಹಚ್ಚಿದ್ದ ಅರ್ಥಧಾರಿಗಳನ್ನು ಸೈನಿಕರು ಕರೆದು ತಂದು, ರಾತ್ರೆ ಶಿಬಿರದಲ್ಲಿ ಯಕ್ಷಗಾನ ಕೂಟವೇರ್ಪಡಿಸಿದರು. ಯಕ್ಷಗಾನ ಪ್ರಿಯನಾಗಿದ್ದ ರಾಮಗೌಡನೇ ಆ ಕೂಟದ ಮೇಲ್ವಿಚಾರಣೆಯನ್ನು ನೋಡಿದ. ಮಿದುಳು ಮುಂದಿನ ಯೋಜನೆಯಲ್ಲಿ ನಿರತವಾಗಿದ್ದರೂ ಸೈನಿಕರ ಜತೆ ಕಲ್ಯಾಣಸ್ವಾಮಿಯೂ ಬಂದು ಕುಳಿತು ಅರ್ಥಧಾರಿಗಳ ವಾಗ್ಯುದ್ಧದ ಸುಖ ಅನುಭವಿಸಿದ.

ಕೂಟ ನಡೆಯುತಿದ್ದಂತೆ ಕಾವಲುಗಾರನೊಬ್ಬ ಬಂದು ರಾಮಗೌಡನ ಕಿವಿಯಲ್ಲಿ ಪಿಸುನುಡಿದ:

"ಯಾವನೋ ಒಬ್ಬ ಸವಾರ ಬಂದವನೆ. ಸ್ವಾಮಿಯವರನ್ನು ತಕ್ಷಣ ಕಾಣ್ಬೇಕಂತೆ."

ಎದ್ದು ಹೋದ ರಾಮಗೌಡ, ಕೆಲ ನಿಮಿಷಗಳಲ್ಲೆ ಮರಳಿ ಬಂದು ಕಲ್ಯಾಣಸ್ವಾಮಿಯನ್ನು ಕರೆದೊಯ್ದ.

ಬಂದಿದ್ದ ಸವಾರ, ಸುಬ್ರಾಯಹೆಗ್ಗಡೆಯ ದೂತ.

ಸವಾರನಿಗೆ ಕೇಳಿಸದಂತೆ ರಾಮಗೌಡನೊಡನೆ ಪಿಸುಧ್ವನಿಯಲ್ಲಿ ಕಲ್ಯಾಣಸ್ವಾಮಿ ವಿಚಾರಿಸಿದ:

" ಯಾರು ಈ ಹೆಗ್ಗಡೆ !"

" ಹೆಗ್ಗಡೆ ? ಓ ತಿಳಿಯಿತು ! ಕುಂಬಳೆಯ ಸಮೀಪ ಉತ್ತರಕ್ಕೆ ತೆಂಕುಂಬಳೆ ಅಂತ ಒಂದು ಗ್ರಾಮ ಇದೆ. ಅದರ ಪಾಳೆಯಗಾರ ಸುಬ್ರಾಯ ಹೆಗ್ಗಡೆ. ಹೆಸರು ಕೇಳಿದ್ದು ನೆನಪಿದೆ."

" ಪಾಳೆಯಗಾರ ಅಂದಿರಾ ?"

" ಹೂಂ. ವಿಜಯನಗರದ ಅರಸರು ಕೋಟೆಗಳ ರಕ್ಷಣೆಗೇಂತ ಇವರ ಹಿಂದಿನವರನ್ನು ಇಲ್ಲಿಗೆ ಕಳಿಸಿದರಂತೆ. ಇವರೆಲ್ಲಾ ಕೋಟೆಯವರು –ರಾಜಕ್ಷತ್ರಿಯ ವಂಶದವರು."

" ವೀರರು ತಾನೆ ?"

" ಹೌದು."

ಕಲ್ಯಾಣಸ್ವಾಮಿ ಓಲೆಯನ್ನು ರಾಮುಗೌಡನ ಕೈಗಿತ್ತ.

" ಓದಿ ನೋಡಿ. ತಾನು ಕುಂಪಣಿಯವರ ವಿರೋಧಿ ಅಂತಲೂ ತನ್ನ ದಂಡಿನೊಡನೆ ಮಂಜೇಶ್ವರದ ಹಾದಿಯಾಗಿ ನಮ್ಮನ್ನು ಸೇರ್ಕೊಳ್ತೀನೆ ಅಂತಲೂ ಬರೆದಿದ್ದಾನೆ. ಇವನ ಉದ್ದೇಶ ಏನಿದ್ದೀತು ?"

ರಾಮುಗೌಡ ಓಲೆಯನ್ನು ಓದಿದ. ಹುಬ್ಬು ಗಂಟಿಕ್ಕಿದ. ಸಡಿಲಿಸಿದ. ದೂರದಲ್ಲಿ ನಿಂತಿದ್ದ ದೂತನ ಕಡೆಗೊಮ್ಮೆ ನೋಡಿ, ತನ್ನ ಅಭಿಪ್ರಾಯ ವನ್ನಿತ್ತ.

" ಇಂಥದೇ ಉದ್ದೇಶ ಅಂತ ಹೇಳೋದು ಕಠಿನ. ಆದರೆ ಸಹಾಯ ಮಾತ್ರ ನಮಗೆ ಬೇಕೇ ಬೇಕು. ತಾನಾಗಿ ಬರ್ತೀನೆ ಅಂದವನನ್ನು ಬಿಡೋದೆ ?"

" ಅದು ನಿಜ. ಸ್ನೇಹಿತ ಅಂತಲೇ ಆತನನ್ನು ಸ್ವೀಕರಿಸೋಣ. ಆದರೆ ನಮ್ಮ ಹೆಸರಲ್ಲಿ ಕೊಲೆ ಸುಲಿಗೆ ಆಗಬಾರದು. ನಮ್ಮ ದಂಡಿನ ರೀತಿ ನೀತಿಗಳನ್ನು ವಿವರಿಸಿ ಉತ್ತರ ಬರೆಯೋಣ. ಇದು ಶರತ ಅಂತಲೂ ಆತ ಭಾವಿಸಬಾರದು ; ಉಪದೇಶ ಅಂತಲೂ ತಿಳೀಬಾರದು. ಹಾಗೆ ಸೂಚ್ಯ ವಾಗಿರ್ಬೇಕು ಒಕ್ಕಣೆ."

" ಸರಿ."

" ನಂಜಯ್ಯನವರನ್ನು ಕರೀರಿ ಹಾಗಾದರೆ."

....ಬಂದಿದ್ದ ದೂತ ಶಿಬಿರದ ಭೋಜನ ಶಾಲೆಯಲ್ಲಿ ಊಟ ಮಾಡಿದ,

ಕಲ್ಯಾಣಸ್ವಾಮಿಯ ಸೈನಿಕರೊಡನೆ ಬೆರೆತ. ಯಕ್ಷಗಾನ ನಡೆಯುತಿದ್ದ ಕಡೆ ಕುಳಿತು ತೂಕಡಿಸಿದ. ಪ್ರಯಾಣದಿಂದ ಬಳಲಿದ್ದ ಆ ಮನುಷ್ಯ ತನ್ನ ಕುದುರೆಯನ್ನು ಕಟ್ಟಿಹಾಕಿದ್ದ ಕಡೆಗೊಮ್ಮೆ ದೃಷ್ಟಿ ಬೀರಿ, ಬಯಲಲ್ಲೆ ನಿದ್ದೆ ಹೋದ.

ಬೆಳಗಿನ ಜಾವ ಕೊಂಬು ವಾದ್ಯ ಇತರ ಸೈನಿಕರೊಡನೆ ಆತನನ್ನೂ ಎಬ್ಬಿಸಿತು. ದಂಡನಾಯಕದ್ವಯರ ನೇತೃತ್ವದಲ್ಲಿ ಕವಾಯಿತು ನಡೆದುದನ್ನು ಆತ ನೋಡಿದ. ಬಳಿಕ, ದಳಪತಿಗಳಾದ ಕುಡಿಯ ಸೋದರರ ಜತೆಯಲ್ಲಿ ಉಪಾಹಾರ ಸ್ವೀಕರಿಸಿ, 'ವೀರದಳಪತಿ ಸುಬ್ರಾಯ ಹೆಗ್ಗಡೆ' ಯವರಿಗೆಂದು ರಾಜ್ಯಪಾಲ ಕಲ್ಯಾಣಸ್ವಾಮಿ ಬರೆದುಕೊಟ್ಟ ಉತ್ತರದೊಡನೆ ಆ ದೂತ ತೆಂಕುಂಬಳೆಯ ಕಡೆಗೆ ಸಾಗಿದ.

....ಪುತ್ತೂರಿನಲ್ಲಿ ಮತ್ತೂ ಒಂದು ದಿನ ಇದ್ದರೆ ಸಾಕೆಂಬುದು ಸೇನಾಧಿಕಾರಿಗಳ ಅಭಿಪ್ರಾಯವಾಗಿತ್ತು.

ಅದನ್ನು ಬಲಪಡಿಸುವಂತೆ ನಡೆಯಿತೊಂದು ಘಟನೆ. ಊರಿನ ಒಂದು ಮೂಲೆಯಿಂದ ಕೆಲವರು ಬಂದು, ಕಲ್ಯಾಣಸ್ವಾಮಿಯ ಎದುರು ಕಿವಿಯೊಡೆಯುವಂತೆ ಆರ್ತನಾದ ಮಾಡಿದರು. ತಿರುತಿರುಗಿ ಅಭಯದ ಆಶ್ವಾಸನೆಯನ್ನು ಕೊಟ್ಟ ಬಳಿಕವಷ್ಟೇ ಅವರು ಬಾಯಿ ತೆರೆದುದು.

ನಡೆದುದಿಷ್ಟೆ. ಕಲ್ಯಾಣಪ್ಪನ ದಂಡಿನವರೆಂದು ಹೇಳಿ ಕೆಲವರು ಮನೆಗಳಿಗೆ ನುಗ್ಗಿ ಲೂಟಿ ಮಾಡಿದ್ದರು. ಸ್ತ್ರೀಯರ ಕಿವಿ ಮೂಗು ಕತ್ತುಗಳಲ್ಲಿದ್ದ ಆಭರಣಗಳನ್ನು ಅಪಹರಿಸಿದ್ದರು.

ಕನಲಿದ ರುದ್ರನಾದ ಕಲ್ಯಾಣಸ್ವಾಮಿ. ಆತ ಆಜ್ಞಾಪಿಸಿದ :

"ದಂಡನಾಯಕರೆ, ಈಗಿಂದೀಗ ಶಿಬಿರದಲ್ಲಿ ತನಿಖೆ ನಡಸಿ ! ಅಪರಾಧಿಗಳ ಪತ್ತೆಯಾಗಲಿ !"

ಅವರನ್ನು ಗುರುತು ಹಿಡಿಯಬೇಕೆಂದು, ದೌರ್ಜನ್ಯಕ್ಕೆ ತುತ್ತಾಗಿದ್ದವರ ಮನೆಗಳ ಜನರೇ ಬಂದರು. ಕೊಂಬಿನ ಕರೆಗೆ ಓಗೊಟ್ಟು ಸೈನಿಕರೆಲ್ಲ ಶಿಬಿರಕ್ಕೆ ಧಾವಿಸಿದರು. ಆದರೆ, ಕಳವಿನ ವಸ್ತು ಒಡವೆ ಶಿಬಿರದಲ್ಲಿರಲಿಲ್ಲ. ಒಂದೂವರೆ ಸಾವಿರಕ್ಕೂ ಮಿಕ್ಕಿದ ಸಂಖ್ಯೆಯ ಆ ಸೈನಿಕ ವೃಂದದಲ್ಲಿ, ದೌರ್ಜನ್ಯವೆಸಗಿದವರೂ ಪತ್ತೆಯಾಗಲಿಲ್ಲ.

"ಇದು ಸುಳ್ಳು ಆರೋಪ!" ಎಂದ ಕರಿಯಪ್ಪ ಕಿಡಿಕಿಡಿಯಾಗಿ.

ಆದರೆ ಗೋಳಾಡುತ್ತಿದ್ದವರ ಪ್ರಾಮಾಣಿಕತೆಯನ್ನು ಶಂಕಿಸಲು ಇತರರು ಇಷ್ಟಪಡಲಿಲ್ಲ.

ಸೋಮಯ್ಯನೆಂದ:

"ಇದ್ದೀತು ಬಿಡಪ್ಪ. ಊರಿದ್ದಲ್ಲಿ ಹೊಲಗೇರಿ."

ಕಲ್ಯಾಣಸ್ವಾಮಿ ಇದರಿಂದ ಬಲು ನೊಂದು ಹೇಳಿದ:

"ಆ ಪಾಪಿಗಳು ಸಿಕ್ಕರೆ ಕಡಾಯಿಯಲ್ಲಿ ಎಣ್ಣೆ ಕುದಿಸಿ ಅದ್ದಬೇಕು ರಾಮಗೌಡರೆ!.... ಈಗ ಈ ಜನರಿಗೆಲ್ಲಾ ತಲಾ ಐವತ್ತು ವರಹ ಕೊಡುವಂತೆ ಅಣ್ಣಿಗೌಡರಿಗೆ ತಿಳಿಸಿ."

ಆ ವಿಚಾರಣೆ, ರಾಜ್ಯಪಾಲ ಪರಿಹಾರ ದ್ರವ್ಯವನ್ನಿತ್ತುದು, ಊರವರ ದೃಷ್ಟಿಯಲ್ಲಿ ಬಂಡಾಯಗಾರರ ದಂಡಿನ ಬೆಲೆ ಹೆಚ್ಚುವಂತೆ ಮಾಡಿದುವು.

ಜನ ಬೀದಿಯಲ್ಲಿ ಆಡಿಕೊಂಡರು:

"ಕಲ್ಯಾಣಸ್ವಾಮಿ ಧರ್ಮಿಷ್ಠ! ದುಷ್ಟ ಶಿಕ್ಷಕ – ಶಿಷ್ಟ ರಕ್ಷಕ!"

ಆದರೆ, ಹಲವು ಶತಮಾನಗಳ ವರೆಗೆ ತಿಂದು ಉಂಡರೂ ಮಿಗುವ ಸಿರಿವಂತಿಕೆಯಿದ್ದ ಕೆಲವರು ಮಾತ್ರ, ಮುಚ್ಚಿದ ಬಾಗಿಲುಗಳ ಹಿಂದಿನಿಂದ ಗೊಣಗಿದರು:

"ಶುರುವಾಯಿತು ಕಾಟಕಾಯಿ. ಕುಂಪಣಿ ಸರಕಾರವೇ ಇದ್ದಿದ್ದರೆ ವಾಸಿಯಾಗಿತ್ತು."

....ಆ ರಾತ್ರೆ ಕಳೆದು ಬೆಳಗಾದ ಬಳಿಕ ದೀವಟಿಗೆಯ, 'ಕೊತ್ತಳಿಗೆ ಭಟರ', ದಂಡು ಮುಂದಕ್ಕೆ ಹೊರಟಿತು. ಇಬ್ಬಿಬ್ಬರಂತೆ ಸಾಲುಗಟ್ಟಿದರೂ ಬಲು ದೀರ್ಘವಾಗಿದ್ದ ಸೇನೆ. ಕುದುರೆಗಳಲ್ಲದೆ, ಬೊಕ್ಕಸವನ್ನೂ ಸಾಮಗ್ರಿಗಳನ್ನೂ ಹೊತ್ತಿದ್ದ ಹೋರಿಗಳು ಬೇರೆ. ಜತೆಯಲ್ಲೆ, ಕೈದಿಗಳಾಗಿದ್ದ ದೇವಪ್ಪಯ್ಯ ಮತ್ತಿಬ್ಬರು ಸಿಪಾಯಿಗಳು. ಉತ್ಸಾಹಕ್ಕಂತೂ ಯಾವ ಅಭಾವವೂ ಇರಲಿಲ್ಲ.

"ಹ್ಯಾಗಿದೆ ನದಿ?" ಎಂದು ಕಲ್ಯಾಣಸ್ವಾಮಿ, ರಾಮಗೌಡನತ್ತ ನೋಡಿ ಕೇಳಿದ.

ದಂಡನಾಯಕ ಗೌಡನ ಮುಖದಲ್ಲಿ ಗೆಲವಿತ್ತು.

"ತಕ್ಕಮಟ್ಟಿಗಿದೆ. ಇನ್ನೂ ಸಾಲದು ಪಾಣೆಮೊಗರು – ನಂದಾವರ ದಾಟೋಣ, ಆಮೇಲೆ ಹೇಳ್ತೀನಿ."

....ಪಾಣೆಮೊಗರಿನ ಸಂತೆ ಕಟ್ಟೆಯ ಮೈದಾನದಲ್ಲಿ ಯುಗಾದಿಯ ದಿನ ದಂಡು ಬೀಡುಬಿಟ್ಟಿತು.

"ಸುಳ್ಯದಿಂದ ಇವತ್ತು ಹೊರಡಬೇಕೂಂತ ಗೊತ್ತಾಗಿದ್ದ ದಿನ," ಎಂದ ರಾಮಗೌಡ, ಕಲ್ಯಾಣಸ್ವಾಮಿಯೊಡನೆ.

ನೆನಪಿದೆ ಎಂಬಂತೆ ಕಲ್ಯಾಣಸ್ವಾಮಿ ನಸುನಕ್ಕ.

ಒಬ್ಬ ಸೈನಿಕ ರಾಮಗೌಡನಲ್ಲಿ ಕುಲುಕುಲು ನಗುತ್ತ ಬಿನ್ನವಿಸಿದ:

"ಕತ್ತಿಗಳು ಕೆಲಸವಿಲ್ಲದೆ ಮೊಂಡಾಗ್ತಿದಾವೆ ನಾಯಕರೆ. ಹಾಗಾದರೆ ಹ್ಯಾಗೆ? ಕತ್ತಿಗೆ ಕೆಲಸ ಕೊಡಿ!"

ರಾಮಗೌಡನೂ ನಕ್ಕು ಉತ್ತರವಿತ್ತ:

"ಸದ್ಯಕ್ಕೆ ಅಡುಗೆ ಬೇಯಿಸೋಕೆ ಸೌದೆ ಕಡಿದು ತನ್ನಿ. ಬೇರೆ ಕೆಲಸ ಮುಂದೆ, ಮಂಗಳೂರಿನಲ್ಲಿ!"

ಊರವರ ನೆರವು ಅಲ್ಲಿಯೂ ಕಡಮೆಯಾಗಲಿಲ್ಲ.

....ಹಬ್ಬದ ಊಟದ ಹೊತ್ತಿಗೆ ಶಿಬಿರದ ಕಾವಲಿನವರು ದಂಡನಾಯಕರೆಡೆಗೆ ಬಂದು ಕಾತರದ ಧ್ವನಿಯಲ್ಲಿ ಸುದ್ದಿಮುಟ್ಟಿಸಿದರು:

"ಯಾವುದೋ ಕಾಲಾಳು ದಂಡು ಬರೋದು ಕಾಣಿಸ್ತಿದೆ."

ರಾಮಗೌಡ ಹುಬ್ಬು ಗಂಟಿಕ್ಕಿದ.

"ದಂಡು?"

"ಹೂಂ. ಪುತ್ತೂರಿನ ಕಡೆಯಿಂದ."

"ಪುತ್ತೂರಿನ ಕಡೆಯಿಂದ?"

ಅದು ಸಾಧ್ಯವೇ ಇರಲಿಲ್ಲ. ಆದರೂ ರಾಮಗೌಡ ಆಜ್ಞಾಪಿಸಿದ:

"ಕೊಂಬು ಊದಿ! ಸೈನಿಕರು ಸಿದ್ಧರಾಗಿ!"

ಊಟಕ್ಕೆಂದು ಹೊರಟಿದ್ದವರು ಹೋರಾಟಕ್ಕೆಂದು ಸೊಂಟ ಬಿಗಿದರು.

ನಂಜಯ್ಯನೆಡೆ ತಿರುಗಿ ಕಲ್ಯಾಣಸ್ವಾಮಿ ಹೇಳಿದ:

"ನಮ್ಮನ್ನು ಸೇರೋದಕ್ಕೆ ಕೊಡಗಿನಿಂದ ಜನ ಬರ್ತಿರಬಹುದು ಅಂತೀನಿ."

"ಇರಬೌದು, ನೋಡಾನ," ಎಂದ ನಂಜಯ್ಯ.

ಕಲ್ಯಾಣಸ್ವಾಮಿಯ ಊಹೆ ಸರಿಯಾಗಿತ್ತು. ಬಂದಿದ್ದವರು ಘಟ್ಟದ

ಕೆಳಗಿನ ಚೆಂಬು ಪೆರಾಜೆಗಳ ರೈತ ಯೋಧರು. ಜತೆಯಲ್ಲಿ, ವೀರರಾಜ ಪೇಟೆನಾಡಿನ ಪಾಡಿನಾಲ್ಕುನಾಡಿನ ಕದನ ಕಲಿಗಳು.

ಕಲ್ಯಾಣಸ್ವಾಮಿಯೆಂದ:

" ಇನ್ನೊಂದು ಉಪನದಿ ಗೌಡರೆ!"

ಬಂದ ಆ ಎಪ್ಪತ್ತು ಎಪ್ಪತ್ತೈದು ಜನರು ತಮ್ಮವರೆಂದು ತಿಳಿದಾಗ, ರಣಗರ್ಜನೆಗೆಂದು ಸಿದ್ಧರಾಗಿದ್ದ ಸೈನಿಕರು, ಸಾವಿರ ಮಾತುಗಳಲ್ಲಿ ಸಾವಿರ ರೀತಿಗಳಲ್ಲಿ ಬಂದವರನ್ನು ಸ್ವಾಗತಿಸಿದರು.

ಬಳಿಕ ನಡೆದ ಯುಗಾದಿ ಭೋಜನ, ತುಂಬಾ ರುಚಿಕರವಾಗಿ ಕಂಡಿತು.

ತಮ್ಮನ್ನು ಸೇರಲೆಂದು ಕೊಡಗಿನಿಂದ ಬಂದಿದ್ದವರಲ್ಲಿ ಪ್ರಮುಖರೊಡನೆ ಕಲ್ಯಾಣಸ್ವಾಮಿಯೂ ದಂಡನಾಯಕ ದಳಪತಿಗಳೂ ಇತರ ಮುಖ್ಯಸ್ಥರೂ ಬಹಳ ಹೊತ್ತು ಸಮಾಲೋಚನೆ ನಡಸಿದರು.

ಕೊಡಗಿನಲ್ಲೂ ಬಂಡಾಯದ ಗುಡುಗು ಮೊಳಗಿತ್ತು. ಗಿರಿಕಂದರಗಳಲ್ಲಿ ಪ್ರತಿಧ್ವನಿಸಿತ್ತು. ಗಾಬರಿಯು ಗೊಂದಲದ ಬೀಡಾಗಿ ಪರಿಣಮಿಸಿತ್ತು ಮಡಿಕೇರಿಯು ಕೋಟೆ. ಬೋಪುದಿವಾನನ ಸಂಬಂಧಿಕರೇ ಕೆಲವರು ಬಂಡಾಯಗಾರರನ್ನು ಸೇರಲು ಕನ್ನಡ ಜಿಲ್ಲೆಗೆ ಹೊರಟರೆಂದು ಕೇಳಿದಾಗ, ಲೀಹಾರ್ಡಿಯ ಜಂಘಾಬಲವೇ ಉಡುಗಿಹೋಯಿತು ಕಂಡು ಕೇಳರಿಯದ ಕಲ್ಯಾಣಸ್ವಾಮಿಯ ಹೆಸರನ್ನು ಯಾರಾದರೂ ಉಚ್ಚರಿಸಿದರೂ ಸಾಕು; ಆತ ಬೆಚ್ಚಿ ಬೀಳುತಿದ್ದ. ಸೈಂಧವನಂತಿದ್ದ ಆತನ ಸೀಮೆಯ ನಾಯಿ, ಕೋಟೆಯ ಪ್ರಾಕಾರದ ಮೇಲೆ ನಿಂತು ಬಗುಳಿದೊಡನೆ, ಆತನ ಕೈ ಬಂದೂಕಿನತ್ತ ಸರಿಯುತಿತ್ತು. ಯಾವುದೋ ಗುಡ್ಡದಲ್ಲಿ ಹೊಗೆಯಾಡಿದರೆ, "ರೈತರ ದಂಗೆ!" ಎಂದು ಹೆದರುತಿದ್ದ ಆತ. ಕಾಡಿಗೆ ಬೆಂಕಿ ಬಿದ್ದರಂತೂ "ವಿದ್ರೋಹಿಗಳು!" ಎಂದು ನಡುಗುತ್ತ ಕೂಗಾಡುತಿದ್ದ.

ಯಾರನ್ನು ನಂಬುವುದಕ್ಕೂ ಲೀಹಾರ್ಡಿ ಸಿದ್ಧನಿರಲಿಲ್ಲ. ಅಮರ ಸುಳ್ಯದ 'ದಂಗೆ' ಯ ವಿಷಯ ತಿಳಿಸಲಿಲ್ಲವೆಂದು, ದಿವಾನ ಲಕ್ಷ್ಮೀನಾರಾಯಣಯ್ಯನ ಮೇಲೆ ಸಂದೇಹಪಟ್ಟವನು, ಆತನನ್ನು ಕೆಲಸದಿಂದ ತೆಗೆದೇ ಹಾಕಿದ. ಒಳಗಿಂದೊಳಗೆ ಬೋಪುವೂ ಪಿತೂರಿ ನಡಸಬಹುದೆಂಬ ಭಯವೂ ಅವನನ್ನು ಕಾಡಿತು.

ಇಂತಹ ಆಡಳಿತದ ಬುಡಕ್ಕೆ ಕೊಡಲಿ ಏಟು ಬಿಗಿಯುವುದು ಸುಲ

ಭದ ಕೆಲಸ. ಆದರೆ, ಬಿಗಿಯ ಬಯಸಿದವರಲ್ಲಿ ಕೊಡಲಿ ಇರಲಿಲ್ಲ. ಕೊಡಲಿ ಇದ್ದವರು ಅದನ್ನೆತ್ತಲಿಲ್ಲ....

ಅಲ್ಲಿಯ ವಿದ್ಯಮಾನಗಳನ್ನು ಕುರಿತು ವರದಿಮಾಡುತಿದ್ದ ಮನುಷ್ಯ ಹೇಳಿದ :

“ ಇಂಗ್ಲಿಷರ ಎಂಜಲು ತಿನ್ನುವವರು ಹಲವರಿದ್ದರೂ ಕೂಡಾ, ಜನರೆಲ್ಲಾ ನಮ್ಮ ಕಡೆಗೇ. ಕೊಡಗಿನ ಉತ್ತರದ ಉಕ್ಕಡವನ್ನು ತಾವು ಹಿಡಿದಿರಿ, ಕಾಶಿಯಿಂದ ರಾಜರು ಬಂದು ತಮ್ಮನ್ನು ಸೇರಿದ್ದಾರೆ – ಅಂತ ಸುದ್ದಿ ಹಬ್ಬಿದೆ. ಕಲ್ಯಾಣಸ್ವಾಮಿ ಯಾರೂಂತ ಎಷ್ಟೋ ಜನಕ್ಕೆ ತಿಳಿದಿಲ್ಲವಾದರೂ ತಾವು ರಾಜರ ಕಡೆಯೋರು ಅನ್ನೋದು ಎಲ್ಲರಿಗೂ ಖಾತರಿಯಾಗಿದೆ. ಬಿಸಿಲೆಘಾಟಿಯಾಗಿ ತಾವು ಬರ್ತೀರಿ ಅಂತ ಎಲ್ಲರೂ ಭಾವಿಸಿದ್ದಾರೆ. ತಮ್ಮ ಸೈನ್ಯ ಪಶ್ಚಿಮದಿಂದಲೂ ತಾವುನಾಡಿನವರು ದಕ್ಷಿಣದಿಂದಲೂ ಎಡೆನಾಡಿನವರು ಉತ್ತರದಿಂದಲೂ ಮಡಿಕೇರಿಗೆ ಮುತ್ತಿಗೆ ಹಾಕ್ಬೇಕೂಂತ ಗುಡ್ಡೆಮನೆ ಅಪ್ಪಯ್ಯನೋರು ಏರ್ಪಾಟುಮಾಡಿ ತಮ್ಮ ಹಾದಿನೋಡ್ತಿದಾರೆ. ಇನ್ನೂ ತೀರ್ಮಾನ ಮಾಡದೆ ಕೂತಿರುವವರೂ ಇದ್ದಾರೆ ಅನ್ನಿ. ಅವರೆಲ್ಲಾ ಬಾವುಟ ನೋಡಿದ ಕೂಡಲೇ ಓಡಿಬರ್ತಾರೆ....”

ಮುಂದೆ ಪೂರ್ಣವಾಗಬೇಕಾಗಿದ್ದ ಚಿತ್ರದ ರೂಪುರೇಖೆಗಳು ಸಂದೇಹಕ್ಕೆ ಎಡೆ ಇಲ್ಲದಂತೆಯೆ ಸ್ಪಷ್ಟವಾಗಿದ್ದುವು.

....ಮಲಗುವುದಕ್ಕೆ ಮುಂಚೆ ಕಲ್ಯಾಣಸ್ವಾಮಿ, ಚೆಟ್ಟಿ ಕುಡಿಯನ ಜತೆ ಶಿಬಿರದ ಸುತ್ತಲೂ ನಡೆದು ಹೋದ. ನಿದ್ದೆಯ ಲೋಕದಲ್ಲಿ ಗೊರಕೆಗಳ ಯುದ್ಧವೆ ನಡೆದಿತ್ತು. ಒಂದೆಡೆ ಕೆಲವರು ನಿದ್ದೆಹೋಗದೆ ಏನನ್ನೋ ಮಾತನಾಡುತ್ತ ನಗುತಿದ್ದರು.

ಅವರ ಬಳಿ ಸಾರಿ ತೀಕ್ಷ್ಣ ಸ್ವರದಲ್ಲಿ ಕಲ್ಯಾಣಸ್ವಾಮಿ ನುಡಿದ :

“ ಹಾಳು ಹರಟೆ ನಿಲ್ಲಿಸಿ ! ಮಲಕೊಳ್ಳಿ !”

ಸ್ವರವನ್ನು ಗುರುತಿಸಿದ ಆ ಮನುಷ್ಯರಿಂದ ಬಳಿಕ ಒಂದು ಸದ್ದೂ ಹೊರಡಲಿಲ್ಲ. ಮರದ ಕೊರಡುಗಳಂತೆ ಅವರು ಮಲಗಿದರು.

ಶಿಬಿರದ ಅಂಚಿನಿಂದ ಹತೋಟಿತಪ್ಪಿದ ಸ್ವರಗಳೆರಡನ್ನು ಗಾಳಿ ಹೊತ್ತು ತಂದಿತು. ಚೆಟ್ಟಿಯೊಡನೆ ಅತ್ತಸಾಗಿ, ರೇಗುತ್ತ ಕಲ್ಯಾಣಸ್ವಾಮಿ ಗದರಿದ :

" ಯಾರು ನೀವು ?"
ಕುಡುಕನ ಧ್ವನಿ ಕಡಿಕಡಿದು ಹೇಳಿತು :
" ನೀನೂ ಬಾ...."
ಅವರ ಜತೆಗಿದ್ದ ಯಾವಳೋ ಹೆಂಗಸು ಕಿಸಕ್ಕನೆ ನಕ್ಕಳು.

ಕಲ್ಯಾಣಸ್ವಾಮಿಯ ಮೈ ಉರಿಯಿತು. ಮುಷ್ಟಿಗಳು ಬಿಗಿದು ಕೊಂಡುವು. ಚಿಟ್ಟಿ ಮುಂದಕ್ಕೆ ಹೆಜ್ಜೆ ಇಟ್ಟು, ಮಾತನಾಡಿದವನ ಕೆನ್ನೆಗೆ ಒಂದೇಟು ಬಿಗಿದ. ಆ ವಜ್ರಾಘಾತಕ್ಕೆ ಅಡಿತಪ್ಪಿ ಉರುಳಿದ ಆ ಮನುಷ್ಯ. ಹೆಂಗಸು ಓಡಿಹೋದಳು. ಆಕೆಯನ್ನು ಹಿಂಬಾಲಿಸಲು ಯತ್ನಿಸಿದ ಇನ್ನೊಬ್ಬನನ್ನೂ ಹಿಡಿದು ಚಿಟ್ಟಿ, ಏಟು ಬಿಗಿದು, ನೆಲಕ್ಕುರುಳಿಸಿದ. ಗದ್ದಲ ಕೇಳಿ ಓಡಿಬಂದ ಕಾವಲಿನವರಿಗೆ ಕಲ್ಯಾಣಸ್ವಾಮಿ ಆಜ್ಞೆ ಇತ್ತ:

" ಇವರಿಬ್ಬರನ್ನೂ ಕಟ್ಟಿಹಾಕಿ – ಮುಖಕ್ಕೆ ಮಸಿ ಬಳೀರಿ. ಬೆಳಗ್ಗೆ ಎಲ್ಲರೂ ನೋಡಲಿ !"

ಕೈದಿಗಳಾಗಿದ್ದ ದೇವಪ್ಪಯ್ಯನೂ ಇಬ್ಬರು ಸಿಪಾಯಿಗಳೂ ಮುದುಡಿ ಮಲಗಿದ್ದ ಮೂಲೆಗೂ ಒಮ್ಮೆ ದೃಷ್ಟಿ ಬೀರಿ, ಕಲ್ಯಾಣಸ್ವಾಮಿ ಚಿಟ್ಟಿ ಯೊಡನೆ ಗುಡಾರಕ್ಕೆ ಹಿಂತಿರುಗಿದ.

ಎಷ್ಟು ಹೊತ್ತಾದರೂ ಕಲ್ಯಾಣಸ್ವಾಮಿಯ ಬಿಸಿ ಏರಿದ ಮೆದುಳು ತಣಿಯಲಿಲ್ಲ. ನಿದ್ದೆ ಅವನ ಬಳಿಗೆ ಬರಲಿಲ್ಲ....

—ಶಿಸ್ತು ಶಿಥಿಲವಾದರೆ ಸರ್ವನಾಶ ಶತಸ್ಸಿದ್ಧ. ವಿಲಾಸಜೀವನ ಮೊದಲಾದರೆ ಸ್ವಾತಂತ್ರ್ಯಸೇನೆ ಧೂಳಿದ್ದು ಹೋಗುವುದು. ಲೂಟಿ, ಕುಡುಕತನ, ಸೂಳೆಗಾರಿಕೆ....ಇದನ್ನೆಲ್ಲ ನಿವಾರಿಸುವ ಔಷಧಿಯೊಂದೇ, ಹೋರಾಟ ಮನಸ್ಸು ಹುಚ್ಚುನಾಯಿಯಾಗಲು ಅವಕಾಶವನ್ನೆ ಕೊಡ ಬಾರದು. ಸೇನೆ ಮಿಂಚಿನ ಹಾಗೆ ಮುಂದೆ ಸಾಗಬೇಕು. ಮಂಗಳೂರಿಗೆ— ಮಂಗಳೂರಿಗೆ! ಆದಷ್ಟು ಬೇಗನೆ ಮಡಿಕೇರಿಯ ಮೇಲೆ ದಂಡೆತ್ತಿ ಹೋಗ ಬೇಕು! ಏನಾಯಿತೆಂದು ಜನ ಅಚ್ಚರಿಪಡುತ್ತಿರುವಂತೆಯೇ ಪರಿಸಮಾಪ್ತ ವಾಗಬೇಕು ಯುದ್ಧ....

....ಮಲಗಿದಲ್ಲೆ ಮೈಮುರಿದು ಮಗ್ಗುಲು ಹೊರಳಿದ ಕಲ್ಯಾಣಸ್ವಾಮಿ. ಎವೆಗಳನ್ನು ಗಟ್ಟಿಯಾಗಿ ಮುಚ್ಚಿ ಹಿಡಿದ.

—ಮೆದುಳು ಮತ್ತೂ ಧಿಮಿಗುಟ್ಟಿತು : ವೇಗ, ವೇಗ ! ಅದೊಂದೇ ಮುಖ್ಯವಾದದ್ದು ; ಅದೊಂದೇ !

ನಂದಾವರಕ್ಕೆಂದು ಮುಂದೆ ಹೊರಟಿತು ಸೇನೆ. ಮುಸಿ ಬಳಿಸಿ ಕೊಂಡಿದ್ದವರು ಮುಖ ತೋಳಿದಿದ್ದರಾದರೂ ಅವರನ್ನು ನಿರಾಯುಧರನ್ನಾಗಿ ಮಾಡಲಾಗಿತ್ತು. ಸ್ಥಾನವೂ ಕಟ್ಟಕಡೆಗೆ. ತಲೆ ತಗ್ಗಿಸಿಯೇ ಅವರು ಹಾದಿ ತುಳಿದರು.

ದಾರಿಯಲ್ಲಿ ಅವರ ಪ್ರಸ್ತಾಪ ಮಾಡುತ್ತಾ ರಾಮಗೌಡ ಹೇಳಿದ:

"ಇಡೀ ಸೈನ್ಯ ಒಂದು ದೇಹವಿದ್ದ ಹಾಗೆ. ಅವರಿಬ್ಬರು ಆ ದೇಹ ದಲ್ಲಿ ಎದ್ದಿರುವ ಕಜ್ಜಿಗಳು."

....ನಂದಾವರದ ಅರಸ ಇಂಗ್ಲಿಷರನ್ನು ಇದಿರಿಸಲಾಗದೆ ಅವರ ಸಾರ್ವಭೌಮತ್ವವನ್ನೊಪ್ಪಿಕೊಂಡಿದ್ದ. 'ಮಾಲೀಖಾನೆಯಲ್ಲಿದ್ದ ಮಾಂಡ ಲಿಕ' ನಾಗಿ ಕುಂಪಣಿ ಸರಕಾರ ಆತನನ್ನು ಸ್ವೀಕರಿಸಿತ್ತು. ಆದರೆ ಅದೆಲ್ಲ, ತೊಡಿಸಿದ್ದ ದಾಸತ್ವದ ಜೇಡಿಗೆ ಕೊಟ್ಟಿದ್ದ ಬಂಗಾರದ ಗಿಲೀಟು. ಪರ ಕೀಯರಿಂದ ಅವಮಾನಿತನಾದ ಆತ, ಕೆಣಕಿದ ಫಣಿಯಾಗಿದ್ದ; ಬಂಡಾಯ ವೇಳಲು ಸಮಯ ಕಾಯುತ್ತಲಿದ್ದ.

ಅದು ಒದಗಿ ಬಂದಿತ್ತು, ಕಲ್ಯಾಣಪ್ಪನ ಸೇನೆ ಜೈತ್ರಯಾತ್ರೆಗೆ ಮೊದಲು ಮಾಡಿದಾಗ.

ನಂದಾವರದ ಬಂಗರಾಜ ತಮ್ಮ ಕಡೆ ಸೇರುವನೆಂಬುದನ್ನು ಪುತ್ತೂರಿ ನಲ್ಲಿದ್ದಾಗಲೇ ಕಲ್ಯಾಣಸ್ವಾಮಿ ತಿಳಿದಿದ್ದ; ತಾನು ಬರುವೆನೆಂದು ಮುಂದಾ ಗಿಯೆ ಅಲ್ಲಿಗೆ ಸಂದೇಶ ಕಳುಹಿದ್ದ.

ಸೈನ್ಯ ನಂದಾವರದ ಹತ್ತಿರ ಬರುತ್ತಲೇ ಸ್ವಾಗತ ಸಂಭ್ರಮದ ನಿನಾದ ಕೇಳಿಸತೊಡಗಿತು. ಸಾಲಂಕೃತನಾದ ಲಕ್ಷ್ಮಪ್ಪ ಬಂಗರಾಜ ಕುದುರೆಯನ್ನೇರಿ, ಮುನ್ನೂರು ಜನ ಭಟರೊಡನೆ, ಆರತಿಯ ತಟ್ಟೆಗಳನ್ನು ಹಿಡಿದಿದ್ದ ಸುಮಂಗಲಿಯರೊಡನೆ, ನಾಗಸ್ವರವಾದನದೊಡನೆ, ಊರ ಹೊರಗೆ ನಿರ್ಮಿಸಿದ್ದ ಬಾಳೆಮಾಂದಳಿರುಗಳ ಮಹಾದ್ವಾರದಲ್ಲಿ, ಕಲ್ಯಾಣ ಸ್ವಾಮಿಯನ್ನೂ ದಂಡನಾಯಕರನ್ನೂ ಇದಿರುಗೊಂಡ.

ಲಕ್ಷ್ಮಪ್ಪ ಬಂಗರಾಜ ನುಡಿದ:

" ಒಂದು ಸಾವಿರ ಹೊನ್ನು, ಮುನ್ನೂರು ಜನ ಯೋಧರು—ಇದು ನಂದಾವರದ ಕಾಣಿಕೆ. ಸ್ವೀಕರಿಸಬೇಕು !"

ಕಲ್ಯಾಣಸ್ವಾಮಿ ಬಂಗರಾಜನನ್ನು ಒಲವು ತುಂಬಿದ ದೃಷ್ಟಿಯಿಂದ ನೋಡಿದ. ತನ್ನಷ್ಟೇ—ಅಥವಾ ತನಗಿಂತ ಸ್ವಲ್ಪ ಹೆಚ್ಚಿನ—ವಯಸ್ಸು; ತೇಜಸ್ವಿಯಾಗಿದ್ದ ಮುಖ.

" ತಾವು ಹ್ಯಾಗಿರಬಹುದೂಂತ ನಾನು ಕಲ್ಪಿಸಿಕೊಂಡಿದ್ದೆನೋ ಹಾಗೆಯೇ ತಾವು ಇದ್ದೀರಿ ರಾಜರೆ," ಎಂದ ಕಲ್ಯಾಣಸ್ವಾಮಿ.

ಬಂಗರಾಜನ ಮುಖ ವರ್ಣರಂಜಿತವಾಯಿತು. ತಕ್ಕ ಉತ್ತರವನ್ನು ಕೊಡಲಾಗದೆ ಆತ ಹೇಳಿದ :

"ಕೊಡಗು ರಾಜರ ಪ್ರತಿನಿಧಿಗಳು ಬಿಜಯಮಾಡಿಸಬೇಕು. ಆತಿಥ್ಯ ಸ್ವೀಕರಿಸಬೇಕು."

ಕಾಲ್ನಡಿಗೆಯಲ್ಲಿ ಎಲ್ಲರೂ ಊರೊಳಕ್ಕೆ ಮುಂದುವರಿದಂತೆ ಕಲ್ಯಾಣ ಸ್ವಾಮಿ ನುಡಿದ :

" ಒಂದು ವಿಷಯದಲ್ಲಿ ತಮ್ಮ ಮನಸ್ಸಿಗೆ ನೋವುಂಟುಮಾಡ್ತೀವೆ ರಾಜರೆ."

" ಹೇಳೋಣಾಗಲಿ."

" ವೈರಿ ಸಿದ್ಧನಾಗೋದಕ್ಕೆ ಅವಕಾಶ ಕೊಡಬಾರದೂಂತ ನಮ್ಮ ಅಭಿಪ್ರಾಯ. ಇವತ್ತೇ ನಾವು ಇಲ್ಲಿಂದ ಹೊರಡ್ಬೇಕು."

" ಇವತ್ತೆ ?"

" ಹೂಂ. ಊಟವಾದ ತಕ್ಷಣ."

" ಓ !"

" ಕತ್ತಲಾಗೋದರೊಳಗೆ ಬಂಟವಾಳ ಆಕ್ರಮಿಸಿ ನಾಳೆ ನಾವು ಮಂಗಳೂರಿಗೆ ಹೊರಡಬೇಕು."

ಬಂಗರಾಜ ಉಗುಳುನುಂಗಿದ.

" ಮೂರು ನಾಲ್ಕು ದಿನಗಳಾದರೂ ನಮ್ಮ ಅತಿಥಿಗಳಾಗಿ ಇರುತ್ತೀರಿ ಅಂತ ಭಾವಿಸಿದ್ದೆ."

"ತಾವೇ ಹೇಳಿ. ತಡಮಾಡೋದು ಸರಿಯೇನು ?"

" ಅಲ್ಲ."

" ಸರಿ ಮತ್ತೆ!"

" ತಮ್ಮ ತೀರ್ಮಾನದಂತೆಯೇ ಆಗಲಿ. ನನ್ನ ಸೈನಿಕರಂತೂ ಸಿದ್ಧ ವಾಗಿದ್ದಾರೆ."

ಕೇಳಬೇಕೆ ಬೇಡವೆ ಎಂದು ಒಂದು ಕ್ಷಣ ಅನುಮಾನಿಸಿ, ಕಲ್ಯಾಣ ಸ್ವಾಮಿಯೆಂದ:

" ತಾವು ?"

" ನಾನು ? ನಾನೂ ಕೂಡಾ...."

" ಸಂತೋಷವಾಯ್ತು. ನಿಮ್ಮಂಥವರ ಜತೆ ಭುಜಕ್ಕೆ ಭುಜ ಕೊಟ್ಟು ಹೋರಾಡೋದು ಭಾಗ್ಯ ಅಂತ ತಿಳೀತೀವಿ."

" ಮಾತಿನಿಂದಲೆ ತಾವು ಮರುಳು ಮಾಡ್ತೀರಿ. ಸ್ವಾಮಿಯವರೆ."

ಕಲ್ಯಾಣಸ್ವಾಮಿ ಉತ್ತರವೀಯದೆ, ಕಣ್ಣುಗಳಲ್ಲಿ ನಗೆಯ ಕುಡಿ ಮಿಂಚು ಕುಣಿಸಿದ.

....ನಂದಾವರದಲ್ಲಿ ಆ ಹೊತ್ತು ಸೈನಿಕರಿಗೆ ದೊರೆತುದು, ಬಹಳ ಕಾಲ ನೆನಪಿಡುವಂತಹ ಊಟೋಪಚಾರ.

" ಜಾಸ್ತಿ ತಿನ್ಬೇಡಿ. ನಡೆಯೋಕೆ ಆಗಾಕಿಲ್ಲ. ಹ್ಞಾ!" ಎಂದ ರಾಮಗೌಡ ನಗುತ್ತ.

ಕಲ್ಯಾಣಸ್ವಾಮಿಯ ಮಗ್ಗುಲಲ್ಲೇ, ದಂಡನಾಯಕರ ಸಾಲಿನಲ್ಲೇ, ಉಣಲು ಕುಳಿತ ಬಂಗರಾಜನೆಂದ:

" ಉಗಾದಿಯ ಮಾರಣೆ ದಿವಸ ಬಂದಿರಿ. ಹೊಸ ವರ್ಷದಲ್ಲಿ ನಮ್ಮೂರಿಗೆ ಕಾಲಿಟ್ಟಿರಿ. ಈ ಸಲ ಹೊಲದಲ್ಲಿ ಬೆಳೆ ಚೆನ್ನಾಗಿ ಬರ್ತದೆ."

ಕಲ್ಯಾಣಸ್ವಾಮಿ ನಕ್ಕು ನುಡಿದ:

" ಏನೋಪ್ಪ ! ಮೇಘರಾಜ ನಮ್ಮ ಮಾನ ಉಳಿಸ್ಬೇಕು !"

....ಬಿಸಿಲು ಕಡಮೆಯಾಗುವುದನ್ನು ಕಾಯದೆ ಸೇನೆ ಬಂಟವಾಳಕ್ಕೆ ಹೊರಟಿತು. ಸಂಖ್ಯೆಯಾಗಲೆ ಎರಡು ಸಹಸ್ರಕ್ಕೇರಿತ್ತು. ಯುದ್ಧ ಮಾಡಿದ ಅನುಭವಿಗಳಿಗೆ ಕೊರತೆ ಇತ್ತೇ ಹೊರತು, ಬೇರೆ ಯಾವುದರಲ್ಲೂ ಬಡಕ ಲಾಗಿರಲಿಲ್ಲ ಸೇನೆ.

ಕಲ್ಯಾಣಪ್ಪನ ಸೈನಿಕರು ಕೆಟ್ಟವರಲ್ಲವೆಂಬ ಸುದ್ದಿ ಆಗಲೆ ಬಂಟ ವಾಳವನ್ನು ತಲಪಿದ್ದುದರಿಂದ, ಹೆಚ್ಚಾಗಿ ಹಸನ್ಮುಖಿಗಳೇ ಕಲ್ಯಾಣ

ಸ್ವಾಮಿಯ ಸೇನೆಯನ್ನು ಸ್ವಾಗತಿಸಿದುವು.

ಮನೆಗಳಿಗೆ ಕಿಚ್ಚನ್ನಿಕ್ಕುವ ಉರಿವ ಕೊಳ್ಳಿಯಾಗಿರಲಿಲ್ಲ ಸ್ವಾತಂತ್ರ್ಯ ದೀವಟಿಗೆ. ಲೂಟಿ ಮಾಡುವ ದೋಚುವ ಪುಂಡ ಪೋಕರಿಗಳಾಗಿರಲಿಲ್ಲ ಕಲ್ಯಾಣಪ್ಪನ ದಂಡಿನ ಜನ.

ಇಸ್ತಿಹಾರಿನ ವಾಚನ, ಸ್ವಾತಂತ್ರ್ಯ ಘೋಷಣೆ, ಅಭಯದಾನ, ಬಲ ಉಳ್ಳವರು ಬನ್ನಿರೆಂಬ ಆಹ್ವಾನ ಜತೆಗೆ.

....ನಂದಾವರದಿಂದ ಕಟ್ಟಿ ತಂದುದೇ ಸಾಕಾಗಿತ್ತು ರಾತ್ರಿಗೆ. ಊಟದ ಯೋಚನೆಯನ್ನು ಸೂರ್ಯೋದಯಕ್ಕೆ ಮುಂದಕ್ಕೆ ತಳ್ಳಿ, ಯೋಧರು ಶಿಬಿರ ದಲ್ಲಿ ನಿದ್ದೆ ಹೋದರು.

ಗೂಡಾರದಲ್ಲಿ ಕಲ್ಯಾಣಸ್ವಾಮಿಯ ಮಗ್ಗುಲಲ್ಲೆ ಮಲಗಿದ್ದ ಲಕ್ಷ್ಮಪ್ಪ ಬಂಗರಾಜ, ಬಹಳ ಹೊತ್ತು, ಕೊಡಗಿನ ಬಾಂಧವನಿಗೆ ಕನ್ನಡ ಜಿಲ್ಲೆಯ ಪರಿಚಯ ಮಾಡಿಕೊಟ್ಟ; ಮಂಗಳೂರನ್ನು ಕುರಿತು ಮಾಹಿತಿ ತಿಳಿಸಿದ. ಹೀಗೆ ಮಾತನಾಡುತ್ತಿದ್ದಂತೆಯೇ ಇಬ್ಬರಿಗೂ ನಿದ್ದೆ ಬಂತು.

*     *     *     *

ಬಂಟವಾಳದಲ್ಲಿ ಕಲ್ಯಾಣಸ್ವಾಮಿಯ ಸೇನೆ ನಿದ್ದೆ ಹೋಗಿದ್ದ ಆ ಹೊತ್ತಿನಲ್ಲೆ, ಮಂಜೇಶ್ವರದಲ್ಲಿ, ಶ್ರೀಮದನಂತೇಶ್ವರ ದೇವಾಲಯದ ಮುಂಭಾಗದಲ್ಲಿ, ಸಾವಿರ ಜನರಿಗೆ ಸಂತರ್ಪಣೆಯಾಗುತಿತ್ತು. ಯಾರೂ ಹೊತ್ತಿದ್ದ ಹರಕೆಯಲ್ಲ. ಊರಿಗೆ ಆಗಮಿಸಿದ್ದ ಸುಬ್ರಾಯ ಹೆಗ್ಗಡೆಯ ದಂಡಿಗೆ ಭೂರಿ ಭೋಜನ.

ಹೆಗ್ಗಡೆ ಮುಖ್ಯತಃ ಸಮರಪ್ರಿಯ. ಯುದ್ಧ ವಿದ್ಯೆಯಲ್ಲಿ ಪರಿಣತ ನಾಗಿದ್ದ ಆತನಿಗೆ ಹೋರಾಡುವ ಚಪಲ. ಅದು ಈಡೇರಲು ಕಾಲಾವ ಕಾಶ ಒದಗಬೇಕು. ಅಂತಹ ಅವಕಾಶ ಬಂತು, ಆಂಗ್ಲರ ಆಳ್ವಿಕೆಯನ್ನು ಜನ ದ್ವೇಷಿಸಿದಾಗ. ಭಾಷೆ ತಿಳಿಯದ ವಿದೇಶೀಯರು ಬಂದು ಈ ದೇಶ ದಲ್ಲಿ ರಾಜ್ಯಭಾರ ಮಾಡುವುದು ಸಾಧ್ಯವೆಂದು ಆತ ನಂಬಿರಲಿಲ್ಲ. ವ್ಯಾಪಾರಿ ಗಳ ಸಂಸ್ಥೆ ಸರಕಾರವಾಗಿ ಮಾರ್ಪಡುವುದು ಆತನಿಗೆ ಅಸಹ್ಯವಾಗಿ ತೋರು ತ್ತಿದ್ದ ವಿಷಯ. ಅಲ್ಲದೆ ಸ್ವತಃ ಆತನ ಹಿರಿಯರಾದವರು ಎಂಥವರು? ವಿಜಯನಗರದ ಸಾಮ್ರಾಜ್ಯದಲ್ಲಿ ದಳಪತಿಗಳಾಗಿದ್ದವರು. ಆ ಸಾಮ್ರಾಜ್ಯದ ವೈಭವವೊ! ಹಾಗೆ, ಕನ್ನಡ ದೇಶವೆಲ್ಲಾ ಒಂದಾಗಿ ಒಂದೇ ರಾಜ್ಯದ

ಸ್ಥಾಪನೆಯಾದರೆ, ವಿಜಯನಗರ ಸಾಮ್ರಾಜ್ಯದಂತಹ ರಾಷ್ಟ್ರರೂಪುಗೊಂಡರೆ, ಅಲ್ಲಿ ತಾನೂ ದಳಪತಿಯೆ! ದಳಪತಿ ಸ್ಥಾನವೇ ಎಂದೇನು? ಯಾರ ಹಣೆಯಲ್ಲಿ ಬ್ರಹ್ಮ ಏನೇನು ಬರೆದಿರುವನೋ, ಯಾರಿಗೆ ಗೊತ್ತು ?....

ಅಂತಹ ಹಿರಿಯ ಆಕಾಂಕ್ಷೆಗಳನ್ನಿರಿಸಿಕೊಂಡೇ ಸುಬ್ರಾಯ ಹೆಗ್ಗಡೆ, ಕುಂಪಣಿ ಸರಕಾರವನ್ನು ಇದಿರಿಸಲು ತೀರ್ಮಾನಿಸಿದ. ಆ ತೀರ್ಮಾನವನ್ನು ಆತ ಕೈಗೊಂಡುದು ಸುಳ್ಯ ಮಾಗಣೆಯ ಬಂಡಾಯದ ವಿಷಯ ತಿಳಿದಾಗ. ಕೊಡಗರೂ ಕನ್ನಡ ಜಿಲ್ಲೆಯವರೂ ಒಂದಾಗಿ ಹೋರಾಡಿದರೆಂದರೆ ಅವರಿಗೆ ವಿಜಯ ಕಟ್ಟಿಟ್ಟದ್ದೇ. ರಾಜನೀತಿಯನ್ನು ಬಲ್ಲ ತಾನು ಸೇರಬೇಕಾದುದೇ ಅಂಥವರನ್ನು.

ಕಲ್ಯಾಣಸ್ವಾಮಿಯಿಂದ ಬಂದ ಉತ್ತರವನ್ನೋದಿ ಹೆಗ್ಗಡೆಯ ಅಭಿಪ್ರಾಯ ಬಲಗೊಂಡಿತು. ಸೈನ್ಯದ ಸೂತ್ರಗಳು, ಕವಾಯಿತು, ಇಸ್ತಿಹಾರು, ಘೋಷಣೆ, ದೀವಟಿಗೆ, ಬಾವುಟ—ಇವೆಲ್ಲವೂ ತುಸು ವಿಚಿತ್ರವಾಗಿದ್ದುವು. ಆದರೂ ಆ ಶಿಬಿರವನ್ನು ಕುರಿತು ಬೇಹುಗಾರ ನೀಡಿದ ವಿವರ—ಪ್ರತ್ಯಕ್ಷ ದರ್ಶಿಯ ವರದಿ-ಅದ್ಭುತ ಎನಿಸುವಂತಿತ್ತು. ಹೆಗ್ಗಡೆ, ಜೋಯಿಸರನ್ನು ಕರೆಸಿ ತನ್ನ ಜಾತಕವನ್ನು ತೋರಿಸಿದ. ಹಸ್ತ ಸಾಮುದ್ರಿಕದವರಿಗೆ ಕೈ ನೀಡಿದ. ಒಳ್ಳೆಯ ಮುಹೂರ್ತನೋಡಿಕೊಂಡು ಕತ್ತಿ ಎತ್ತಲು ತೀರ್ಮಾನಿಸಿದ.

ಬಳಿಕ ಆ ಸರದಾರನ ಸೇನೆ ಸಿದ್ಧವಾಯಿತು. ಆತನ ಒಕ್ಕಲುಗಳಾದ ರೈತರೇ ಇದ್ದರು—ಮೊಗೇರರು ಮಹಮ್ಮದೀಯರಾಗಿ ಮತಾಂತರ ಹೊಂದಿದ್ದ ಪುಸ್ಲಾರರು, ಕೋಟಿಯವರು, ಇನ್ನಿತರರು.

"ಗದ್ದೆ ಕೆಲಸದ ಹೊತ್ತಿಗೆ ವಾಪಸು ಬಂದೇ ಬರ್ತೇವೆ" ಎಂದ ಹೆಗ್ಗಡೆ.

"ಈ ಯುದ್ಧದಲ್ಲಿ ಭಾಗವಹಿಸುವವರಿಗೆಲ್ಲಾ ತಲಾ ಒಂದೊಂದು ಸಾವಿರ ವರಹ ಬಹುಮಾನ!" ಎಂದು ಜಾಹೀರುಮಾಡಿದ.

ಡಂಗುರ ಹೊಡೆಸಿ ಇತರರಿಗೂ ತಿಳಿಸಿದ:

"ಯಾರು ಯಾರು ಬರ್ತೀರೋ ಅವರೆಲ್ಲಾ ಮುಂದೆ ಎಂದೆಂದಿಗೂ ಭೂಮಿಕಂದಾಯ ಕೊಡಬೇಕಾದ್ದಿಲ್ಲ!"

ಮನೆಯಲ್ಲಿ ಕುಳಿತು ಸುಮ್ಮನಿರುವುದರ ಬದಲು ಹೋಗಿ ಬರುವುದೇ

ಸರಿ—ಎಂದು ಹಲವರು ಯೋಚಿಸಿದರು. ಕೆಟ್ಟವನೂ ವಿದೇಶೀಯನೂ ಆದ ಬಿಳಿಯನನ್ನು ಸೋಲಿಸಿ ಹೊಡೆದೋಡಿಸುವುದು, ಮನುಷ್ಯನಾದವನು ಮಾಡಬೇಕಾದ ಸಾಹಸಕಾರ್ಯವಾಗಿಯೂ ಅವರಿಗೆ ತೋರಿತು. ಮುಸಲ್ಮಾನರಂತೂ ಹೆಗ್ಗಡೆಯ ದಂಡನ್ನು ಸೇರಲು ಹಿಂಜರಿಯಲಿಲ್ಲ. ವೀರ ಟಿಪ್ಪುವಿನ ಮರಣಕ್ಕೆ ಕಾರಣರಾಗಿದ್ದ ಇಂಗ್ಲಿಷರ ವಿಷಯದಲ್ಲಿ ಸಹಾನುಭೂತಿಯೇ ಇರಲಿಲ್ಲ ಅವರಿಗೆ. ಅಲ್ಲದೆ, ಕಲ್ಯಾಣಸ್ವಾಮಿಯ ಸೇನೆಯಲ್ಲೂ ಎಷ್ಟೋ ಜನ ಮುಹಮ್ಮದೀಯರಿರುವರೆಂದು ದೂತ ತಂದಿದ್ದ ವಾರ್ತೆ, ಅವರ ನಿರ್ಧಾರವನ್ನು ದೃಢಪಡಿಸಿತು.

ಸುಬ್ರಾಯ ಹೆಗ್ಗಡೆಯ ಸುತ್ತಲೂ ನೆರೆದ ಎಲ್ಲರಲ್ಲೂ ಆಯುಧಗಳಿರಲಿಲ್ಲ.

"ಪರವಾ ಇಲ್ಲ. ಮಂಗಳೂರಲ್ಲಿ ಕೊಡಿಸ್ತೇನೆ," ಎಂದ ಹೆಗ್ಗಡೆ.

ಕುದುರೆಗಳಂತೂ ಮೂರೇ ಇದ್ದುವು.

"ನದಿ ದಾಟುವಾಗ ಕುದುರೆಗಳಿದ್ದರೆ ತೊಂದರೆಯೇ. ಕುದುರೆ ಬೇಕಾದವರಿಗೆಲ್ಲ ಮಂಗಳೂರಲ್ಲಿ ಕೊಡಿಸ್ತೇನೆ,' ಎಂದೂ ಆತ ಆಶ್ವಾಸನೆ ನೀಡಿದ.

ಕುಲ ದೈವವನ್ನು ಪ್ರಾರ್ಥಿಸಿ, ಹಿರಿಯರನ್ನು ನಮಿಸಿ, ಹೆಗ್ಗಡೆಕಾಲ್ನಡಿಗೆಯಲ್ಲೆ ಹೊರಬಿದ್ದ. ಆ ದಳಪತಿಯನ್ನು ಉಳಿದವರು ಹಿಂಬಾಲಿಸಿದರು.

ಯಾರೂ ಮೀರಿಸುವುದು ಸಾಧ್ಯವಿಲ್ಲದಂತಹ ಮಾತುಗಾರ ಹೆಗ್ಗಡೆ. ಆತ ಕಾಣದ ಊರಿಲ್ಲ, ನೋಡದ ದೇಶವಿಲ್ಲ, ತಿಳಿಯದ ಜನರಿಲ್ಲ.

"ಹಿಂದೆ ಒಂದು ಸಾರೆ ನಾವು ಕೊಡಗಿಗೆ ಹೋಗಿದ್ದಾಗ ನಮಗೆ ಈ ಕಲ್ಯಾಣಸ್ವಾಮಿಯವರ ಪರಿಚಯವಾಯ್ತು. ಬಹಳ ದೊಡ್ಡ ಮನುಷ್ಯ, ಸಮುದ್ರವಿದ್ದ ಹಾಗೆ. ಅವರದು, ರಾಜಮನೆತನಕ್ಕೆ ಸಂಬಂಧಿಸಿದ ದೊಡ್ಡ ಶ್ರೀಮಂತ ಕುಟುಂಬ. ಆ ದರ್ಪವೇನು! ವೈಖರಿಯೇನು!"

ಕಲ್ಯಾಣಸ್ವಾಮಿಯನ್ನು ನೋಡಲು ತಾನು ಹೋದಾಗ ಹೆಗ್ಗಡೆ ಈ ವಿಷಯ ತನಗೆ ಹೇಳಿಯೇ ಇರಲಿಲ್ಲವಲ್ಲಾ — ಎಂದು ದೂತನಿಗೆ ಆಶ್ಚರ್ಯವೆನಿಸಿತು. ಆದರೆ ಕಲ್ಯಾಣಸ್ವಾಮಿಯೇನೂ 'ಹೆಗ್ಗಡೆ ತನಗೆ ಅಪರಿಚಿತ,' ಎಂದಿರಲಿಲ್ಲ. ಸರಿ. 'ಇವರಿಬ್ಬರು ಸ್ನೇಹಿತರಿದ್ದರೂ ಇರಬಹುದು' ಎಂದು ಸ್ವತಃ ದೂತನೇ ನಂಬತೊಡಗಿದ.

ವೇಗವಾಗಿ ಎಡಕ್ಕೂ ಬಲಕ್ಕೂ ಕತ್ತು ತಿರುಗಿಸುತ್ತ, ಕತ್ತು ತಿರುಗಿಸದೆ ಇದ್ದಾಗ ಮೀಸೆ ತಿರುವುತ್ತ, ಎದೆಯುಬ್ಬಿಸುತ್ತ, ಮುಖದ ಮೇಲೆ ಸದಾ ಗೆಲವನ್ನೇ ತೋರುತಿದ್ದ ಮಹಾನುಭಾವ ಸುಬ್ರಾಯ ಹೆಗ್ಗಡೆ. ತಲೆಗೂದಲನ್ನು ಹಿಂದಕ್ಕೆಳೆದು ಜುಟ್ಟು ಕಟ್ಟಿದ್ದ. ಕಿವಿಗಳಲ್ಲಿ ಕುಂಡಲಗಳಿದ್ದುವು. ನಾಲ್ವತ್ತರ ವಯಸ್ಸು. ಎತ್ತರದ ದೇಹ.

ಆತ ಬಾರಿಬಾರಿಗೂ ಹೇಳಿದ:

"ಈ ಮೊದಲೇ ನಾವು ಶುರುಮಾಡ್ಬೇದಾಗಿತ್ತು. ಆದರೆ ಕಲ್ಯಾಣಸ್ವಾಮಿ ಹೇಳಿಕಳಿಸಿದ್ರು – ಒಟ್ಟಿಗೇ ಆಗ್ಲೀಂತ ಅವರು ಪುತ್ತೂರು ಮಾರ್ಗವಾಗಿ ಬರ್ತಿದ್ದಾರೆ. ನಾವು ಕರಾವಳಿ ಹಾದಿಯಲ್ಲೆ ಮಂಗಳೂರು ಸೇರ್ತೀವಿ. ಅಲ್ಲಿ ಒಟ್ಟಾಗ್ತೀವಿ."

ವಾಸ್ತವವಾಗಿ, ಅಷ್ಟೊಂದು ತೀವ್ರ ಗತಿಯಿಂದ ಮಂಗಳೂರು ಸೇರಬೇಕೆಂಬ ಇಚ್ಛೆಯೇ ಹೆಗ್ಗಡೆಗಿರಲಿಲ್ಲ: ಆದರೆ ಕಲ್ಯಾಣಸ್ವಾಮಿಯ ಸೇನೆ ವೇಗವಾಗಿ ಸಾಗುತಿದ್ದುದರಿಂದ ಆತನೂ ಅನಿವಾರ್ಯವಾಗಿ ಅಷ್ಟೇ ವೇಗದಿಂದ ಮುಂದುವರಿಯಬೇಕಾಗಿತ್ತು.

ಆ ಸೇನೆ ಮಂಗಳೂರನ್ನು ಆಕ್ರಮಿಸುವ ಹೊತ್ತಿಗೆ ತಾನೂ ಅಲ್ಲಿಗೆ ಹೋಗಿ ಪರಾಕ್ರಮ ತೋರಿಸಬೇಕು, ಖಡ್ಗ ಯುದ್ಧದ ಕೌಶಲವನ್ನು ಉಳಿದವರೆದುರು ಪ್ರದರ್ಶಿಸಬೇಕು—ಎಂದು ಆತ ನಿರ್ಧರಿಸಿದ....

....ಕಲ್ಯಾಣಸ್ವಾಮಿಯ ದಂಡಯಾತ್ರೆಯ ವಿಷಯ ಮಂಜೇಶ್ವರದ ಜನ ಆಗಲೆ ಕೇಳಿ ತಿಳಿದಿದ್ದರು. ಆ ವೀರನ ವಿಷಯದಲ್ಲಿ, ಸ್ವಾತಂತ್ರ್ಯ ಪ್ರೇಮಿಗಳಾದ ಅಲ್ಲಿಯ ಜನರಿಗೆ ಒಳ್ಳೆಯ ಅಭಿಪ್ರಾಯವೂ ಇತ್ತು.

ಅಂಥವನ ಹೆಸರು ಹೇಳುತ್ತ ಹೆಗ್ಗಡೆಯ ದಂಡು ಬಂದಾಗ, ಊರಿನ ನಿವಾಸಿಗಳು ದಿಗ್ಭ್ರಮೆಗೊಂಡರು. ಸ್ವಲ್ಪಮಟ್ಟಿಗಾದರೂ ಹೆಗ್ಗಡೆಯ ಸ್ವಭಾವ ಪರಿಚಯ ಅವರಿಗೆ ತಿಳಿದೇ ಇತ್ತು. ಏನೇ ಆಗಲಿ, ಸಾಮೋಪಾಯದಿಂದಲೆ ಈತನ ಸೇನೆಯನ್ನು ಮುಂದಕ್ಕೆ ದಾಟಿಸಬೇಕೆಂದು ಅವರು ನಿರ್ಧರಿಸಿದರು.

ದೇವಸ್ಥಾನದ ಎದುರಿಗಿದ್ದ ವಿಶಾಲವಾದ ಜಾಗದಲ್ಲಿ ಬೀಡು ಬಿಟ್ಟು, ಸುಬ್ರಾಯ ಹೆಗ್ಗಡೆ ಊರ ಪ್ರಮುಖರಿಗೆ ಕರೆಕಳುಹಿದ. ಯುವಕ ಸಾಹುಕಾರ ರಾಮಯ್ಯ ಶಾನುಭಾಗನ ನೇತೃತ್ವದಲ್ಲಿ ಒಂದು ತಂಡ ಬಂದು ಹೆಗ್ಗಡೆಯನ್ನು ಭೇಟಿ ಮಾಡಿತು.

ಆತ ಕೇಳಿದ:

"ಶಾನುಭಾಗರೆ, ನೀವೇ ಏನು ಮುಖ್ಯಸ್ಥರು?"

"ಹೌದು."

"ಇಷ್ಟು ಚಿಕ್ಕ ವಯಸ್ನಲ್ಲೆ?"

"ಏನೋ, ಊರವರು ನನ್ನಲ್ಲಿ ವಿಶ್ವಾಸ ಇಟ್ಟಿದ್ದಾರೆ."

"ಸರಿ. ಇಲ್ಲಿ ಕುಂಪಣಿ ಸರಕಾರದ ಕಡೆಯೋರು ಯಾರಾದರೂ ಇದಾರೊ?"

"ಯಾರೂ ಇಲ್ಲ. ನಾವೆಲ್ಲಾ ಸ್ವಾತಂತ್ರ್ಯ ಪ್ರಿಯರು. ಕಲ್ಯಾಣ ಸ್ವಾಮಿಯವರ ದಂಡು ಇಲ್ಲಿಗೂ ಬರಬಹುದೂಂತ ನಾವು ಕಾದಿದ್ದೇವೆ."

"ಅವರು ಸ್ವತಃ ಬರೋದಿಲ್ಲ. ನಮ್ಮನ್ನು ಕಳಿಸಿದಾರೆ."

"ಸಂತೋಷ."

"ನಾವೇ ಅವರ ಪ್ರತಿನಿಧಿ ಅಂತ ತಿಳಿದುಕೊಳ್ಳಿ. ತೆಂಕುಂಬಳೆಯ ಹೆಗ್ಗಡೆ ಪರಿಚಯ ನಿಮಗಿದೆ ತಾನೆ?"

"ಇಲ್ಲದೆ ಉಂಟೆ?"

"ಸರಿ. ನನ್ನ ಸೈನಿಕರಿಗೆ ಇವತ್ತು ರಾತ್ರಿಯ ಭೋಜನದ ಏರ್ಪಾಟು ಆಗ್ಬೇಕಲ್ಲಾ...."

"ನಾವು ಮಾಡ್ತೇವೆ."

"ಇದೇನು ನಿಮ್ಮ ವರ್ತಕರೆಲ್ಲಾ ಬಾಗಿಲು ಹಾಕಿದಾರಲ್ಲಾ?"

"ತಮ್ಮ ಸೈನ್ಯ ಬಂದ ಸಂತೋಷದಲ್ಲಿ ಭಾಗಿಯಾಗ್ಬೇಕೂಂತ ಕಾದು ನಿಂತಿದಾರೆ."

"ಬರಲಿ, ಎಲ್ಲರೂ ಬರಲಿ! ಒಂದು ವಿಷಯ. ನೀವು ಯಾರೂ ಹೆದ್ದರಬೇಕಾದ್ದಿಲ್ಲ. ನಮ್ಮ ಮಿತ್ರರಾದ ಕಲ್ಯಾಣಸ್ವಾಮಿಯವರ ಆಜ್ಞೆಯೇ ಇದೆ – ಲೂಟಿ ಮಾಡಬಾರದೂಂತ. ನೀವಾಗಿ ತಂದು ಕಾಣಿಕೆ ಕೊಟ್ಟರೆ ಮಾತ್ರ ತಗೋತೇವೆ."

"ಊಟವಾದ ಮೇಲೆ ಕಾಣಿಕೆ ಸಲ್ಲಿಸ್ತೇವೆ."

"ಆಗಬಹುದು."

....ಹಾಗೆ ನಡೆಯಿತು, ದೇವಾಲಯದ ಬಾಗಿಲಲ್ಲೆ ಸಾವಿರ ಜನರಿಗೆ ಸಂತರ್ಪಣೆ, ಶಾನುಭಾಗನಾದಿಯಾಗಿ ಗೌಡ ಸಾರಸ್ವತ ಬ್ರಾಹ್ಮಣರ

ದೊಡ್ಡ ತಂಡವೇ ಅಡುಗೆಗೆ ನಿಂತಿತು; ಬಡಿಸಿತು.

ತನ್ನ ಹಿಂಬಾಲಕರನ್ನುದ್ದೇಶಿಸಿ ಹೆಗ್ಗಡೆ ಹೇಳಿದ:

"ಚೆನ್ನಾಗಿ ತಿನ್ನಿ ! ದಾಕ್ಷಿಣ್ಯ ಮಾಡ್ಬೇಡಿ !"

ಸ್ವತಃ ತಾನು, ಇಬ್ಬರು ಭಟರೊಡನೆ ಶಾನುಭಾಗನ ಮನೆಗೆ ಹೋಗಿ ಅಲ್ಲಿಯೆ ಊಟಮಾಡಿದ. ಊರ ವರ್ತಕರ ಪರವಾಗಿ ಅಲ್ಲಿಯೇ ಕಾಣಿಕೆ ಸ್ವೀಕರಿಸಿದ: ಬೆಳ್ಳಿಯ ತಟ್ಟೆಯಲ್ಲಿದ್ದ ಒಂದು ಸಾವಿರ ವರಹ, ಬೆಲೆಬಾಳುವ ಕಲ್ಲುಗಳು, ಪಟ್ಟೆ ಪೀತಾಂಬರಗಳು. ಹೆಗ್ಗಡೆ ಸಂತೋಷವನ್ನೂ ವ್ಯಕ್ತಪಡಿಸಲಿಲ್ಲ; ಬೇಸರವನ್ನೂ ತೋರಿಸಿಕೊಳ್ಳಲಿಲ್ಲ.

ಆ ಇಬ್ಬರು ಭಟರಲ್ಲಿ ಅತ್ಯಂತ ಆಪ್ತನಾದ ಒಬ್ಬನೊಡನೆ, ಆ ರಾತ್ರಿಯೆ ಮಂಜೇಶ್ವರದ ಕಾಣಿಕೆಯನ್ನು ತೆಂಕುಂಬಳೆಯ ತನ್ನ ಮನೆಗೆ ಆತ ಕಳುಹಿದ.

ಬೆಳಗ್ಗೆ ಎಲ್ಲರೂ ತಡವಾಗಿ ಎದ್ದರು. ಕತ್ತಲಾಗುವ ಹೊತ್ತಿಗೆ ಉಳ್ಳಾಲ ಸೇರಿದರಾಯಿತೆಂದು ಬಿಸಿಲೇರಿದ ಮೇಲೆಯೆ ಅವರು ಹೊರಟರು.

ಉತ್ತರಾಭಿಮುಖವಾಗಿ ಕರಾವಳಿಯುದ್ದಕ್ಕೂ ಮಾರ್ಗ. ಅನುಕೂಲವಾಗಿದ್ದೊಂದು ಕಡೆ ಸಮುದ್ರಸ್ನಾನ. ತೆಂಗಿನ ತೋಟಗಳ ಸೂರೆ ಎಳನೀರಿಗಾಗಿ.

ಅವರು ಪುಂಡಾಟಿಕೆಯವರೆಂದೇ ಬಗೆದರು, ಜನ. ಆ ತಂಡ ಬರುತಿದ್ದಂತೆಯೆ ರಕ್ಷಣೆಗೆಂದು ದೂರದೂರ ಓಡಿದರು.

ಉಳ್ಳಾಲ ಬಂತು.

ಅದರಾಚೆಗೆ ಸ್ವಲ್ಪ ದೂರದ ಹಾದಿ. ಬಳಿಕ ವಿಸ್ತಾರವಾದ ನೇತ್ರಾವತಿ ನದಿ. ನದಿ ದಾಟಿದ ಮೇಲೆ ಮಂಗಳೂರು....

ಸುತ್ತಮುತ್ತಲಿದ್ದವರೊಡನೆ ಹೆಗ್ಗಡೆ ಹೇಳಿದ:

"ಕಲ್ಯಾಣಸ್ವಾಮಿಯ ಸೈನ್ಯ ಇವತ್ತು ಬಂಟವಾಳದಿಂದ ಹೊರಟಿರಬಹುದು. ನಾಳೆ ಅವರೆಲ್ಲ ಮಂಗಳೂರು ಸೇರ್ತಾರೆ. ನಾವೂ ಅಷ್ಟು ಹೊತ್ತಿಗೆ...."

# ೬

ಕಡಲು ಸೇರುವ ನದಿಯಂತೆ ನಿಧಾನವಾಯಿತು ಸೇನೆಯ ಮುನ್ನಡೆ. ಹಾದಿಯೂ ಅಗಲವಾಗಿತ್ತು, ಎತ್ತಿನ ಬಂಡಿ ಹೋಗುವಷ್ಟು. ದಟ್ಟವಾಗಿದ್ದ ಸೈನಿಕ ಸಂದಣಿ ತಮ್ಮ ಸಾಮರ್ಥ್ಯದ ವಿಷಯದಲ್ಲಿ ಅಚಲ ವಿಶ್ವಾಸವಿದ್ದ ಮುಖ ಮುದ್ರೆಗಳು....

ಹೀಗೆ ಸೇನೆ ಮುಂದೆ ಸಾಗಿದ್ದರೂ ಕಲ್ಯಾಣಸ್ವಾಮಿಗೆ, ದಂಡನಾಯಕರಿಗೆ, ಬಂಗರಾಜ–ಅಣ್ಣಿಗೌಡರಿಗೆ, ದಳಪತಿಗಳಾಗಿದ್ದ ಕುಡಿಯ ಸೋದರರಿಗೆ ಒಳಗಿಂದೊಳಗೆ ಕಾತರವಿದ್ದೇ ಇತ್ತು. ದೊಡ್ಡ ಪ್ರಮಾಣದಲ್ಲಿ ಇಂಗ್ಲಿಷರ ದಂಡು ಅಲ್ಲಿಲ್ಲವೆಂದೇನೋ ಬಂಗರಾಜ ತಿಳಿಸಿದ್ದ. ಆದರೆ ಫಿರಂಗಿಗಳು ಮದ್ದು ಗುಂಡುಗಳು? ತಂತ್ರದ ಸಮರದಲ್ಲಿ ನಿಷ್ಣಾತರಾದ ಆಂಗ್ಲರು, ಎಂತಹ ವ್ಯೂಹ ರಚನೆಯನ್ನು ಮಾಡಿರುವರೊ? ಯಾವ ಸಂದುಗೊಂದಿಗಳಲ್ಲಿ ಏನು ಅಪಾಯವೊ?

ಆದರೆ, ಆ ಕಾತರದೊಡನೆಯೆ ಹೆಣೆದುಕೊಂಡಿತ್ತು, ಗುರಿ ಸೇರುವ ತವಕ. ಅವರನ್ನು ಕಾಡುತಿತ್ತು, ಆಗದ ಅನುಭವವನ್ನು ಬೇಗನೆ ಪಡೆಯುವ ಹಂಬಲ.

ಬೆಳಗಿನ ಹೊತ್ತು ಮಂಗಳೂರು ಸೇರುವುದೇ ಸರಿಯೆಂದು, ಊರು ಹರದಾರಿ ದೂರವಿದ್ದಾಗಲೆ ದಂಡು ತಂಗಿತು. ಸುಖಭೋಜನವಿರಲಿಲ್ಲ; ಸುಖನಿದ್ದೆಯೂ ಇರಲಿಲ್ಲ. ಅನಿರೀಕ್ಷಿತವಾಗಿ ಧಾಳಿ ಸಂಭವಿಸಬಹುದೆಂದು ಅರ್ಧಕ್ಕರ್ಧ ಪಡೆ ಜಾಗೃತವಾಗಿಯೇ ಇತ್ತು. ಒಬ್ಬ ನಿದ್ದೆ ಹೋದಾಗ ಇನ್ನೊಬ್ಬನಿಗೆ ಎಚ್ಚರ. ತಿಂಗಳ ಬೆಳಕು ಮುಗಿದ ಬಳಿಕ, ಕತ್ತಲೆಯನ್ನೂ ಇರಿದು ಕಾಣುವ ಯತ್ನ.

ನಡುವಿರುಳಿನ ಹೊತ್ತಿಗೆ ಮಂಗಳೂರಿನಿಂದ ಬೇಹುಗಾರ ತನಿಯಪ್ಪ ಬಂದ. ಆತ ಹೇಳಿದುದನ್ನೆಲ್ಲ ಕೇಳಿದ ಅನಂತರವೂ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯಿತು.

ಇಂಗ್ಲಿಷರ ಸೈನ್ಯದ ಚಲನವಲನವೇ ಮಂಗಳೂರಲ್ಲಿ ಇಲ್ಲವೆಂದರೆ? ರಕ್ಷಣೆಯ ಯಾವ ಸನ್ನಾಹವೂ ನಡೆಯುತ್ತಿಲ್ಲವೆಂದರೆ?

" ಈ ಜನ ಮಂಗಳೂರನ್ನೊ ಬಿಟ್ಟು ಓಡಿಹೋಗ್ತಾರೋ ಹ್ಯಾಗೆ?" ಎಂದು ಕೇಳಿದ ನಂಜಯ್ಯ.

" ಹಾಗಾದರೆ ಪುತ್ತೂರಿನಿಂದ ಓಡಿಬಂದ ಕಲೆಕ್ಟರು ಇಲ್ಲಿ ಮಾಡಿದ್ದಾದರೂ ಏನು?" ಎಂದ ರಾಮುಗೌಡ.

ಬಂಗರಾಜ ನುಡಿದ :

" ನನಗೇನೋ ಖಾತ್ರಿಯಾಗಿದೆ. ದೊಡ್ಡ ಪ್ರಮಾಣದ ಪ್ರತಿಭಟನೆಯೇ ಮಂಗಳೂರಲ್ಲಿ ಇರೋದಿಲ್ಲ."

ಎಲ್ಲ ಮಾತುಗಳಿಗೂ ಕಿವಿಗೊಟ್ಟು ಕಲ್ಯಾಣಸ್ವಾಮಿ ಹೇಳಿದ :

" ಇನ್ನು ಕಾಲವಿಳಂಬ ಸರಿಯಲ್ಲ. ಬೆಳಗಾದ ತಕ್ಷಣ ಧಾಳಿ ಮಾಡೋಣ. ಒಂದು ಹಾದಿಯಲ್ಲೆ ನಾವು ಹೋದರೆ ಸಾಕೆ? ಅಥವಾ ಬೇರೆ ಕಡೆಯಿಂದಲೂ ಮುತ್ತಿಗೆ—"

" ಅದರ ಅಗತ್ಯ ಕಾಣಲಿಲ್ಲ," ಎಂದ ಬಂಗರಾಜ.

" ಒಂದೇ ದಾರೀಲಿ ನಾವು ಹೋದರೂ ಬೇರೆ ಕಡೆಯಿಂದ ಬಂದು ನಮ್ಮನ್ನ ಸುತ್ತುವರಿಯೋಕೆ ಅವರಲ್ಲಿ ಅಷ್ಟು ದೊಡ್ಡ ಸೈನ್ಯ ಎಲ್ಲಿದೆ?" ಎಂದು ಕೇಳಿದ ರಾಮುಗೌಡ.

ಕಲ್ಯಾಣಸ್ವಾಮಿಯೆಂದ :

" ನಿಜ. ನೇರವಾಗಿ ಈ ಹಾದಿಯಲ್ಲೇ ಹೋಗೋಣ."

....ಬೆಳಗ್ಗೆ ಬೇಗನೆದ್ದು, ಅನಿವಾರ್ಯವಾದ ವಿಧಿಗಳನ್ನು ಅವಸರವಾಗಿ ಮುಗಿಸಿ, ಸೈನಿಕರು ಮುನ್ನಡೆದರು. ರಾತ್ರಿ ಪವಡಿಸಿದ್ದ ಕೆಂಧೂಳು, ಅವರ ಕಾಲ್ತುಳಿತದಿಂದ ಗಡಬಡಿಸಿ ಹಾರಾಡಿತು. ಮರಗಳೆಡೆಯಿಂದ ಇಣಿಕಿ ನೋಡಿದ ಬಾಲರವಿ, ತನ್ನನ್ನು ಮರೆಮಾಡಲೆಳಸಿದ ಧೂಳನ್ನು ಕಂಡು ಮುಗುಳುನಕ್ಕ. ಎಚ್ಚರಗೊಂಡಿದ್ದರೂ ಹಾರಿ ಹೋಗದೆ ಚಿಲಿಪಿಲಿಗುಟ್ಟುತಿದ್ದ ಹಕ್ಕಿಗಳು, ಇದೇನು ಗಂಡಾಂತರ ಬಂತೆಂದು ಗಾಬರಿಗೊಂಡುವು. ತಮ್ಮ ತಂಟೆಗೆ ಬರದೆಯೆ ಸಾಗಿಹೋದ ಅಷ್ಟೊಂದು ಜನರನ್ನು ಕಂಡು, 'ಸದ್ಯಃ ಹೋದರಲ್ಲ! ಇಷ್ಟೊಂದು ಬೆಳಗ್ಗೆ ಏನು ಕೆಲಸವೋ. ಹುಚ್ಚರು!' ಎನ್ನುತ್ತ ಆ ಹಕ್ಕಿಗಳು ತಮ್ಮ ಚಿಲಿಪಿಲಿಗಾನದಲ್ಲಿ ಮತ್ತೆ ನಿರತವಾದುವು.

ಮರಗಳಿಂದಲೂ ಮೇಲಕ್ಕೇರಿ ಸೂರ್ಯ, 'ನಾನು ಜವ್ವನಿಗ,

ಪ್ರತಾಪ ಶಾಲಿ' ಎನ್ನುತಿದ್ದಂತೆಯೆ, ಸೇನೆ ಊರನ್ನು ಸಮೀಪಿಸಿತು. ಬಿಸಿಲಿಗೆ ಒಣಗಿ ಬಾಯಿಬಿಡುತಿದ್ದ ಹೊಲಗಳಿದ್ದುವು ಎರಡೂ ಕಡೆ. ದೂರ ದೂರದಲ್ಲಿ ಮನೆಗಳಿದ್ದುವು. ಮನೆಯಂಗಳದಲ್ಲಿ, ಲಂಗೋಟಿಯನ್ನಷ್ಟೆ ಬಿಗಿದು, ಸುರುಳಿಸುತ್ತಿದ್ದ ಮಾವಿನೆಲೆಗಳಿಂದ ಹಲ್ಲುಜ್ಜುತ್ತ ನಿಂತಿದ್ದ ಗಂಡಸರು, ಅಪೂರ್ವವೆನಿಸಿದ್ದ ಆ ಸೇನೆಯನ್ನು ನೋಡಿ, ಹೃದಯಕ್ರಿಯೆ ನಿಂತವರಂತೆ ಕ್ಷಣಕಾಲ ಮೂಕರಾದರು. ಹೆಂಗಸರು ಮನೆಯೊಳಗೇ ನಿಂತು ಬಿದಿರತಟಿಕೆಗಳೆಡೆಯಿಂದ ಬೀದಿಯ ಕಡೆ ನೋಡಿದರು. ಆ ಎರಡು ಮೂರು ದಿನಗಳಿಂದ ಅವರು ಕೇಳುತಿದ್ದ ಕಿಂವದಂತಿ ಸುಳ್ಳಾಗಿರಲಿಲ್ಲ. ಬಂದೇ ಬಿಟ್ಟಿತ್ತು ಅವರು ನಿರೀಕ್ಷಿಸಿದ್ದ ಸೇನೆ.

ತಮಗರಿವಿಲ್ಲದಂತೆಯೇ ಜನರು ಮಂತ್ರ ಜಪಿಸಿದರು:

"ಕಲ್ಯಾಣಪ್ಪನ ದಂಡು! ಕಲ್ಯಾಣಪ್ಪನ ದಂಡು!"

ಒಮ್ಮೆಲೆ ನಿದ್ದೆಯಿಂದ ಎಚ್ಚೆತ್ತವರಂತೆ ಜನ, ಮಾಡುತಿದ್ದ ಕೆಲಸಗಳನ್ನು ಅಷ್ಟಕ್ಕೆ ನಿಲ್ಲಿಸಿ, ಅಂಗವಸ್ತ್ರಗಳನ್ನು ಅಡ್ಡಸುತ್ತಿಕೊಳ್ಳುತ್ತಾ ಸೇನೆಯ ಹಿಂದೆ ಓಡಿದರು.

ಮನೆ ಹೆಂಗಸರಷ್ಟೆ ಕೂಗಿ ಕರೆದರು:

"ಬನ್ನಿ! ಹೋಗ್ಬೇಡಿ! ಬನ್ನಿ!"

ಕಡಿದಾದ ಬಳಸು ಹಾದಿ. ಅದನ್ನೇರಿದ ಬಳಿಕ ಊರು.

ಬಂಗರಾಜ ಕಲ್ಯಾಣಸ್ವಾಮಿಯೊಡನೆ ನುಡಿದ:

"ಮೊದಲು ಸಿಗೋದು ಕಂಕನಾಡಿ. ನೇರವಾಗಿ ಹೋದರೆ ಹಂಪನಕಟ್ಟೆಗೆ ಹೋಗ್ತೇವೆ – ಮೈದಾನಿಗೆ. ಬಲಕ್ಕೆ ತಿರುಗಿದರೆ ಬಾವುಟಗುಡ್ಡೆಗೆ."

ಕಲ್ಯಾಣಸ್ವಾಮಿ ಮರುಮಾತನಾಡಲಿಲ್ಲ; ಮೌನವಾಗಿ ತಲೆಯಾಡಿಸಿದ.

ಎಲ್ಲರ ಹೃದಯಗಳೂ ಉದ್ವೇಗದಿಂದ ಡವಡವನೆ ಹೊಡೆದುಕೊಂಡುವು. ಆದರೆ ಅವರ ಪದಾಘಾತದಿಂದ ಮಾತ್ರ, ಹಲವು ಸಹಸ್ರ ಅವಲಕ್ಕಿಯ ರಾಟೆಗಳು ಏಕಕಾಲದಲ್ಲಿ ಕೆಲಸಮಾಡಿದಂತೆ ಸದ್ದು ಹೊರಟಿತು.

ಕಡಿದಾದ ಹಾದಿ ಮುಗಿದು 'ಏರಿ' ಬಂತು. ಅದು ದಾಟಿದೊಡನೆಯೆ ಗೋಚರವಾಯಿತು ಹೊಗೆಯಾಡುತಿದ್ದ ಊರು.

ಕೈಚಾಚಿ ಬೆರಳೆತ್ತಿ ಅದನ್ನು ತೋರಿಸುತ್ತಾ ಬಂಗರಾಜ ಹೇಳಿದ:

" ಅದೋ ಮಂಗಳೂರು !"

*   *   *   *   *

" ಅದೋ ಮಂಗಳೂರು !"

—ಅರ್ಧ ಹರದಾರಿಯಷ್ಟು ಅಗಲವಾಗಿದ್ದ ನೇತ್ರಾವತಿ ನದಿಯಾಚೆಗೆ ಹೊಗೆಯಾಡುತಿದ್ದುದನ್ನು ಅನುಚರರಿಗೆ ತೋರಿಸುತ್ತ ಸುಬ್ರಾಯ ಹೆಗ್ಗಡೆ ಹೇಳಿದ.

ಮತ್ತೂ ವಿವರಿಸುತ್ತ ಆತನೆಂದ:

" ಮೊದಲು ಸಿಗೋದು ಬೋಳಾರ. ಮೇಲಕ್ಕೆ ಹೋದರೆ ಹಂಪನ ಕಟ್ಟೆ. ಎಡಕ್ಕೆ ತಿರುಗಿದರೆ ಬಂದರ; ಬಲಕ್ಕೆ ತಿರುಗಿದರೆ ಬಾವುಟಗುಡ್ಡ."

" ಈ ಹೊಳೆಯೊಂದು ಇಲ್ಲದೇ ಹೋಗಿದ್ದರೆ ಎಷ್ಟು ಚೆನ್ನಾಗಿರ್ತಿತ್ತು," ಎಂದನೊಬ್ಬ.

ಇನ್ನೊಬ್ಬ ಕೇಳಿದ:

" ಈಸಿಕೊಂಡು ಹೋಗೋದು ಸಾಧ್ಯವೊ ?"

ಮತ್ತೊಬ್ಬ ನಕ್ಕು ಹೇಳಿದ:

" ಕಡಲಿಗೆ ತಾನೆ? ಖಂಡಿತ ಸಾಧ್ಯ. ಅರ್ಧದಲ್ಲಿ ಕೈಕಾಲು ಬಿಟ್ಟರೂ ಸರಿ. ತೇಲಿಕೊಂಡೇ ಹೋಗ್ಬೌದು."

ಹೆಗ್ಗಡೆ ಹೇಳಿದ:

" ವ್ಯೊದಿನೆ, ಓ ಅಲ್ಲಿ ಮೂರು ನಾಲ್ಕು ದೊಡ್ಡ ದೋಣಿಗಳು ಕಾಣಿಸ್ತಾವೆ. ಹೋಗಿ, ಕರಕೊಂಡು ಬಾ. ಎಲ್ಲಾ ನಿನ್ನ ಜಾತಿಯವರೇ, ಹ್ನಾ! ಆಚೆ ದಡ ತಲಪಿದ್ಮೇಲೆ ಒಬ್ಬೊಬ್ಬರಿಗೂ ಒಂದೊಂದು ಸಾವಿರ ವರಹ ಕೊಡ್ತೇವೇಂತ ಹೇಳು."

" ಹೇಳ್ತೀನಿ," ಎಂದ ವ್ಯೊದಿನೆ.

ಆತನ ಜತೆಯಲ್ಲಿ ಸಶಸ್ತ್ರರಾದ ಬೇರೆಯೂ ಇಬ್ಬರು ಮೂವರು ಹೋದರು.

ಕೆಳಗಿದ್ದ ದೋಣಿಗಳನ್ನು ಹುಟ್ಟುಹಾಕುತ್ತಾ ಅಂಬಿಗರು ಹೆಗ್ಗಡೆ ಇದ್ದ ಕಡೆಗೆ ತಂದು ನಿಲ್ಲಿಸಿದರು.

ಅವರಲ್ಲಿ ಮುಖಂಡನಂತೆ ತೋರಿದವನೊಬ್ಬ ಹೇಳಿದ:

" ಅಡ್ಡಬಿದ್ದೆವು."

" ಹೊಳೆಯಲ್ಲಿ ನಿಂತು ಅಡ್ಡ ಬೀಳ್ತಾನಂತೆ !" ಎಂದು ಸೈನಿಕನೊಬ್ಬ ನಕ್ಕ.

ಆ ಮಾತು ಕೇಳಿಸದವನಂತೆ ಹೆಗ್ಗಡೆಯೆಂದ:

" ನಾವು ಯಾರು ತಿಳೀತೊ ?"

" ಇಲ್ಲ."

" ಒಳ್ಳೇದು. ನಮಗೆ ಈ ಕೂಡಲೆ ಮಂಗಳೂರಿಗೆ ಹೋಗ್ಬೇಕಾಗಿದೆ. ಸರಕಾರದ ಹತ್ತಿರ ಜರೂರು ಕೆಲಸವಿದೆ."

ಆ ಮುಖಂಡ ನುಣ್ಣಗೆ ಕ್ಷೌರ ಮಾಡಿದ್ದ ತಲೆಯನ್ನು ಸವರಿಕೊಂಡ. ಅದನ್ನು ನೋಡಿ ಹೆಗ್ಗಡೆಯೆಂದ:

" ಯಾಕಪ್ಪಾ ? ಮ್ಯೊದಿನೆ ಹೇಳ್ಲಿಲ್ವೆ ?"

" ಹೇಳಿದ. ಆದರೆ, ಆಮೇಲೆ—"

" ಏನು ಹೇಳಿದ ? ಏನು ಆಮೇಲೆ ?"

" ನಾಲ್ಕು ದೋಣಿಗೂ ಸೇರಿ ನೂರು ವರಹ ಕೊಡ್ತೀರಂತೆ."

" ನೋಡಿದೆಯಾ ? ಹೌದೇನೋ ಮ್ಯೊದಿನೆ ?"

ಮ್ಯೊದಿನೆ ಎಲ್ಲೋ ಮುಖ ಮರೆಸಿದ್ದ.

" ಬಾಕೀದು ಒಳಗೆ ಹಾಕ್ಬೇಕೂಂತ ಮಾಡಿದನೋ ಏನೋ ! ಹುಂ ! ನಾವು ಯಾರು ತಿಳೀತೋ ? ತೆಂಕುಂಬಳೆಯ ರಾಜರು – ಸುಬ್ರಾಯ ಹೆಗ್ಡೆ ! ಒಬ್ಬೊಬ್ಬರಿಗೆ ಒಂದೊಂದು ಸಾವಿರ ವರಹ ಕೊಡ್ತೇವೆ !"

ಕ್ಷೀಣವಾದ ಸ್ವರದಲ್ಲಿ ಅಂಬಿಗ ಹೇಳಿದ:

" ಆಗಲಿ ಒಡೆಯ. ಎಷ್ಟು ಜನ ದಾಟ್ತಾರೆ ?"

" ಎಲ್ಲರೂ !"

" ಒಂದೇ ಸಲ ಆಗೋದಿಲ್ವಲ್ಲಾ."

" ಅರೇ ! ಎರಡು ಸಲ ದಾಟ್ಸಯ್ಯಾ; ಮೂರು ಸಲ ದಾಟ್ಸು !"

" ಅಪ್ಪಣೆ."

ಎಲ್ಲರೂ ಒಮ್ಮೆಲೆ ದೋಣಿಗಳಿಗೆ ಏರಲು ಹೊರಟರು. ಹೆಗ್ಗಡೆ ಗದರಿ ಹೇಳಿದ:

" ಕತ್ತೆ ಜಾತಿ ! ಬುದ್ಧಿ ಇಲ್ಲದ್ದು ! ಮುಳುಗಿ ಸಾಯ್ತೀರೇನು ಎಲ್ಲರೂ ? ಒಂದೊಂದು ದೋಣಿಗೆ ನೂರು ನೂರು ಜನ ಹತ್ತಿದರೆ ಸಾಕು...."

ದೋಣಿಯವನ ಕಡೆಗೆ ತಿರುಗಿ ಆತನೇ ಕೇಳಿದ: "ಅಷ್ಟಾಗ್ತದೇನಪ್ಪಾ?"

"ಓ" ಎಂದ ಅಂಬಿಗರ ಪ್ರಮುಖ.

ಆತನ ದೋಣಿಯಲ್ಲೇ ಹೆಗ್ಗಡೆಯೂ ಕುಳಿತ.

ಆಯುಧಗಳು – ಆ ಜನ – ಅವರ ಮಾತು....ಪುತ್ತೂರಿನ ದಾರಿಯಾಗಿ ಕಲ್ಯಾಣಪ್ಪನ ದಂಡು ಬರುವ ವಿಷಯ ಆ ಅಂಬಿಗರಿಗೆ ಗೊತ್ತಿತ್ತು. ಪಾಣೆಮೊಗರಿನಿಂದಲೆ ನೀರಲ್ಲಿ ತೇಲಿ ಬಂದಿತು ಆ ವಾರ್ತೆ. ಆದರೆ ಈ ಕಡೆಯಿಂದ ಇವರೆಲ್ಲ?

ಸಾವಿರ ವರಹ ಸಿಗುತ್ತದೆಂದಲ್ಲ; ಸದ್ಯಃ ಈ ಸಹವಾಸ ತಪ್ಪಿದರೆ ಸಾಕೆಂದು, ಅಂಬಿಗರು ದೋಣಿ ನಡೆಸಿದರು.

ನದಿ ಹರಿದಂತೆ ದೋಣಿಗಳೂ ಸರಿದುವೆಂದು ಯಾವನೋ ಒಬ್ಬ ಕೇಳಿದ:

"ಯಾಕಪ್ಪಾ ಕೆಳಕ್ಕೆ?"

"ಇದು ಕುಂಬಳೆ ಹೊಳೆಯಲ್ಲ ಕಣಪ್ಪೋ," ಎಂದು ಹಾಗೆ ಕೇಳಿದವನನ್ನು ಲೇವಡಿ ಮಾಡಿದ ಇನ್ನೊಬ್ಬ.

ಕಡಲು ಕಾಣಿಸುತಿತ್ತು. ಅದನ್ನು ನೋಡುತ್ತ ಹೆಗ್ಗಡೆಯ ಬಳಿಯಲ್ಲಿದ್ದವನೊಬ್ಬ ಕೇಳಿದ:

"ಆ ಕಡಲು ದಾಟಿ ಬಂದರಾ ಕುಂಪಣಿಯೋರು?"

ಆ ಪ್ರಶ್ನೆಗೆ ಉತ್ತರವಾಗಿ ಇನ್ನೊಬ್ಬನೆಂದ:

"ಬರೇ ಬೆಪ್ಪ. ದಾಟಿ ಬರದೆ ಹನುಮಂತನ ಹಾಗೆ ಹಾರ್ಕೊಂಡು ಬರೋಕಾಗ್ತದಾ?"

ಆ ಸಂಭಾಷಣೆಯೇ ಕೇಳಿಸದ ಹಾಗಿತ್ತು ಹೆಗ್ಗಡೆಯ ಮನೋಸ್ಥಿತಿ. ಉಳ್ಳಾಲದಲ್ಲಿ ಮಲಗಿದ್ದ ಸೈನಿಕರು ಏಳುವುದೆ ತಡವಾಯಿತು. ಆತ ಯೋಚಿಸಿದ: ಹಗಲು ಹೀಗೆ ದಾಟುವುದರಲ್ಲಿ ಅಪಾಯವಿಲ್ಲದಿಲ್ಲ. ದಡದಲ್ಲಿ ಯಾರೂ ಇರುವುದಿಲ್ಲ ಎಂದಿಟ್ಟುಕೊಳ್ಳೋಣ. ಆದರೆ ಅಕಸ್ಮಾತ್ ಅಲ್ಲಿ ಸೈನ್ಯವಿದ್ದರೆ? ನಸುಕಿನಲ್ಲಿ ದಾಟುವುದೇ ಮೇಲಾಗಿತ್ತು. 'ಥೂ! ಈ ಜನರನ್ನು ಕಟ್ಟಿಕೊಂಡು....'

ದೋಣಿಗೆ ಹಾಯಿ ಬಿಗಿದ ಒಂದು ಕ್ಷಣ ಚಟಪಟ ಸದ್ದು. ಬಳಿಕ ಗಾಳಿ ತುಂಬಿದೊಡನೆ ಪ್ರವಾಹಕ್ಕೆ ಇದಿರಾಗಿ ನೇರವಾಗಿ ಎದುರು ದಂಡೆಗೆ

ಸ್ವಲ್ಪ ಬಾಗಿ ಚಲನೆ. ನೀರನ್ನೆ ಮುಟ್ಟುತಿತ್ತೇನೋ ಎನ್ನುವಂತಿತ್ತು ದೋಣಿಯ ಅಂಚು. ಗಾಳಿಗಿಂತಲೂ ಹೆಚ್ಚು ವೇಗ. ಹಾರುವ ಹಕ್ಕಿಯ ಹಾಗೆ. ಸೀಳುವ ಬಾಣದ ಹಾಗೆ.

ಹೆಗ್ಗಡೆಯನ್ನು ಅಂಬಿಗ ಕೇಳಿದ :

" ಬೋಳಾರದಲ್ಲಿ ತಾನೆ ಇಳಿಯೋದು ?"

ಅನ್ಯಮನಸ್ಕನಾಗಿದ್ದ ಹೆಗ್ಗಡೆಯೆಂದ :

" ಇನ್ನೆಲ್ಲಿ ?"

ಮತ್ತೆ ಅಂಬಿಗ ಮಾತನಾಡಲಿಲ್ಲ.

ದೋಣಿಗಳು ನಡುನೀರಿಲ್ಲಿದ್ದಾಗ ಒಬ್ಬ ಕೂಗಿಕೊಂಡ :

" ಅಗೋ ಸೈನ್ಯ !"

ಆಚೆ ದಂಡೆಯ ಮೇಲೆ—

" ಎಲ್ಲಿ ? ಎಲ್ಲಿ ?"

" ಅಗೋ!"

ಅಂಬಿಗರೆಲ್ಲ ಕೇಳಿದರು :

" ಅತ್ತಿತ್ತ ಅಲ್ಲಾಡ್ಬೇಡಿ. ದೋಣಿ ಹುಷಾರಿ !"

ಹೆಗ್ಗಡೆಯ ದೋಣಿಯಲ್ಲಿದ್ದವನೊಬ್ಬ ಕೂಗಿಕೊಂಡ :

" ಏನಪ್ಪ ಮಾಡೋದು ?"

" ಮುಚ್ಚು ಬಾಯಿ !" ಎಂದ ಹೆಗ್ಗಡೆ, ಆಚೆಯ ದಡದಲ್ಲಿದ್ದ ಕೆಲ ಜನರು ಸೈನಿಕರ ಏನೆಂಬುದನ್ನು ಇನ್ನೂ ಇತ್ಯರ್ಥ ಮಾಡಲಾರದೆ.

ಅಂಬಿಗ ಕೇಳಿದ :

" ಏನಾಯ್ತು ಏನಾಯ್ತು ?"

ಆ ಪ್ರಶ್ನೆಗೆ ಉತ್ತರವೆಂಬಂತೆ ಒಮ್ಮೆಲೆ ಬೆಂಕಿಯ ಉಂಡೆಗಳು ಧಾವಿಸಿ ಬಂದುವು—ಫಿರಂಗಿಯಿಂದಲೆ ಹಾರಿಸಿದ ಗುಂಡುಗಳು. ನದಿಯ ದಂಡೆಯ ಮೇಲಿನಿಂದಲೆ ಫಿರಂಗಿ........ಒಂದು, ಎರಡು, ಮೂರು....ಪುನಃ ಪುನಃ. ನೀರಿಗೆ ಕೆಲವು; ದೋಣಿಗಳಿಗೆ, ಜನರಿಗೆ, ಕೆಲವು. ಹಾಹಾಕಾರ ! ಮುಳುಗು ವವನ ಸಾಯುವವನ ಬೊಬ್ಬೆ. ಗುಂಡೊಂದು ಬಂದು ಹೆಗ್ಗಡೆಯನ್ನೂ ಬಳಿಯಲ್ಲಿದ್ದ ಇಬ್ಬರನ್ನೂ ಬಲಿತೆಗೆದುಕೊಂಡಿತು. ಆ ದೋಣಿಯೂ ಮಗು ಚಿತು ಆಗಲೆ....

ಎಷ್ಟೋ ಜನ ಸತ್ತರು........ಕೆಲವರೇನೋ ಹಿಂದಕ್ಕೆ ಈಸಿದರು, ಉಳ್ಳಾಲದ ದಂಡೆಗೆ. ಕೆಲವರು ಪ್ರವಾಹಕ್ಕಿದಿರಾಗಿಯೆ ಈಸುತ್ತ ದಂಡೆ ಸೇರಲೆತ್ನಿಸಿದರು.

ಹಾಗೆ ಈಸಿದವರಲ್ಲಿ ತೆಂಕುಂಬಳೆಯ ತುಂಡರಸು ಸುಬ್ರಾಯ ಹೆಗ್ಗಡೆ ಒಬ್ಬನಾಗಿರಲಿಲ್ಲ.

ತಮ್ಮನ್ನು ಒಯ್ಯಲು ದೋಣಿಗಳು ಹಿಂತಿರುಗಿ ಬರುವುದನ್ನೆ ಕಾಯುತ್ತ ದಂಡೆಯ ಮೇಲಿದ್ದ ಐದುನೂರು ಜನ ಸೈನಿಕರು ?

ಒಬ್ಬನೂ ಅಲ್ಲಿರಲಿಲ್ಲ—ಒಬ್ಬನೂ.

# ೭

ಕೊಡಗಿನ ತೊರೆ, ಕನ್ನಡ ಜಿಲ್ಲೆಯಲ್ಲಿ ಹರಿದು, ನದಿಯಾಗಿ ಮಹಾ ಪ್ರವಾಹವಾಗಿ ಕಡಲತಡಿಗೆ ಬಂದಿತ್ತು.

ಮಂಗಳೂರಿನ ಜನ, ನಿರೀಕ್ಷಿಸಿಯೇ ಇದ್ದರು ಪ್ರವಾಹವನ್ನು.

ಕಂಕನಾಡಿಯಿಂದ ಮೊದಲಾಗಿ ನಗರದ ಬೀದಿಯಲ್ಲಿ ಧುಮುಧುಮಿಸಿ ಬಂದ ನೀರು, ಗುಲಾಮಗಿರಿಯ ಕೊಳಜೆಯನ್ನು ಉದ್ದಕ್ಕೂ ತೊಳೆಯಿತು.

ದೀವಟಿಗೆ, ಬಾವುಟ; ಧೀರರಾದ ಕುದುರೆ ಸವಾರರು; ವಸನಗಳು ಮಲಿನವಾಗಿದ್ದರೂ ಮುಖಗಳ ಮೇಲೆ ಕಳೆಯಿದ್ದ ಕಾಲಾಳುಗಳು.

ಮಂಗಳೂರು ನಗರವನ್ನು ಹೊಕ್ಕಿತ್ತು ಕಲ್ಯಾಣಸ್ವಾಮಿಯ ಸೇನೆ!

ಹಂಪನಕಟ್ಟೆಯ ಬಳಿ ಬರುತ್ತಲೆ ಕೌತುಕದಿಂದ ಸೈನ್ಯವನ್ನು ನೋಡುತ್ತ ನಿಂತಿದ್ದ ಜನರಲ್ಲಿ ಕೆಲವರನ್ನು ಕಲ್ಯಾಣಸ್ವಾಮಿ ಹತ್ತಿರಕ್ಕೆ ಕರೆದ.

ಬಳಿಗೆ ಬಂದವರು ಕೈ ಜೋಡಿಸಿ ವಂದಿಸಿದರು.

ಅವರ ವಂದನೆಯನ್ನು ಸ್ವೀಕರಿಸುತ್ತ ಕಲ್ಯಾಣಸ್ವಾಮಿ ಕೇಳಿದ:

"ಇಂಗ್ಲಿಷಿನವರು ಎಲ್ಲಿದ್ದಾರೆ?"

ಜನರಲ್ಲೊಬ್ಬ ಉತ್ತರವಿತ್ತ:

"ಅವರು ಬೆಳಗ್ಗೆಯೇ ನದಿಗಿಳಿದರು ಸ್ವಾಮಿ. ಇಷ್ಟರಲ್ಲೇ ಸಮುದ್ರ ತಲಪಿರಬಹುದು."

"ಸಮುದ್ರ?"

"ಹೌದು ಸ್ವಾಮಿ. ಅವರೆಲ್ಲಾ ಪತ್ತೇಮಾರನ್ನೋ ಹಡಗನ್ನೋ ಹತ್ತಿ ತಲಚೇರಿಗೆ ಹೋಗ್ತಾರಂತೆ."

ಕಲ್ಯಾಣಸ್ವಾಮಿ ತುಟಿ ಕಚ್ಚಿದ.

"ತಪ್ಪಿಸಿಕೊಂಡರಲ್ಲಾ!" ಎಂದು ರಾಮಗೌಡ ಕಸಿವಿಸಿಗೊಂಡ.

ಮಾಹಿತಿ ಒದಗಿಸಿದವನನ್ನು ಬಂಗರಾಜ ಕೇಳಿದ:

"ಎಷ್ಟು ಜನ ಇದ್ದರು?"

"ಹೆಂಗಸರು ಮಕ್ಕಳು ಸೇರಿ ಸುಮಾರು ಇಪ್ಪತ್ತೈದು ಜನ. ಎಲ್ಲಾ

ಬಿಳಿಯವರೇ. ಅವರ ಜತೆಗೆ ಏಳೆಂಟು ಜನ ಈ ಊರಿನವರು – ಚಾಕರಿಗೆ."

"ಥೂ!" ಎಂದು ಉಗುಳಿದ ಸೋಮಯ್ಯ.

ಕಲ್ಯಾಣಸ್ವಾಮಿ ಕೇಳಿದ:

"ಎಲ್ಲಿದೆ ಅವರ ಸೈನ್ಯ?"

"ಸೈನ್ಯ ಇದ್ದರಲ್ಲವೆ? ಸಿಪಾಯಿಗಳೇನೋ ಅರುವತ್ತು ಎಪ್ಪತ್ತು ಜನ ಇರಬೇಕು. ಖಜಾನೆ, ಜೈಲು, ಬಾವುಟ ಗುಡ್ಡಗಳ ರಕ್ಷಣೆ ಮಾಡ್ಬೇಕು."

"ಸರಿ!" ಎನ್ನುತ್ತ ಕಲ್ಯಾಣಸ್ವಾಮಿ, ಅಸ್ಪಷ್ಟವಾಗಿ ಆಗಲೆ ರೂಪುಗೊಂಡಿದ್ದ ಯೋಜನೆಯನ್ನು ನಿರ್ದಿಷ್ಟಗೊಳಿಸುತ್ತ ಅನುಜ್ಞೆಗಳನ್ನಿತ್ತ:

"ರಾಮಗೌಡರೆ! ಐನೂರು ಜನರ ಜತೆ ನೀವು ಸೆರೆಮನೆಯ ಕಡೆಗೆ. ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಿ! ನಮ್ಮ ಮೂವರು ಬಂದಿಗಳನ್ನು ಅಲ್ಲಿರಿಸಿ! ನಂಜಯ್ಯನವರೆ! ಬಂದರಕ್ಕೆ ನೀವು! ಇಂಗ್ಲಿಷಿನವರನ್ನು ಬೆನ್ನಟ್ಟೋದು ಎಷ್ಟರಮಟ್ಟಿಗೆ ಸಾಧ್ಯ ಅಂತ ಪರಿಶೀಲನೆ ಮಾಡಿ! ಚೆಟ್ಟಿ–ಕರ್ತೃ! ನೀವು ಶಸ್ತ್ರಾಗಾರಕ್ಕೆ! ಅದನ್ನು ವಶಪಡಿಸಿಕೊಳ್ಳಿ! ಅಣ್ಣಿಗೌಡರೆ! ನಿಮ್ಮ ದಳ ಕಲೆಕ್ಟರ ಕಚೇರಿಗೆ–ಖಜಾನೆಗೆ! ಉಳಿದವರು ಬಂಗರಸರು ಮತ್ತು ನನ್ನ ಜತೆ ಬನ್ನಿ – ಬಾವುಟ ಗುಡ್ಡಕ್ಕೆ! ದೀವಟಿಗೆಯ ಭಟನೆ – ಬಾವುಟದ ಕರಿಯಪ್ಪ! ನಮ್ಮೆದುರು ಮುಂದೆ ಸಾಗಿ!"

ಸೈನ್ಯ ಐದು ವಿಭಾಗಗಳಾಗಿ ಐದು ದಿಕ್ಕುಗಳಲ್ಲಿ ಹಂಚಿ ಹೋಯಿತು.

ಬಾವುಟ ಗುಡ್ಡದ ಕಡೆಗೆ ಮುಂದುವರಿಯುತ್ತ ಕಲ್ಯಾಣಸ್ವಾಮಿ ಬಂಗರಾಜನಿಗೆಂದ:

"ಹೀಗಾಗಬಹುದು ಅನ್ನೋ ಸಂದೇಹ ನನಗಿದ್ದೇ ಇತ್ತು. ಕೊನೆಗೂ ಆ ಜನ ಕೈಗೆ ಸಿಗಲಿಲ್ಲ."

"ಅದೇನಿದ್ದರೂ ಮಂಗಳೂರು ಗೆದ್ದ ಹಾಗಾಯ್ತು."

"ನಿಜ. ಆದರೆ ಆ ಜನರಿಗೆ ಉಪ್ಪುನೀರು ಕುಡಿಸ್ಬೇಕೂಂತ ನಮ್ಮವರಿಗಿದ್ದ ಆಸೆ ಈಡೇರಲಿಲ್ಲ."

....ಗುಡ್ಡದ ಮೇಲೆ ಈಸ್ಟ್ ಇಂಡಿಯಾ ಕಂಪೆನಿಯ ಧ್ವಜವನ್ನು ರಕ್ಷಿಸುತ್ತ ನಿಂತಿದ್ದ ಇಬ್ಬರು ಸಿಪಾಯಿಗಳಲ್ಲಿ ಒಬ್ಬ, ಏರು ಬರುತಿದ್ದ ಸೇನೆಯನ್ನು ಕಾಣುತ್ತಲೆ ಗೊತ್ತುಗುರಿಯಿಲ್ಲದೆ ಅದರ ಮೇಲೆ ಗುಂಡು ಹಾರಿಸಿದ.

ಒಂದೇ ಗುಂಡು. ಕುದುರೆಗಳ ಮುಂಭಾಗದಲ್ಲಿ ನಡೆದು ಬರುತಿದ್ದ ಒಬ್ಬ ಸೈನಿಕನ ಹೊಟ್ಟೆಯನ್ನು ಅದು ಹೊಕ್ಕಿತು. ಆತ ಉರುಳುತ್ತಿದ್ದಂತೆಯೆ, ಸೋಮಯ್ಯನ ಕೋಪ ಆ ಸಿಪಾಯಿಯನ್ನು ಬಲಿ ತೆಗೆದುಕೊಂಡಿತು.

ಕಲ್ಯಾಣಸ್ವಾಮಿ ಆಜ್ಞೆಯಿತ್ತ:

" ಗಾಯಗೊಂಡವನನ್ನು ಎತ್ತಿಕೊಳ್ಳಿ !"

ಬಳಿಕ ತನ್ನಷ್ಟಕ್ಕೆ ಆತ ಇಳಿ ಧ್ವನಿಯಲ್ಲಿ ನುಡಿದ :

" ಈ ದೇಶದವನಾಗಿದ್ದು ಪರಕೀಯರ ಚಾಕರಿ ಮಾಡುವ ಮನುಷ್ಯ! ಎಂಥ ಮೂರ್ಖ ಈತ !"

ಬೇರೆ ಸಿಪಾಯಿಗಳ ಸುಳಿವೇ ಅಲ್ಲಿರಲಿಲ್ಲ.

ಕಲ್ಯಾಣಸ್ವಾಮಿಯ ಭಟರು, ಕಂಪೆನಿಯ ಬಾವುಟವನ್ನು ಕೆಳಕ್ಕೆಳೆದು ಹರಿದು ತುಳಿದು, ದೀವಟಿಗೆಯ ಸೊಡರಿನಿಂದ ಉರಿಹಚ್ಚಿ ಸುಟ್ಟರು.

ಕರಿಯಪ್ಪ ಸುಳ್ಯದಿಂದಲೇ ಹೊತ್ತು ತಂದಿದ್ದ ಬಾವುಟ, ಆ ಧ್ವಜ ಸ್ತಂಭದ ಮೇಲೇರಿತು.

ಕುದುರೆಗಳ ಮೇಲಿಂದ ಎಲ್ಲರೂ ಇಳಿದರು—ಸೈನಿಕರು ಸಾಲುಗಟ್ಟಿ ನಿಂತರು. ಗಾಯಗೊಂಡವನ ಶುಶ್ರೂಷೆ ಸಾಗಿತು ಒಂದೆಡೆ. ಆದರೆ, ಕೆಲವೇ ನಿಮಿಷಗಳಿಗಿಂತ ಹೆಚ್ಚುಕಾಲ ಆತ ಬದುಕಲಿಲ್ಲ.

ಬಾಡಿದ ಮುಖದಿಂದ ಕಲ್ಯಾಣಸ್ವಾಮಿ ಹೇಳಿದ :

" ನಮ್ಮ ಮೊದಲ ಬಲಿದಾನ !"

ಸೈನಿಕರ ಕಡೆ ತಿರುಗಿ ಆತ ಕೇಳಿದ :

" ಏನಪ್ಪಾ ? ಯಾರಿಗಾದರೂ ಈತನ ಪರಿಚಯ ಉಂಟೆ ? ಯಾವೂ ರವನು ಈತ ? ಎಲ್ಲಿ ನಮ್ಮನ್ನು ಸೇರ್ಕೊಂಡ ? "

ಎಲ್ಲಿ ಯಾವತ್ತು ಸೇರಿಕೊಂಡನೊ ಯಾರಿಗೂ ಗೊತ್ತಿರಲಿಲ್ಲ.....

....ಹಲವರ ದೃಷ್ಟಿಗಳು ಹಿಂದೆಂದೂ ಕಾಣದೆ ಇದ್ದ ಕಡಲಿನ ಕಡೆಗೆ ಸರಿದುವು. ಕಲ್ಯಾಣಸ್ವಾಮಿ ಕೆಳಗೆ ಸುತ್ತಲೂ ದಿಟ್ಟಿಸಿ ನೋಡಿದ. ಆಳ ದಲ್ಲಿ ಮರಗಳೆಡೆಯಲ್ಲಿ ಊರು ಮಲಗಿತ್ತು. ಮಲೆಯಾಳದಲ್ಲಿ ಆತನೊಮ್ಮೆ ಕಂಡಿದ್ದ ಅರಬ್ಬಿ ಸಮುದ್ರವೇ, ಇಲ್ಲಿ ಪಶ್ಚಿಮದಲ್ಲಿತ್ತು.

ಬಿಸಿಲೇರಿದ್ದರೂ ತಣ್ಣನೆಯ ಗಾಳಿ ಬೀಸಿತು.

ಕಲ್ಯಾಣಸ್ವಾಮಿ ಪ್ರಕೃತಿಯ ರಮ್ಯತೆಗೆ ಮನಸೋಲಲಾರದೆ, ಆಸು

ತೂರಿದಿದ್ದ ತನ್ನ ಸೈನಿಕನನ್ನೂ ಸತ್ತು ಮುದುಡಿ ಬಿದ್ದಿದ್ದ ಕಂಪೆನಿಯ ಸಿಪಾಯಿಯನ್ನೂ ನೋಡಿದ. ಆ ಮುಖವನ್ನು ಬೇಸರ ಆವರಿಸಿತು.

ಆತನ ಮೌನಕ್ಕೆ ಭಂಗ ತರುತ್ತಾ ಬಂಗರಾಜನೆಂದ:

"ಕಲೆಕ್ಟರು ಹತ್ತಿದ ಹಡಗು ಎಲ್ಲಿದೆಯೋ? ದುರ್ಬೀನು ಇದ್ದರೆ ಪತ್ತೆ ಹಚ್ಚೋದು ಸಾಧ್ಯ. ನೋಡಿ, ಸಾಧಾರಣವಾಗಿ ಪತ್ತೇಮಾರು ಹಡಗು ಬರೋದು ಆ ಜಾಗಕ್ಕೇ. ಅದು ನೇತ್ರಾವತಿ ಹೊಳೆ; ಈಚೇದು ಗುರುಪುರ ಹೊಳೆ; ಅದೊಂದು ನಡುಗುಡ್ಡೆ."

ಕಲ್ಯಾಣಸ್ವಾಮಿ ತಲೆಯೆತ್ತಿ ನೋಡಿದ. ಬೇರೆ ನಾಲ್ಕು ಕಡೆಗಳಿಗೆ ಹೋಗಿದ್ದ ತನ್ನ ಸೇನೆಯ ಇತರ ಆಪ್ತರ ನೆನಪಾಯಿತು ಆತನಿಗೆ.

ಸೈನಿಕರೆಡೆಗೆ ತಿರುಗಿ ಆತನೆಂದ:

"ಬೇರೆಯವರು ಬರೋವರೆಗೂ ನೀವು ಇಲ್ಲೇ ಕೂತು ವಿಶ್ರಾಂತಿ ತಗೊಳ್ಳಿ. ಕರಿಯಪ್ಪ, ಗುಡ್ಡ ಇಳಿಯೋ ಕಡೆ ಇಬ್ಬರನ್ನು ಕಾವಲಿರಿಸು."

ಹಾಗೆ ಆಜ್ಞಾಪಿಸಿದ ಬಳಿಕ ಕಲ್ಯಾಣಸ್ವಾಮಿಯೂ ಅಲ್ಲೆ ದೊಡ್ಡದಾಗಿ ಬೆಳೆದಿದ್ದೊಂದು ಗೇರುಬೀಜದ ಮರದ ಕೆಳಗೆ ಕುಳಿತ.

ಮಧ್ಯಾಹ್ನದ ಹೊತ್ತಿಗೆ ಒಂದೊಂದಾಗಿಯೇ ದಳಗಳು ಬಾವುಟಗುಡ್ಡಕ್ಕೆ ಬಂದುವು. ಸೆರೆಮನೆಯ ಬಳಿಯೂ ಶಸ್ತ್ರಾಗಾರದಲ್ಲೂ ಕಚೇರಿಯಲ್ಲೂ ನಡೆದ ಸಣ್ಣಪುಟ್ಟ ಕಾದಾಟಗಳಲ್ಲಿ ಒಟ್ಟು ಎಂಟು ಜನ ಯೋಧರು ಮಡಿದಿದ್ದರು. ಹತ್ತಾರು ಜನ ಗಾಯಗೊಂಡಿದ್ದರು. ಸಿಪಾಯಿಗಳಲ್ಲಿ ಹತರಾದವರ ಸಂಖ್ಯೆ ಅದಕ್ಕಿಂತಲೂ ಹೆಚ್ಚಿತ್ತು.

ಆ ಜೈತ್ರಯಾತ್ರೆಯಲ್ಲಿ ವೈರಿಯ ಮೊದಲ ಗುಂಡಿಗೆ ಬಾವುಟಗುಡ್ಡದ ಮೇಲೆ ಬಲಿಯಾದವನನ್ನು ಇಡಿಯ ಸೇನೆಯಲ್ಲಿ ಯಾರೂ ಗುರುತಿಸುವುದಾಗಲಿಲ್ಲ.

"ಆತನ ಮಿತ್ರನೂ ಸತ್ತನೇನೋ," ಎಂದ ಕಲ್ಯಾಣಸ್ವಾಮಿ.

ಎರಡು ಮೂರು ದಿನಗಳಿಂದ ನದಿಯಲ್ಲೇ ಕಾದು ನಿಂತಿದ್ದ ಪತ್ತೇಮಾರನ್ನು ಆ ದಿನ ನಸುಕಿನಲ್ಲಿ ಇಂಗ್ಲಿಷರು ಏರಿದರೆಂಬ, ಜತೆಯಲ್ಲೇ ಎರಡು ಸಣ್ಣ ಫಿರಂಗಿಗಳನ್ನು ಒಯ್ದರೆಂಬ, ವಾರ್ತೆಯನ್ನು ನಂಜಯ್ಯ ತಂದ.

ಆತ ಹೇಳಿದ:

"ಫಿರಂಗೀನ ಪತ್ತೇಮಾರಿಗೆ ಏರಿಸೋದಕ್ಕೆ ಮುಂಚೆ ಇಂಗ್ಲಿಷರು

ನೇತ್ರಾವತಿ ನದಿಯಲ್ಲಿ ನಾಲ್ಕು ದೋಣಿಗಳನ್ನು ಗುಂಡು ಹಾರಿಸಿ ಮುಳುಗಿಸಿದರಂತೆ."

ಯಾರು ಮುಳುಗಿರಬಹುದೆಂಬುದು ಯಾರಿಗೂ ಸ್ಪಷ್ಟವಾಗಲಿಲ್ಲ.

" ಬಂದರದ ವರ್ತಕರೆಲ್ಲ ಸಾಯಂಕಾಲ ರಾಜ್ಯಪಾಲರ ಭೇಟಿಗೆ ಬರ್ತಾರಂತೆ," ಎಂದ ನಂಜಯ್ಯನೇ.

ಧಾಳಿಯಿಂದ ಲಾಭ ಪಡೆದಿದ್ದುದು ರಾಮಗೌಡನ ದಳ. ಆತ ಸೆರೆಮನೆಯಿಂದ ಬಿಡಿಸಿ ತಂದವರಲ್ಲಿ ಹಲವರು ಕನ್ನಡ ಜಿಲ್ಲೆಯ ವೀರರು. ಅವರನ್ನು ಕಲ್ಯಾಣಸ್ವಾಮಿಗೆ ಪರಿಚಯ ಮಾಡಿಕೊಡುತ್ತ ರಾಮಗೌಡ ಹೇಳಿದ :

" ಇವರೆಲ್ಲಾ ಇನ್ನು ನಮ್ಮ ಸೈನ್ಯದಲ್ಲಿ ದುಡೀತಾರೆ ಸ್ವಾಮಿಯವರೆ."

ಕಾರಾಗೃಹ ವಾಸದಿಂದ ಬಡಕಲಾಗಿದ್ದ ಆ ಜೀವಗಳನ್ನು ನೋಡಿ, ಕಲ್ಯಾಣಪ್ಪ ನಸುನಕ್ಕು ಸ್ವಾಗತಿಸಿ ಹೇಳಿದ :

" ಸಂತೋಷ."

ಚೆಟ್ಟಿಯೆಂದ :

" ಈ ವೀರರಿಗೆಲ್ಲಾ ಶಸ್ತ್ರಾಸ್ತ್ರ ಕೊಡಿಸೋ ಜವಾಬ್ದಾರಿ ನನ್ನದು. ಶಸ್ತ್ರಾಗಾರದಲ್ಲಿ ಸಣ್ಣಪುಟ್ಟವು ಹೇರಳವಾಗಿವೆ, ನಮ್ಮವರು ಈಗ ಕಾವಲು ನಿಂತವರೆ."

ಅಣ್ಣಿಗೌಡ, ಖಜಾನೆಯನ್ನೇ ಹೊತ್ತು ತಂದಿದ್ದ.

" ಎಣಿಸಿದಿರಾ ಗೌಡರೆ ?" ಎಂದು ಕೇಳಿದ ಕಲ್ಯಾಣಸ್ವಾಮಿ.

" ಹೌದು. ಹನ್ನೆರಡು ಸಾವಿರ ವರಹಗಳಿವೆ."

" ಸರಿ. ನಮ್ಮ ಸೇನೆಯ ಬೊಕ್ಕಸಕ್ಕೆ ಜಮಾಮಾಡಿ."

ಪರಿಸ್ಥಿತಿಯ ಸಮಗ್ರ ನೋಟ ದೊರೆತ ಬಳಿಕ ಕಲ್ಯಾಣಸ್ವಾಮಿ ದಂಡನಾಯಕರೊಡನೆ ಹೇಳಿದ :

"ಗುಡ್ಡದ ಮೇಲೆ ಜಾಗ ಚೆನ್ನಾಗಿದೆ. ಶಿಬಿರ ಇಲ್ಲಿಯೇ ಏರ್ಪಡಿಸೋಣ, ಆಗದೆ?"

ಆ ಆಯ್ಕೆ ಎಲ್ಲರಿಗೂ ಒಪ್ಪಿಗೆಯಾಗಿತ್ತು.

ಆಗಬೇಕಾದ ಕೆಲಸಗಳನ್ನು ಎಣಿಸುತ್ತ ಕಲ್ಯಾಣಸ್ವಾಮಿಯೆಂದ :

"ಊರೊಳಕ್ಕೆ ಹೋಗಿ ನಿಷ್ಣಾತರಾದ ವೈದ್ಯರನ್ನು ಕರಕೊಂಡು ಬನ್ನಿ.

ಗಾಯಗೊಂಡವರಿಗೆ ಚಿಕಿತ್ಸೆಯಾಗಲಿ. ತೀರಿಕೊಂಡ ಬಾಂಧವರ ಯಾದಿಯನ್ನು ಸಿದ್ಧಗೊಳಿಸಿ. ಅವರ ಕುಟುಂಬಗಳಿಗೆ ನಾವು ಪರಿಹಾರ ಕೊಡಬೇಕು. ಹಾಗೆಯೇ ಆ ಎಲ್ಲ ಬಂಧುಗಳ ಶವಸಂಸ್ಕಾರವಾಗಲಿ. ಕಂಪೆನಿ ಸಿಪಾಯಿಗಳ ಶವಗಳನ್ನು ಊರ ಹೊರಕ್ಕೆ ಎಸೆಯಿರಿ. ನರಿ ನಾಯಿಗಳಿಗೆ ಅವು ಆಹಾರವಾಗಲಿ."

ಕಲ್ಯಾಣಸ್ವಾಮಿ ಎದ್ದು ನಿಂತು ಬಾವುಟದತ್ತ ದೃಷ್ಟಿ ಹರಿಸಿ, ದೀವಟಿಗೆಯನ್ನು ನೋಡಿ, ಹೇಳಿದ:

"ಮಂಗಳೂರು ಸ್ವತಂತ್ರವಾದ ಹಾಗಾಯ್ತು. ಅಲ್ಲವೆ ರಾಮಗೌಡರೆ?"

"ಹೌದು ಸ್ವಾಮಿ," ಎಂದ ರಾಮಗೌಡ.

"ಆ ವಿಷಯವನ್ನು ನಗರದಲ್ಲೆಲ್ಲಾ ಡಂಗುರ ಹೊಡೆಯಿಸಿ."

ನಂಜಯ್ಯನ ಕಡೆ ತಿರುಗಿ ಆತನೆಂದ:

"ಪಟ್ಟಣದಲ್ಲಿ ಆಕರ್ಷಣೆ ಜಾಸ್ತಿ. ಸೈನಿಕರನ್ನು ಅಂಕೆಯಲ್ಲಿಟ್ಟು ಕೊಳ್ಳೋದು ಕಷ್ಟವಾದೀತು ನಂಜಯ್ಯನವರೆ. ನಾವು ಹೆಚ್ಚು ನಿಷ್ಠುರವಾಗಿ ವರ್ತಿಸೋ ಪ್ರಮೇಯ ಬಂದೀತು. ಇಂಗ್ಲಿಷಿನೋರು ಹೊರಟು ಹೋದರಲ್ಲಾ ಅಂತ ತೂಕಡಿಸೋದು ಶುರುವಾದರೆ ಪರಿಸ್ಥಿತಿ ಕಠಿನವಾದೀತು. ಅಲ್ಲವೆ?"

"ನಿಜ ನೀವು ಹೇಳಿದ ಮಾತು. ಶ್ರಮವಹಿಸಿ ಒಳ್ಳೇ ಸೈನ್ಯವನ್ನು ತಯಾರು ಮಾಡೋಣ."

"ಸರಿ. ಅಣ್ಣಿಗೌಡರೆ, ಪೇಟೆಗೆ ಹೋಗಿ ದವಸಧಾನ್ಯ ಕೊಂಡು ಕೊಳ್ತೀರೋ? ಹಾಗೆಯೇ ಅಡುಗೆಯವರನ್ನೂ ಗೊತ್ತುಮಾಡಿ."

ನಿರ್ದೇಶಗಳು ಮುಗಿದುದನ್ನು ಗಮನಿಸಿದ ರಾಮಗೌಡ ಹೇಳಿದ:

"ಒಂದು ವಿಷಯದಲ್ಲಿ ರಾಜ್ಯಪಾಲರ ಅಪ್ಪಣೆಯಾಗ್ಬೇಕು."

"ಏನು?"

"ಕುಂಪಣಿ ಜನ ವಾಸವಾಗಿದ್ದ ಮನೆಗಳನ್ನು ಸುಡಬೇಕು ಅಂತ ನನ್ನ ಅಭಿಪ್ರಾಯ. ಜನರಿಗೆ ಅದರಿಂದ ತುಂಬಾ ಸಂತೋಷವಾಗ್ತದೆ."

"ಧಾರಾಳವಾಗಿ ಆಗಲಿ. ಆದರೆ ಹತ್ತಿರದ ಇತರ ಮನೆಗಳಿಗೆ ಧಕ್ಕೆ ತಗುಲಬಾರದು."

"ಹತ್ತಿರ ಬೇಸಿಯುವರು ವಾಸವಾಗೋದಕ್ಕೆ ಅವರು ಮನೆಗಳನ್ನು ಕಟ್ಟಲು ಬಿಟ್ಟದ್ದರೆ ತಾನೆ?"

"ಹಾಗೋ. ಅಂದಮೇಲೆ ಯೋಚಿಸ್ಬೇಕಾದ್ದೇ ಇಲ್ಲ."

....ವಿಶಾಲವಾಗಿದ್ದ ಬಾವುಟಗುಡ್ಡದ ಒಂದು ಮೂಲೆಯಲ್ಲಿ ಮಡಿದ ಸೈನಿಕರ ಶವಗಳನ್ನು ಮಣ್ಣು ಮಾಡಿದರು. ಕೊಡಗರು, ಗೌಡರು, ಬಂಟರು, ಮಾಪಿಳ್ಳೆಯರು—ಎಲ್ಲರನ್ನೂ ಒಂದೇ ಕಡೆ ಸಾಲಾಗಿ ಭೂಮಿತಾಯಿಯ ಮಡಿಲಲ್ಲಿ ಮಲಗಿಸಿದುದಾಯಿತು.

ಆಂಗ್ಲರು ವಾಸವಾಗಿದ್ದ ಮನೆಗಳು ಉರಿದು, ಪರಿಸ್ಥಿತಿ ಬದಲಾಯಿತೆಂಬ ಸಂದೇಶವನ್ನು ದೂರದೂರಕ್ಕೆ ಮುಟ್ಟಿಸಿದುವು.

....ಸಂಜೆ ಬಂದರದ ವರ್ತಕ ಪ್ರಮುಖರ ನಿಯೋಗ ಬಂತು ರಾಜ್ಯಪಾಲರ ಭೇಟಿಗೆ. ಬಂದವರಿಗೆ ಗೂಡಾರದಲ್ಲಿಯೆ, ದಂಡನಾಯಕ ದಳಪತಿಗಳೆದುರು, ಕಲ್ಯಾಣಸ್ವಾಮಿ ಸಂದರ್ಶನ ನೀಡಿದ.

ನಿಯೋಗದ ನಾಯಕರಾಗಿದ್ದ ಕಮ್ತಿ, ತನ್ನ ಪರಿಚಯವನ್ನು ಮಾಡಿಕೊಟ್ಟು ಹೇಳಿದ:

"ಮಹಾರಾಜರಿಗೆ ತೊಂದರೆಯಾಗಬಹುದೂಂತ ಬೆಳಗಿನ ಹೊತ್ತೇ ನಾವು ಬರಲಿಲ್ಲ."

ಆ ಸೇನೆಯ ನಿಜ ಸ್ವರೂಪವನ್ನು ತಿಳಿಯುವ ಉದ್ದೇಶದಿಂದಲೇ, ಕಮ್ತಿ ಕಲ್ಯಾಣಸ್ವಾಮಿಯನ್ನು ಮಹಾರಾಜರೆಂದು ಸಂಬೋಧಿಸಿದ್ದ.

ಆ ಉದ್ದೇಶವನ್ನು ಸುಲಭವಾಗಿ ಊಹಿಸುತ್ತ ಕಲ್ಯಾಣಸ್ವಾಮಿ ಹೇಳಿದ:

"ಕಮ್ತಿಯವರೆ, ಇಲ್ಲಿ ಮಹಾರಾಜರಿಲ್ಲ. ಅವರಿನ್ನೂ ಬರಬೇಕಷ್ಟೆ. ನಾನು ಅವರ ಪ್ರತಿನಿಧಿ, ರಾಜ್ಯಪಾಲ."

ಕಮ್ತಿಯೆಂದ:

"ದಿಕ್ಕು ಕಾಣದೆ ಕಂಗೆಟ್ಟಿರುವ ನಮ್ಮ ಪಾಲಿಗೆ ನೀವೇ ರಾಜರು."

"ನಾನು ರಾಜ್ಯಪಾಲ ಅಂತ ಆಗಲೆ ಹೇಳಿದೆನಲ್ಲ?"

"ತಮ್ಮ ಸರಕಾರಕ್ಕೆ ನಾವು ಪೂರ್ಣ ಬೆಂಬಲ ಕೊಡ್ತೇವೆ. ತಮಗೆ ಏನು ಬೇಕಾದರೂ ತಿಳಿಸಿದ ತಕ್ಷಣ ತಂದು ಒಪ್ಪಿಸ್ತೇವೆ. ಇದಕ್ಕೆ ಪ್ರತಿಯಾಗಿ ತಾವು—"

ಕಲ್ಯಾಣಸ್ವಾಮಿ ಮುಗುಳುನಕ್ಕು ಹೇಳಿದ :

" ನಾವು ಅಭಯ ಒದಗಿಸ್ಬೇಕು, ಅಲ್ಲವೆ?"

" ಹೌದು."

" ಆಗಲಿ."

ಕಮ್ತಿ ತನ್ನೊಡನೆ ಬಂದಿದ್ದ ಚಾಕರರನ್ನು ಕರೆದ. ಆ ಚಾಕರರು ಹೊತ್ತು ತಂದಿದ್ದ ಹರಿವಾಣಗಳು ಒಳಗೆ ಬಂದುವು. ಹೊರಿಸಿದ್ದ ರೇಶಿಮೆಯ ವಸ್ತ್ರವನ್ನು ತೆಗೆದೊಡನೆ ನೋಡುತ್ತಿದ್ದವರ ಕಣ್ಣುಗಳು ಕೋರೈಸಿದುವು; ನವರತ್ನ ಖಚಿತ ಆಭರಣಗಳು, – ಹಾರ, ಉಂಗುರ, – ಅಮೂಲ್ಯ ವಜ್ರದ ಹರಳುಗಳು, ಪೀತಾಂಬರಗಳು; ಒಬ್ಬೊಬ್ಬ ಪ್ರಮುಖ ಸಾಹುಕಾರನಿಂದಲೂ ಒಂದೊಂದು ಸಾವಿರ ಹೊನ್ನು....

ಕಲ್ಯಾಣಸ್ವಾಮಿ ಕೇಳಿದ :

" ಇದೇನು ಕಮ್ತಿಯವರೆ? "

" ಇದು ನಮ್ಮ ಅಲ್ಪಕಾಣಿಕೆ ತಮಗೆ."

" ನನಗೆ? ರಾಜ್ಯಕ್ಕೆ ಅನ್ನಿ; ರಾಜ್ಯದ ಬೊಕ್ಕಸಕ್ಕೆ."

" ರಾಜ್ಯದ ಬೊಕ್ಕಸಕ್ಕೆ."

" ಒಳ್ಳೇದು. ಚರ್ಚಿಸಬೇಕಾದ ವಿಷಯವೇನಾದರೂ ಇದ್ದಾಗ ನಿಮ್ಮನ್ನು ಬರಮಾಡಿಕೊಳ್ತೀವಿ. ಇನ್ನು ನೀವು ಹೋಗಬಹುದು."

ವ್ಯಕ್ತಿ, ಸಮರ್ಥನೇ – ಎಂಬುದನ್ನು ಮನದಟ್ಟು ಮಾಡಿಕೊಂಡು, ವರ್ತಕರ ನಿಯೋಗ ಹಿಂತಿರುಗಿತು.

....ಸಂಜೆ ಕರಿಯಪ್ಪ ಅರೆಬೆತ್ತಲೆಯಾಗಿದ್ದ ಇಬ್ಬರನ್ನು ಹಿಡಿದು ತಂದು ಕಲ್ಯಾಣಸ್ವಾಮಿಯ ಬಳಿಗೆ ಒಯ್ದ. ಆಡಳಿತದ ಸಮಸ್ಯೆಗಳನ್ನು ಸಹೋದ್ಯೋಗಿಗಳ ಜತೆ ಚರ್ಚಿಸುತ್ತ ಕುಳಿತಿದ್ದ ಕಲ್ಯಾಣಸ್ವಾಮಿ ತಲೆಯೆತ್ತಿ ಕೇಳಿದ :

" ಯಾರಿವರು? ಏನು ಸಮಾಚಾರ?"

" ಇವರು ಸುಬ್ರಾಯ ಹೆಗ್ಗಡೆ ಕಡೆಯೋರಂತೆ," ಎಂದ ಕರಿಯಪ್ಪ.

ಎಲ್ಲರ ಕಿವಿಗಳೂ ನಿಗುರಿದುವು. ಎಲ್ಲರೂ ಆ ಇಬ್ಬರ ಕಡೆಗೆ ನೋಡಿದರು.

ಈಸಿಕೊಂಡು ದಂಡೆ ಸೇರಿ ಈಗ ' ರಾಜರ ' ಬಳಿಗೆ ಬಂದಿದ್ದ ಮನುಷ್ಯರು.

"ಸಾವಿರ ಜನ ಬರೋಕೆ ಹೊರಟಿದ್ವು. ಫಿರಂಗಿಯಿಂದ ಗುಂಡು ಹಾರಿಸಿದ್ರು. ನಾಲ್ಕು ದೋಣಿ ನಾಶವಾಯ್ತು. ಹೆಗ್ಗಡೇರು ಮುಳುಗಿ ಸತ್ಹೋದರು."

"ಛಿ! ಹೀಗೂ ಆಯ್ತೆ?" ಎಂದ ಕಲ್ಯಾಣಸ್ವಾಮಿ.

ನಂಜಯ್ಯ, ಮಾತನಾಡಿದವನನ್ನು ಪ್ರಶ್ನಿಸಿದ:

"ಇವತ್ತು ಬೆಳಗ್ಗೆ ಅಂದಿಯಾ?"

"ಹೂಂ."

ಇತರರ ಕಡೆ ತಿರುಗಿ ನಂಜಯ್ಯನೆಂದ:

"ಇಂಗ್ಲಿಷ್ನೋರು ಪತ್ತೇಮಾರ್ ಹತ್ತೋದಕ್ಕೂ ಈ ದೋಣಿಗಳು ಬರೋದಕ್ಕೂ ಸರಿಹೋಗಿರ್ಬೇಕು. ಒಯ್ಯುತಿದ್ದ ಫಿರಂಗಿಯನ್ನೇ ಇವರ ಮೇಲೆ ಹಾರಿಸಿದಾರೆ ಅನ್ನೋದು ಸ್ಪಷ್ಟ."

"ಇಷ್ಟು ಒಳ್ಳೆಯ ದಿವಸದಲ್ಲಿ ಇಂಥ ಕೆಟ್ಟ ಸುದ್ದಿ!" ಎಂದ ಕಲ್ಯಾಣ ಸ್ವಾಮಿ.

ಆತ ಆ ಇಬ್ಬರ ಕಡೆ ತಿರುಗಿ ಹೇಳಿದ:

"ನೀವು ನಮ್ಮ ಸೈನ್ಯದಲ್ಲಿ ಇರ್ತೀರೇನಪ್ಪಾ?"

ಅವರಲ್ಲಿ ಆಗಲೆ ಮಾತನಾಡಿದವನು ಉತ್ತರವಿತ್ತ:

"ಅಪ್ಪಣೆ ಕೊಟ್ಟರೆ ನಾವು ಊರಿಗೆ ಓಗ್ತೀವಿ."

"ಸರಿ. ರಾತ್ರೆ ಇಲ್ಲಿ ಊಟಮಾಡ್ಕೊಂಡು ಬೆಳಗ್ಗೆ ಎದ್ಹೋಗಿ."

ಕರಿಯಪ್ಪ ಕರೆದರೂ ಅವರಿಬ್ಬರೂ ಮಿಸುಕಲಿಲ್ಲ. ಕಲ್ಯಾಣಸ್ವಾಮಿ ಪುನಃ ಹುಬ್ಬೇರಿಸಿ ಅವರತ್ತ ನೋಡಿದಾಗ ಆ ಮನುಷ್ಯನೆಂದ:

"ರಾಜರನ್ನು ಕೇಳಿ, ಒರಬೇಕಾದ್ದು ಇಸಕೊಂಡು ಹೋಗಾನ ಅಂತ ಬಂದ್ವಿ."

ಎಲ್ಲರೂ ಮತ್ತೆ ಕಿವಿ ನಿಗುರಿಸಿದರು.

"ಏನು ಇಸಕೊಂಡು ಹೋಗೋದು?"

"ಒಬ್ಬೊಬ್ಬರಿಗೆ ಒಂದೊಂದ್ಸಾವಿರ ವರಹ ಕೊಡ್ತೀನಿ ಅಂತ ಹೆಗ್ಗಡೇರು ಹೇಳಿದ್ರು."

"ಅಹ್ಹಾ!" ಎಂದ ನಂಜಯ್ಯ.

ಆಶ್ಚರ್ಯ ಪಡುತ್ತಾ ಕಲ್ಯಾಣಸ್ವಾಮಿ ಕಣ್ಣರಳಿಸಿ ಕೇಳಿದ;

" ಏನು ? ಒಂದೊಂದು ಸಾವಿರ ವರಹ ? ನಿಮ್ಮ ಸೇನೆ ಸೇರಿದ್ದ ಸಾವಿರ ಜನಕ್ಕೂ ಹಾಗೆ ಹೇಳಿದ್ರಾ ?"

" ಊಂ. ಸುಳ್ಳೇಳ್ತೇವಾ ನಾವು ?"

ಕಲ್ಯಾಣಸ್ವಾಮಿಯ ಕಣ್ಣು ಕಿಡಿಕಾರಿತು. ಆತ ಸ್ವರವೇರಿಸಿ ನುಡಿದ:

"ಕರಿಯಪ್ಪ! ಇವರಿಬ್ಬರನ್ನೂ ಈಗಿಂದೀಗ ಗುಡ್ಡದ ಕೆಳಕ್ಕಿಳಿಸಿಓಡಿಸು!"

ಇಬ್ಬರನ್ನೂ ಎಳೆದುಕೊಂಡೇ ಹೋದ ಕರಿಯಪ್ಪ.

ಕಲ್ಯಾಣಸ್ವಾಮಿಯ ಜತೆಯಲ್ಲಿದ್ದವರೆಲ್ಲ ಬಿದ್ದು ಬಿದ್ದು ನಕ್ಕರು. ಸ್ವಲ್ಪ ಹೊತ್ತು ಹುಬ್ಬುಗಂಟಿಕ್ಕಿ ಗಂಭೀರನಾಗಿ ಕುಳಿತಿದ್ದ ಕಲ್ಯಾಣಸ್ವಾಮಿ, ಕೊನೆಗೆ ತಾನೂ ಗಟ್ಟಿಯಾಗಿ ನಕ್ಕ.

ನಗುವಿನಲ್ಲಿ ಆತನೆಂದ :

" ಒಳ್ಳೇ ಸುಬ್ರಾಯ ಹೆಗ್ಗಡೆ."

ರಾಮಗೌಡನಿಗೆ ಮತ್ತೆ ನಗೆ ಉಕ್ಕಿತು. ಆತ ಕೇಳಿದ :

" ಒಂದು ಸಾವಿರ ವರಾಹ, ಸ್ವಾಮಿ ; ಒಂದು ಸಾವಿರ ವರಾಹ !"

ಅಲ್ಲಿದ್ದವರೆಲ್ಲರೂ ಪುನಃ ನಗುವುದು ಅನಿವಾರ್ಯವಾಯಿತು.

....ರಾತ್ರೆ ಬೆಳುದಿಂಗಳಿನಲ್ಲಿ ಹೊರಗೆ ಗಾಳಿಗೆ ಮೈಯೊಡ್ಡಿ, ಬಂಗ ರಾಜ ಮತ್ತು ರಾಮಗೌಡರ ಜತೆ ದೂರದಲ್ಲಿ ಮಸಕಾಗಿ ತೋರುತಿದ್ದ ಕಡ ಲನ್ನು ನೋಡುತ್ತ ನಿಂತಿದ್ದ ಕಲ್ಯಾಣಸ್ವಾಮಿ ಕೇಳಿದ :

" ಹುಣ್ಣಿಮೆ ಯಾವತ್ತು ರಾಮಗೌಡರೆ ?"

" ಇವತ್ತಿನಿಂದ ಹನ್ನೊಂದನೆ ದಿವಸ."

" ನಮ್ಮ ಮನೆಯಲ್ಲಿ ಮಾತಾಡ್ತಾ, ಹುಣ್ಣಿಮೆ ದಿವಸ ನಾವು ಸಮುದ್ರ ದಂಡೆ ಮೇಲಿರ್ಬೇಕು ಅಂದಿದ್ರಿ, ನೆನಪಿದೆಯಾ ?"

" ಹ್ಯಾಗೆ ಮರೆತೇನು ಹೇಳಿ ?"

ಹುಣ್ಣಿಮೆ – ಮನೆ – ದೂರದಲ್ಲಿದ್ದ ಈ ಕಡಲಿನಷ್ಟೇ ವಿಶಾಲವಾಗಿದ್ದ ಆ ಅಡವಿ – ಅಂತಹ ಬೆಳುದಿಂಗಳ ರಾತ್ರೆಯಲ್ಲೆ ಹೆಚ್ಚಾಗಿ ಮನೆಗೆ ತಾನು ಹಿಂತಿರುಗುತಿದ್ದುದು – ತಾಯಿ – ಗಿರಿಜಾ....

ಎಲ್ಲಿಯೋ ಅಲೆಯತೊಡಗಿದ ಮನಸ್ಸನ್ನು ಹಿಡಿದು ಬಿಗಿದು ಕಲ್ಯಾಣ ಸ್ವಾಮಿಯೆಂದ :

" ಬನ್ನಿ. ಗಾಯಗೊಂಡವರನ್ನು ನೋಡಿ ಬರೋಣ."

# ಅಂಕದ ಪರದೆ ಇಳಿಯಿತು

# ೧

ಆ ವರ್ಷ ಲೀಹಾರ್ಡಿ ಈ ಭೂಮಿಯಲ್ಲಿ ಅನುಭವಿಸಿದುದು ಅತ್ಯಂತ ಕಠಿನವಾದ ಬೇಸಗೆ. ಮರಗಳ ಹಸುರಿಗೆ ಬರಗಾಲವಿರಲಿಲ್ಲ ಕೊಡಗಿನಲ್ಲಿ. ನೆರಳಿಗೂ ಅಷ್ಟೆ. ಆದರೂ ಶಾಖ ಆಂಗ್ಲರನ್ನು ದಹಿಸಿತು.

ಆ ಸಂಕಟ ಅಸಹನೀಯವಾಗಲು ಕಾರಣ, ಪ್ರಕೃತಿಯನ್ನು ಕಠಿನತರ ಗೊಳಿಸಿದ ವಸ್ತುಸ್ಥಿತಿ. ಅರಸೊತ್ತಿಗೆ ನಿರ್ನಾಮವಾದಂತೆಯೇ ಎಂದು ಅವರು ಭಾವಿಸಿದ್ದರೂ ಗಡಗಡನೆ ನಡುಗತೊಡಗಿತ್ತು ಅವರ ಆಡಳಿತದ ಬುಡ.

ಈಸ್ಟ್ ಇಂಡಿಯಾ ಕಂಪೆನಿಯ ಚಾಕರನಾಗಿ ಬಂದಿದ್ದ ಲೀಹಾರ್ಡಿ. ಕಂಡರಿಯದೆ ಇದ್ದ ದೇಶದಲ್ಲಿ ದುಡಿಮೆ. ಇತರ ಪ್ರಮುಖರನ್ನು ಮೀರಿಸಿ ಕೀರ್ತಿಶಾಲಿ ಎನಿಸುವ ಮಹತ್ವಾಕಾಂಕ್ಷೆಯೇನೋ ಇದ್ದೇ ಇತ್ತು. ಆದರೂ ಮುಖ್ಯವಾಗಿದ್ದುದು, ಸ್ವತಃ ಆತನ ಬದುಕಿನ ಹಾದಿ. ಒಂದಷ್ಟು ವರ್ಷ ದುಡಿದು, ಒಂದಷ್ಟು ಸಂಪಾದಿಸಿ, [‘ಒಳ್ಳೆಯ ಹೆಸರ’ನ್ನೂ ಪಡೆದು,] ತಾಯ್ನಾಡಿಗೆ ಮರಳಿದನೆಂದರೆ, ಉಳಿದ ವಯಸ್ಸನ್ನು ನೆಮ್ಮದಿಯಿಂದ ಕಳೆಯಬಹುದು ಆತ. ಬದಲು, ಇಂಗ್ಲಿಷರು ಕೊಡಗಿನಲ್ಲಿ ಸೋತರೆ, ಆತನ ಆಸೆಗಳೆಲ್ಲ ಮಣ್ಣುಗೂಡಿದಂತೆಯೇ. ಸಂಸಾರವಂದಿಗನಾಗಿ ಭಾರತದಲ್ಲಿ ಬದುಕಿ ಹಿಂತಿರುಗುವ ಮಾತಿರಲಿ; ದೇಶೀಯರ ಕೈದಿಯಾಗಿ ಕತ್ತಲು ಕೋಣೆಯಲ್ಲಿ ನರಳುವ ಸಂದರ್ಭ. ಈಗಿನ ಸಂಕಟದೆದುರಲ್ಲಿ ಲೀಹಾರ್ಡಿಗೆ, ಮನಸಿನಲ್ಲಿ ಹಸುರಾಗಿಯೇ ಇದ್ದ ನೆನಪು ಮರುಕಳಿಸುತಿತ್ತು; ಶ್ರೀರಂಗಪಟ್ಟಣದಲ್ಲಿ ಆಂಗ್ಲ ಸಾಮ್ರಾಜ್ಯಕ್ಕೇ ಕಂಟಕಪ್ರಾಯನಾಗಿದ್ದ ಟಿಪ್ಪು, ಬಿಳಿಯ ಕೈದಿಗಳಿಗೆ ನೀಡಿದ ಆದರಾತಿಥ್ಯ! ಆ ಸ್ಮರಣೆಯಿಂದ ಮೈಜುಮ್ಮೆನ್ನುತಿತ್ತು; ರಕ್ತದ ಒತ್ತಡ ಬಲವಾಗುತಿತ್ತು; ಅಂಗಾಂಗಗಳು ಬೆವರುತಿದ್ದುವು.

ಲೀಹಾರ್ಡಿ ಗಾಳಿ ಬೀಸಿಕೊಳ್ಳುತ್ತಾ ಗೋಳಾಡುತಿದ್ದ:

“ಎಂಥ ಸೆಖೆ! ಎಂಥ ಸೆಖೆ!”

ಹೃದಯ ಗೋಗರೆಯುತಿತ್ತು:

‘ಬಡವನಾಗಿಯಾದರೂ ಸರಿಯೆ – ಕೂಲಿ ದುಡಿತದಿಂದಾದರೂ

ಸರಿಯೆ – ಯಾವ ತೊಂದರೆಯೂ ಇಲ್ಲದೆ, ಹುಟ್ಟಿ ಬೆಳೆದ ದ್ವೀಪದಲ್ಲಿ – ಇಂಗ್ಲೆಂಡಿನಲ್ಲಿ – ಹೊಟ್ಟೆ ಹೊರೆಯ ಬಾರದಾಗಿತ್ತೆ ?'....

....ಸೀಮೆ ನಾಯಿ ಬಗುಳಿತು. ಅದರ ನಾಭಿಯಿಂದಲೆ ಹೊರಟಿತು ಸ್ವರ – ಲೀಹಾರ್ಡಿಯ ನಾಭಿಯಲ್ಲಿ ನಡುಕ ಹುಟ್ಟಿಸುವ ಸ್ವರ.

ಮಡಿಕೇರಿಯ ಕೋಟೆಗೆ ಸಶಸ್ತ್ರಕಾವಲಿದ್ದರೂ ಹೆಜ್ಜೆ ಹೆಜ್ಜೆಗೂ ಪ್ರಾಣ ಭಯದಿಂದಲೆ ಲೀಹಾರ್ಡಿ ವರ್ತಿಸಿದ. ಕಚೇರಿಯಲ್ಲಿ ಆಂಗ್ಲ ಅಧಿಕಾರಿಗಳು, ನಂಬುಗೆಯ ಸಿಪಾಯರು....ಆದರೂ....

ನಂಬುಗೆಯ ಸಿಪಾಯರೆ? ಯಾರಿಗೆ ಗೊತ್ತು ? ಯಾವ ಘಳಿಗೆಯಲ್ಲಿ ಅವರು ತಿರುಗಿ ಬೀಳುವರೋ? ಕರಿಯರ ಮೇಲೆ ವಿಶ್ವಾಸವಿರಿಸುವುದಕ್ಕಿಂತ ಹೆಚ್ಚಿನ ಮೂರ್ಖತನ ಬೇರೊಂದಿತ್ತೆ ?

ಬೋಪುದಿವಾನನ ಸಂಬಂಧಿಕರೇ ಕಲ್ಯಾಣಸ್ವಾಮಿಯನ್ನು ಸೇರಿದ್ದರು. ಈತನೊಬ್ಬ ವಂಚಕನಲ್ಲ ಎನ್ನುವುದಕ್ಕೆ ಎಲ್ಲಿತ್ತು ಆಧಾರ? ಹೇಗೂ ದ್ರೋಹ ಬಗೆದು ಅಭ್ಯಾಸವಿರುವ ಮನುಷ್ಯ....ಆ ಲಕ್ಷ್ಮೀನಾರಾಯಣದಿವಾನನೋ, ಬಂಡಾಯದ ವದಂತಿಯನ್ನು ಸಕಾಲದಲ್ಲಿ ತಿಳಿಸಲೇ ಇಲ್ಲ ಮೂರ್ಖ....

ವರದಿ. ಎಷ್ಟು ದಿನ ಬರೆದರೂ ಕೊನೆ ಇಲ್ಲದ ವರದಿ. ಕಲ್ಯಾಣಸ್ವಾಮಿ ಮಂಗಳೂರಿನ ಕಡೆಗೆ ದಂಡೆತ್ತಿ ಹೋಗಿ ಒಳ್ಳೆಯ ಕೆಲಸ ಮಾಡಿದ ಒಂದು ರೀತಿಯಲ್ಲಿ. ಮಂಗಳೂರಿಗೆ ಸೇನೆ ಕಳುಹುವ ಜವಾಬ್ದಾರಿ ತನ್ನದಲ್ಲ. ತಲಚೇರಿಯ ಕಚೇರಿಯವರು ಆ ಕೆಲಸ ಮಾಡಬೇಕು. ಸಮುದ್ರ ಮಾರ್ಗವಾಗಿ ಬಂದು 'ದ್ರೋಹಿ' ಗಳನ್ನು ದಂಡಿಸಬೇಕು. ಬೆಂಗಳೂರಿನಿಂದಲೆ ಸೇನೆ ಕಳುಹಬೇಕು ನೇರವಾಗಿ. ಮದರಾಸಿಗೆ ತಾನು ವಿಷಯ ತಿಳಿಸಿದರಾಯಿತು....

ಆದರೆ ಲೀಹಾರ್ಡಿಗೆ ತಿಳಿದಿತ್ತು. ಒಂದೇ ಒಂದು ಕಿಡಿ ಸಾಕು—

ತರಗೆಲೆ ರಾಶಿಯ ಹಾಗೆ ಕೊಡಗು ಉರಿದುಹೋಗುವುದರಲ್ಲಿ ಸಂದೇಹವಿರಲಿಲ್ಲ. ಅಲ್ಲಿ ಅಶಾಂತಿಯ ದ್ರವ ಕೊತಕೊತ ಕುದಿಯುತಿತ್ತು. ಸೋಲು, ಸಾವು, ಅನಿವಾರ್ಯ – ಎನ್ನುವ ಸ್ಥಿತಿ ಒದಗಿತ್ತು ಆಳುವವರಿಗೆ. ವೀರರಾಜೇಂದ್ರ ಕಾಶಿಯಿಂದ ಹಿಂತಿರುಗಿದನಂತೆ. ಲೀಹಾರ್ಡಿಗೆ ತಿಳಿದಿರಲಿಲ್ಲವೆ ಅದು ಸುಳ್ಳೆಂಬುದು ? ಆದರೆ ಜನರು ನಂಬಿದ್ದರು. ಎಂತಹ ವಿವರಣೆಯೂ ಆ ನಂಬುಗೆಯನ್ನು ಅಳಿಸಲು ಸಮರ್ಥವಾಗಿರಲಿಲ್ಲ. ಆ ರಾಜ ಹಿಂತಿರುಗ

ಬೇಕೆಂಬ ಬಲವತ್ತರವಾದ ಆಸೆಯ ರೆಕ್ಕೆಗಳ ಮೇಲೇರಿ, ಆತ ಈಗಾಗಲೇ ಬಂದಿರುವನೆಂಬ ಕಿಂವದಂತಿ, ಶರವೇಗದಿಂದ ಸಂಚಾರ ಮಾಡಿತು—ಕೊಡಗಿನ ನಾಲ್ಕು ಮೂಲೆಗಳಿಗೆ.

ಮಂಗಳೂರನ್ನು ಜಯಿಸಿದ ಕಲ್ಯಾಣಸ್ವಾಮಿಯ ದಂಡು ಮಡಿಕೇರಿ ಕೋಟೆಯ ಮೇಲೇರಿ ಬರುವುದು ಇನ್ನು ಕೆಲವೇ ದಿನಗಳ ಮಾತು—ಎಂಬುದನ್ನು ಲೀಹಾರ್ಡಿ ಮನಗಂಡಿದ್ದ.

ನಿತ್ಯದ ಉಣಿಸು, ಕುಡಿಯುವ ನೀರು, ಉಸಿರಾಡುವ ಗಾಳಿ – ಪ್ರತಿಯೊಂದೂ ವಿಷಮಯವಾಗಿದ್ದಂತೆ ಆತನಿಗೆ ಭಾಸವಾಗುತಿತ್ತು, ಭಯವಾಗುತಿತ್ತು....

....ತಂಬಾಕದ ಕೊಳವೆಯನ್ನು ಬಾಯಿಗಿರಿಸಿ ಆತ ಬೆಂಕಿ ಹಚ್ಚಿದ. ಹೊಗೆಯುಗುಳಿದ. ನಿಟ್ಟುಸಿರು ಬಿಟ್ಟ.

....ಮತ್ತೆ ನಾಯಿ ಬಗುಳಿತು.

ಕಚೇರಿಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ ಲೀಹಾರ್ಡಿಯ ದೇಹ ಅಸಹನೆಯಿಂದ ಅತ್ತಿತ್ತ ಮಿಸುಕಿತು. ಒಣಗಿದ್ದ ಆ ಗಂಟಲಿನಿಂದ ಸ್ವರ ಹೊರಟಿತು:

"ಬಂದನೆ ಬೋಪುದಿವಾನ?"

ಕಾವಲಿನ ಸಿಪಾಯಿಯೆಂದ:

"ಇಲ್ಲ ಸರ್ಕಾರ್."

'ಹೊತ್ತುಗೊತ್ತು ಒಂದೂ ಇಲ್ಲ ಈ ಜನಕ್ಕೆ!'

ಅದು, ಬಹಿರಂಗವಾಗಿ ಆಡಿದ ಮಾತು. ಆದರೆ ಅಂತರಂಗದಲ್ಲಿ ಸಂಶಯ ಪಿಶಾಚಿ ಒರಲುತಿತ್ತು:

"ಈಗಾಗಲೇ ಆತ ಬಂಡಾಯಗಾರರ ಕಡೆ ಸೇರಿದನೋ ಏನೋ."

ಆದರೆ ನಿಜ ಸ್ಥಿತಿ ಆ ಸಂದೇಹಕ್ಕಿಂತ ಭಿನ್ನವಾಗಿತ್ತು. ಜನರ ದೃಷ್ಟಿಯಲ್ಲಿ ಆತ ಆಗಲೆ, ಪರಕೀಯರ ಎಂಜಲಿಗಾಗಿ ಅಂಡಲೆಯುವ ಪ್ರಾಣಿಯಾಗಿದ್ದ. ಎದುರು ಬಂದಾಗ ನಮಸ್ಕಾರ. ಒಂದು ಹೆಜ್ಜೆ ದಾಟಿದೊಡನೆ ಹಿಡಿಶಾಪ. ದಿವಾನಗಿರಿಯ ಅಧಿಕಾರದ ಆಧಾರದ ಮೇಲೆಯೆ ಆತ ಕೊಡವ ಸಮಾಜದಲ್ಲಿ ಪ್ರತಿಷ್ಠಿತ ಮನುಷ್ಯನಾಗಿದ್ದ. ಆದರೆ ಮನೆಯಲ್ಲಿ ಆತನ ಹೆಂಡತಿ ಮಕ್ಕಳಿಗೆ ಗೊತ್ತಿತ್ತು, ತಾವು ವಿಶ್ವಾಸಘಾತುಕನ ಸಂಸಾರದವರೆಂಬುದು.

ಬ್ರಿಟಿಷರು ನೀಡಿದ ಅನ್ನವೇ ವರಪ್ರಸಾದವೆಂದು ಬಗೆದವರು ಇರಲಿಲ್ಲವೆಂದಲ್ಲ. ಆದರೆ, ಜನರ ಒಲವು ಮಾತ್ರ ಶೂನ್ಯವಾಗಿತ್ತು! ಆ ಗುಲಾಮ ಚಾಕರರ ಪಾಲಿಗೆ. ಅಂಥವರ ಬಳಗದಲ್ಲೇನೋ ಹಿರಿಯ ವ್ಯಕ್ತಿಯೇ ಬೋಪು.

ಸ್ವಾತಂತ್ರ್ಯವನ್ನು ಪರಕೀಯರಿಗೆ ಮಾರಿದ ದ್ರೋಹಿಗಳ ಪಾಲಿಗೆ, ಕೊಡಗು ಉಸುಬುಕಾಡೆಂಬುದು ಮನವರಿಕೆಯಾಗುತ್ತಲೆ ಬೋಪು, ಅಧೀರನಾದ. ಆತನ ಕನಸಿನಲ್ಲೂ ಕಾಣಿಸಿಕೊಂಡಿತು ಕಲ್ಯಾಣಸ್ವಾಮಿಯ ದಂಡು. ಯಾರೋ ಕಳ್ಳಕಾಕರು, ಹುಟ್ಟಡಗಿಸುವುದು ಎಷ್ಟರ ಕೆಲಸ? – ಎಂಬ ಭಾವನೆ ದಿನಕಳೆದಂತೆ ಮಾಯವಾಯಿತು. ಒಡೆಯರಿಗೆ ಆತ ವರದಿ ಇತ್ತಿದ್ದ: 'ಯಾವನೋ ಕಪಟಿ ಆ ಕಲ್ಯಾಣಸ್ವಾಮಿ. ಹೆದರಬೇಡಿ!' ಆದರೆ, ಕಲ್ಯಾಣಪ್ಪನ ದಂಡು ಒಂದೇ ಸಮನೆ ಜಯಗಳಿಸುತ್ತ ಮುಂದುವರಿದು ಮಂಗಳೂರನ್ನು ವಶಪಡಿಸಿಕೊಂಡಿತೆಂಬ ವಾರ್ತೆ ಕೇಳಿದಾಗ ಮಾತ್ರ ಉಸಿರಾಡುವುದೇ ಕಷ್ಟವಾಯಿತು ಆತನಿಗೆ.

ಯಾರು ಕಲ್ಯಾಣಸ್ವಾಮಿ? ಯಾವ ವ್ಯಕ್ತಿ? ಗೂಢಚಾರರು ಸುದ್ದಿ ತಂದರು. ದಿಗಿಲು ಹುಟ್ಟಿಸುವ ವಿವರವಿತ್ತರು. ನಂಜಯ್ಯ, ಪುಟ್ಟಬಸವ, ಕುಡಿಯ ಸೋಪರರ ತಂಡವೇ ಅದೆಂಬುದು ಸ್ಪಷ್ಟವಾಯಿತು. ಬೋಪುವಿಗೆ ಗೊತ್ತಿತ್ತು, ಅವರು ಪುಂಡರಲ್ಲವೆಂಬುದು.

ಆ ದಂಡು ಜಯಶಾಲಿಯಾದುದೇ ಆದರೆ, ಬೋಪುವಿನ ಗತಿ? ಅದನ್ನೂ ಆತ ತಿಳಿದಿದ್ದ. ದೊಡ್ಡಮರದ ಬಲವಾದ ಕೊಂಬೆ; ಕೊರಳನ್ನು ಬಿಗಿಯುವ ಹುರಿಹಗ್ಗ....

ಇಂಗ್ಲಿಷರ ಆಳ್ವಿಕೆಯೊಂದೇ ಆತನಿಗಿದ್ದ ರಕ್ಷಣೆ. ಆದರೆ ಆ ಇಂಗ್ಲಿಷರೇ ಆತನನ್ನು ನಂಬಲಿಲ್ಲ. ತನ್ನ ವಿಷಯದಲ್ಲಿ ಲೀಹಾರ್ಡಿ ಈಗ ತೋರುತಿದ್ದ ಅನಾದರ, ಬೋಪುವನ್ನು ಕಳವಳಕ್ಕೆ ಗುರಿಮಾಡಿತು.

....ಮತ್ತೊಮ್ಮೆ ನಾಯಿ ಬಗುಳಿತು.

ಲೀಹಾರ್ಡಿ ಕರ್ಕಶಧ್ವನಿಯಲ್ಲಿ ಕೇಳಿದ:

"ಬೋಪು ದಿವಾನ ಬಂದನೆ?"

"ಬರ್ತಿದಾರೆ ಸರ್ಕಾರ್," ಎಂದ ಕಾವಲಿನ ಸಿಪಾಯಿ.

ಮರುವಂದನೆ, ಹಸ್ತಲಾಘವ, ಗತಕಾಲದ ಮಾತು. ಕುಳಿತು

ಕೊಳ್ಳಲು ಸೂಚನೆ ಬರುತ್ತಿದ್ದುದೂ ನಿಂತೇ ಇದ್ದು ಕೆಲನಿಮಿಷಗಳಾದ ಬಳಿಕ.

ಲೀಹಾರ್ಡಿ ಕೇಳಿದ:

" ಭೇಟಿ ಅಪರೂಪವಾಯಿತಲ್ಲಾ ದಿವಾನ್ ?"

ಬೋಪ್ಪುಸುಳ್ಯಾಡಿದ:

" ಬೇಹುಗಾರರು ಬಂದಿದ್ದರು. ಮಾತು ಮುಗಿಸಿ ಬರುವುದು ತಡ ವಾಯ್ತು."

" ಬೇಹುಗಾರರೆ ? ಎಲ್ಲಿದ್ದಾರೆ ? ಯಾಕೆ ಕರಕೊಂಡು ಬರಲಿಲ್ಲ ಇಲ್ಲಿಗೆ ?"

ಮಹತ್ವದ ಸುದ್ದಿ ಇರಲಿಲ್ಲ. ನಾನೇ ಮಾತನಾಡಿ ಅವರನ್ನು ಕಳಿಸ್ಕೊಟ್ಟೆ."

ಮನಸಿನ ಆಳದಲ್ಲಿ ಏನಿತ್ತೆಂದು ತಿಳಿಯಬಯಸುವವನಂತೆ ಬೋಪು ವನ್ನು ಲೀಹಾರ್ಡಿ ದೃಷ್ಟಿಯಿಂದ ಇರಿದು ನೋಡಿದ.

ಮೌನದ ನಿಮಿಷಗಳು ದೀರ್ಘವೆನಿಸಿದುವು.

ಉರಿ ಆರಿದ್ದ ಕೊಳವೆಯನ್ನು ಒಮ್ಮೆಲೆ ಮೇಜಿನ ಮೇಲಿರಿಸಿ, ಲೀಹಾರ್ಡಿಯೆಂದ:

" ಮಂಗಳೂರಿನ ಸುದ್ದಿ ತಿಳಿಯಿತು ತಾನೆ ?"

" ತಿಳಿಯಿತು ಖಾವಂದರೆ."

ಏನು ತೀರ್ಮಾನಿಸಿದೀರಿ ?"

" ನಮ್ಮ ಕೊಡಗಿನಲ್ಲೇನೂ ಗಾಬರಿ ಪಡುವ ಪರಿಸ್ಥಿತಿ ಇಲ್ಲವಲ್ಲ !"

ಕೊನೆಯ ನಿಮಿಷದವರೆಗೂ ತಾವು ಅಸನ್ನದ್ಧರಾಗುವಂತೆ ಮಾಡುವ ಸಂಚು ಇದು, ಎಂದು ಲೀಹಾರ್ಡಿ ಶಂಕಿಸಿದ.

" ಎಡೆನಾಡು ಗಡಿನಾಡುಗಳ ಜನ ಕಲ್ಯಾಣಸ್ವಾಮಿಯನ್ನು ಸೇರಿದ್ದು ನಿಜವೊ ?"

" ಹೌದು, ನಿಜ."

" ಬಿಸಿಲೆಘಟ್ಟದ ಕನ್ನಡಿಗರು ಅವನನ್ನು ಸೇರಿದ್ದೂ ನಿಜ ತಾನೆ ?"

" ಹೌದು."

" ನಿಮ್ಮ ಸಂಬಂಧಿಕರೇ ಕೆಲವರು ವಿದ್ರೋಹಿಗಳನ್ನು ಕೂಡಿ ಕೊಂಡದ್ದು ?"

" ನಾನು ಏನು ಹೇಳಲಿ ಖಾವಂದರೆ ? ಅದನ್ನೆಲ್ಲಾ ಬಿನ್ನವಿಸಬೇಕು ಅಂತಲೇ ಬಂದೆ – ಆದರೆ ತಮಗೆಲ್ಲಾ ತಿಳಿದಿದೆ."

" ನಮಗೆ ಯೋಗ್ಯ ಸಲಹೆ ಕೊಡೋದು ದಿವಾನರಾದ ನಿಮ್ಮ ಜವಾಬುದಾರಿ."

" ಒಪ್ಪಿದೆ."

" ಹೇಳಿ ಮತ್ತೆ !"

" ತಾವು ನಿಶ್ಚಿಂತೆಯಾಗಿದ್ದು—"

ಲೀಹಾರ್ಡಿಗೆ ರೋಷ ಉಕ್ಕೇರಿ ಬಂತು.

" ಸಾಕು, ಸುಮ್ನಿರಿ. ಗುಡ್ಡೆಮನೆ ಅಪ್ಪಯ್ಯನಂಥವರು, ಸುಭೇದಾರ್ ಮಾದಯ್ಯನಂಥವರು. ವಿದ್ರೋಹಿಗಳ ಜತೆ ಸೇರಿದ ಮೇಲೂ ನಿಶ್ಚಿಂತೆಯಾಗಿರ್ಬೇಕೆ ? ತಾವುನಾಡಿನಿಂದ ನಾಲ್ಕುನಾಡಿನ ವರೆಗೆ ಎಷ್ಟೋ ಜನ ಗೃಹಸ್ಥರೂ ಮಾಜಿ ಮುಖ್ಯ ಉದ್ಯೋಗಸ್ಥರೂ ಬಂಡಾಯಗಾರರನ್ನು ಸೇರ್ಕೊಂಡ ಮೇಲೂ ನಿಶ್ಚಿಂತೆಯಾಗಿರ್ಬೇಕೆ ? ಇದು ಯಾವ ರಾಜ ನೀತಿ ? ವೈರಿ ಮನೆ ಬಾಗಿಲಿಗೆ ಬರೋವರೆಗೂ ಸುಮ್ಮನಿರೋಣ ಅಂತೀರೊ ?"

ಉಗುಳು ನುಂಗಿ ಬೋಪುವೆಂದ :

" ಅವಸರ ಪಡಬಾರದು ಎಂದಷ್ಟೆ ನನ್ನ ಅಭಿಪ್ರಾಯ."

" ಪುನಃ ಅದೇ ಮಾತು ! ಹುಂ ! ಘಟ್ಟದ ಕೆಳಗೆ ನೀವೂ ಹೋಗಿ ನಿಮ್ಮ ಸ್ನೇಹಿತರನ್ನು ಯಾಕೆ ಸೇರಬಾರದು ? ಎದುರಿಗೆ ಮಿತ್ರನಂತೆ ತೋರಿಸಿಕೊಂಡು ಒಳಗಿಂದೊಳಗೆ ಶತ್ರುಗಳ ಪಕ್ಷ ಸೇರೋದಕ್ಕಿಂತ—"

ಬೋಪು ನಡುವೆ ಮಾತು ತಡೆಯುತ್ತ ಅಂದ :

" ಖಾವಂದರೆ ! ಅಂಥ ಆರೋಪ ಹೊರಿಸ್ಬೇಡಿ ! ನಾನು ಕುಂಪಣಿ ಸರಕಾರದ ಸೇವಕ. ನನ್ನನ್ನು ನಂಬಿ !"

" ಇಲ್ಲ, ನೀವು ವಂಚಕ ! ದ್ರೋಹಿ !"

ಬೋಪುವಿನ ಮುಖ ಕಪ್ಪಿಟ್ಟಿತು. ಜೋತು ಬಿದ್ದಿತು ಮೀಸೆ. ಕಣ್ಣುಗಳಲ್ಲಿ ಕಂಬನಿ ತುಂಬಿತು. ಕಪೋಲಗಳನ್ನು ತೋಯಿಸಿತು ಕಣ್ಣೀರು.

ತಾನು ಕಳ್ಳತನ ಮಾಡಿಲ್ಲವೆಂದು ವಿದಿತಗೊಳಿಸುವ ಎಳೆಯ ಮಗುವಿನಂತೆ ಅಳುತ್ತ, ಅದುರುವ ಧ್ವನಿಯಲ್ಲಿ ಬೋಪುವೆಂದ :

" ಖಾವಂದರೆ ! ಇಂಥ ಆರೋಪ ಕೇಳೋದಕ್ಕಿಂತ ಸಾಯೋದು

ಮೇಲು. ಉಂಡ ಮನೆಗೆ ಎಂದಾದರೂ ನಾನು ಎರಡು ಬಗೆದೇನಾ ? ನಾನು ಸ್ವಾಮಿನಿಷ್ಠ ಅಂತ ಸಾಬೀತು ಮಾಡ್ತೀನಿ, ಅವಕಾಶ ಕೊಡಿ."

ಅಳುತ್ತಿದ್ದ ಆ ಮನುಷ್ಯನನ್ನು ನೋಡಿ, ಸಂಕಟದ ಆ ಸಮಯದಲ್ಲೂ ಲೀಹಾರ್ಡಿಗೆ ತಮಾಷೆ ಎನಿಸಿತು. ಆತನ ವಿಷಯವಾಗಿ ತಿರಸ್ಕಾರ ಮೂಡಿತು. ಆತ ಗದರಿದ :

"ಹೆಂಗಸರ ಹಾಗೆ ಅತ್ತರೆ ಏನು ಪ್ರಯೋಜನ? ಧೈರ್ಯವಿದ್ದರೆ ಯುದ್ಧ ಭೂಮಿಗೆ ಇಳಿದು ವಿದ್ರೋಹಿಗಳ ಹುಟ್ಟಡಗಿಸಿ."

ಕಂಬನಿಯೊರೆಸಿಕೊಂಡು ಬೋಪು ನುಡಿದ :

"ಆಗಲಿ ಖಾವಂದರೆ. ಹೋರಾಟದಲ್ಲಿ, ಒಂದೇ ನಾನು ಸಾಯ್ತೀನಿ ; ಇಲ್ಲವೆ ಅವರು ಸಾಯ್ಬೇಕು."

ಮತ್ತೊಮ್ಮೆ ಕೊಳವೆಗೆ ತಂಬಾಕು ತುಂಬಿ ಬೆಂಕಿ ಮುಟ್ಟಿಸಿ, ಲೀಹಾರ್ಡಿಯೆಂದ :

"ಆ ನಾಯಿಯ ಇಸ್ತಿಹಾರು ನೋಡಿದಿರೋ ?"

"ನೋಡಿದೆ."

"ಅದಕ್ಕೆ ಪ್ರತಿಯಾಗಿ ನಾವೊಂದು ಘೋಷಣೆ ಹೊರಡಿಸ್ಬೇಕು."

"ಆಗಬಹುದು."

"ಕಪಟ ಕಲ್ಯಾಣಸ್ವಾಮಿಯನ್ನು ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ."

"ಹೂಂ."

"ಇನ್ನೊಬ್ಬನ ಹೆಸರೇನು ? ನಂಜಯ್ಯ ಅಂತ್ಲೆ ? ಅವನನ್ನು ಹಿಡಿದು ಕೊಟ್ಟವರಿಗೆ ಐದು ಸಾವಿರ. ಸುಳ್ಯದ ಗೌಡನನ್ನು ಹಿಡಿದವರಿಗ ಐದು ಸಾವಿರ. ಸರಿಯೊ ?"

"ಸರಿ ಖಾವಂದರೆ."

"ಸರಕಾರಕ್ಕೆ ಇದಿರಾಗಿ ಬಂಡಾಯಗಾರರನ್ನು ಸೇರೋದು ರಾಜದ್ರೋಹ. ರಾಜದ್ರೋಹಕ್ಕೆ ಶಿಕ್ಷೆ ಮರಣದಂಡನೆ....

"ನ್ಯಾಯ."

"ಹಾಗಾದರೆ ಸಿದ್ಧರಾಗಿ. ನಾಳೆ ನಸುಕಿನಲ್ಲೆ ನಮ್ಮ ದಂಡು ಹೊರಡಬೇಕು. ತಲಚೇರಿಯಿಂದ ಸೈನ್ಯ ಬಂದು ಮಂಗಳೂರನ್ನು ವಶಪಡಿಸಿ

ಕೊಳ್ಳೋದಕ್ಕೆ ಮುಂಚೆ, ಕೊಡಗನ್ನು ಭದ್ರಗೊಳಿಸಿ, ಅಮರ ಸುಳ್ಯದಿಂದ ಪುಂಡರನ್ನು ಓಡಿಸಿ, ನಾವೇ ಮಂಗಳೂರು ತಲಪಬೇಕು. ರಾಜದ್ರೋಹಿಗಳನ್ನು ಹಿಡಿದು ಸುಟ್ಟುಹಾಕ್ಬೇಕು."

ಹೌದೆಂದು ಮೌನವಾಗಿ ತಲೆದೂಗಿದ ಬೋಪುದಿವಾನ.

ಲೀಹಾರ್ಡಿ ಸ್ವರವೇರಿಸಿ ಕೇಳಿದ :

" ಸುಮ್ಮನಿದೀರಲ್ಲ? ಅಷ್ಟು ಶಕ್ತಿ ನಮ್ಮಲ್ಲಿಲ್ಲಾಂತ ಸಂದೇಹವೊ ?"

" ಹಾಗಲ್ಲ ಖಾವಂದರೆ."

" ತೂಕಡಿಸುತ್ತಾ ಕೂತಿರ್ಬೇಡಿ. ಏಳಿ !"

ಬೋಪು ದಿವಾನ ಎದ್ದು ನಿಂತು ಕೈಜೋಡಿಸಿದ.

ಲೀಹಾರ್ಡಿ ಬೆದರಿಕೆಯ ಗುಂಡುಹಾರಿಸುವಂತೆ ಮಾತನಾಡಿದ :

" ನಿಮ್ಮ ವಿಷಯದಲ್ಲಿ ನಮಗೆ ಅಸಮಾಧಾನವಾಗಿದೆ. ಅದನ್ನು ನೀವು ಹೋಗಲಾಡಿಸಬೇಕು. ಬದಲು, ನಮಗೆ ಆಪತ್ತು ಹೆಚ್ಚಿತೆಂದರೆ ನಿಮ್ಮ ಪರಿಣಾಮ ನೆಟ್ಟಗಾಗದು, ಹುಷಾರ್ !"

ಬೋಪುವಿನ ಪಾದಗಳು ಅತ್ತಿತ್ತ ಮಿಸುಕಿದುವು. ದೇಹದ ಭಾರವನ್ನು ಒಂದು ಕಾಲಿನಿಂದ ಇನ್ನೊಂದು ಕಾಲಿಗೆ ಆತ ವರ್ಗಾಯಿಸಿದ.

ಯಜಮಾನನ ಆಜ್ಞೆ ಬಂತು :

" ಹೊರಡಿ ಇನ್ನು ! ರಾತ್ರೆ ಇಲ್ಲಿಗೇ ಬಂದು ವಸತಿ ಮಾಡಿ !"

ಬೋಪುದಿವಾನ, ತಲೆಬಾಗಿ ವಂದಿಸಿ ಲೀಹಾರ್ಡಿಯ ಸಮ್ಮುಖದಿಂದ ಹಿಂತಿರುಗಿದ. ಒಳ ಬಂದಾಗ ಇದ್ದುದಕ್ಕಿಂತ ಸ್ವಲ್ಪ ಕುಗ್ಗಿತ್ತು ದೇಹ.

ಸೀಮೆ ನಾಯಿಯ ಅವಿಶ್ವಾಸದ ದೃಷ್ಟಿ ಬೋಪುವನ್ನೆ ಹಿಂಬಾಲಿಸಿತು.

ಅಷ್ಟು ಮಾತನಾಡಿದ ಬಳಿಕ ತುಸು ಸಮಾಧಾನವೆನಿಸಿತು ಲೀಹಾರ್ಡಿಗೆ. ಮುಂದಿನ ಯೋಜನೆಯನ್ನು ಕಾರ್ಯಗತಗೊಳಿಸಲು ಆತ ಸಿದ್ಧನಾದ.

" ಆ ದಿವಾನನ ಚಲನವಲನಗಳ ಮೇಲೆ ಕಣ್ಣಿಡಿ !"

ಅದು, ಪೂರಾ ನಂಬುಗೆಯ ಗೂಢಚಾರನಿಗೆ ಆಜ್ಞೆ.

" ಮಡಿಕೇರಿ ಕೋಟೆಯ ಕಾವಲಿಗೆ ಮೂವತ್ತಾರನೆ ರೆಜಿಮೆಂಟನ್ನು ನೇಮಿಸಿ !"

ಆ ರಕ್ಷಣೆಗೆ ಆಂಗ್ಲ ರೆಜಿಮೆಂಟೇ ಸರಿ. ಕೊಡಗಿನ ಸಿಪಾಯಿಯರನ್ನು ನಂಬುವುದು ಸಾಧ್ಯವಿರಲಿಲ್ಲ.

" ದಂಗೆಗಾರರ ದಂಡನೆಗೆ ತುಕ್ಕಡಿ ಸಿದ್ಧವಾಗಲಿ!"

ಅವಸರ ಅವಸರವಾಗಿ ಆ ಸಿದ್ಧತೆಯೂ ನಡೆಯಿತು.

....ಕತ್ತಲಾಯಿತು. ಅರಮನೆಯಲ್ಲಿ ಕಂದೀಲುಗಳನ್ನು ಹಚ್ಚಿದರು.

ಕಂಡೂ ಕಾಣದಂತೆ ಬೀಸುತಿದ್ದ ತಂಗಾಳಿಯೊಡನೆ ಸರಸವಾಡಲು ಬಯಸಿ, ತಂಬಾಕದ ಕೊಳವೆಯನ್ನು ಮತ್ತೆ ಚೀಪುತ್ತಾ, ತನ್ನ ನಾಯಿಯೊಡನೆ ಕೋಟೆಯ ಪ್ರಾಕಾರಗಳುದ್ದಕ್ಕೂ ಲೀಹಾರ್ಡಿ ನಡೆದ.

ನಾಯಿ ಒಮ್ಮೆಲೆ ನಿಂತು, ಕಾಡಿನೆಡೆಗೆ ನೋಡಿ ಬಗುಳಿತು.

ಡವಡವನೆ ಹೊಡೆದುಕೊಂಡಿತು ಲೀಹಾರ್ಡಿಯ ಹೃದಯ.

ಬೆಂಕಿ ಕಾಡನ್ನು ದಹಿಸುತಿತ್ತು, ಎಷ್ಟೋ ಮೈಲುಗಳಾಚೆ.

ಲೀಹಾರ್ಡಿಯ ಮೈಯಲ್ಲಿ ನಡುಕಹುಟ್ಟಿತು. ತಂಗಾಳಿಯನ್ನು ಅದರ ಪಾಲಿಗೇ ಬಿಟ್ಟು ಅವಸರ ಅವಸರವಾಗಿ ಆತ ಅರಮನೆ ಸೇರಿದ.

## ೨

ಅಂಬಿಗರು ದೋಣಿಗಳನ್ನು ನಡಸಿ, ರಾಜ್ಯಪಾಲ ಕಲ್ಯಾಣಸ್ವಾಮಿಯನ್ನೂ ಆತನ ಆಪ್ತರನ್ನೂ ಬಂದರಾಚೆಗೆ ಇದ್ದ ನಡುಗಡ್ಡೆಗೆ ಒಯ್ದರು. ಅಲ್ಲಿತ್ತು ವಿಸ್ತಾರವಾಗಿ ಮೈ ಚಾಚಿದ್ದ ಜಲರಾಶಿ. ಹುಣ್ಣಿಮೆಯ ರಾತ್ರಿ ಎಂತಹ ಉನ್ಮಾದ ಕಡಲಿಗೆ! ದಂಡೆಯ ಮೇಲೆ ಧಾಳಿ ಮಾಡುತಿದ್ದ ಜಲಯೋಧರ ಅಕ್ಷಯ ಸೇನೆ. ಒಂದು ಪಡೆ ಸೋತು ಹಿಮ್ಮೆಟ್ಟಿದೊಡನೆ ಮತ್ತೊಂದು ಪಡೆ. ಆ ಆರ್ಭಟವೊ! ಕಾರ್ಗಾಲದ ಗುಡುಗು ನಾಚಬೇಕು ಅದರೆದುರು. ಕೋಟಿ ಕುದುರೆಗಳು ಕೋಟಿ ಬಾಯಿಗಳಿಂದ ನೊರೆಸೀರಿದ ಹಾಗೆ ನೋಟ. ಅಭೇದ್ಯ ದುರ್ಗಕ್ಕೆ ಆಘಾತ—ಡಬ್ ಡಬಾಲ್. ವಿಫಲವಾಗಿ ಪಡೆ ಹಿಮ್ಮೆಟ್ಟಿದಂತೆ – ಸುಯ್, ಜುಳುಜುಳುಜುಳು....

ಮುಸಿದ ಪ್ರಕೃತಿ ಮಾತೆಯ ಎದುರು ಮಗುವಾಗಿ ಕುಳಿತ ಕಲ್ಯಾಣಸ್ವಾಮಿ. ಆತನ ಸಂಗಡಿಗರೂ ಅಷ್ಟೆ – ಮರಳ ದಿಣ್ಣೆಯ ಮೇಲೆ ಆಟವಾಡುವ ಮಕ್ಕಳು.

ಮಾತು ಕೇಳಿಸಲೆಂದು, ಅಲೆಗಳ ಮೊರೆತವನ್ನು ಮೀರಿಸುವ ಧ್ವನಿಯಲ್ಲಿ ಕಲ್ಯಾಣಸ್ವಾಮಿ ಎಂದ:

"ರಾಮುಗೌಡರೆ, ಹೇಳಿ, ಏನು ಅನಿಸುತ್ತೆ ನಿಮಗೆ?"

"ಮೂಕನನ್ನು ಯಾಕೆ ಕೇಳ್ತೀರಾ?" ಎಂದ ರಾಮುಗೌಡ.

ಕರಿಯಪ್ಪನೆಂದ:

"ಈ ಸಾಗರದ ಮೇಲೆ ದೋಣಿ ಕಟ್ಕೊಂಡು ಇಂಗ್ಲಿಷಿನೋರು ಹೋದರಲ್ಲಾ. ಅವರು ತಲಚೇರಿ ಸೇರಿರಬಹುದೆ ಅಂತ?"

"ಕಾಡಿನಲ್ಲಿ ಓಡಾಡೋದು ನಮಗೆಷ್ಟು ಸುಲಭವೊ, ಹಾಗೆಯೇ ನೀರು ಆ ಜನಕ್ಕೆ," ಎಂದ ಬಂಗರಾಜ.

ಕಲ್ಯಾಣಸ್ವಾಮಿಯೆಂದ:

"ಅವರೆಲ್ಲಾ ಎಷ್ಟೋ ಕಡಲು ದಾಟಿ ಇಲ್ಲಿಗೆ ಬಂದ ಜನ. ಅದನ್ನು ಮರೀಬೇಡಿ."

"ಕಡಲುಗಳ್ಳರು!" ಎಂದ ರಾಮುಗೌಡ.

ನಂಜಯ್ಯ ವಿವರಿಸಿದ:

" ಅವರ ದೇಶ ಒಂದು ಚಿಕ್ಕ ದ್ವೀಪ. ಸ್ನಾನ ಮಾಡಬೇಕಾದರೂ ಅವರು ಸಮುದ್ರಕ್ಕೇ ಇಳೀಬೇಕು !"

ಮಾತು ನಿಂತಿತು. ಚಂದ್ರನ ಶೀತಲ ಕಿರಣಗಳ ವರ್ಷಧಾರೆಯಲ್ಲಿ ಅವರ ಮೈಮನಗಳು ತೋಯ್ದುವು.

ಭೋರ್ಗರೆಯುತ್ತಿದ್ದ ತೆರೆಗಳನ್ನು ದಿಟ್ಟಿಸುತ್ತ ಕಲ್ಯಾಣಸ್ವಾಮಿ ನುಡಿದ:

" ವೈರಿಗಳಿಂದಲೂ ನಾವು ಪಾಠ ಕಲಿಯಬೇಕು. ಈ ಇಂಗ್ಲಿಷರ ಸಾಹಸ ಜೀವನ ಯಾರಿಗೆ ಮಾದರಿಯಲ್ಲ ಹೇಳಿ? ಅವರ ಕ್ಷುದ್ರ ಹೃದಯ ಮಾತ್ರ ನಮಗೆ ಬೇಡ, ಅಷ್ಟೆ. ನಮ್ಮ ಜನ ದೇಶ ಸಂಚಾರ ಮಾಡುವುದಿರಲಿ, ಊರು ಬಿಟ್ಟು ಹೊರಹೋಗುವುದೆ ಕಡಮೆ. ಆ ಇಂಗ್ಲಿಷರಿಗಾದರೆ ವಿಶ್ವಸಂಚಾರ ಮಕ್ಕಳಾಟ ಇದ್ದ ಹಾಗೆ. ಸಂಸಾರವನ್ನೆಲ್ಲ ಊರಲ್ಲಿ ಬಿಟು ಭಾಷೆ ತಿಳಿಯದ ಕಂಡುಕೇಳದ ದೇಶಕ್ಕೆ ಅವರು ಬರುವುದೆಂದರೆ ಸಾಮಾನ್ಯವೆ? ಆ ಸಾಹಸ ಪ್ರವೃತ್ತಿ ನಮ್ಮಲ್ಲೂ ಇರಬೇಕು. ಆದರೆ, ಇನ್ನೊಬ್ಬರನ್ನು ತುಳಿದು ಆಳುವ ಅಪೇಕ್ಷೆ ಮಾತ್ರ ಇರಬಾರದು !"

ತಲೆಯಾಡಿಸುತ್ತ ನಂಜಯ್ಯನೆಂದ :

" ಇತಿಹಾಸದಲ್ಲೇ ಸ್ಪಷ್ಟವಾಗಿಲ್ಲವೆ? ಎಲ್ಲರೂ ನಮ್ಮನ್ನು ನುಂಗಲು ಬಂದರೇ ಹೊರತು, ಹಿಂದೂಸ್ಥಾನದ ಜನರಾದ ನಾವು ಇನ್ನೊಂದು ದೇಶವನ್ನು ಎಂದಾದರೂ ಆಕ್ರಮಿಸಿದ್ದುಂಟೆ ?"

ಆರಂಭಿಸಿದ್ದ ವಿಚಾರ ಸರಣಿಯನ್ನು ಮುಂದುವರಿಸುತ್ತ ಕಲ್ಯಾಣಸ್ವಾಮಿಯೆಂದ :

"ಈ ಪ್ರಪಂಚದಲ್ಲಿ ವಿಜ್ಞಾನ ಇವತ್ತು ಮುಖ್ಯ. ಪಶ್ಚಿಮದ ಕಡೆಯವರು ಅದರಲ್ಲಿ ನಿಷ್ಣಾತರಾಗಿದ್ದಾರೆ. ನಾವೂ ಮುಂದುವರಿಯಬೇಕು. ಯುದ್ಧವಿದ್ಯೆಯನ್ನು ತಗೊಳ್ಳಿ. ನಮ್ಮ ಪ್ರಾಚೀನ ಪದ್ಧತಿಯ ಜತೆಗೆ ಆಧುನಿಕ ಜ್ಞಾನವೂ ಬೇಕು. ಅವರ ಸಮರ ತಂತ್ರವನ್ನು ಮೀರಿಸುವ ಸಾಮರ್ಥ್ಯ ನಮಗಿರಬೇಕು."

ಸೋಮಯ್ಯನೆಂದ :

ಆ ಮಾತಿಗೆ ಕಿವಿಗೊಡುತ್ತ, ಯೋಚಿಸುತ್ತ, ಇದ್ದ !

" ಸಮುದ್ರದಲ್ಲಿರೋ ಸಣ್ಣ ಮೀನನ್ನು ದೊಡ್ಡ ಮೀನು ತಿನ್ನುವಂತೆ,

ಸಣ್ಣ ತಿಮಿಂಗಿಲವನ್ನು ದೊಡ್ಡ ತಿಮಿಂಗಿಲ ನುಂಗ್ತದಂತೆ. ಕಾಡು ಪ್ರಾಣಿಗಳಲ್ಲೂ ಅಷ್ಟೆ. ಒಂದು ಇನ್ನೊಂದಕ್ಕೆ ಆಹಾರ, ಹಾಗಾದರೆ, ಮನುಷ್ಯನಿಗೂ ಮೃಗಗಳಿಗೂ ವ್ಯತ್ಯಾಸ ಎಲ್ಲಿದೆ?"

ರಾಮಗೌಡ ಮಾತು ಸೇರಿಸಿದ :

"ತಿಮಿಂಗಿಲನ್ಯಾಯ! ಸರಿ ಹೇಳಿದಿರಿ ಸೋಮಯ್ಯನವರೆ. ಪ್ರಾಣಿಗಳಲ್ಲಿರೋದು ಉಗುರು, ಹಲ್ಲು. ಮನುಷ್ಯರ ಕೈಲಿ ಕತ್ತಿ, ಬಂದೂಕು. ಅಷ್ಟೇ ವ್ಯತ್ಯಾಸ."

ಆ ಮಾತಿಗೆ ಒಪ್ಪಿಗೆ ಸೂಚಿಸುತ್ತ ಸೋಮಯ್ಯನೆಂದ :

"ನಾವೆಲ್ಲಾ ರಾಕ್ಷಸ ಸಂತಾನವೇ ಇರಬೇಕು. ಒಬ್ಬರ ಕತ್ತು ಇನ್ನೊಬ್ಬರು ಕುಯ್ಯೋದು ನಮ್ಮಲ್ಲಿ ರಕ್ತಗತವಾಗಿದೆ!"

ರಾಮಗೌಡ ಪೂರ್ತಿ ನಿರಾಶನಾಗಿರಲಿಲ್ಲ.

"ನನಗೇನೋ ಒಂದು ನಂಬಿಕೆ ಇದೆ. ಒಂದಲ್ಲ ಒಂದು ದಿವಸ ಈ ಭೂಮಿಯ ಮೇಲೆ ಯುದ್ಧ ಮಾಡೋ ಆಗತ್ಯವೇ ಇರಲಾರದೊಂತ. ಅದು, ಪ್ರತಿಯೊಬ್ಬನೂ ತನ್ನ ನೆಲದಲ್ಲಿ ತಾನು ಉತ್ತು, ಬೆಳಸಿ, ತಿನ್ನುವ ಸುಖೀರಾಜ್ಯ. ಆ ರಾಜ್ಯದಲ್ಲಿ ನರಬೇಟೆಗೆ ಅವಕಾಶವಿಲ್ಲ. ಏನಿದ್ದರೂ ಕಾಡು ಪ್ರಾಣಿಗಳ ಮೇಲೆ ಯುದ್ಧ ಸಾರಿಯೇ ಮನುಷ್ಯ ತೋಳಿನ ತೀಟೆ ತೀರಿಸ್ಬೇಕು!"

"ಕವಿ ರಾಮಗೌಡರ ಕನಸು ಅನ್ನಿ!" ಎಂದ ನಂಜಯ್ಯ.

ಆ ಮಾತು ಎಬ್ಬಿಸಿದ ನಗೆಯ ತೆರೆಗಳ ಮೇಲೆ ತಾನೂ ಕೈಯಾಡಿಸುತ್ತ ಕಲ್ಯಾಣಸ್ವಾಮಿಯೆಂದ :

"ಕನಸು ಕಾಣೋದು ಖಂಡಿತ ತಪ್ಪಲ್ಲ. ವಾಸ್ತವವಾಗಿ ಪ್ರತಿಯೊಬ್ಬ ಮನುಷ್ಯನೂ ನಾಳೆಯ ಕನಸನ್ನು ಕಾಣಲೇ ಬೇಕು. ಹಾಗೆಯೇ, ಆ ಕನಸನ್ನು ಕಾರ್ಯಗತಗೊಳಿಸುವ ಸಾಮರ್ಥ್ಯವೂ ಆತನಿಗಿರಬೇಕು. ದಂಡು ಹೊರಡೋದಕ್ಕೆ ಮುಂಚೆ ನಮ್ಮ ಹಳ್ಳೀಲಿ ರಾಮಗೌಡರು ಅಂಥ ಕನಸು ಕಂಡದ್ದು ನಿಮಗೆಲ್ಲಾ ನೆನಪಿದೆ...."

ಅವರಿಗೆಲ್ಲಾ ನೆನಪಿತ್ತು. ನಿಜವಾಗಿ ಮಾರ್ಪಟ್ಟಿತ್ತು ಆ ಕನಸು. 'ಮುಂದಿನ ಹುಣ್ಣಿಮೆಯ ರಾತ್ರೆ ಮಂಗಳೂರಿನ ಸಮುದ್ರ ದಂಡೆಯ ಮೇಲಿರಬೇಕು,' ಎಂದಿದ್ದ ರಾಮಗೌಡ. ಆ ಆಸೆ ಈಗ ಈಡೇರಿತ್ತು.

ಇಂಗ್ಲಿಷರನ್ನೆಲ್ಲಾ ಸಮುದ್ರಕ್ಕೆ ಎಸೆಯಬೇಕು, ಎಂಬ ಮಾತು ಬಂದಿತ್ತು ಆಗ. ಎಸೆಯುವುದಾಗದೆ ಇದ್ದರೂ, ತಾವಾಗಿಯೇ ಇಂಗ್ಲಿಷರು ಸಮುದ್ರಕ್ಕೆ ಧುಮುಕಿದ್ದರು.

ಕನ್ನಡ ಜಿಲ್ಲೆಯ ವಿಮೋಚನೆ ಕಷ್ಟದ ಮಾತಾಗಿರಲಿಲ್ಲ. ಮಂಗಳೂರನ್ನು ಸ್ವಾತಂತ್ರ್ಯ ಪಡೆ ಸ್ವಾಧೀನಪಡಿಸಿಕೊಂಡ ಹದಿಮೂರನೆಯ ದಿನ ಅಂದು. ಜನರ ಬೆಂಬಲವನ್ನು ಪಡೆದ ಸರಕಾರ ಸುವ್ಯವಸ್ಥಿತ ಆಡಳಿತವನ್ನು ಏರ್ಪಡಿಸುವುದು ಸುಲಭದ ಕೆಲಸವೆಂಬುದನ್ನು ಕಲ್ಯಾಣಸ್ವಾಮಿಯೂ ಆತನ ಸಂಗಡಿಗರೂ ಮನಗಂಡಿದ್ದರು.

ಆಗ ಪ್ರಧಾನವಾಗಿ ನಡೆದುದು, ಮುಂದಿನ ಹೋರಾಟಕ್ಕಾಗಿ ದಂಡಿನ ಸಿದ್ಧತೆ. ಉಡುಪಿ ಕುಂದಾಪುರಗಳನ್ನು ಹಾದು, ಕನ್ನಡ ರಾಜ್ಯದ ಉತ್ತರ ಗಡಿಯ ವರೆಗೂ ಹೋಗಿಬರುವ ಯೋಜನೆಯೊಂದಿತ್ತು, ಅದು ರಾಜ್ಯದ ಎಲ್ಲೆಕಟ್ಟುಗಳನ್ನು ಭದ್ರಗೊಳಿಸುವುದಕ್ಕೋಸ್ಕರ ಆದರೆ ಆ ಕೆಲಸಕ್ಕೆ ಸೇನಾಬಲದ ಅಗತ್ಯವಿರಲಿಲ್ಲ, ಸಣ್ಣದೊಂದು ತುಕ್ಕಡಿಯೇ ಸಾಕಾಗಿತ್ತು.

ಅದಕ್ಕಿಂತ ಮುಖ್ಯವಾಗಿದ್ದುದು, ಮಂಗಳೂರಿನ ರಕ್ಷಣೆಗೆ ಏರ್ಪಾಟು ಮಾಡಿ, ಕೊಡಗಿನ ಮೇಲೆ ದಂಡೆತ್ತಿ ಹೋಗುವುದು. ಅದನ್ನಂತೂ ತಡ ಮಾಡುವಂತೆಯೇ ಇರಲಿಲ್ಲ. ಒಮ್ಮೆ ಸೇನೆ ಮುನ್ನಡೆಯುವುದು ಸಾಧ್ಯವಾಯಿತೆಂದರೆ....

ಯುದ್ಧಯೋಜನೆಯನ್ನು ಕುರಿತು ಚರ್ಚೆಯಾದಾಗಲೆಲ್ಲ ಬಂಗರಾಜ ಹೇಳುತಿದ್ದ :

'ಸಾವಕಾಶ ಮಾಡಕೂಡದು. ಮುಂಗಾರು ಮಳೆ ಮೊದಲಾಯಿತೆಂದರೆ ತಲಚೇರಿಯಿಂದಲೋ ಸೂರತ್ತಿನಿಂದಲೋ ಇಂಗ್ಲಿಷರು ಸಮುದ್ರಮಾರ್ಗವಾಗಿ ಸೇನೆ ಕಳಿಸುವ ಪ್ರಶ್ನೆ ಇಲ್ಲ. ಏನಿದ್ದರೂ ಬೆಂಗಳೂರು ಮೈಸೂರುಗಳಿಂದ ಭೂಮಾರ್ಗವಾಗಿ ಬರುವ ಸೇನೆಯೊಂದನ್ನೇ ನಾವು ಇದಿರಿಸ ಬೇಕಾದ್ದು. ಕೊಡಗಿನಲ್ಲಿ ಕಾರ್ಯಾಚರಣೆ ಬೇಗನೆ ಆಯಿತೆಂದರೆ, ಅವರು ತಮ್ಮ ಸೈನ್ಯವನ್ನು ಇಬ್ಭಾಗಮಾಡಬೇಕಾಗ್ತದೆ. ಆಗ ಅವರನ್ನು ಸೋಲಿಸೋದು ಸುಲಭ.'

ಕಲ್ಯಾಣಸ್ವಾಮಿಯೂ ಅದನ್ನು ತಿಳಿದಿದ್ದ ; ದಂಡನಾಯಕರಿಗೂ ಅದೇ ಅಭಿಪ್ರಾಯವಿತ್ತು.

ಮಂಗಳೂರಿನ ಮಳೆಯ ವಿಷಯ ಅರಿತಿದ್ದವರೆಂದರು :

‘ ಇನ್ನು ಕೆಲವೇ ದಿವಸ. ಆಮೇಲೆ ತಗೊಳ್ಳಿ ಜಡಿಮಳೆ!’

ಕೊಡಗಿನಿಂದ ಒಳ್ಳೆಯ ಸುದ್ದಿಯೂ ಬಂದಿತ್ತು ಆ ನಡುವೆ. ಮಡಿಕೇರಿಯನ್ನು ಆಕ್ರಮಿಸಿ ಕೋಟೆಯೊಳಗೆ ಗದ್ದುಗೆ ಏರಿದ್ದ ಆಂಗ್ಲರು ಕಲ್ಯಾಣಪ್ಪನ ದಂಡಿನ ವಿಜಯವಾರ್ತೆಯನ್ನು ಕೇಳಿ ತತ್ತರಿಸತೊಡಗಿದ್ದರು. ಬೋಪುದಿವಾನ ದೇಶಬಾಂಧವರೆದುರು ತಲೆಯೆತ್ತಿ ತಿರುಗಾಡುವುದೇ ಕಷ್ಟವಾಗಿತ್ತು. ಮೈಸೂರು ಮದರಾಸುಗಳಿಗೆ, ಕಂಪೆನಿಯ ಹಿರಿಯ ಅಧಿಕಾರಿಗಳಿಗೆ, ವರದಿ ಹೋಗಿದ್ದರೂ ಸಹಾಯಕ್ಕೆ ಸೈನ್ಯ ಬರುವ ಚಿಹ್ನೆಗಳೊಂದೂ ಇರಲಿಲ್ಲ. ಕನ್ನಡ ಜಿಲ್ಲೆಯಿಂದ ಬೆಟ್ಟಗಳ ಮೇಲೇರಿ ಕೊಡಗಿಗೆ ಧಾಳಿ ಇಡಲು ಸಮಯ ಸನ್ನಿಹಿತವಾಗಿತ್ತು.

ಪರಿಸ್ಥಿತಿ ಹಾಗಿದ್ದರೂ ಮಂಗಳೂರನ್ನು ಬಿಟ್ಟು ಹೋಗುವುದು ಸುಲಭವಾಗಿರಲಿಲ್ಲ. ಆ ಊರಿನ ಆಕ್ರಮಣ, ಸ್ವಾತಂತ್ರ್ಯ ಸೇನೆಯ ಮುನ್ನಡೆಯಲ್ಲಿ ಬಲು ದೊಡ್ಡ ಸಾಧನೆ. ಮೊದಲ ಮುದ್ದು ಮಗು. ಬಟ್ಟಬಯಲಲ್ಲಿರಿಸಿ, ಗಿಡುಗನಿಗೆ ಆಹಾರವಾಗಿ ಮಾಡಿ, ಹಿಂತೆರಳುವುದು ಸಾಧ್ಯವಿರಲಿಲ್ಲ. ಅದಕ್ಕೋಸ್ಕರವೆ ಮುಂಗಾರು ಮಳೆ ಆ ವೀರರಿಗೆ ಅಗತ್ಯವಾಗಿತ್ತು....

....ಕಡಲ ಕಡೆಗೆ ಕಾಲು ಚಾಚಿ ಮರಳ ರಾಶಿಯ ಮೇಲೆ ಮಲಗಿ ಚಂದ್ರಬಿಂಬದ ಪ್ರಭೆಯನ್ನು ಕಲ್ಯಾಣಸ್ವಾಮಿ ದಿಟ್ಟಿಸಿದ. ಜಲನೆಲಗಳೆರಡರ ವಿಸ್ತಾರವೂ ಇತ್ತು ಆಕಾಶಕ್ಕೆ....ಕೋಟಿ ಸೊಡರುಗಳು ಅಲ್ಲಿ ಮಿನುಗುತಿದ್ದುವು. ಬಿಳಿಯ ಗರಿಗಳೆಡೆಯಲ್ಲಿ ಚಂದ್ರ ಮುಖ ಮರೆಸಿಕೊಳ್ಳುವುದಿತ್ತು ಆಗೊಮ್ಮೆ ಈಗೊಮ್ಮೆ – ನಿರಾಕಾರರಾದ ಸೇವಕರು ತೇಜಃಪುಂಜವಾದ ಆ ಮುಖಕ್ಕೆ ಚಾಮರ ಬೀಸುತಿದ್ದ ಹಾಗೆ....

ಕರಿಯಪ್ಪ ನಡುಗಡ್ಡೆಯ ದಂಡೆಯುದ್ದಕ್ಕೂ ನಡೆಯುತ್ತ ತೆರೆಗಳನ್ನುದ್ದೇಶಿಸಿ ಹೂಂಕರಿಸಿದ. ‘ಕೂ’ ಎಂದ. ‘ ಆಹ್ಹಾ ಒಹ್ಹೋ!’ ಎನ್ನುತ್ತ ನಕ್ಕ. ಎಳೆ ವಯಸ್ಸಿನಲ್ಲಿ ತಾನು ಕಲಿತಿದ್ದ ಯಾವುದೋ ಗೀತ ನೆನಪಿಗೆ ಬಂದು, ಕೆಲ ಸಾಲುಗಳನ್ನು ಗಟ್ಟಿಯಾಗಿ ಹಾಡಿದ.

ಆದರೆ ಸಮುದ್ರರಾಜ ಅದೊಂದನ್ನೂ ಗಮನಿಸಿದಂತೆಯೇ ತೋರಲಿಲ್ಲ.

ಬಂಗರಾಜನೂ ಕಲ್ಯಾಣಸ್ವಾಮಿಯಂತೆಯೇ–ಮೈ ಚಾಚಿದ್ದ. ಆತನ

ಪಾಲಿಗೆ ಅದು ಅಷ್ಟೊಂದು ಅಪರಿಚಿತವಲ್ಲದ ಕಡಲು. ಆದರೂ ಆ ಸೊಬಗು ಚೇತೋಹಾರಿಯಾಗಿತ್ತು.

ರಾಮುಗೌಡ, ನಂಜಯ್ಯ, ಅಣ್ಣೆಗೌಡ, ಕುಡಿಯ ಸೋದರರು, ಎಲ್ಲರೂ ಅಲ್ಲಲ್ಲಿ ಅದೊಂದು ವಿಷಯ ಇದೊಂದು ವಿಷಯ ಮಾತನಾಡು ತಿದ್ದರು. ಪದಗಳು ಮೇಲಕ್ಕೇಳುತಿದ್ದುವು. ಗಾಳಿ ಅವುಗಳನ್ನೆಲ್ಲಾ ಚೆಲ್ಲಾಪಿಲ್ಲಿಯಾಗಿ ನಡುಗಡ್ಡೆಯ ವಿಸ್ತಾರಕ್ಕೆ ಹರಡುತಿತ್ತು.

ಕಡಲಿನ ರುದ್ರನಾಟ್ಯದ ರಸಾನುಭವ ಕಲ್ಯಾಣಸ್ವಾಮಿಗಾಗುತಿತ್ತು.

ಎಲ್ಲ ಬಯಕೆಗಳೂ ಒಂದರಲ್ಲೊಂದು ಬೆರೆತು, ಒಂದೇ ಆಸೆ ಮೈ ತಳೆಯಿತು ಮೆಲ್ಲನೆ.

ನೆಮ್ಮದಿ, ನೆಮ್ಮದಿ ಬೇಕಾಗಿತ್ತು ಆ ಜೀವಕ್ಕೆ. ಈ ಕ್ಷಣವೆ, ಪುಷ್ಪ ಗಿರಿಯ ತಪ್ಪಲಿನ ಆ ಹಳ್ಳಿಯಲ್ಲಿ ತನ್ನ ಮನೆಯಂಗಳದಲ್ಲಿ ಚಂದಿರನನ್ನು ನೋಡುತ್ತ ತಾನಿರುವುದು ಸಾಧ್ಯವಾದರೆ?

ಗಿರಿಜಾ – ಗಿರಿಜಾ –

ಹುಣ್ಣಿಮೆಯ ಬೆಳುದಿಂಗಳು ಬಂತೆಂದರೆ ತಾಯಿಗೂ ಆಸೆ – ಮಗ ಬರಬಹುದೆಂದು....

ಹೊಲದ ಏರಿಗಳ ಮೇಲೆ ನಡೆಯುತ್ತ, ಕಾಡಿನ ಅಂಚಿನಲ್ಲಿ ಅಲೆ ಯುತ್ತ, ಹರಿಯುವ ಕಿರುತೊರೆಯ ಕಿಲಕಿಲ ನಿನಾದಕ್ಕೂ ಹಸುರೆಲೆಗಳೆಡೆ ಯಿಂದ ಕೇಳಿಸುತಿದ್ದ ಹಕ್ಕಿಗಳ ಇಂಚರಕ್ಕೂ ಕಿವಿಗೊಡುವುದು ಎಷ್ಟು ಸೊಗಸು!

....ಕಲ್ಯಾಣಸ್ವಾಮಿ ಮಗ್ಗುಲು ಹೊರಳಿದ. ಆತನ ಆಪ್ತರು ಅಲ್ಲಿ ದ್ದರು. ಇದೇನು, ಕನವರಿಸತೊಡಗಿದೆನೆ ತಾನು? ಎನ್ನುತ್ತ ಆತ ಎದ್ದು ಕುಳಿತ....

ನಗರಕ್ಕೆ ಬೇಗನೆ ಹಿಂತಿರುಗಬೇಕೆನಿಸಿತು. ಅಲ್ಲಿ ಆತನ ಸಹಸಾರು ಸೈನಿಕರಿದ್ದರು. ಉರಿಯುತಿದ್ದ ಸ್ವಾತಂತ್ರ್ಯ ದೀವಟಿಗೆಯಿತ್ತು; ಹಾರಾ ಡುತಿದ್ದ ಬಾವುಟವಿತ್ತು. ಆ ರಾತ್ರೆ ಆ ಹೊತ್ತು ಕಾವಲಿನವರ ರಕ್ಷಣೆಯ ತೆಕ್ಕೆಯಲ್ಲಿ ಊರು ಮಲಗಿತು.

ವೈರಿಗಳಿಗೆ ಸೋಲಾಗಿದ್ದರೂ ಗಂಡಾಂತರ ತಪ್ಪಿರಲಿಲ್ಲ. ಹಿಂದೂ ಸ್ಥಾನದಿಂದ ಅವರನ್ನು ಹೊರಹಾಕಿದಾಗಲೇ ಜನಕೋಟಿಗೆ ನೆಮ್ಮದಿ, ತನಗೆ ನೆಮ್ಮದಿ.

ಕಲ್ಯಾಣಸ್ವಾಮಿ ಲವಲವಿಕೆಯಿಂದ ಎದ್ದು ನಿಂತು ನುಡಿದ:

"ಗೌಡರೆ, ನಂಜಯ್ಯನವರೆ, ಬಂಗರಾಜರೆ, ಏಳಿ ಇನ್ನು, ಹೊರಡೋಣ."

ಎಲ್ಲರೂ ಎದ್ದರು. ನಡುಗಡ್ಡೆಯ ಪೂರ್ವ ದಡದಲ್ಲಿ ದೋಣಿ ಸಿದ್ಧವಾಗಿತ್ತು. ಅಂಬಿಗರು ಹುಟ್ಟುಹಾಕಿದರು. ವೀರರನ್ನು ಹೊತ್ತ ದೋಣಿ ನಗರದತ್ತ ಚಲಿಸಿತು.

೩

ಹುಣ್ಣಿಮೆ ಕಳೆದ ಮೂರನೆಯ ಬೆಳಗ್ಗೆ, ಪ್ರವಾಸದ ಬಳಲಿಕೆಯಿಂದ ಬೆಂಡಾಗಿದ್ದ, ಏದುಸಿರು ಬಿಡುತಿದ್ದ, ಕುದುರೆ ಸವಾರನೊಬ್ಬ ಮಂಗಳೂರು ತಲಪಿದ.

ಕಂಕನಾಡಿಯ ಬಳಿಯಲ್ಲೆ ಕಲ್ಯಾಣಸ್ವಾಮಿಯ ಸೈನಿಕರು ಆತನನ್ನು ತಡೆದರು. "ಯಾರು?" ಎಂಬ ಪ್ರಶ್ನೆಗೆ ಉತ್ತರದ ಅಗತ್ಯವಿರಲಿಲ್ಲ. ಬೆಳ್ಳಾರೆಯಿಂದ ಕೊಡಗಿಗೆ ಹೋಗಿದ್ದ ಇಬ್ಬರು ದೂತರಲ್ಲಿ ಒಬ್ಬನಾಗಿದ್ದ ಆತ. ಉಸಿರಿಗಾಗಿ ಚಡಪಡಿಸುತ್ತ ಆ ಯೋಧನೆಂದ:

"ಸ್ವಾಮಿಯವರಲ್ಲಿಗೆ ಕರಕೊಂಡು ಹೋಗಿ; ರಾಜ್ಯಪಾಲರಲ್ಲಿಗೆ ಕರ ಕೊಂಡು ಹೋಗಿ. ಈಗಲೇ ಈ ಕ್ಷಣ....!"

ಅದೇನು ವಾರ್ತೆಯೊ ಎಂದು ತಿಳಿಯಲು ಸೈನಿಕರು ಆತುರಗೊಂಡರು. ಆದರೆ, ವರದಿ ತಲಪಬೇಕಾಗಿದ್ದುದು ಪ್ರಮುಖರಿಗೆ, ದಂಡನಾಯಕರಿಗೆ. ಹೀಗಾಗಿ ಊಹಾಪೋಹಗಳಿಂದಲೆ ಸೈನಿಕರು ಸಮಾಧಾನಗೊಳ್ಳಬೇಕಾ ಯಿತು.

ರಾಜ್ಯಪಾಲರ ಶಿಬಿರದ ದ್ವಾರದಲ್ಲಿ, ದೂತನ ಕುದುರೆಯನ್ನು ಕಾವಲಿ ನವರು ನೀರುಮೇವಿಗೆಂದು ವಿಶ್ರಾಂತಿಗೆಂದು ಕರೆದೊಯ್ದರು. ಕುದುರೆಯ ಸವಾರ ಮಾತ್ರ ಅಂತಹ ಸತ್ಕಾರ ಸ್ವೀಕರಿಸಲು ಸಿದ್ಧನಿರಲಿಲ್ಲ.

ಮುಂಜಾವದ ಕವಾಯತು ಮುಗಿಸಿ ಅದೇ ಆಗ ಗೂಡಾರಕ್ಕೆ ಮರ ಳಿದ್ದ ಕಲ್ಯಾಣಸ್ವಾಮಿಯೂ ದಂಡನಾಯಕರೂ ತಮ್ಮೆದುರು ಬಂದು ಕೈ ಜೋಡಿಸಿದ ದೂತನನ್ನು ಕಂಡರು. ಕಲ್ಯಾಣಸ್ವಾಮಿ ಆ ಪರಿಚಿತನ ಭುಜ ಮುಟ್ಟಿ ಹೇಳಿದ:

"ಕೂತ್ಕೊ, ವಿಶ್ರಾಂತಿ ತಗೋ. ಏನು ಸಮಾಚಾರ?"

ದೇಹದ ಭಾರವನ್ನು ತಡೆಯಲಾಗದೆ ಪಾದಗಳು ಅಸ್ಥಿರವಾಗಿದ್ದರೂ ನಿಂತುಕೊಂಡೇ ದೂತನೆಂದ:

"ಕೆಟ್ಟಸುದ್ದಿ ತಂದಿದೀನಿ. ಮಡಿಕೇರಿಯಿಂದ ಸೈನ್ಯ ಬರ್ತಿದೆ."

ಕಾತರದ ಆ ಧ್ವನಿಯನ್ನು ಕೇಳಿ, ನಕ್ಕು ನಂಜಯ್ಯನೆಂದ:

" ಕೆಟ್ಟ ಸುದ್ದಿಯಂತೆ ! ಇಷ್ಟು ದಿವಸದಲ್ಲಿ ಇದು ನಾನು ಕೇಳಿರೋ ಮೊದಲ್ನೆ ಒಳ್ಳೇ ಸುದ್ದಿ !"

ರಾಮಗೌಡನೂ ನಸುನಕ್ಕು ನುಡಿದ :

" ಸೈನ್ಯವಲ್ಲದೆ ಇನ್ನೇನಪ್ಪ ಬರಬೇಕಾದ್ದು ?"

ತನ್ನ ವರದಿಯಿಂದ ತಪ್ಪುಗ್ರಹಿಕೆಯುಂಟಾಯಿತೇನೋ ಎಂದು ದೂತ ನೆಂದ :

" ಸೈನ್ಯ ನಮ್ಮದಲ್ಲ. ಇಂಗ್ಲಿಷರದು...."

" ಅವರದೇ ಕಣಪ್ಪ ನಮಗೂ ಬೇಕಾಗಿರೋದು !" ಎಂದ ನಂಜಯ್ಯ.

ಕಲ್ಯಾಣಸ್ವಾಮಿ ಮುಗುಳು ನಕ್ಕರೂ ಮುಖ ಗಂಭೀರವಾಯಿತು. ಆತನೆಂದ :

" ಕೂತ್ಕೊ. ನಿಧಾನವಾಗಿ ಹೇಳು."

ದಂಡನಾಯಕರ ನಗೆ ಕಂಡು, ಪರಿಸ್ಥಿತಿ ತಾನು ಭಾವಿಸಿದ್ದಷ್ಟು ಗಂಡಾಂತರದ್ದಲ್ಲವೆಂದು ತಿಳಿದು, ದೂತ ಜಮಖಾನದ ಮೇಲೆ ಶಿಬಿರದ ಕಂಬಕ್ಕೊರಗಿ ಕುಳಿತ. ಮಾತುಗಳು ಮೆಲ್ಲಮೆಲ್ಲನೆ ಆತನಿಂದ ಹೊರಟುವು.

ಅದು ಕೊಡಗಿನ ಪರಿಸ್ಥಿತಿಯನ್ನು ಕುರಿತಾದ ವಿವರ. ಪ್ರಕ್ಷೋಭೆಯ ಕಿಡಿ ಆಳುವವರನ್ನು ಆಗಲೆ ದಹಿಸತೊಡಗಿತ್ತು. ಮಂಗಳಾರತಿಯಾಗಿತ್ತು ಬೋಪುದಿವಾನನ ಮುಖಕ್ಕೆ. ವ್ಯಕ್ತಿತ್ವವನ್ನು ಮೂರುಕಾಸಿಗೆ ಮಾಡಿಕೊಂಡಿದ್ದ ಆತನನ್ನು ಸ್ವತಃ ಪರಕೀಯರೇ ಶಂಕಿಸುವ ಸ್ಥಿತಿ ಒದಗಿತ್ತು. ಸ್ವಾತಂತ್ರ್ಯ ಪ್ರೇಮವನ್ನು ಉದ್ದೀಪನಗೊಳಿಸುವ ಮಹಾ ಶಕ್ತಿಯಾಗಿತ್ತು ' ಕಲ್ಯಾಣಪ್ಪನ ದಂಡು ' ಎನ್ನುವ ಹೆಸರು. ಆ ದಂಡಿನ ಪ್ರಮುಖರನ್ನು ಹಿಡಿದವರಿಗೆ ಬಹುಮಾನಗಳನ್ನು ಬೇರೆ ಜಾಹೀರು ಮಾಡಿದ್ದರು. ವಿದ್ರೋಹಿಗಳನ್ನು ಸೋಲಿಸಿಯೇ ಬರುವೆನೆಂದು ಬೋಪುದಿವಾನ ಈಗ ಹೊರಟಿದ್ದ. ಇಲ್ಲದೆ ಹೋದರೆ ಆತನನ್ನೆ ಬಲಿ ತೆಗೆದುಕೊಳ್ಳುವುದಾಗಿ ಬೆದರಿಸಿದ್ದ ಲೀಹಾರ್ಡಿ.

ಲೀಹಾರ್ಡಿ – ಬೋಪುದಿವಾನರ ನಾಯಕತ್ವದಲ್ಲಿ ಮಡಿಕೇರಿಯನ್ನು ಬಿಟ್ಟಿತ್ತು ಸಿಪಾಯರ ದಂಡು.

ಕಲ್ಯಾಣಸ್ವಾಮಿ ಕೇಳಿದ :

" ಎಷ್ಟು ದಿವಸವಾಯ್ತು ?"

"ಇವತ್ತಿಗೆ ನಾಲ್ಕು ದಿವಸ. ಬಹಳ ಹುಷಾರಿಯಿಂದ ನಿಧಾನ ವಾಗಿ ಬರ್‍ತಿದ್ದಾರೆ."

ಕಡಿದಾದ ಕಾಡುಹಾದಿ. ಮುನ್ನಡೆ ಸುಲಭವಾಗಿರಲಿಲ್ಲ. ಸುಳ್ಯದ ಆಕ್ರಮಣವೆ ಸದ್ಯಃ ಅವರಿಗಿದ್ದ ಗುರಿ.

"ಇತ್ತೀಚಿನ ವಾರ್ತೆಯೇನು? ಎಲ್ಲಿಗೆ ತಲಪಿರಬಹುದು ಅವರ ದಂಡು?"

"ಸಂಪಾಜೆಯಲ್ಲಿ ಅವರು ತಳ ಊರಿದ್ದನ್ನು ನಾನು ಕಂಡೆ. ಆಮೇಲೆ ನನಗೆ ಗೊತ್ತಾದ ಪ್ರಕಾರ, ಲೀಹಾರ್ಡಿಗೂ ಜೋಪುಗೂ ಅಲ್ಲಿ ವಾಗ್ವಾದ ವಾಯ್ತಂತೆ. ಲೀಹಾರ್ಡಿ ಜೋಪುವನ್ನು ತುಚ್ಛವಾಗಿ ಬಯ್ದನಂತೆ. ಸಿಪಾಯರ ಒಂದು ತಂಡದೊಡನೆ ಮಡಿಕೇರಿಗೆ ವಾಪಸು ಹೋದನಂತೆ."

"ಆಹ್ಹಾ!" ಎಂದ ನಂಜಯ್ಯ.

ರಾಮಗೌಡನೆಂದ:

"ಅಮರ ಸುಳ್ಯ ಹತ್ತಿರ ಬಂದ ಹಾಗೆ ಮಡಿಕೇರಿಯ ಚಿಂತೆ ಹತ್ತಿತೇನೋ! ವೀರನೇ ಇರಬೇಕು ಈ ಲೀಹಾರ್ಡಿ!"

ಮುಂದುವರಿಸುತ್ತ ದೂತನೆಂದ:

"ಜೋಪುವಿನ ಸೈನಿಕರು ಜನರಿಗೆ ಕೊಡೋ ಹಿಂಸೆಗೆ ಮಿತಿಯೇ ಇಲ್ಲ. ಕಾಟಕಾಯಿಯ ಜನ ಅಂತ ಸಿಕ್ಕಿದವರನ್ನೆಲ್ಲಾ ಅವರು ದಂಡಿಸ್ತಿದಾರೆ."

ಕಲ್ಯಾಣಸ್ವಾಮಿ ಕೇಳಿದ:

"ಅವರ ದಂಡಿನ ಸಂಖ್ಯೆ ಎಷ್ಟು?"

"ಮುನ್ನೂರು ನಾನ್ನೂರು ಇದ್ದಾತು."

"ಬಹಳ ದೊಡ್ಡ ಸಂಖ್ಯೆಯೇ!" ಎಂದು ನಕ್ಕ ನಂಜಯ್ಯ.

"ಆದರೆ ಅವರಲ್ಲಿ ಐವತ್ತರಷ್ಟು ಜನ ಕುದುರೆ ಸವಾರರೇ ಇದ್ದಾರೆ. ಪ್ರತಿಯೊಬ್ಬ ಸೈನಿಕನಲ್ಲೂ ಕೋಪ ಇದೆ."

ರಾಮಗೌಡನ ಮುಖ ಚಿಂತಾಕ್ರಾಂತವಾಯಿತು. ಆತನೆಂದ:

"ಅಮರ ಸುಳ್ಯ ಅವರ ವಶವಾಗೋದು ಖಂಡಿತ."

ಅವರೆಗೂ ಮೌನವಾಗಿದ್ದ ಅಣ್ಣಿಗೌಡ ಒಮ್ಮೆಲೆ ನುಡಿದ:

"ಯಾಕಾದೀತು? ಸುಳ್ಯವನ್ನು ರಕ್ಷಿಸೋ ಶಕ್ತಿ ನಮಗಿಲ್ವೇನು?"

ಕಲ್ಯಾಣಸ್ವಾಮಿ ಅವಸರಪಡಿಸುವ ಧ್ವನಿಯಲ್ಲಿ ದೂತನನ್ನು ಕೇಳಿದ:

"ಇನ್ನೂ ಏನಾದರೂ ಇದೆಯೇನು?"

"ವಿಶೇಷವೇನೂ ಇಲ್ಲ. ಪುತ್ತೂರು ಪಾಣೆಮೊಗರುಗಳೆಲ್ಲಾ ಶಾಂತವಾಗಿವೆ."

"ಸರಿ. ನೀನಿನ್ನು ಹೋಗು. ವಿಶ್ರಾಂತಿ ತಗೋ."

ದೂತ ಹೊರಹೋದೊಡನೆಯೆ ಪ್ರಮುಖರ ಮಂತ್ರಾಲೋಚನೆ ನಡೆಯಿತು.

ಕಲ್ಯಾಣಸ್ವಾಮಿಯೆಂದ :

"ನಾವು ನಾಳೆಗೆ ಎಂತ ಮುಂದೆಹಾಕಿದರೆ ಇವತ್ತೇ ಮಾಡು ಅನ್ತಿದೆ, ದೈವ....ನಮಗೆ ಲೀಹಾರ್ಡಿ–ಬೋಪು ಇಬ್ಬರೂ ಒಂದೇನೇ. ಸುಳ್ಯದ ಮೇಲೆ ಧಾಳಿ ಇಡ್ತಿರೋ ತುಕ್ಕಡೀನ ನಾವು ನಿರ್ನಾಮ ಮಾಡಲೇಬೇಕು. ಏನು ಹೇಳ್ತೀರಾ ನಂಜಯ್ಯನವರೆ?"

ನಂಜಯ್ಯ ರಾಮಗೌಡನ ಕಡೆಗೊಮ್ಮೆ ನೋಡಿ ಅಂದ :

"ಇದರಲ್ಲಿ ಭಿನ್ನಾಭಿಪ್ರಾಯದ ಮಾತೆಲ್ಲಿದೆ? ಇಲ್ಲಿಂದ ಒಂದು ಸಾವಿರ ಸೈನಿಕರನ್ನು ತಕ್ಷಣವೆ ಸುಳ್ಯಕ್ಕೆ ಕಳಿಸೋದು ಅಗತ್ಯ."

ಕಲ್ಯಾಣಸ್ವಾಮಿ ರಾಮಗೌಡನನ್ನು ಕೇಳಿದ :

"ಹೇಳಿ ಗೌಡರೆ, ಹ್ಯಾಗೆ ಏರ್ಪಾಟು ಮಾಡೋಣ?"

ಗೌಡ ಉತ್ತರವಿತ್ತ :

"ನೀವು ಹ್ಯಾಗೆ ಹೇಳ್ತೀರೋ ಹಾಗೆ."

ಕುಡಿಯ ಸೋದರರ ಕಡೆಗೆ ನೋಡಿದ ಕಲ್ಯಾಣಸ್ವಾಮಿ.

ಚೆಟ್ಟಿಕುಡಿಯನೆಂದ :

"ಬೋಪುವನ್ನು ಮುಗಿಸೋ ಪಣತೊಟ್ಟಿರೋನು ನಾನು. ನಾನೂ ಕರ್ತುವೂ ಸುಳ್ಯಕ್ಕೆ ಹೋಗ್ತೀವಿ."

ಉಚ್ಚಕಂಠದಲ್ಲಿ ಕಲ್ಯಾಣಸ್ವಾಮಿ ನುಡಿದ :

"ಆಗಬಹುದು. ದಂಡನಾಯಕದ್ವಯರೆ, ಇಲ್ಲಿ ಇರೋರು ಯಾರು? ಸುಳ್ಯಕ್ಕೆ ಹೋಗೋರು ಯಾರು?"

"ನಾನು ಹೊರಡ್ತೇನೆ ಅಂದರೆ ಹುಟ್ಟೂರಿನ ಮೇಲಣ ಪ್ರೇಮ ಅಂತ ಹೇಳಬಹುದು ನೀವು," ಎಂದ ರಾಮಗೌಡ.

ನಂಜಯ್ಯನೆಂದ :

" ಖಂಡಿತ ಹೇಳ್ತೀವೆ. ಸುಳ್ಯಕ್ಕೆ ಹೋಗೋ ಹಕ್ಕು ನಮ್ಮದು!"

ಗೌಡ ಇದಿರಾಡಲಿಲ್ಲ.

" ಆಗಲಿ. ಇಲ್ಲಿಯೇ ಇರುವವರಂತೂ ಯಾರೂ ಇಲ್ಲವಲ್ಲ. ಈ ವಾರ ವಲ್ಲದಿದ್ದರೆ ಮುಂದಿನ ವಾರ, ನಾವೆಲ್ಲರೂ ಮಡಿಕೇರಿಯ ಕಡೆ ಹೋಗುವವರೆ."

" ನಾನು ?" ಎಂದು ಕೇಳಿದ ಅಣ್ಣಿಗೌಡ.

" ಕೋಶಾಧಿಕಾರಿ ಮುಖ್ಯ ಠಾಣ್ಯದಲ್ಲೇ ಇರಬೇಕು," ಎಂದ ಬಂಗ ರಾಜ.

ನಿರ್ಧಾರದ ಧ್ವನಿಯಲ್ಲಿ ಕಲ್ಯಾಣಸ್ವಾಮಿಯೆಂದ :

" ಎಲ್ಲವೂ ತೀರ್ಮಾನವಾದಂತಾಯಿತು ಹಾಗಾದರೆ. ನಂಜಯ್ಯ ನವರೆ, ಏಳೋಣ. ಹೋಗಬೇಕಾದ ದಂಡು ಸಿದ್ಧವಾಗಲಿ. ಊಟವಾದ ಮೇಲೆ ಹೊರಟುಬಿಡಬೇಕು, ನಾಳೆ ಬೆಳಗಾಗೋದರೊಳಗೆ ಸೇನೆ ಪುತ್ತೂರು ದಾಟಿರ್ತದೆ."

" ಸರಿ ಸ್ವಾಮಿಯವರೆ," ಎಂದ ನಂಜಯ್ಯ....

....ಹೊತ್ತಲ್ಲದ ಹೊತ್ತಿನಲ್ಲಿ ಕಹಳೆಯ ಧ್ವನಿಯಾಯಿತು. ದಂಡಿನ ಸೈನಿಕರು ಚುರುಕಾದರು. ರಣೋತ್ಸಾಹ ಪ್ರತಿಯೊಬ್ಬರನ್ನೂ ಒಂದೇ ಸಮನಾಗಿ ಆವರಿಸದಿದ್ದರೂ ಆಗಿಂದಾಗಲೆ ಸುಳ್ಯದ ಕಡೆ ಹೊರಡಲು ಸಿದ್ಧ ರಾಗಿದ್ದವರಿಗೇನೂ ಕೊರತೆ ಇರಲಿಲ್ಲ. ಕುದುರೆಗಳು, ಕಾಲಾಳುಗಳು. ಕೊತ್ತಳಿಗೆ ಭಟರೀಗಲೂ ಹೇರಳವಾಗಿಯೆ ಇದ್ದರೂ ಶಸ್ತ್ರಾಸ್ತ್ರಗಳೂ ಸಾಕ ಷ್ಟಿದ್ದುವು. ಮಂಗಳೂರಿನಿಂದಲೇ ಓಡಿಹೋಗಿದ್ದ ಇಂಗ್ಲಿಷರು ಇಸ್ಸು ತಮ್ಮನ್ನಿದಿರಿಸುವ ಧೈರ್ಯ ತೋರಬಹುದೆಂದು ಯಾರೂ ಭಾವಿಸಲಿಲ್ಲ. ಯಮಭಯಂಕರರು ತಾವು—ಎಂದುಕೊಂಡರು ಸೈನಿಕರು. ಕಲ್ಯಾಣ ಪ್ಪನ ದಂಡಿಗಿದಿರಾಗುವ ಎಂಟೆದೆ ಇತ್ತು ಯಾರಿಗೆ? ಅಷ್ಟರ ಮೇಲೂ ಆ ಸಾಹಸವನ್ನು ಮೂರ್ಖರು ಮಾಡಿದ್ದೇ ಆದರೆ—ಒಂದೇ ಒಂದು ಏಟು. ಪುಡಿ ಪುಡಿಯಾಗಬೇಕು ವೈರಿ ಪಡೆ !

ಬಿಸಿಲನ್ನೂ ಪರಿಗಣಿಸದೆ ಹೊರಟು ನಿಂತ ಯೋಧರ ಪಡೆಯನ್ನು ದ್ದೇಶಿಸಿ, ಕಲ್ಯಾಣಸ್ವಾಮಿಯೆಂದ :

" ಇವತ್ತು ನಮ್ಮ ಸ್ವಾತಂತ್ರ್ಯಸೇನೆ ಇನ್ನೊಂದು ಹೆಜ್ಜೆ ಇಡ್ತಿದೆ.

ನಮ್ಮ ದಂಡಿನ ಒಂದು ಕೈ ಮಂಗಳೂರನ್ನು ಕಾಪಾಡ್ತಿದೆ, ಇನ್ನೊಂದು ಕೈಯಾದ ನೀವು ಸುಳ್ಯದ ರಕ್ಷಣೆಗೆ ಹೊರಟಿದ್ದೀರಿ. ಮತ್ತೆ ಎರಡೂ ಕೈ ಒಂದಾಗಿ ಕೊಡಗಿನೊಳಗೇ ವೈರಿಯನ್ನು ನುಚ್ಚುನೂರು ಮಾಡಬೇಕು. ಆ ದಿನ ದೂರವಿಲ್ಲ. ಸಹಯೋಧರೇ! ನಮ್ಮ ರಾಜ್ಯದಿಂದ ಪರಕೀಯರನ್ನು ಸಂಪೂರ್ಣವಾಗಿ ಹೊಡೆದೋಡಿಸುವ ದಿವಸ ಹತ್ತಿರ ಬರ್‍ತಿದೆ. ಸ್ವಾತಂತ್ರ್ಯಕ್ಕೋಸ್ಕರವಾದ ಯುದ್ಧವು ಧರ್ಮಯುದ್ಧ. ಈ ಯುದ್ಧದಲ್ಲಿ ಸತ್ತವರಿಗೆ ವೀರ ಸ್ವರ್ಗ ಸಿಗ್ತದೆ. ಆದರೆ ನಾವು ಸಾಯೋದಕ್ಕೆ ಹೊರಟವರಲ್ಲ. ವೈರಿಯನ್ನು ಸಾಯಿಸಿ ಜಯಿಸೋದಕ್ಕೇಂತ ಹೆಜ್ಜೆ ಮುಂದಿಟ್ಟವರು. ಹೇಳಿ! ಈ ಯುದ್ಧದಲ್ಲಿ ನಮಗೆ ಜಯ ಸಿಗೋದು ಖಂಡಿತವ್ವೋ?"

ಸಾಲುಗಳಾಗಿ ನಿಂತಿದ್ದ ಸಾವಿರ ಯೋಧರೂ ನೋಡುತ್ತ ನಿಂತಿದ್ದ ಬೇರೆ ಸಹಸ್ರಾರು ಜನರೂ ಪ್ರತಿಧ್ವನಿ ಮಾಡಿದರು :

"ಖಂಡಿತ!"

"ಹಾಗಾದರೆ ಘೋಷಣೆ ಮಾಡಿ! ಸ್ವಾತಂತ್ರ್ಯ ಸೇನೆಗೆ ಜಯವಾಗಲಿ!"

"ಸ್ವಾತಂತ್ರ್ಯ ಸೇನೆಗೆ ಜಯವಾಗಲಿ!"

ದಂಡನಾಯಕ ನಂಜಯ್ಯ. ತಾನು ಕುಳಿತಿದ್ದ ಕುದುರೆಯನ್ನು ಅತ್ತಿತ್ತ ತಿರುಗಿಸುತ್ತ, ಗಟ್ಟಿಯಾಗಿ ನುಡಿದ :

"ಹೇಳ್ರೋ! ರಾಜ್ಯಪಾಲಕ ಕಲ್ಯಾಣಸ್ವಾಮಿಯವರಿಗೆ ಜಯವಾಗಲಿ! ಕೊಡಗಿನ ರಾಜರಿಗೆ ಜಯವಾಗಲಿ!"

ಘೋಷಣೆಯ ಪ್ರತಿಧ್ವನಿಯಿಂದ ಬಾವುಟ ಗುಡ್ಡ ಕಂಪಿಸಿತು.

ಬಳಿಕ ಗುಡ್ಡವನ್ನಿಳಿದು, ನಗರವನ್ನು ದಾಟಿ, ಹದಿಮೂರು ದಿನಗಳಿಗೆ ಹಿಂದೆ ಬಂದಿದ್ದ ಮಾರ್ಗವಾಗಿಯೆ ಸುಳ್ಯದ ಕಡೆಗೆ ಆ ದಂಡು ಹೊರಟಿತು.

ಕೊನೆಯ ಸೈನಿಕ ಕಣ್ಣಿನಿಂದ ಮರೆಯಾಗುವವರೆಗೂ ಕಲ್ಯಾಣಸ್ವಾಮಿ ಆ ಯೋಧರನ್ನೆ ದಿಟ್ಟಿಸಿದ.

ಸೇನೆಯ ಬದಲು, ಅದರ ಪದಹತಿಯಿಂದೆದ್ದ ಧೂಳೊಂದೇ ಉಳಿದಾಗ, ಗುಡ್ಡವೇ ಬರಿದಾಗಿದ್ದಂತೆ ಕಲ್ಯಾಣಸ್ವಾಮಿಗೆ ತೋರಿತು. ಹೋದ ಸೇನೆಯ ಇಮ್ಮಡಿಯಷ್ಟು ಉಳಿದಿದ್ದರಾದರೂ ಕ್ಷಣಕಾಲ ಎಲ್ಲವನ್ನೂ ಕಳೆದುಕೊಂಡ ಬಡವನಂತಾಯಿತು ಕಲ್ಯಾಣಸ್ವಾಮಿಯ ಮನೋಸ್ಥಿತಿ. ಭಾರ

ವಾದ ಹೃದಯದಿಂದ ಆತ, ಬಂಗರಾಜನ ಜತೆ, ಶಿಬಿರದಿಂದ ದೂರ ಬಂದು ಮರಗಳ ನೆರಳಲ್ಲಿ ಗಾಳಿಗೆ ಮೈಯೊಡ್ಡಿ ನಿಂತ.

ಕೆಳಗೆ ಊರು ಕಾಣಿಸುತ್ತಿತ್ತು. ಮರಗಳ ಹಸುರಿನಿಂದಲೆ ಮುಚ್ಚಿ ಹೋಗಿದ್ದ ಮನೆಮಾಡಗಳು. ದೆಂಬೆ ಹಂಚು, ಮುಳಿಹುಲ್ಲಿನ ಛಾವಣಿ. ಬಾವುಟಗುಡ್ಡದತ್ತ ಮೆಲ್ಲನೆ ಏರಿಬರುತ್ತಿದ್ದುವು, ಕೆಳಗಿನ ಊರಿನಿಂದ ಹೊರಟ ನೂರು ಸ್ವರಗಳು. ಮಧ್ಯಾಹ್ನದ ಉರಿಬಿಸಿಲಿಗೆ ಮಂಪರು ಕವಿದು ಮಲಗಿದ್ದ ನಗರವನ್ನು, ಯಾರೋ ಎಚ್ಚರಿಸುವಂತಿತ್ತು.

ಪಶ್ಚಿಮದಲ್ಲಿ ಅನಂತವಾಗಿ ಹರಡಿತ್ತು ಕಡಲು. ಹಿಂದಿನ ರಾತ್ರೆ ಚಂದ್ರನೆದುರು ಅಬ್ಬರಿಸುತ್ತಿದ್ದುದೀಗ, ಸೂರ್ಯ ರಶ್ಮಿಗಳು ಮೈ ಚುಚ್ಚಿದಾಗ ಹೆಚ್ಚು ಸದ್ದು ಮಾಡದೆಯೆ ಮಲಗಿತ್ತು. ನೀಲಿ – ಬೆಳ್ಳಿ – ಚಿನ್ನ....

ದೂರ ನಿಂತಿದ್ದ ಅಂಗರಕ್ಷಕನನ್ನು ಕರೆದು ಕಲ್ಯಾಣಸ್ವಾಮಿ ಹೇಳಿದ:

"ದುರ್ಬೀನು ತಗೊಂಡು ಬಾ."

ಮಂಗಳೂರನ್ನು ಜಯಿಸಿದಾಗ ವಶಪಡಿಸಿಕೊಂಡಿದ್ದ ಬಿಳಿಯರ ಸಾಮಾನು ಸರಂಜಾಮುಗಳಲ್ಲಿದ್ದ ದುರ್ಬೀನು ಅದು.

ಸೈನಿಕ ತಂದೊಡನೆಯೆ, ಎರಡೂ ಕೈಗಳಲ್ಲಿ ಅದನ್ನೆತ್ತಿ ಸರಿಪಡಿಸುತ್ತಾ, ಕಲ್ಯಾಣಸ್ವಾಮಿ ಎಡಗಣ್ಣನ್ನು ಮುಚ್ಚಿ ಬಲಗಣ್ಣಿನಿಂದ ದುರ್ಬೀನಿನ ಮೂಲಕ ನೋಡಿದ

ಹತ್ತಿರವೆ ನಿಂತಿದ್ದ ಲಕ್ಷ್ಮಪ್ಪ ಬಂಗರಾಜನೆಂದ:

"ಏನು ಕಾಣಿಸ್ತಿದೆ ಸ್ವಾಮಿಯವರೆ?"

"ಏನಿಲ್ಲ. ಬರಿಯ ನೀರು. ಎಲ್ಲಿ ನೋಡಿದರೂ ನೀರು...."

ಬಳಿಕ ದುರ್ಬೀನನ್ನು ಬಂಗರಾಜನ ಕೈಗಿತ್ತು ಕಲ್ಯಾಣಸ್ವಾಮಿಯೆಂದ:

"ನೀವೂ ನೋಡಿ."

ಆತನಿಗೆ ಜಲರಾಶಿ ಕಾಣಿಸುತ್ತಿತ್ತು. ಹತ್ತಿರ ಬಂದಂತಾಗುತ್ತಿತ್ತು ಸಮುದ್ರ, ಅಷ್ಟೆ.

ರಾಮಗೌಡ ಅತ್ತ ಬಂದು ನಕ್ಕು ಕೇಳಿದ:

"ವಿಲಾಯತಿ ಎಲ್ಲಿದೇಂತ ನೋಡ್ತಿದೀರೋ?"....

ಕಲ್ಯಾಣಸ್ವಾಮಿ ಮುಗುಳು ನಕ್ಕ.

"ಆ ದೇಶ ಕಣ್ಣಿಗೆ ಬಿದ್ದಿದ್ದರೆ ಚೆನ್ನಾಗಿರ್ತಿತ್ತು!"

ಗಾಳಿ ಬೀಸಿತು. ಎಲೆಗಳು ತೊದಲುಲಿಯುತ್ತ ಪಿಸುಮಾತನಾಡುತ್ತ ಗದ್ದಲಮಾಡಿದುವು.

ಕಲ್ಯಾಣಸ್ವಾಮಿ ಪಶ್ಚಿಮದತ್ತ ನೋಡುತಿದ್ದರೂ ಮನಸ್ಸು ಮಂಗಳೂರಿನಿಂದ ಹೊರಹೋಗುತಿದ್ದ ಸೇನೆಯನ್ನು ಹಿಂಬಾಲಿಸುತಿತ್ತು. ಅದು ಮನೆಯಲ್ಲಿ ಹುಟ್ಟಿ ಬೆಳೆದ ಮಗಳನ್ನು ಬೀಳ್ಕೊಟ್ಟು ಹೆತ್ತವರು ಪಡುತಿದ್ದ ಸಂಕಟ.

ರಾಮುಗೌಡನ ಮನಸಿನಲ್ಲಿದ್ದುದೂ ಆ ವಿಷಯವೇ. ಆತನೆಂದ:

" ನಂಜಯ್ಯನವರೂ ಹುಡುಗರೂ ಈಗಾಗಲೇ ಕಂಕನಾಡಿ ದಾಟಿರಬಹುದು, ಅಲ್ಲವೇ ?"

ಆ ವಿಷಯದ ಯೋಚನೆಯೇ ತನ್ನದು ಕೂಡಾ, ಎಂಬಂತೆ, ಬಂಗರಾಜನೆಂದ:

" ಓಹೋ. ದಂಡು ಆಗಲೆ ಕಂಕನಾಡಿ ದಾಟಿರ್ಬೇಕು."

ಕಲ್ಯಾಣಸ್ವಾಮಿ ಇಳಿ ಧ್ವನಿಯಲ್ಲಿ ನುಡಿದ:

" ಯಾಕೋ ಬೇಸರವಾಗ್ತಿದೆ ರಾಮುಗೌಡರೆ."

ಗೌಡನ ಸ್ವರವೂ ಅದುರಿತು

" ನನಗೆ ಬೇಸರವಾಗಿಲ್ಲ ಅಂತ ತಿಳಕೊಂಡಿದೀರೊ ?"

ಆ ಸಂಕಟಕ್ಕೆ ಇದ್ದುದೊಂದೇ ಪರಿಹಾರವೆಂಬಂತೆ ಬಂಗರಾಜನೆಂದ:

" ಇನ್ನೂ ಸ್ವಲ್ಪ ದಿವಸ. ಆ ಮೇಲೆ ನಾವೂ ಅವರ ಜತೆ ಸೇರ್ತೇವೆ.

" ನಿಜ," ಎಂದ ಕಲ್ಯಾಣಸ್ವಾಮಿ, ನಿಟ್ಟುಸಿರು ಬಿಟ್ಟು.

ಬಂಗರಾಜನ ಕೈಯಿಂದ ದುರ್ಬೀನನ್ನು ಮತ್ತೆ ತಾನೆತ್ತಿಕೊಂಡು ಆತ ನೋಡಿದ. ದುರ್ಬೀನಿಲ್ಲದೆಯೂ ದಿಟ್ಟಿಸಿದ. ಪುನಃ ನೆಟ್ಟದೃಷ್ಟಿಯಿಂದ ದುರ್ಬೀನಿನ ಮೂಲಕವೆ ಪರಾಂಬರಿಸಿದ.

" ಏನದು ?" ಎಂದ ರಾಮುಗೌಡ.

" ಎರಡು ಮೂರು ಬಿಳೀ ಚುಕ್ಕೆಗಳು. ಈಶಾನ್ಯ ದಿಕ್ಕಿನಲ್ಲಿ "

ರಾಮುಗೌಡ ನೋಡಿದುದಾಯಿತು. ಆತನೆಂದ:

" ಬೆಸ್ತರ ದೋಣಿಗಳ ಹಾಗಿವೆ."

ಬಂಗರಾಜನೂ ಪರೀಕ್ಷಿಸಿ ನುಡಿದ:

" ಅಷ್ಟೆ. ಇನ್ನೇನು ?"

ಮತ್ತೂ ಬಹಳ ಹೊತ್ತು ಅವರು ಅಲ್ಲಿಯೆ ನಿಂತರು.

ಕಲ್ಯಾಣಸ್ವಾಮಿ ಪುನಃ ನೋಡಿದ. ಬಿಳಿಯ ಹಾಯಿಗಳು ಅಸ್ಪಷ್ಟ ವಾಗಿ ಕಾಣಿಸುತಿದ್ದುವು. ದಂಡೆಯ ಕಡೆಗೇನೂ ಅವು ಬರುತ್ತಿರಲಿಲ್ಲ. ಅಷ್ಟೊಂದು ದೂರದಿಂದ ಆ ದುರ್ಬೀನಿನಿಂದಲೆ ಏನನ್ನೂ ಗುರುತಿಸು ವುದು ಸಾಧ್ಯವಿರಲಿಲ್ಲ.

ಶಿಬಿರದಿಂದ ಆ ಮೂವರೆಡೆಗೆ ನಡೆದು ಬಂದು ಅಣ್ಣಿಗೌಡನೆಂದ:

"ಊರ ವರ್ತಕರು ಬಂದಿದ್ದಾರೆ. ಪೌರಕಂದಾಯದ ವಿಷಯ ಮಾತ ನಾಡೋದಕ್ಕೆ ಬನ್ನೀಂತ ನಾವೇ ಹೇಳಿಕಳಿಸಿದ್ದೆವು."

"ಹೌದು, ನಡೀರಿ," ಎಂದ ಕಲ್ಯಾಣಸ್ವಾಮಿ.

ಶಿಬಿರದ ರಕ್ಷಣೆಯ ಸೈನಿಕನೊಬ್ಬನನ್ನು ಕರೆದು, ದುರ್ಬೀನನ್ನು ಕೈ ಗಿತ್ತು, ಆತ ಆಜ್ಞಾಪಿಸಿದ:

"ಆ ಮೂರು ಚುಕ್ಕೆಗಳನ್ನು ನೋಡ್ತಿರು."

ವರ್ತಕರೊಡನೆ ಭೇಟಿ ಮುಗಿದಾಗ, ಆಗಲೆ ಮುಂಜ್ಚಂಜೆಯಾಗಿತ್ತು. ಅಲ್ಲಿಂದ ನೇರವಾಗಿ ಕಲ್ಯಾಣಸ್ವಾಮಿ, ತಾನು ನಿಲಿಸಿ ಹೋಗಿದ್ದ ಸೈನಿಕನೆಡೆಗೇ ಬಂದ.

ಆ ಸೈನಿಕ ವರದಿ ಇತ್ತ:

"ಏನೂ ಕಾಣಿಸೋದಿಲ್ಲ ಸ್ವಾಮಿಯವರೇ. ಬರೇ ಚುಕ್ಕೆ. ಬಿಳೀ ಹಾಯಿಗಳೇ."

"ಮೀನು ಹಿಡಿಯುವ ದೋಣಿಗಳಿರಬಹುದು," ಎಂದ ಕಲ್ಯಾಣ ಸ್ವಾಮಿ, ತನ್ನನ್ನು ತಾನೇ ಸಮಾಧಾನಪಡಿಸುತ್ತ.

# ೪

ಬೆಸ್ತರು ಒಳಗಿದ್ದರೂ ಅವು ಮೀನುಹಿಡಿಯುವ ದೋಣಿಗಳಾಗಿರಲಿಲ್ಲ. ಮೀನು ಹಿಡಿಯುವ ಬೆಸ್ತರಾಗಿರಲಿಲ್ಲ ಅವರು. ಸಪ್ತಸಾಗರಗಳನ್ನು ದಾಟಿ ಎಂದೋ ಬಂದಿದ್ದ ಆ ಸಮರ್ಥರಿಗೆ, ಬಲೆಬೀಸುವುದು ಚೆನ್ನಾಗಿ ತಿಳಿದಿತ್ತು. ಆದರೆ, ಆ ಬಲೆಯೊಳಗೆ ಸಿಲುಕುತಿದ್ದುದು ಮೀನುಗಳಲ್ಲ, ರಾಷ್ಟ್ರಗಳು.

ಎತ್ತರದ ಪತ್ತೇಮಾರುಗಳು ಮೂರು. ರಾತ್ರಿಯ ಹೊತ್ತು ನದೀ ಮುಖದೊಳಗಿಂದ ಅವು ಅತ್ತ ಬಂದುವು.

ದಂಡೆಯುದ್ದಕ್ಕೂ ಕಾವಲಿಗಿದ್ದ ಸೈನಿಕರು ನಿದ್ದೆ ಹೋಗಿದ್ದರು. ನಡುವೆ ಎಚ್ಚರಗೊಂಡವರಿಗೇನೋ ಎತ್ತರದ ಹಾಯಿಗಳು ಕಾಣಿಸಿದುವು.

ಒಬ್ಬ ಇನ್ನೊಬ್ಬನನ್ನು ಕೇಳಿದ :

" ಏನೋ ಅದು ?"

ಆತ ಉತ್ತರವಿತ್ತ :

" ಬಂದರದ ವರ್ತಕರದಿರಬೇಕು. ಸಾಮಾನು ಬಂದಿದೆಯೋ ಏನೋ ?"

ನಿದ್ದೆ ಬಂದಿದ್ದವನಿಗೆ ಸಾಕಾಗಿತ್ತು ಆ ಆಶ್ವಾಸನೆ.

ಪುಟ್ಟ ದೋಣಿಗಳು ನೀರಿಗಿಳಿದುವು. ದೋಣಿಗಳೊಳಗೆ ಜನರು. ಸದ್ದಿಲ್ಲದ – ಆದಷ್ಟುಮಟ್ಟಿಗೆ ಸದ್ದಿಲ್ಲದ – ಚಲನೆ.

ದಡ ಸೇರಿದುವು, ಬರಿದಾದುವು. ಹಿಂತೆರಳಿದುವು.

ಪುನಃ ಮೊದಲಿನಂತೆಯೇ.

ಯಾವ ಅವಸರವೂ ಅವರಿಗಿದ್ದಂತೆ ತೋರಲಿಲ್ಲ. ಅವಸರವಿದ್ದರೂ ತೋರಿಸಿಕೊಳ್ಳಲಿಲ್ಲ ಯಾರೂ. ರಾತ್ರಿಯೆಲ್ಲ ತಮ್ಮದೇ ಎನ್ನುವ ಆತ್ಮವಿಶ್ವಾಸದಿಂದ ತಮ್ಮ ಕೆಲಸದಲ್ಲಿ ಅವರು ನಿರತರಾದರು.

ತಿಂಗಳಬೆಳಕಿತ್ತು ನಿಜ. ಆದರೆ, ನೋಡಬಾರದ ಜನ ನಿದ್ದೆಹೋಗಿದ್ದಾಗ ಯಾವ ಹೆದರಿಕೆ ಅವರಿಗೆ? ಅಲ್ಲದೆ, ದಡದ ಉದ್ದಕ್ಕೂ ತೆಂಗಿನ ಮರಗಳಿದ್ದುವು. ಮರಗಳ ಕೆಳಗೆ ಕತ್ತಲೆ ಇತ್ತು. ಕತ್ತಲೆಯಲ್ಲಿ ನಿಂತ

ರೆಂದರೆ ಯಾರಿಗೆ ಏನು ಕಾಣಿಸುತಿತ್ತು ?

ಬಹಳ ಹೊತ್ತು ಹೀಗೆಯೇ....

....ನಡುವಿರುಳು ದಾಟಿ ಒಂದು ಜಾವವಾಗಿರಬೇಕು. ಬಿಳಿಯ ಮುಖ ಗಳಿದ್ದ ಕರಿಯ ಇರುವೆಗಳ ಸಾಲು ಬೀದಿಗಳುದ್ದಕ್ಕೆ ಸಾಗಿತು. ಬೋಳಾರ, ಹಂಪನಕಟ್ಟೆ, ಹಾಗೇ ಮುಂದಕ್ಕೆ. ಕರಿಮುಖಗಳ ಕರಿದು ಇರುವೆಗಳೂ ಇದ್ದುವು. ಎಷ್ಟು ಒಟ್ಟು ? ಐದು ನೂರು? ಆರು– ಏಳು–ಎಂಟು ನೂರು? ಇಲ್ಲ, ಸಾವಿರವಿದ್ದುವು–ಒಂದು ಸಾವಿರ.

ಈ ಇರುವೆಸಾಲುಗಳ ಧಾಳಿ ಎಲ್ಲಿಗೆ? ಯಾವ ಬಿಲಕ್ಕೆ ? ಯಾವ ಮರಕ್ಕೆ ?

ಬಾವುಟಗುಡ್ಡದ ಬುಡ. ಅದರ ಸುತ್ತು, ಸುತ್ತು. ಸೆರೆಮನೆಯ ಕಡೆಗೊಂದು ಸಾಲು. ಆದರೆ, ಹೆಚ್ಚಿನ ಭಾಗವೆಲ್ಲ ಗುಡ್ಡದ ಮೇಲಕ್ಕೆ.

ಕಾವಲಿದ್ದ ಸೈನಿಕನೊಬ್ಬ ಕರಿದಾದುದೇನೋ ಸಮೀಪದಲ್ಲೆ ಸರಿ ದಂತಾಗಿ ಗದರಿ ಕೇಳಿದ :

“ ಯಾರದು ?”

ಉತ್ತರವಿರಲಿಲ್ಲ. ಕರಿದು ಬಣ್ಣ ಮಾತ್ರ ಅಲ್ಲಿತ್ತು.

ಆತನ ಬಂದೂಕಿನಿಂದೊಂದು ಗುಂಡು ಹಾರಿ, ಸುಂಯ್‌ಗುಟ್ಟುತ್ತ ಹೊರಟುಹೋಯಿತು. ಅಡ್ಡವಾಗಿದ್ದೊಂದು ಮರಕ್ಕೆ ಬಡೆಯಿತು. ಕರಿದು ಮಾಯವಾಗಿಬಿಟ್ಟಿತ್ತು ಅಷ್ಟರಲ್ಲೇ. ಯಾವ ಪ್ರಾಣಿಯೂ – ಮನುಷ್ಯ ಪ್ರಾಣಿಯೂ – ಉರುಳಿ ಬೀಳಲಿಲ್ಲವೆಂದು, ಕಾವಲಿನವನು ಸುಮ್ಮನಾದ.

ಆಕಾಶದಲ್ಲಿ ಬೆಳ್ಳಿಯ ಚಿಕ್ಕೆ ಮೂಡಿತ್ತು. ಇನ್ನು ಮುಂಜಾವ. ಮೈ ನಡುಕ ಹುಟ್ಟಿಸುವ ಹಾಗಿತ್ತು ಆ ಹೊತ್ತಿನ ತಂಗಾಳಿ.

ಮತ್ತೆ ಕರಿದು ಆಕೃತಿಗಳು ಬಾಗಿ ಬಾಗಿ ಚಲಿಸಿದುವು, ಒಂದರ ಹಿಂದೊಂದು.

ಕಾವಲಿನವನು, ಇದೇನು ಕನಸೇ ಎಂದು ಕಣ್ಣು ಹೊಸಕಿಕೊಂಡ. ಕಾಡು ಹಂದಿ ? ಸುಳ್ಯದಾಚೆಗೆ, ಕೊಡಗಿನಲ್ಲಿ, ಆ ಪ್ರಾಣಿ ಇತ್ತು ನಿಜ. ಆದರೆ ಇಲ್ಲಿ ? ಈ ನಗರದಲ್ಲಿ ?

ಮತ್ತೊಮ್ಮೆ ಗುರಿ ಇಡಲೆಂದು ಸೈನಿಕ ಬಂದೂಕನ್ನೆತ್ತಿದ. ಕುದುರೆ ಯನ್ನು ಅದುಮಬೇಕು ಆತ. ಅಷ್ಟರಲ್ಲೇ —

"ಆಯ್!"

ಕತ್ತನ್ನು ಬಳಸಿದ ತೋಳು. ಕತ್ತಿಯ ಏಟು ನಡುವಿಗೆ.

ಇಂಗ್ಲಿಷಿನಂತೆ ಉಚ್ಚರಿಸುತಿದ್ದ ಹಿಂದೂಸ್ಥಾನಿಯಲ್ಲಿ ನಿರ್ದೇಶಗಳು ಕೇಳಿಸಿದುವು :

"ನುಗ್ಗಿ ಮುಂದಕ್ಕೆ! ನೇರವಾಗಿ ಮೇಲಕ್ಕೆ!"

ಕೆಲವೇ ನಿಮಿಷಗಳಲ್ಲಿ ಹಾಹಾಕಾರವೆದ್ದು ಹೋಯಿತು. ಕಲ್ಯಾಣ ಸ್ವಾಮಿಯ ಸೇನೆಯ ಶಿಬಿರವನ್ನು ವೈರಿಗಳು ಹೊಕ್ಕು, ಪಂಜುಗಳನ್ನು ಆರಿಸಿ, ಕತ್ತಲೆಯಲ್ಲಿ ಎಡವಿದರೂ ಬೆಳುದಿಂಗಳ ನಸುಬೆಳಕಿನಲ್ಲಿ ಸಾವರಿಸಿಕೊಳ್ಳುತ್ತ, ಮಲಗಿದ್ದವರನ್ನು ಕತ್ತರಿಸಿದರು. ಎದ್ದವರನ್ನು ಗುಂಡಿಕ್ಕಿ ಸುಟ್ಟರು. ರೋದನ– ಆರ್ತನಾದ–ಆಕ್ರೋಶ! ಎಚ್ಚೆತ್ತವರು ಓಡಿದರು ಗೂಡಾರದ ಹೊರಕ್ಕೆ. ಓಡುತ್ತ ವೈರಿಗಳಿಗೆ ಬಲಿಯಾದರು. ಅಡಿಗಡಿಗೂ ಕಡಿ–ಬಡಿ ಗದ್ದಲ.

ಒಮ್ಮೆಲೆ ಕಹಳೆಧ್ವನಿ ಕೇಳಿಸಿತು. ಆ ಕೋಲಾಹಲದಲ್ಲೂ ಕಿವಿಗೆ ಬೀಳುವಂತೆ ರಾಮಗೌಡನ ಅನುಜ್ಞೆಗಳು ಬಂದುವು :

"ಹೆದರಬೇಡಿ! ವೈರಿಯನ್ನು ಯಮಪುರಿಗೆ ಅಟ್ಟಿ! ಕತ್ತರಿಸಿ! ಹಾರಿಸಿ ಗುಂಡು!"

ಶಸ್ತ್ರಾಗಾರದ ಬಾಗಿಲು ತೆರೆಯಿತು. ಕಲ್ಯಾಣಸ್ವಾಮಿಯ ಸೈನಿಕರು ಓಡುತ್ತೋಡುತ್ತ ಬಂದು ಕೈದುಗಳನ್ನೆತ್ತಿಕೊಂಡು ವೈರಿಯನ್ನಿದಿರಿಸಿದರು.

ದೊಡ್ಡ ಪ್ರಮಾಣದ ಅನಾಹುತ ನಿಜ. ಆದರೆ, ಒಡೆದು ಕೆಡವಲು ಗೆದ್ದಲು ಗೂಡಾಗಿರಲಿಲ್ಲ ಆ ಶಿಬಿರ.

ಧಾಳಿ ಮಾಡಿದ್ದವರಿಗೆ ಮುಖ್ಯವಾಗಿ ಬೇಕಾಗಿತ್ತು–ರಾಣಿ ಹುಳ.

ಬೆದರಿದ ಚಂದ್ರ ಕ್ಷೀಣಿಸುತಿದ್ದಂತೆ ಮೂಡಲಲ್ಲಿ ಅರುಣಪ್ರಭೆ ಕಾಣಿಸಿತು.

ಧಾಳಿ ಮಾಡಿದ್ದವರಿಗೆ ಸಂತೋಷವಾಗುವಂತಿರಲಿಲ್ಲ ಆ ಅರುಣೋದಯದಿಂದ.

ಗಡಬಡಿಸಿ ಎದ್ದು, ಬಂಗರಾಜನನ್ನೂ ಎಬ್ಬಿಸಿದ, ಕಲ್ಯಾಣಸ್ವಾಮಿಯ ಕಣ್ಣೆದುರು ಮಿಂಚಿದುದು, ಹಿಂದಿನ ಸಂಜೆ ಕಂಡಿದ್ದ ಬಿಳಿಯ ಚುಕ್ಕೆಗಳು ಮೂರು.

ಆಗಬಾರದುದು ಆಗಿಹೋಗಿತ್ತು !

ಎದೆಯಲ್ಲಿ ಗುಂಡನ್ನು ಹೊತ್ತಿದ್ದ ಸೈನಿಕನೊಬ್ಬ ಬಂದು ನುಡಿದ :

" ಪ್ರಮಾದವಾಯ್ತು ! ಪ್ರಮಾದವಾಯ್ತು !

ಕಲ್ಯಾಣಸ್ವಾಮಿಗೆ ಯಾವ ವಿವರಣೆಯೂ ಬೇಕಾಗಿರಲಿಲ್ಲ. ಆತ ಅದಷ್ಟುಗಟ್ಟಿಯಾಗಿ ಆದೇಶವಿತ್ತ :

" ಹೋರಾಡಿ ! ಯಾರೂ ಹೆದರಬೇಡಿ !"

ಆತನ ಬಂದೂಕು, ಪ್ರತಿಯೊಂದು ಗುಂಡೂ ಗುರಿ ತಗುಲುವಂತೆ ಮಳೆಗರೆಯಿತು. ಲೀಲಾಜಾಲವಾಗಿ ಕತ್ತರಿಸುವ ಕೆಲಸ ಮಾಡಿತು ಖಡ್ಗ.

ಬಂಗರಾಜ ಹಿಂದಾಗಲಿಲ್ಲ. ರಾಮಗೌಡನೂ ಅಷ್ಟೆ. ಅಣ್ಣಿಗೌಡನೂ ಅಷ್ಟೆ.

ಬೆಳಕು ಹರಿಯುತ್ತಿದ್ದಂತೆ ಧಾಳಿಕಾರರ ಸಂಖ್ಯೆ ಹೆಚ್ಚಿತು. ಬಾವುಟ ಗುಡ್ಡದ ತಪ್ಪಲುಗಳಿಂದೆಲ್ಲ ಮೇಲಕ್ಕೆ ಹರಿಯುತ್ತಿದ್ದುವು ಆ ಇರುವೆಗಳು.

ಕಲ್ಯಾಣಸ್ವಾಮಿ ಅಧೀರನಾಗದೆ ಯೋಧರನ್ನು ಹುರಿದುಂಬಿಸಿದ :

" ಹಿಮ್ಮೆಟ್ಟಬೇಡಿ ! ಜಗ್ಗಬೇಡಿ !"

ಕಟ್ಟಿಹಾಕಿದ್ದ ಕುದುರೆಗಳು ಸಮೀಪದಿಂದಲೆ ಕೆನೆದುವು. ಹಗ್ಗ ಹರಿದುಕೊಳ್ಳಲು ಯತ್ನಿಸುತ್ತ ಹುಚ್ಚೆದ್ದು ಕುಣಿದುವು.

ಯಾವುದೋ ಒಂದು ಧ್ವನಿ ಕಲ್ಯಾಣಸ್ವಾಮಿಯ ಹಿಂಬದಿಯಿಂದ ಸಮೀಪಕ್ಕೆ ಬರುತ್ತ ಯಾಚಿಸಿತು :

" ಸ್ವಾಮಿಯವರೆ, ಬಂದುಬಿಡಿ. ಕುದುರೆ ಸಿದ್ಧವಾಗಿದೆ."

ಕುದುರೆಯನ್ನೇರಿ ಕದನ ? ಅದು ಸಾಧ್ಯವಿರಲಿಲ್ಲ. ಕುದುರೆಯನ್ನೇರಿ ಪಲಾಯನ ? ಎಂತಹ ಪ್ರಾರ್ಥನೆ !

" ಥೂ !"

ಬಿಳಿಯರಿಬ್ಬರನ್ನು ಅಹುತಿ ತೆಗೆದುಕೊಂಡಿತು ಅದೊಂದೇ ಖಡ್ಗ ಪ್ರಹಾರ.

ಕಲ್ಯಾಣಸ್ವಾಮಿ ಭೋರ್ಗರೆಯುವ ಕಂಠದಿಂದ ನುಡಿದ:

" ವೀರರೇ ! ಒಂದು ಹೆಜ್ಜೆಯೂ ಹಿಮ್ಮೆಟ್ಟಬೇಡಿ !"

ಹತ್ತಿರವೇ ಬೇರೊಂದು ಸ್ವರ ಕೇಳಿಸಿತು :

" ಈತನೇ ಕಲ್ಯಾಣಸ್ವಾಮಿ."

ಆ ಸ್ವರ ಬಂದ ದಿಕ್ಕಿನತ್ತ ಕಲ್ಯಾಣಸಾಮಿ ದೃಷ್ಟಿ ಹೊರಳಿಸುತಿದ್ದಂತೆ ಗುಂಡೊಂದು ಆತನ ಬಲಗೈಯನ್ನು ತಾಕಿತು. ಖಡ್ಗ ಬಿದ್ದುಹೋಯಿತು.

ಎಡಗೈಯಲ್ಲಿ ಅದನ್ನೆತ್ತಿಕೊಳ್ಳುತ್ತಾ ರೋಷಾವೇಷದಿಂದ ಕಲ್ಯಾಣ ಸ್ವಾಮಿ ಗರ್ಜಿಸಿದ:

"ಪಾಪಿಗಳೇ! ಬನ್ನಿ ಧೈರ್ಯವಿದ್ದರೆ ಮುಂದಕ್ಕೆ!"

ಬಂದ ಇಬ್ಬರು ಗಾಯಗೊಂಡು ಉರುಳಿದರು.

ಆದರೆ ನಾಲ್ಕು ದಿಕ್ಕುಗಳಿಂದಲೂ ಮುತ್ತಿದ ಹತ್ತಾರು ಜನ ಆತನನ್ನು ಹಿಡಿದರು, ಹಿಡಿದು ಕೆಡವಿದರು.

ಕಿವಿಯೊಡೆಯುವಂತೆ ಹಾಹಾಕಾರವೆದ್ದಿತು ಸುತ್ತುಮುತ್ತಲಿಂದ. ಹೋರಾಡುವವರಿಗಿಂತಲೂ ಓಡುವವರ ಸಂಖ್ಯೆ ಹೆಚ್ಚಿತು.

ಬಂಗರಾಜ, ರಾಮಗೌಡ, ಅಣ್ಣ – ಎಲ್ಲರನ್ನೂ ಗಾಯಗೊಳಿಸಿ ಸೆರೆ ಹಿಡಿದರು ಬಿಳಿಯರು, ಅವರ ನೇತೃತ್ವದಲ್ಲಿದ್ದ ಕರಿಯರು.

ಒಂದೇ ಸಮನೆ ಉರಿಯುತ್ತ ಬಂದಿದ್ದ ಸ್ವಾತಂತ್ರ್ಯ ದೀವಟಿಗೆಯನ್ನು ನೆಲಕ್ಕೆಸೆದು, ಮಣ್ಣಲ್ಲಿ ತೀಡಿ, ಆರಿಸಿದರು.

ಧ್ವಜಸ್ತಂಭದ ಮೇಲಿದ್ದ ಸ್ವಾತಂತ್ರ್ಯ ಬಾವುಟವನ್ನು ಕೆಳಕ್ಕೆಳೆದು, ಮೆಟ್ಟಿ, ತುಳಿದರು.

ಮುಂಗಾರು ಮಳೆ ಬರುವುದಕ್ಕೆ ಮುಂಚೆಯೇ ಪಶ್ಚಿಮತೀರದಿಂದ, ಕೆಳಗಿಂದ, ಇಂಗ್ಲಿಷರ ದಂಡು ಬಂತು.

ಬೇಟೆಗಾರ ಬೀಸಿದ ಉರುಳು ನಾಡಿನ ಮೈಯನ್ನು ಬಿಗಿಯಿತು.

ಹೋರಾಡುತ್ತ ಮಡಿದವರ ಪವಿತ್ರರಕ್ತದಿಂದ ತೋಯ್ದ ಕರಿಮಣ್ಣಿನಲ್ಲಿ ಸೈತಾನನ ಸರಕಾರ ಮತ್ತೆ ಬೇರು ಬಿಟ್ಟಿತು.

ಒಡೆದು ಹೋಗಿತ್ತು ಸುಂದರವಾಗಿದ್ದೊಂದು ಕನಸು.

ಫಿರಂಗಿಗಳ ಮದ್ದುಗುಂಡುಗಳ ಬಲ ಅವರಿಗೆ. ಲೋಕದ ಹತ್ತು ಮೂಲೆಗಳಲ್ಲಿ ಅನ್ಯಾಯದ ಯುದ್ಧಗಳನ್ನು ಮಾಡಿ ಕಲಿತಿದ್ದ ಕುಟಿಲ ಕೌಶಲ್ಯವೇ ಬಂಡವಾಳ. ಜನರ ಮೇಲೆ ಅವರು ನಡಸಿದ ಸವಾರಿಗೆ, ನಮ್ಮದೇ ನಾಡಿನ ದ್ರೋಹಿಗಳ – ಧೂರ್ತರ ಬೆಂಬಲ.

ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು:

" ಕಲ್ಯಾಣಸ್ವಾಮಿಯನ್ನು ಸೆರೆಹಿಡಿದರು ! ಆತನ ದಂಡು ನುಚ್ಚು ನೂರಾಯಿತು !"

ಪುರಪ್ರಮುಖರು ಕೆಲವರು ಬಿಳಿಯ ಅಧಿಕಾರಿಗಳಿಗೂ ಕುರ್ನಿಸು ಮಾಡಿದರು:

" ನೀವೇ ನಮ್ಮ ತಂದೆ. ನೀವೇ ನಮ್ಮ ತಾಯಿ. ಕಾಪಾಡಬೇಕು !"

ಆಂಗ್ಲರ ನುರಿತ ಗೂಢಚಾರರು, ಹಿಂದಿನ ದಿನವಷ್ಟೆ ಸುಳ್ಯಕ್ಕೆ ಸೇನೆ ತೆರಳಿದ ಸುದ್ದಿ ತಂದರು.

ಸಾವಿರ ಜನ ? ಕೆಲ ಕುದುರೆ ಸವಾರರು ? ಕೊತ್ತಳಿಗೆ ಭಟರು ?

ಉಳಿದುದೊಂದೇ ಕೆಲಸ. ವಿದ್ಯುತ್ ವೇಗದಿಂದ ಬೆನ್ನಟ್ಟುವುದು. ಎದುರಿನಿಂದ ದೇಶೀಯನೇ ಆದ ಬೋಪುದಿವಾನನ ಕತ್ತಿ. ಹಿಂದಿನಿಂದ ವಿದೇಶೀಯನ ಗುಂಡು.

ಕತ್ತರಿಯಲ್ಲಿ ಸಿಲುಕಿತು ಸ್ವಾತಂತ್ರ್ಯಸೇನೆಯ ಒಂದು ಕೈ. ಅಂಜುಬುರುಕರು ಓಡಿದರು. ವೀರರು ಹೋರಾಡಿದರು.

ಆ ಯುದ್ಧಕ್ಕೆ ಮುಂಚೆಯೇ ಮಂಗಳೂರಿನಿಂದ ಬಂದಿದ್ದ ದುರಂತದ

ವಾರ್ತೆ ಸೋಲಿನ ನಾಂದಿ ಹಾಡಿತ್ತು.

ನಂಜಯ್ಯನನ್ನೂ ಕುಡಿಯ ಸೋಮರರನ್ನೂ ಇನ್ನಿತರ ಹಲವರನ್ನೂ ವೈರಿಗಳು ಸೆರೆಹಿಡಿದರು.

ಆ ಬೇಟೆ ತನ್ನ ಸ್ವಾಮಿನಿಷ್ಠೆಗೆ ಸಾಕ್ಷ್ಯವೆಂದು ಜೋಪ್ರುದಿವಾನನೆಂದ:

" ಈ ಕೈದಿಗಳನ್ನು ನಾನು ಮಡಿಕೇರಿಗೊಯ್ಯಬೇಕು...."

ಕಲ್ಲು ಮುಳ್ಳುಗಳ ಗುಡ್ಡಕಾಡುಗಳ ಹಾದಿಯಾಗಿ ಮಡಿಕೇರಿಗೆ— ಕೊಡಗಿಗೆ....

ಕ್ಷೋಭೆಯ ಕಿಡಿ ಪ್ರಜ್ವಲಿಸಿ ಸುಡುವ ಅಗ್ನಿಯಾಗಿ ಮಾರ್ಪಟ್ಟಿದ್ದ ಸುಳ್ಯ ಬರಿಯ ಮಸಣವಾಗಿತ್ತು.... ಮೌನವಾಗಿದ್ದ ಮಸಣ.

ಬಳೆಗಳು ಮುರಿದುಬಿದ್ದುವು; ಹಣೆಗಳು ಬರಿದಾದುವು. ಉತ್ತರಿಸಲಾಗದಷ್ಟು ಪ್ರಶ್ನೆಗಳೆದ್ದುವು: ನನ್ನ ಮಗನೆಲ್ಲಿ? ಗಂಡನೆಲ್ಲಿ? ಎಲ್ಲಿ ಅಣ್ಣ? ಎಲ್ಲಿ ತಂದೆ?

ಮಂಗಳೂರಿನ ಆ ಕದನದಲ್ಲಿ ಮಡಿದವರ ಗಾಯಗೊಂಡವರ ಸಂಖ್ಯೆ ಸಾವಿರ. ನೂರಾರು ಜನ ಸೆರೆಯಾಳುಗಳು.

ಆಂಗ್ಲ ಸೈನ್ಯಾಧಿಪತಿ, ಇತರ ಅಧಿಕಾರಿಗಳ ಸೈನಿಕರ ಜತೆ, ಅರಬ್ಬೀ ಕುದುರೆಯೇರಿ ನಗರದ ಮುಖ್ಯಬೀದಿಗಳಲ್ಲಿ ಸಂಚಾರಮಾಡಿದ. ಆತ ಆಶ್ವಾಸನೆಯಿತ್ತ:

" ಹೆದರಬೇಡಿ! ನಾವು ಕಲ್ಯಾಣಸ್ವಾಮಿಯಂಥ ಪುಂಡರ ಹುಟ್ಟಡಗಿಸ್ತೇವೆ. ನಿಮಗೆ ರಕ್ಷಣೆ ಕೊಡ್ತೇವೆ. ನಮ್ಮ ಸಾಮ್ರಾಜ್ಞಿ ಮಹಾ ದಯಾಳು. ನಿಮ್ಮನ್ನು ಮಕ್ಕಳ ಹಾಗೆ ನೋಡ್ಕೊಳ್ತಾರೆ."

* * * *

ಸೆರೆಮನೆಯಲ್ಲಿ ಒಂದು ಕೊಠಡಿಯಲ್ಲಿ ಕಲ್ಯಾಣಸ್ವಾಮಿಯನ್ನೂ ಬಂಗರಾಜನನ್ನೂ ಇರಿಸಿದ್ದರು. ಮಗ್ಗುಲಲ್ಲೆ ರಾಮಗೌಡ- ಅಣ್ಣಿಗೌಡರಿದ್ದರು. ಅದರಾಚೆ ಸೋಮಯ್ಯ—ಕರಿಯಪ್ಪ.

ಗೋಡೆಯಾಚೆಗೆ ಕೇಳಿಸುವಂತೆ ಬಾಗಿಲ ಸಂದಿಯಿಂದ ಕಲ್ಯಾಣಸ್ವಾಮಿ ಮಾತನಾಡಿದ:

" ಗೌಡರೆ, ಹೀಗಾಯ್ತೂಂತ ಸಂಕಟವಾಗ್ತಿದೆಯಾ?"

ದೃಢವಾದ ಧ್ವನಿಯಲ್ಲಿ ರಾಮಗೌಡನಿಂದ ಉತ್ತರ ಬಂತು:

"ಕೈಕೊಂಡ ಉದ್ದೇಶ ಸಫಲವಾಗದೆ ಹೋಯ್ತಲ್ಲಾ ಅಂತ ಸಂಕಟ ವಾಗ್ತಿದೆ."

"ನಾಳೆ ನಮಗಾಗಿ ಏನು ಕಾದಿದೆಯೊ ತಿಳೀದು."

"ಸ್ವಾಮಿಯವರೆ, ಅವರಿಗಾಗಿ ನಾಳೆ ಏನು ಕಾದಿದೆಯೊ ತಿಳೀದು!"

....ಕೊಠಡಿಯೊಳಗೆ ಬಂಗರಾಜನೊಡನೆ ಕಲ್ಯಾಣಸ್ವಾಮಿಯೆಂದ:

"ಅಣ್ಣಾ, ಯಾಕೆ ಸಪ್ಪಗಿದ್ದೀರಿ?"

ಬಂಗರಾಜ ಮುಗುಳುನಕ್ಕ.

"ಹೌದೆ?"

"ಹಾಗನಿಸಿತು."

"ನಿಜ ಹೇಳಿದಿರಿ. ಹೆಂಡತಿ ಮಕ್ಕಳ ನೆನಪಾಗಿ ಒಂದು ಕ್ಷಣ ಮುಖ ಬಾಡಿದ್ದು ನಿಜ. ಅಂತಹ ಯೋಚನೆಗೆ ಕಾರಣ, ಮನಸಿನ ದೌರ್ಬಲ್ಯ. ಅದು ಕ್ಷಣಿಕ ಕಾಹಿಲೆ. ನೋಡಿ, ಈಗ ಹುಷಾರಾಗಿದೇನೆ."

ಹೆಂಡತಿ – ಮಕ್ಕಳ ನೆನಪು. ತಾಯಿ ಮತ್ತು ಹೆಂಡತಿ....ಕಲ್ಯಾಣ ಸ್ವಾಮಿಗೆ ಇರಲಿಲ್ಲವೆಂದೆ ಆ ಯೋಚನೆ? ಆದರೆ ಆತ ನಾಯಕ. ಮನ ಸ್ಸನ್ನು ಸಡಿಲಬಿಡಬಾರದು. ಮುಖ ಬಾಡಬಾರದು ಎಂದಿಗೂ. ವೈರಿ ಗಳೆಂದೂ ತನ್ನನ್ನು ನೋಡಿ ಸಂತೋಷಪಡಬಾರದು....

*   *   *   *

ದೇಶವನ್ನು ಸ್ವತಂತ್ರಗೊಳಿಸಲು ಹೋರಾಡಿದ ಅಪರಾಧಕ್ಕಾಗಿ ದೇಹಾಂತ ಶಿಕ್ಷೆ.

ಸೈನಿಕರು, ಕಲ್ಯಾಣಸ್ವಾಮಿಯನ್ನೂ ಬಂಗರಾಜನನ್ನೂ ಕರೆದೊ ಯ್ಯಲು ಬಂದರು ಒಂದು ಮುಂಜಾನೆ.

ರಾಮಗೌಡ ಕೇಳಿದ:

"ನಮಗೂ ಇವತ್ತೇ ಸದ್ಗತಿ ತೋರಿಸಿ."

ಉತ್ತರ ಬಂತು:

"ಇಲ್ಲ. ನಿಮ್ಮ ಸರದಿ ನಾಳೆ."

ಗೌಡ, ಕಲ್ಯಾಣಸ್ವಾಮಿಯನ್ನುದ್ದೇಶಿಸಿ ಅಂದ:

"ಕೊನೆಯವರೆಗೂ ನಿಮ್ಮ ಜತೆ ಇರಬೇಕು ಅಂತ ಒಂದು ಆಸೆ ಇತ್ತು ಸ್ವಾಮಿಯವರೆ."

ಉತ್ತರ ಹೇಳುವುದಾಗದೆ ಕಲ್ಯಾಣಸ್ವಾಮಿಯ ಕಂಠ ಬಿಗಿಯಿತು. ಕಂಬನಿ ತುಂಬಲು ನಿರಾಕರಿಸಿದ ಕಣ್ಣುಗಳು ಮಿನುಗಿದುವು.

ನಿರಂತರ ಆಶಾವಾದಿಯಾದ ರಾಮಗೌಡನೇ ಅಂದ :

" ಹೋಗಲಿ ಬಿಡಿ. ಇವತ್ತಲ್ಲದಿದ್ದರೆ ನಾಳೆ ಅಲ್ಲಿಯಾದರೂ ಒಟ್ಟಾಗಿಯೇ ಆಗ್ತೀವಿ !"

....ಊರು ಎಚ್ಚರುವುದಕ್ಕೆ ಮುಂಚೆಯೆ ಆ ವೀರರಿಬ್ಬರನ್ನು, ಸೈನಿಕರ ಬಲವಾದ ಕಾವಲಿನಲ್ಲಿ, ಊರಿನ ಹೊರಗೆ– ಬಿಕ್ರನಕಟ್ಟೆ ಪದವಿಗೆ– ಒಯ್ದರು.

ಶಿಕ್ಷೆ ವಿಧಿಸಲು ಅವರು ಮಾಡುತ್ತಿದ್ದ ಸಿದ್ಧತೆಗಳನ್ನು ಕಲ್ಯಾಣಸ್ವಾಮಿ ನೋಡುತ್ತ ನಿಂತ. ಗುಂಡು ತಗುಲಿದ್ದ ಆತನ ಬಲಗೈ ಜೋತಾಡುತಿದ್ದರೂ ಭುಜಗಳು ಇಳಿ ಬಿದ್ದಿರಲಿಲ್ಲ. ಆ ತಲೆ ಬಾಗಿರಲಿಲ್ಲ ಯಾರ ಎದುರಲ್ಲೂ.

ಮೆದುಳು ಜೀವಂತವಾಗಿ ತೀಕ್ಷ್ಣವಾಗಿಯೇ ಇತ್ತು ಎಂದಿನಂತೆ....

ಈ ಸಲದ ಯುದ್ಧ ಮುಗಿದ ಬಳಿಕ ಸದಾಕಾಲವೂ ತನ್ನ ಜತೆಯಲ್ಲೇ ಇರಬೇಕೆಂದಿದ್ದಳು ಗಿರಿಜಾ. ಹುಚ್ಚು ಹುಡುಗಿ ! ಇನ್ನು ಆ ತಾಯಿ....

ಆ ಯೋಚನೆಯನ್ನು ಬದಿಗೆ ಸರಿಸಿ ಕಲ್ಯಾಣಸ್ವಾಮಿ ಒಮ್ಮೆಲೆ ಚೆಟ್ಟಿ–ಕರ್ತುರನ್ನು ಸ್ಮರಿಸಿಕೊಂಡ....

ವಿಜಯ–ಸೋಲು....ವೀರರಾಜೇಂದ್ರರೆಡೆಗೆ ದೂತರನ್ನು ಕಳುಹಿತ್ತು, ಅವರನ್ನು ಕರೆದು ತರಲು. ಈಗ ಈ ಗತಿ. ಸದ್ಯಃ ಅವರು ಹೊರಡದಿದ್ದರೆ ಸಾಕು. ಅಪಾಯ ತಟ್ಟದಿದ್ದರೆ ಸಾಕು....

ದೇಶದ ಸ್ವಾತಂತ್ರ್ಯಗಳಿಸಬೇಕೆನ್ನುವ ಆಸೆ, ಆಸೆಯಾಗಿಯೇ ಉಳಿಯಿತು ಕೊನೆಗೂ....

ತಬ್ಬಲಾಗದ ಮರದ ಬಲಿಷ್ಟ ಕೊಂಬೆಗಳಿಂದ ಎರಡು ಉರುಳುಗಳನ್ನು ಇಳಿಬಿಟ್ಟಿದ್ದರು. ಕೆಳಗೆ ತಾತ್ಕಾಲಿಕವಾದೊಂದು ಅಟ್ಟಣಿಗೆಯಿತ್ತು. ಸುತ್ತಲೂ ವೃತ್ತಾಕಾರವಾಗಿ ಸಶಸ್ತ್ರ ಸೈನಿಕರು ನಿಂತಿದ್ದರು.

ಹರುಕು ಮುರುಕು ಹಿಂದೂಸ್ಥಾನಿಯಲ್ಲಿ ಆ ಸೈನ್ಯಾಧಿಪತಿ ಗರ್ಜಿಸಿದ :

" ಹತ್ತಿಸಿ ಮೇಲಕ್ಕೆ ! ಸ್ವಾತಂತ್ರ್ಯದ ರುಚಿ ನೋಡ್ಲಿ !"

ಸೈನಿಕರ ಬಲಾತ್ಕಾರಕ್ಕೆ ಆಸ್ಪದವಿಲ್ಲದಂತೆ ಕಲ್ಯಾಣಸ್ವಾಮಿಯೂ ಬಂಗರಾಜರೂ ತಾವಾಗಿಯೇ ಅಟ್ಟಣಿಗೆಯನ್ನೇರಿದರು.

ಬಂಗರಾಜನ ಮುಖದ ಮೇಲೆ ಮುಗುಳು ನಗೆ ಮೂಡಿದುದನ್ನು ಗಮನಿಸಿ ಸಮಾಧಾನದಿಂದ ಕಲ್ಯಾಣಸ್ವಾಮಿಯೆಂದ:

" ಸಂತೋಷವಾಗಿದ್ದೀರಿ !"

" ಹಿಂದೆ ಒಂದು ಮಾತು ಹೇಳಿದ್ದಿರಿ. ನಿಮ್ಮಂಥವರ ಜತೆ ಭುಜಕ್ಕೆ ಭುಜಕೊಟ್ಟು ಹೋರಾಡೋದು ಭಾಗ್ಯ ಅಂತ ತಿಳೀತೀವಿ – ಅಂದಿದ್ದಿರಿ. ಈಗ –"

" ಅಣ್ಣ !"

" ನಿಮ್ಮ ಜತೇಲಿ ಹೀಗೆ ಪ್ರಾಣಬಿಡೋದು ನನ್ನ ಭಾಗ್ಯ ಅಂತ ನಾನು ತಿಳೀತೀನಿ."

ಉತ್ತರವೀಯಲಾಗದೆ ಕಲ್ಯಾಣಸ್ವಾಮಿ ತುಟಿಗಳನ್ನು ಗಟ್ಟಿಯಾಗಿ ಬಿಗಿದುಕೊಂಡ. ಭಾವಾತಿರೇಕದಿಂದ ಆತನ ಕಣ್ಣುಗಳು ತೇವಗೊಂಡುವು.

ಕೊರಳುಗಳನ್ನು ಸುತ್ತುವರಿದುವು ಉರುಳುಗಳು.

" ತೆಗೆಯಿರಿ ಅಟ್ಟಣಿಗೆ!"

ಮುಷ್ಟಿಗಳನ್ನು ಬಿಗಿಹಿಡಿದು, ಏನನ್ನೋ ಹೇಳಬೇಕೆಂದು ಕಲ್ಯಾಣ ಸ್ವಾಮಿ ಬಾಯಿ ತೆರೆದ. ಆದರೆ ಒಮ್ಮೆಲೆ ಕಾಲ ಕೆಳಗಿನ ಆಧಾರ ತಪ್ಪಿತು. ದೇಹ ಕೆಳಕ್ಕೆ ತೂಗಾಡಿತು. ಉರುಲು ಬಿಗಿಯಾಗಿ ಉಸಿರು ಕಟ್ಟಿತು. ಸಂಕಟದಿಂದ ಜೀವ ಚಡಪಡಿಸಿತು. ಕೆಳಗೆ ನಿಂತಿದ್ದವರನ್ನು ತನ್ನ ಪಾದ ದಿಂದ ತುಳಿಯುವಂತೆ ಕಲ್ಯಾಣಸ್ವಾಮಿ ಕಾಲು ಝಾಡಿಸಿದ.

ಮೆದುಳು ಅಸಹಾಯತೆ ಸೂಚಿಸುತ್ತ ಚೀತ್ಕರಿಸಿತು.

ಆಳವರಿಯದ ಕತ್ತಲೆಯ ಗವಿಯೊಳಕ್ಕೆ ಒಂದೇ ಸಮನೆ ಇಳಿಯುತಿದ್ದ ಕಲ್ಯಾಣಸ್ವಾಮಿಗೆ ಆಗ ಕೇಳಿಸಿತು ತಾಯಿಯ ಸ್ವರ:

' ಬಂದಿಯಾ ಪುಟ್ಟಬಸ್ಯಾ ? ಬಂದಿಯಾ ಮಗನೆ ?'

ಉತ್ತರ ರೂಪವಾಗಿ ತುಟಿಗಳು ಚಲಿಸಿದುವು. ಕೇಳಿಸದೇ ಹೋದ ಪದಗಳು ಹೊರ ಬಿದ್ದು ಗಾಳಿಯೊಡನೆ ಲೀನವಾದುವು:

' ಸ್ವಾತಂತ್ರ್ಯ ಸೇನೆಗೆ ಜಯವಾಗಲಿ ಅಮ್ಮ.'

## ೬

ಕಾಡಿನ ಕಳೇಬರಕ್ಕೆ ಕಾರಿರುಳು ವಸನ ತೊಡಿಸಿತ್ತು. ಅಂದು ಅಮಾವಾಸ್ಯೆ. ದಟ್ಟವಾದ ಕರಿಯ ಮೋಡಗಳಿಂದ ಆಚ್ಛಾದಿತವಾಗಿತ್ತು ಆಕಾಶ. ಗುಡುಗು ಆರ್ಭಟಿಸಿತು, ಈಗಲೋ ಮತ್ತೆಯೋ ಮಳೆಸುರಿಸುವ ಬೆದರಿಕೆ ತೋರಿಸುತ್ತಾ.

ಮುದುಕಿ ಗಂಗವ್ವ ಎಡವುತ್ತ ತಡವುತ್ತ ಹೊರಬಾಗಿಲಿಗೆ ಬಂದಳು. ಜಗಲಿಯ ಮೇಲೆ ಕುಳಿತಳು. ಕುರುಡುಕಣ್ಣುಗಳಿಂದ ಏನೂ ಕಾಣಿಸದ ಕತ್ತಲೆಯನ್ನು ಇರಿದು ನೋಡಿದಳು.

ಹಾಗೆ ನೋಡಿ ಆಯಾಸವಾಗಲು ಆಕೆ ನಿಟ್ಟುಸಿರುಬಿಟ್ಟಳು.

ಹೃದಯದ ಕಳವಳ ನಿತ್ಯದ ಪಲ್ಲವಿಯನ್ನು ಹೊರಗೆಡವಿತು.

"ಪುಟ್ಟಬಸ್ಯ ಬರಲಿಲ್ಲಲ್ಲೇ – ಬರಲಿಲ್ಲೇ ಪುಟ್ಟ ಬಸ್ಯಾ...."

ಗಿರಿಜವ್ವ ಹತ್ತಿರ ಬಂದು ಅಂದಳು :

"ಮಲಕ್ಕೊಳ್ಳಿ ಅತ್ತೆಮ್ಮ. ರಾತ್ರಿ ಭಾಳ ಆಯ್ತು."

"ಏನು ರಾತ್ರಿಯೋ, ಏನು ಹಗಲೋ....

"ಎಷ್ಟು ಹೊತ್ತೂಂತ ಕೂತಿರೋಕಾಗತವೆ ಅತ್ತೆಮ್ಮ?"

ಸಂಕಟಪಡುತ್ತ ಸ್ವಲ್ಪಹೊತ್ತು ಸುಮ್ಮನಿದ್ದು ಗಂಗವ್ವನೆಂದಳು :

"ಇವತ್ತು ಹುಣ್ಣಿಮೆ ಅಲ್ಲವಾ?"

"ಅಲ್ಲ, ಅತ್ತೆಮ್ಮ."

"ಹಾಗಾ? ಹುಣ್ಣಿಮೆಯೇನೋಂತಿದ್ದೆ. ಅಯ್ಯೋ...."

ಕಣ್ಣು ಕೋರೈಸುವಂತೆ ಮಿಂಚು. ಛಟ್‌ಛಟೇರೆಂಬ ಕರ್ಣಕಠೋರ ಶಬ್ದ.

"ಗಿರಿಜಾ, ಅದೇನು ಸದ್ದು? ಮಳೆ ಬರೋ ಹಂಗೈತಾ?"

"ಹೂಂ ಅತ್ತೆಮ್ಮ."

"ಮಳೇಲಿ ಪ್ರಯಾಣಮಾಡೋದು ಬಲೆ ಕಷ್ಟ...."

ಮೌನವನ್ನು ಮತ್ತೆ ಅತ್ತೆಯೇ ಮುರಿದಳು :

"ಅಲ್ಲಾ, ಒಬ್ಬರಾದರೂ ಬರಬೇಡವಾ ಈ ದಾರಿಯಾಗಿ ಒಂದು ಸುದ್ದೀನಾದರೂ ಸಿಗಬೇಡವಾ? ಹಿಂಗೂ ಮಾಡ್ಬೌದಾ ಶಿವ?"

ಒಂದೇ ಹಾಡು ಯಾವಾಗಲೂ—ಅದೊಂದೇ ಹಾಡು.

ಗಿರಿಜಾ, ಬಸಿರಲ್ಲಿ ಪುಟ್ಟಬಸವನ ಅಂಶವನ್ನು ಹೊತ್ತಿದ್ದಳು; ಹೃದಯದಲ್ಲಿ ಆಳವರಿಯದ ಅಂತ್ಯವಿಲ್ಲದ ನೋವನ್ನು.

ಸ್ವಲ್ಪ ಸಮಯದ ಹಿಂದೆ ಸುದ್ದಿ ಕೇಳಿದ್ದುದು ಆಕೆಯೊಬ್ಬಳೇ,—ಅತ್ತೆಯಲ್ಲ. ಆಗ ಸಾಯಬೇಕೆನಿಸಿತ್ತು ಅವಳಿಗೆ, ತಾನೂ ನೇಣುಹಾಕಿಕೊಂಡು. ಆದರೆ ಆಕೆಯ ಬಸಿರಲ್ಲಿತ್ತು ವಂಶವೃಕ್ಷದ ಕುಡಿ. ತನ್ನೊಡನೆ ಅದನ್ನೂ ಚಿವುಟಿ ಹಾಕುವ ಮನಸಾಗಲಿಲ್ಲ ಆ ಜೀವಕ್ಕೆ.

ಆಕೆಯೇನೋ ಸಾಯದೆ ಉಳಿದಳು. ಆದರೆ ತನ್ನ ಅತ್ತೆ, ನಿಜ ಸಂಗತಿ ತಿಳಿದಾಗ ಎದೆಯೊಡೆದು ಪ್ರಾಣ ಬಿಡಲಾರಳೆಂದು ಹೇಳುವುದು ಸಾಧ್ಯವಿತ್ತೆ?

ಹಣೆಯ ಕುಂಕುಮವನ್ನು ಗಿರಿಜಾ ಅಳಿಸಿದಳು. ಆ ವಿಷಯವಾಗಿ ಆಕ್ಷೇಪವೆತ್ತುವಂತಿರಲಿಲ್ಲ ಕಣ್ಣು ಕಾಣದ ಮುದುಕಿ....

ಎಷ್ಟು ಕಠಿನವಾಗಿದ್ದ ವಾರ್ತೆ! ಆಕೆ ಬಹಳ ದಿನ ನಂಬಲೇ ಇಲ್ಲ ಅದನ್ನು. ಕೊನೆಗೆ ಒಬ್ಬೊಬ್ಬರಾಗಿ ಆ ಹಳ್ಳಿಯವರು—ಅಲ್ಲಿ ಬದುಕಿ ಉಳಿದವರು—ಬಂದಿದ್ದರು. ಪ್ರತಿಯೊಬ್ಬರೂ ಅದೇ ವಾರ್ತೆಯನ್ನು ತಂದಿದ್ದರು.

ಸೋಮಯ್ಯನೂ ಬರಲಿಲ್ಲ, ಕರಿಯಪ್ಪನೂ ಬರಲಿಲ್ಲ. ಒಟ್ಟು ಹದಿನಾಲ್ಕು ಜನರಿಗೆ ಗಲ್ಲಾಯಿತಂತೆ—ಹದಿನಾಲ್ಕು ಜನರಿಗೆ....

ಚಿಟ್ಟೆಯನ್ನೂ ಕರ್ತುವನ್ನೂ ದೋಣಿಯಲ್ಲಿ ತುಂಬಿ, ದೂರದ ಸಿಂಗಾಪುರ ಎನ್ನುವ ಯಾವುದೋ ಊರಿಗೆ ಒಯ್ದರಂತೆ....

ತಾನು ಕಂಡಿದ್ದ ಚನ್ನಯ್ಯ, ರಾಮಗೌಡ,....ಪ್ರತಿಯೊಬ್ಬರನ್ನೂ ಕೊಂದೇಬಿಟ್ಟರು, ಕೊಂದೇಬಿಟ್ಟರು.

ಇನ್ನೆಷ್ಟೋ ಜನರಿಗೆ ಎಷ್ಟೆಷ್ಟೋ ವರ್ಷಗಳ ಕಾರಾಗೃಹ ವಾಸವಂತೆ....

ಅಯ್ಯೋ! ಹೀಗೂ ಆಗಬೇಕಾಗಿತ್ತೆ? ಇಂಥ ಶಿಕ್ಷೆಯನ್ನೂ ಕೊಡಬೇಕಾಗಿತ್ತೆ ದೇವರು? ಯಾವ ತಪ್ಪಿಗೆ ಅಂತ ಈ ದಂಡನೆ?

....ಬಸಿರಲ್ಲಿದ್ದ ಮಗು. ಗಂಡೇ. ಪುಟ್ಟಬಸವನಂಥ ವೀರನಿಗೆ ಪುತ್ರಸಂತಾನವೇ. ಸಂದೇಹವೇನು?

ಆ ಜೀವಕ್ಕೋಸ್ಕರ ತನ್ನ ಬದುಕು....

ಅದುದೇನೆಂಬುದನ್ನು ಅತ್ತೆಗೆ ಹೇಳಲೇಬಾರದೆಂದುಕೊಂಡಳು

ಗಿರಿಜಾ. ಇತರರಿಂದುಮುದುಕಿಗೇನೂ ತಿಳಿಯದಂತೆಯೂ ನೋಡಿಕೊಂಡಳು.

ಮುದುಕಿಯ ಯೋಚನೆಗಳೋ ಕಡಿಕಡಿದು ಬಂದುವು. ಒಂದ ಕ್ಕೊಂದು ಸಂಬಂಧವಿರಲಿಲ್ಲ. ಮೆದುಳು ಸುಸೂತ್ರವಾಗಿ ಕೆಲಸ ಮಾಡು ತ್ತಲೇ ಇರಲಿಲ್ಲ.

ಮೂರು ತಿಂಗಳ ಮೇಲಾಯಿತು ಮಗ ಹೋಗಿ. ಇನ್ನೂ ಬರಲಿಲ್ಲ ವೆಂದರೆ? ಆಕೆ ಮಗನನ್ನು ಕುರಿತು ಆಕ್ಷೇಪಿಸಿದಳು:

'ಮನೇಲಿ ಹೆಂಡತಿ ಬಸುರಿ ಅನ್ನೋ ಗ್ಯಾನವಾದರೂ ಬೇಡವಾ ಇವನಿಗೆ?'ಮಗನ ವಿಷಯದಲ್ಲಿ ಕಾತರವೂ ಇತ್ತು ಆಕೆಗೆ.' ಪುಟ್ಟಬಸ್ಯ ಎಲ್ಲಿ ದಾನೋ, ಊಟ ಉಪಚಾರ ಸರಿಯಾಗಿ ಆಗ್ತೇತೋ ಇಲ್ಲೋ.'

ಗರ್ಭಿಣಿ ಸೊಸೆಯ ನೆನಪಾದೊಡನೆ ಆಕೆ ಅನ್ನುತಿದ್ದಳು:

'ಬೆಚ್ಗೆ ಕಂಬಳಿ ಹೊದ್ಕೋ ಗಿರಿಜಾ. ಮಳೇಲಿ ಹಂಗೇ ಕೂತಿರ್ಬೇಡ.'

....ರಾತ್ರಿ ಪ್ರತಿ ದಿನವೂ ಬಾಗಿಲ ಬಳಿ ಕುಳಿತು ನಿತ್ಯದ ಪಲ್ಲವಿಯನ್ನು ಹಾಡಿದ ಬಳಿಕ ನಿದ್ದೆ ಹೋಗುವ ಯತ್ನ....

ಅತ್ತೆಯ ಬಳಿಯಲ್ಲೆ ಇದ್ದ ಗಿರಿಜಾ ಉಗುಳು ನುಂಗಿ ಮೆಲ್ಲನೆ ಅಂದಳು:

"ಏಳಿ ಅತ್ತೆಮ್ಮ. ಮಲಕ್ಕೊಳ್ಳಿ. ರಾತ್ರಿ ಭಾಳ ಆಯ್ತು."

ಗಂಗವ್ವ ಅಂದಳು: "ನಡಿ ಮಗೂ, ಓಗಾನ."

ಸೊಸೆ ಎದ್ದು ನಿಂತು, ಒಳಕ್ಕೆ ಹೋಗಲು ಅತ್ತೆಗೆ ನೆರವಾದಳು.

ನೆಲದ ಜವುಗು ತಾಗದಿರಲೆಂದು ಒಣ ಹುಲ್ಲಿನ ಮೇಲೆ ಹಾಸಿದ್ದ ಚಾಪೆಗಳು ಅವರ ಹಾದಿ ನೋಡುತ್ತಲಿದ್ದುವು. ಕೆಂಡವಿಲ್ಲದ ಬರಿಯ ಅಗ್ಗಿಷ್ಟಿಕೆಯೊಂದೇ ನಡುಮನೆಯಲ್ಲಿತ್ತು.

ಮಲಗಿಕೊಳ್ಳುತ್ತ ಅತ್ತೆ ಅಂದಳು: "ಇವತ್ತು ಅಮಾವಾಸ್ಯೆ. ಮೇಲಿನ ಹುಣ್ಣಿಮೆ ದಿವಸ ಪುಟ್ಟಬಸ್ಯಾ ಊರಿಗೆ ಬರಬೌದು, ಅಲ್ಲವಾ?"

"ಹೂಂ, ಅತ್ತೆಮ್ಮ," ಎಂದಳು ಗಿರಿಜಾ ಕ್ಷೀಣಸ್ವರದಲ್ಲಿ.

ಆದರೆ ತನ್ನ ಸ್ವಾಮಿ ಇನ್ನೆಂದೂ ಬರಲಾರನೆಂಬುದು ಆಕೆಗೆ ಗೊತ್ತಿತ್ತು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಜನತೆಯ ಕಲ್ಯಾಣಕ್ಕಾಗಿ ದೇಹ ವಿಟ್ಟು ಆ ಸ್ವಾಮಿ, ಮರಳಿ ಬರಲಾಗದ ಊರಿಗೆ ತೆರಳಿದ್ದನೆಂಬುದು ಆ ಗಿರಿ ಜೆಗೆ ಗೊತ್ತಿತ್ತು.